ಭಾನುವಾರ, ಜುಲೈ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 197 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಆರು ತಿಂಗಳ ಹಿಂದೆ ನಭಕ್ಕೆ ಸೇರಿದ 'ಜೇಮ್ಸ್ ವೆಬ್ ದೂರದರ್ಶಕ ತೆರೆದಿಟ್ಟ ತಾರಾ ಲೋಕದ ಕೌತುಕಗಳ ನೋಟ



'ಉಚಿತ ಕೊಡುಗೆ ಸಂಸ್ಕೃತಿ ಅಪಾಯಕಾರಿ' 10

ಹೈಕೋರ್ಟ್ ಅಭಿಪ್ರಾಯದ ವಿರುದ್ಧ ಅಧಿಕಾರಿಗಳ ಮೇಲ್ಮನವಿ

ಮಳೆ: ನೂರಾರು ಎಕರೆ ಜಮೀನು ಜಲಾವೃತ 4

ಸುಪ್ರೀಂ ಕೋರ್ಟ್‌ನಲ್ಲಿ ನಾಳೆ ವಿಚಾರಣೆ 8

'ಮೋದಿ ವಿರುದ್ಧ ಪಟೇಲ್ ಸಂಚು'

ತೀಸ್ತಾ ಜಾಮೀನಿಗೆ ವಿರೋಧ: ಸಾಕ್ಷಿಗಳನ್ನು ಉಲ್ಲೇಖಿಸಿ ಎಸ್‌ಐಟಿ ಆರೋಪ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಬಿಜೆಪಿ ಸರ್ಕಾರವನ್ನು 2002ರ ಗಲಭೆಯ ಬಳಿಕ ಉರುಳಿಸಲು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರು ಪಿತೂರಿ ನಡೆಸಿದ್ದರು. ಕಾಂಗ್ರೆಸ್‌ನ ಮುಖಂಡರಾಗಿದ್ದ ಅಹ್ಮದ್ ಪಟೇಲ್ ಅವರ ಕುಮ್ಮಕ್ಕು ಈ ಪಿತೂರಿಗೆ ಇತ್ತು ಎಂದು ಗುಜರಾತ್ ಪೊಲೀಸ್ ಇಲಾಖೆಯ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸೆಷನ್ಸ್ ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಹೇಳಿದೆ. ಈ ಆರೋಪವು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಪಟೇಲ್ ಅವರು 2020ರಲ್ಲಿಯೇ ಮೃತಪಟ್ಟಿದ್ದಾರೆ.

ಅಹ್ಮದ್ ಪಟೇಲ್

ಗುಜರಾತ್ ಗಲಭೆ ಪ್ರಕರಣಗಳಲ್ಲಿ ನಿರಪರಾಧಿಗಳನ್ನು ಸಿಲುಕಿಸಲು ಹುಸಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂಬ ಪ್ರಕರಣದಲ್ಲಿ ತೀಸ್ತಾ ಸೆಟಲ್‌ವಾಡ್, ಮಾಜಿ ಐಪಿಎಸ್ ಅಧಿಕಾರಿಗಳಾದ ಆರ್.ಬಿ.ಶ್ರೀಕುಮಾರ್ ಮತ್ತು ಸಂಜೀವ್ ಭಟ್ ಅವರನ್ನು ಇತ್ತೀಚೆಗೆ ಬಂಧಿಸಲಾಗಿದೆ. ತೀಸ್ತಾ ಅವರ ಜಾಮೀನು ಅರ್ಜಿಯ ವಿಚಾರಣೆ ಶನಿವಾರ ನಡೆಯಿತು.

10 ನೇ ಪುಟ ನೋಡಿ

'ಮೊದಲೇ ಏಕೆ ವಿಚಾರಣೆ ಮಾಡಿಲ್ಲ'

ವಿರೋಧ ಪಕ್ಷಗಳಿಗೆ ಮಸಿ ಬಳಿಯುವ ರಾಜಕೀಯ ಷಡ್ಯಂತ್ರಕ್ಕಾಗಿ ತಮ್ಮ ತಂದೆಯ ಹೆಸರು ಬಳಕೆ ಆಗಿರುವುದು ದುರದೃಷ್ಟಕರ ಎಂದು ಅಹ್ಮದ್ ಪಟೇಲ್ ಅವರ ಮಗಳು ಮುಮ್ತಾಜ್ ಪಟೇಲ್ ಹೇಳಿದ್ದಾರೆ.

'ಇಷ್ಟು ದೊಡ್ಡ ಪಿತೂರಿ ಮಾಡಿದ್ದಕ್ಕಾಗಿ ನನ್ನ ತಂದೆಯನ್ನು ಕೇಂದ್ರವು 2020ಕ್ಕೆ ಮೊದಲೇ ಏಕೆ ವಿಚಾರಣೆಗೆ ಒಳಪಡಿಸಲಿಲ್ಲ' ಎಂದು ಪ್ರಶ್ನಿಸಿದ್ದಾರೆ.

'ಸಾವಿನ ಬಳಿಕವೂ ನನ್ನ ತಂದೆಗೆ ಇರುವ ಮಹತ್ವವನ್ನು ಈ ಆರೋಪವು ತೋರಿಸುತ್ತದೆ. ನಾವು ಅವರ ಕೆಲಸದಲ್ಲಿ ಯಾವತ್ತೂ ಭಾಗಿಯಾಗಿಲ್ಲ. ಆದರೆ, ಈ ತನಿಖೆಯು ಅವರು ಜೀವಿಸಿದ್ದಾಗಲೇ ನಡೆಯಬೇಕಿತ್ತು. ಅವರ ಸಾವಿನ ಬಳಿಕ, ಅವರ ಹೆಸರನ್ನು ಸುದ್ದಿಗಾಗಿ ಅಥವಾ ಟಿಆರ್‌ಪಿಗಾಗಿ ಬಳಸುತ್ತಿರುವುದು ದುರದೃಷ್ಟಕರ' ಎಂದು ಮುಮ್ತಾಜ್ ಹೇಳಿದ್ದಾರೆ.

ಮೃತರನ್ನೂ ಬಿಡದೆ ದ್ವೇಷಸಾಧನೆ: ಕಾಂಗ್ರೆಸ್

'2002ರ ಗಲಭೆಯ ಎಲ್ಲ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿದ ವ್ಯವಸ್ಥಿತ ಕಾರ್ಯತಂತ್ರದ ಭಾಗ ಇದು' ಎಂದು ಅಹ್ಮದ್ ಪಟೇಲ್ ಮೇಲಿನ ಆರೋಪಕ್ಕೆ ಕಾಂಗ್ರೆಸ್ ಪಕ್ಷವು ಪ್ರತಿಕ್ರಿಯಿಸಿದೆ.

ಗುಜರಾತ್ ಗಲಭೆಯನ್ನು ನಿಯಂತ್ರಿಸುವ ಇಚ್ಛೆ ಮತ್ತು ಸಾಮರ್ಥ್ಯ ಆಗ ಮುಖ್ಯಮಂತ್ರಿಯಾಗಿದ್ದ ಮೋದಿ ಅವರಿಗೆ ಇರಲಿಲ್ಲ. ಹಾಗಾಗಿಯೇ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಮೋದಿಗೆ ರಾಜಧರ್ಮ- ವನ್ನು ನೆನಪಿಸಿದ್ದರು ಎಂದು ಕಾಂಗ್ರೆಸ್ ಪಕ್ಷವು ಹೇಳಿದೆ.

10ನೇ ಪುಟ ನೋಡಿ

ಸಾರಿಗೆ ಇಲಾಖೆಯಲ್ಲಿ ಹಾದಿ ತಪ್ಪುತ್ತಿರುವ ಸುಧಾರಣಾ ಕ್ರಮಗಳು

ಇಲ್ಲಿ ಎಲ್ಲರೂ ಪಾಲುದಾರರು!

• ಉದಯ ಯು.

ಒಳನೋಟ

ಎಲ್ಲದರಲ್ಲೂ ಭ್ರಷ್ಟಾಚಾರ

ಪ್ರತಿಕ್ರಿಯಿಸಿ: 9606038256

feedback@prajavani.co.in

ಮಂಗಳೂರು: ಭ್ರಷ್ಟಾಚಾರವು ಸಾಂಸ್ಥೀಕರಣಗೊಂಡು, ಗಟ್ಟಿಯಾಗಿ ನೆಲೆಯೂರಿರುವ ಸರ್ಕಾರಿ ಇಲಾಖೆಗಳಲ್ಲಿ ಸಾರಿಗೆ ಇಲಾಖೆಯು ಮುಂಚೂಣಿಯಲ್ಲಿದೆ. ಇಲ್ಲಿ ಭ್ರಷ್ಟಾಚಾರವೇ 'ಅಧಿಕೃತ' ಎಂಬಂತಾಗಿದ್ದರೂ ಎಲ್ಲರೂ 'ಫಲಾನುಭವಿಗಳೇ' ಆಗಿರುವುದರಿಂದ ಯಾರೂ ಪ್ರತಿರೋಧ–ಪ್ರತಿಭಟನೆಗೆ ಮುಂದಾಗುವುದಿಲ್ಲ.

ಈ ಇಲಾಖೆಯ ಭ್ರಷ್ಟಾಚಾರಕ್ಕೆ ಅಧಿಕಾರಿಗಳು ಮತ್ತು ರಾಜಕಾರಣಿಗಳಷ್ಟೇ, ಜನಸಾಮಾನ್ಯರೂ ಕಾಣಿಕೆ ಕೊಟ್ಟಿದ್ದಾರೆ, ಕೊಡುತ್ತಲೇ ಇದ್ದಾರೆ. ಹೀಗಾಗಿ ಇಲಾಖೆಯ ಸುಧಾರಣೆಗೆ ಕೈಗೊಂಡ ಕ್ರಮಗಳೆಲ್ಲವೂ ದಾರಿ ತಪ್ಪಿವೆ. ಅಧಿಕಾರಿಗಳಿಗೆ ಜೇಬು ತುಂಬಿಸುವುದು ಉದ್ದೇಶವಾದರೆ, ಜನರಿಗೆ ಅಲೆದಾಟವಿಲ್ಲದೆ, ಆದಷ್ಟು ಬೇಗ ತಮ್ಮ ಕೆಲಸ ಆಗಬೇಕು. ಆದ್ದರಿಂದ ವಾಹನ ನೋಂದಣಿ ಮಾಡಿಸುವುದು, ಚಾಲನಾ ಪರವಾನಗಿ ಪಡೆಯುವುದು– ನವೀಕರಿಸುವುದು, ವಾಹನ ಖರೀದಿ– ಮಾರಾಟ... ಹೀಗೆ ಎಲ್ಲದರಲ್ಲೂ ಭ್ರಷ್ಟಾಚಾರ ಕಣ್ಣಿಗೆ ರಾಚುತ್ತದೆ.

ಸಾರಿಗೆ ಇಲಾಖೆಯ ಭ್ರಷ್ಟಾಚಾರಕ್ಕೆ ಹಲವು ದಾರಿಗಳು ಮತ್ತು ಹಲವು ರೂಪಗಳಿವೆ. ಆರ್‌ಟಿಒ ಕಚೇರಿಗಳ ಕಾಂಪೌಂಡ್ ಒಳಗೆ ಕಾಲಿಡುತ್ತಲೇ ಇದರ ವಾಸನೆ ಬಡಿಯುತ್ತದೆ. ಹೊರಗೇ ನಿಂತಿರುವ ಹಲವು ಏಜೆಂಟರುಗಳು, ಕೆಲವು ವಾಹನ ಚಾಲನಾ ತರಬೇತಿ ಸಂಸ್ಥೆಗಳು, ವಾಹನಗಳ ಮಾಲಿನ್ಯ ತಪಾಸಣಾ ಕೇಂದ್ರಗಳು, ವಾಣಿಜ್ಯ ವಾಹನಗಳ ಮಾಲೀಕರು ಎಲ್ಲರೂ ಈ ವ್ಯವಸ್ಥೆಗೆ ಕಾರಣರೂ ಹೌದು, ವ್ಯವಸ್ಥೆಯ ಬಲಿಪಶುಗಳೂ ಹೌದು.

'ಲಂಚ ಕೊಡದೆ ಯಾವ ಕೆಲಸವೂ ಆಗುವುದಿಲ್ಲ, ಲಂಚ ಕೊಟ್ಟರೆ ಎಲ್ಲವೂ ಸಾಧ್ಯ' ಎಂಬುದು ಇಲ್ಲಿನ ಮೂಲ ಮಂತ್ರ. ಕೆಲವು ಕಚೇರಿಗಳಿಗೆ ಹೋದರೆ ಸಿಬ್ಬಂದಿ ಯಾರು, ಏಜೆಂಟರು ಯಾರು ಎಂಬುದೇ ತಿಳಿಯುವುದಿಲ್ಲ. ಇಲಾಖೆಯ ಗೋಪ್ಯ ದಾಖಲೆಗಳನ್ನು ಸಹ ಈ ಏಜೆಂಟರುಗಳೇ ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ತಲುಪಿಸುತ್ತಾರೆ.

6ನೇ ಪುಟ ನೋಡಿ

ವಿಜಯಪುರ ಜಿಲ್ಲೆಯ ಗಡಿ ಝಳಕಿಯಲ್ಲಿರುವ ಆರ್‌ಟಿಒ ಚೆಕ್‌ಪೋಸ್ಟ್

ಪ್ರಜಾವಾಣಿ ಚಿತ್ರ

'ಪರ್ಮಿಟ್ ವರ್ಗಾವಣೆ' ಎಂಬ ಸ್ವರ್ಗ

ಖಾಸಗಿ ಸಾರಿಗೆ ವ್ಯವಸ್ಥೆಯೇ ಬಲಿಷ್ಠವಾಗಿರುವ ಉಡುಪಿ, ದಕ್ಷಿಣ ಕನ್ನಡದಂಥ ಜಿಲ್ಲೆಗಳ ಆರ್‌ಟಿಒ ಕಚೇರಿಗಳಲ್ಲಿ ಭ್ರಷ್ಟಾಚಾರ ಹುಲುಸಾಗಿ ಬೆಳೆಯುತ್ತದೆ ಎನ್ನುತ್ತಾರೆ ಇದೇ ಕಚೇರಿಯಲ್ಲಿ ದುಡಿದು ನಿವೃತ್ತರಾಗಿರುವ ಸಿಬ್ಬಂದಿಯೊಬ್ಬರು.

ಖಾಸಗಿ ಬಸ್‌ಗಳು ಹಾಗೂ ವಾಣಿಜ್ಯ ವಾಹನಗಳು ಪ್ರತಿ ವರ್ಷ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆಯುವುದು ಕಡ್ಡಾಯ. ಈ ಪ್ರಮಾಣಪತ್ರಕ್ಕೆ ಇಂತಿಷ್ಟು ಎಂದು ದರ ನಿಗದಿಯಾಗಿರುತ್ತದೆ. ಅಷ್ಟು ಹಣ ಕೊಟ್ಟರೆ ವಾಹನ ಯಾವುದೇ ಸ್ಥಿತಿಯಲ್ಲಿದ್ದರೂ ಸರ್ಟಿಫಿಕೇಟ್ ಲಭಿಸುತ್ತದೆ.

'ಕೆಲವೊಮ್ಮೆ ಬಸ್‌ಗಳು ಒಬ್ಬ ಮಾಲೀಕರಿಂದ ಇನ್ನೊಬ್ಬರಿಗೆ ಮಾರಾಟವಾಗುತ್ತದೆ. ಇಂಥ ಸಂದರ್ಭದಲ್ಲಿ ಅದರ ಪರ್ಮಿಟ್ ವರ್ಗಾವಣೆ ಮಾಡಲು ಸಾವಿರಾರು ರೂಪಾಯಿಯ ಕೊಡಬೇಕಾಗುತ್ತದೆ. ಲಾಭದಾಯಕ ರೂಟ್ ಆಗಿದ್ದರೆ ನಮ್ಮಲ್ಲಿ ಸುಮಾರು ₹5,000ದಿಂದ ₹10,000ದವರೆಗೂ ಲಂಚ ನಡೆಯುತ್ತದೆ. ಕೆಲವೆಡೆ ಇದು ಲಕ್ಷ ದಾಟುವುದಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವಾಣಿಜ್ಯ ವಾಹನಗಳ ಮಾಲೀಕರೊಬ್ಬರು ಹೇಳುತ್ತಾರೆ.

ಇನ್ನಷ್ಟು ಸುದ್ದಿಗಳು 6

ಉಪರಾಷ್ಟ್ರಪತಿ: ಜಗದೀಪ್ ಧನಕರ್ ಎನ್‌ಡಿಎ ಅಭ್ಯರ್ಥಿ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಅವರು ಕಣಕ್ಕಿಳಿಯಲಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಶನಿವಾರ ಹೆಸರು ಪ್ರಕಟಿಸಿದ್ದು, 'ಧನಕರ್ ರೈತ ಪುತ್ರ. ಜನಮೆಚ್ಚಿದ ರಾಜ್ಯಪಾಲರಾಗಿ ಗುರುತಿಸಿಕೊಂಡಿದ್ದಾರೆ' ಎಂದು ಪ್ರಶಂಶಿಸಿದ್ದಾರೆ.

ಈ ಹುದ್ದೆಗೆ ನಾಮಪತ್ರ ಸಲ್ಲಿಸಲು ಜುಲೈ 19 ಕೊನೆಯ ದಿನವಾಗಿದ್ದು, ಆಗಸ್ಟ್ 6 ರಂದು ಚುನಾವಣೆ ನಿಗದಿಯಾಗಿದೆ. ಧನಕರ್ ಅವರು 2019ರ ಜುಲೈನಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಇನ್ನೊಂದು ಸುದ್ದಿ 10

ಫೋಟೊ, ವಿಡಿಯೊ ನಿಷೇಧದ ಆದೇಶ ವಾಪಸ್

ಸರ್ಕಾರಿ ಆದೇಶದಲ್ಲಿ ಅಕ್ಷರ ದೋಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಇಲಾಖೆಗಳ ಕಚೇರಿಗಳಲ್ಲಿ ಕಾರ್ಯನಿರ್ವಹಣೆ ವೇಳೆ ಸಾರ್ವಜನಿಕರು ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸಿದ್ದ ಆದೇಶವನ್ನು ಹಿಂಪಡೆದು ಶುಕ್ರವಾರ ತಡರಾತ್ರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಹೊರಡಿಸಿದ ಆದೇಶದಲ್ಲಿದ್ದ ಅಕ್ಷರ ದೋಷಗಳು ರಾಜ್ಯ ಸರ್ಕಾರವನ್ನು ನಗೆಪಾಟಲಿಗೆ ಈಡುಮಾಡಿವೆ!

ಆದೇಶದಲ್ಲಿದ್ದ ಅಕ್ಷರದೋಷಗಳು ಗಮನಕ್ಕೆ ಬರುತ್ತಿದ್ದಂತೆ, ಅವುಗಳನ್ನು ಸರಿಪಡಿಸಿ ಮರು ಆದೇಶ ಹೊರ- ಡಿಸಲಾಗಿತ್ತು. ಅಚ್ಚರಿಯೆಂದರೆ, ಮರು ಆದೇಶದ ಪ್ರತಿಯಲ್ಲಿ ಅದನ್ನು ಹೊರಡಿಸಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಕಾರಿಯ ಹೆಸರೇ ತಪ್ಪಾಗಿತ್ತು!

4ನೇ ಪುಟ ನೋಡಿ

ಕರ್ನಾಟಕದ ಬದಲು 'ಕರ್ನಾಟಾ'!

ನಿರ್ಬಂಧ ವಾಪಸು ಪಡೆದ ಆದೇಶವನ್ನು ಶುಕ್ರವಾರ ರಾತ್ರಿ 2 ಗಂಟೆಗೆ ತರಾತುರಿಯಲ್ಲಿ ಹೊರಡಿಸಲಾಗಿತ್ತು. ಆ ಆದೇಶದ ಪ್ರತಿಯಲ್ಲಿ ಆರಂಭದಿಂದ ಕೊನೆಯವರೆಗೆ ತಪ್ಪುಗಳೇ ನುಸುಳಿದ್ದವು. ನಡಾವಳಿಗಳು- ನಡವಳಿಗಳು, ಪ್ರಸ್ತಾವನೆ–ಪ್ರಸತ್ತಾವನೆ, ಮೇಲೆ- ಮೇಲ್ಲೇ, ಭಾಗ–1- ಬಾಗ–1, ಕರ್ನಾಟಕ–ಕರ್ನಾಟಾ, ಆಡಳಿತ–ಆಡಳಿತದ ಎಂದಾಗಿತ್ತು. ಈ ತಪ್ಪುಗಳನ್ನು ಸರಿಪಡಿಸಿ ಹೊರಡಿಸಿದ ಆದೇಶದಲ್ಲಿ, ಸಹಿ ಮಾಡಿದ್ದ ಅಧಿಕಾರಿ ಹೆಸರು ಆನಂದ ಬದಲು 'ಅನಂದ' ಎಂದಾಗಿತ್ತು!

ಐಸಿಎಸ್‌ಇ 10ನೇ ತರಗತಿ ಫಲಿತಾಂಶ ಇಂದು

ನವದೆಹಲಿ (ಪಿಟಿಐ): ಐಸಿಎಸ್‌ಇ 10ನೇ ತರಗತಿ ಪರೀಕ್ಷೆಯ ಫಲಿತಾಂಶವು ಭಾನುವಾರ (ಜು.17) ಸಂಜೆ 5ಕ್ಕೆ ಪ್ರಕಟವಾಗಲಿದೆ. ಮೊದಲ ಮತ್ತು ಎರಡನೇ ಸೆಮಿಸ್ಟರ್ ಫಲಿತಾಂಶವನ್ನು ಸಮಾನವಾಗಿ ಪರಿಗಣಿಸಿ ಅಂತಿಮ ಫಲಿತಾಂಶವನ್ನು ನೀಡಲಾಗುತ್ತದೆ ಎಂದು ಸಿಐಎಸ್‌ಸಿಇ ಕಾರ್ಯದರ್ಶಿ ಗೆರ್ರಿ ಆರಥೂನ್ ತಿಳಿಸಿದ್ದಾರೆ. ಸಿಐಎಸ್‌ಸಿಇಯ CAREERS ಪೋರ್ಟಲ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಗರೋತ್ಥಾನ: ಬಿಬಿಎಂಪಿ ಯೋಜನೆ ವಿಭಾಗಕ್ಕೆ ₹635.93 ಕೋಟಿ

ಮೇಲ್ಸೇತುವೆ, ಟೆಂಡರ್‌ಶ್ಯೂರ್‌ಗೆ ಆದ್ಯತೆ

• ಆರ್. ಮಂಜುನಾಥ್

ಬೆಂಗಳೂರು: ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ₹2,149.27 ಕೋಟಿ ವೆಚ್ಚದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ.

ಬಿಬಿಎಂಪಿ ಯೋಜನೆ ವಿಭಾಗಕ್ಕೆ ಜೆ.ಸಿ. ರಸ್ತೆ ಎಲಿವೇಟೆಡ್ ಕಾಮಗಾರಿ ಸೇರಿದಂತೆ ನಾಲ್ಕು ಮೇಲ್ಸೇತುವೆಗಳಿಗಾಗಿ ₹404 ಕೋಟಿಗೆ ಅನುಮೋದನೆ ದೊರೆತಿದೆ. ಟೆಂಡರ್‌ಶ್ಯೂರ್ ಕಾಮಗಾರಿಯಲ್ಲಿ ಆರು ರಸ್ತೆಗಳ ಅಭಿವೃದ್ಧಿಗೆ ₹135 ಕೋಟಿ ಜೊತೆ ಮುಂದುವರಿದ ಕಾಮಗಾರಿಗಳಿಗಾಗಿ ₹96 ಕೋಟಿ ನೀಡಲಾಗಿದೆ. ಒಟ್ಟಾರೆ ₹635.93 ಕೋಟಿಯನ್ನು ಯೋಜನಾ ವಿಭಾಗದ ಕಾಮಗಾರಿಗಳ ಅನುಷ್ಠಾನಕ್ಕೆ ಸಮ್ಮತಿಸಲಾಗಿದೆ.

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರ, ಹೆಬ್ಬಾಳ ವಿಧಾನಸಭೆ ಕ್ಷೇತ್ರಗಳಲ್ಲಿ ಟೆಂಡರ್‌ಶ್ಯೂರ್ ರಸ್ತೆಗಳು ಅಭಿವೃದ್ಧಿಯಾಗಲಿವೆ. ಬಹಳ ದಿನಗಳಿಂದ ನನೆಗುದಿಗೆ ಬಿದ್ದಿರುವ ಬಸವೇಶ್ವರನಗರ ಜಂಕ್ಷನ್, ಇಟ್ಟಮಡು ಜಂಕ್ಷನ್, ಸಾರಕ್ಕಿ ಜಂಕ್ಷನ್ ಮೇಲ್ಸೇತುವೆ ಮುಂದುವರಿದ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಿದೆ.

ನಗರದ ಮೆಜೆಸ್ಟಿಕ್‌ನಲ್ಲಿರುವ ಗುಬ್ಬಿ ತೋಟದಪ್ಪ ಛತ್ರ ರಸ್ತೆಯ ದೃಶ್ಯ
–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

'ಮುಂದುವರಿದ ಕಾಮಗಾರಿಗಳಿಗೆ ₹96 ಕೋಟಿ ಕೊಟ್ಟಿದ್ದಾರೆ. ಇದರಲ್ಲಿ ಗುಬ್ಬಿ ತೋಟದಪ್ಪ ಛತ್ರ ರಸ್ತೆಯನ್ನು ವೈಟ್ ಟಾಪಿಂಗ್ ರಸ್ತೆಯಾಗಿ ನಿರ್ಮಿಸಲಾಗುತ್ತದೆ. ಹಿಂದೆ ನಾವು ಗಾಂಧಿನಗರ ಸುತ್ತಮುತ್ತ ವೈಟ್ ಟಾಪಿಂಗ್ ಕೆಲಸ ಮಾಡಿದೆವು. ಶಾಂತಲಾ ಸಿಲ್ಕ್ ವೃತ್ತದವರೆಗೂ ವೈಟ್ ಟಾಪಿಂಗ್ ಕೆಲಸ ಮುಗಿದಿದೆ. ಅಲ್ಲಿಗೆ ಅಂದಾಜು ವೆಚ್ಚ ಮುಗಿದಿತ್ತು. ಹೀಗಾಗಿ ಗುಬ್ಬಿ ತೋಟದಪ್ಪ ಛತ್ರ ರಸ್ತೆಯ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ಬೇಕಿತ್ತು' ಎಂದು ಯೋಜನೆ ವಿಭಾಗ ಮುಖ್ಯ ಎಂಜಿನಿಯರ್ ಲೋಕೇಶ್ ಹೇಳಿದರು.

'ಸರ್ಕಾರಕ್ಕೆ ಅನುಮೋದನೆಗೆ ಕೇಳಿದ್ದೆವು. ಈಗ ಅನುದಾನದ ಜೊತೆಗೆ ಸಮ್ಮತಿಯೂ ದೊರೆತಿದೆ.

ಗ್ರೇಡ್ ಸೆಪರೇಟರ್ ಕಾಮಗಾರಿಗಳು	ವೆಚ್ಚ
ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಮೇಲ್ಸೇತುವೆಗೆ ಹೆಚ್ಚುವರಿ ಹಣ	₹20.64 ಕೋಟಿ
ಇಟ್ಟಮಡು ಜಂಕ್ಷನ್‌ನಲ್ಲಿ ಎಲಿವೇಟೆಡ್ ಕಾರಿಡಾರ್‌ಗೆ ಹೆಚ್ಚುವರಿ ಹಣ	₹40.50 ಕೋಟಿ
ಕನಕಪುರ ರಸ್ತೆ ಮತ್ತು ಸಾರಕ್ಕಿ ಜಂಕ್ಷನ್‌ನಲ್ಲಿ ಹೊರವರ್ತುಲ ರಸ್ತೆಯೊಂದಿಗೆ ಮೇಲ್ಸೇತುವೆ ನಿರ್ಮಾಣಕ್ಕೆ ಹೆಚ್ಚುವರಿ ಹಣ	₹130 ಕೋಟಿ

ಟೆಂಡರ್‌ಶ್ಯೂರ್ ಕಾಮಗಾರಿಗಳು	ವೆಚ್ಚ
ತರಳಬಾಳು ರಸ್ತೆಯಿಂದ ಬಳ್ಳಾರಿ ರಸ್ತೆ-ಸಿ.ಎಂ. ಗೃಹಕಚೇರಿಯಿಂದ ರವೀಂದ್ರನಾಥ ಠಾಗೋರ್ ವೃತ್ತದವರೆಗೆ	₹11 ಕೋಟಿ
ತರಳಬಾಳು ರಸ್ತೆಯಿಂದ ಆರ್.ಟಿ. ನಗರ ಮುಖ್ಯರಸ್ತೆ ಮೂಲಕ ಸಿಟಿಜೆನ್ ಪಾರ್ಕ್ (ಜೆ.ಸಿ.ನಗರ ವಾರ್ಡ್)	₹18 ಕೋಟಿ
ಕೆಂಪೇಗೌಡ ರಸ್ತೆಯಿಂದ ಕೆಂಚೇನಹಳ್ಳಿ ರಸ್ತೆ–ಡಾ. ಅರುಣಾಚಲಂ ರಸ್ತೆ: ಆರ್.ಆರ್. ನಗರ	₹20 ಕೋಟಿ
ನಾಗರಬಾವಿ 80 ಅಡಿ ರಸ್ತೆಯಿಂದ ಹೊರವರ್ತುಲ ರಸ್ತೆ– ಕೆಂಗುಂಟೆ ವೃತ್ತ	₹16 ಕೋಟಿ
ಥಣಿಸಂದ್ರ ಮುಖ್ಯರಸ್ತೆಯಿಂದ ನಾಗವಾರ ವೃತ್ತ– ಬಾಗಲೂರು ಅಡ್ಡರಸ್ತೆವರೆಗೆ ಪಾದಚಾರಿ ಮಾರ್ಗ	₹20 ಕೋಟಿ
ಸಾರ್ವಜನಿಕ, ಐತಿಹಾಸಿಕ, ಟೆಂಡರ್‌ಶ್ಯೂರ್, ವೈಟ್ ಟಾಪಿಂಗ್ ರಸ್ತೆಗಳಲ್ಲಿ ಜಂಕ್ಷನ್ ಅಭಿವೃದ್ಧಿ, ಅಲಂಕಾರಗೊಳಿಸುವುದು, ಫಲಕಗಳ ಅಳವಡಿಕೆ, ಪಾದಚಾರಿ ಮಾರ್ಗ ಅಭಿವೃದ್ಧಿ	₹50.70 ಕೋಟಿ

₹7.8 ಕೋಟಿ ವೆಚ್ಚಕ್ಕೆ ಟೆಂಡರ್ ಕೂಡ ಆಗಿದೆ. ಜಲಮಂಡಳಿ, ಬೆಸ್ಕಾಂ ಸೇರಿದಂತೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಒಳಗೊಂಡಂತೆ ಶಾಂತಲಾ ಸಿಲ್ಕ್ ವೃತ್ತದಿಂದ ರೈಲು ನಿಲ್ದಾಣ ಮುಂಭಾಗವಾಗಿ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಗುಬ್ಬಿ ತೋಟದಪ್ಪ ಛತ್ರ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುತ್ತದೆ' ಎಂದರು.

ಅನುಮೋದನೆಯಾದರಷ್ಟೇ ಕಾಮಗಾರಿ: 'ರಸ್ತೆಗಳು ಹಾಳಾಗಿವೆ ಎಂಬುದು ನಮ್ಮ ಗಮನಕ್ಕೂ ಬಂದಿದೆ. ಯೋಜನೆಗಳಿಗೆ ಅನುಮೋದನೆ ದೊರೆತು, ಹಣ ಬಿಡುಗಡೆಯಾದರೆ ಕಾಮಗಾರಿಗಳನ್ನು ಬೇಗ ಮಾಡಬಹುದು. ಕಾಮಗಾರಿಗಳು ಹೆಚ್ಚಾಗಿ, ಅದಕ್ಕೆ ವೆಚ್ಚವೂ ವೃದ್ಧಿಯಾದಾಗ ನಮಗೆ ಅನುಮೋದನೆ ಸಿಗಬೇಕು. ಅದು ಸಿಕ್ಕ ಮೇಲಷ್ಟೇ ಯಾವುದಾದರೂ ಕಾಮಗಾರಿಯನ್ನು ನಾವು ಆರಂಭಿಸಲು ಸಾಧ್ಯ' ಎಂದು ಲೋಕೇಶ್ ಹೇಳಿದರು.

'ಹಣ ಕಬಳಿಸಲು ನಗರೋತ್ಥಾನ ಅನುಷ್ಠಾನ'

ಬೆಂಗಳೂರು: ಜನರ ತೆರಿಗೆ ಹಣವನ್ನು ಲೂಟಿ ಮಾಡಲು ಅಮೃತ್ ನಗರೋತ್ಥಾನ ಯೋಜನೆಯನ್ನು ಬಿಜೆಪಿಯ ಶೇ 40 ಸರ್ಕಾರ ತರಾತುರಿಯಲ್ಲಿ ಜಾರಿಗೆ ತರುತ್ತಿದೆ ಎಂದು ಎಎಪಿ ಆರೋಪಿಸಿದೆ.

'ಈ ಯೋಜನೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ₹6,000 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರದ ಶಾಸಕರಿಗೆ 3,850 ಕೋಟಿ ಬಿಡುಗಡೆ ಮಾಡಿದೆ. ಬಿಜೆಪಿ ಶಾಸಕರಿಗೆ 2,718 ಕೋಟಿ ಮಂಜೂರು ಮಾಡಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಶಾಸಕರಿಗೆ 1,132 ಕೋಟಿ ಮಂಜೂರು ಮಾಡಿ ತಾರತಮ್ಯ ನೀತಿ ಅನುಸರಿಸಿದೆ' ಎಂದು ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಮಾಹಿತಿ ನೀಡಿದರು.

'ಸದ್ಯದಲ್ಲೇ ಬಿಬಿಎಂಪಿ ಚುನಾವಣೆ ನಡೆಯಲಿದ್ದು, ಹೊಸ ಮಂಡಳಿ ಅಸ್ತಿತ್ವಕ್ಕೆ ಬರಲಿದೆ. ಚುನಾವಣೆ ನಂತರ ಯೋಜನೆ ಜಾರಿಗೊಳಿಸಿದರೆ ಬಿಜೆಪಿ ಶಾಸಕರಿಗೆ ಲೂಟಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ತರಾತುರಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ' ಎಂದು ಲೇವಡಿ ಮಾಡಿದರು.

'ರಾಜ್ಯದ ಇತಿಹಾಸದಲ್ಲಿ ಬಿಜೆಪಿಯದ್ದು ಅತ್ಯಂತ ಭ್ರಷ್ಟ ಸರ್ಕಾರ. ಸರ್ಕಾರಿ ಕಚೇರಿಗಳಲ್ಲಿ ಫೋಟೊ, ವಿಡಿಯೊ ಚಿತ್ರೀಕರಣಕ್ಕೆ ನಿಷೇಧ ಹೇರಿದ ಆದೇಶ ಖಂಡನೀಯ. ಜನರು ಹಾಗೂ ಮಾಧ್ಯಮಗಳು ತೀವ್ರವಾಗಿ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಆದೇಶ ಹಿಂಪಡೆದಿದೆ' ಎಂದು ತಿಳಿಸಿದರು.

ಎಎಪಿ ರಾಜ್ಯ ಯುವ ಘಟಕದ ಅಧ್ಯಕ್ಷ ಮುಕುಂದ ಗೌಡ ಹಾಗೂ ವಕ್ತಾರ ಅಶೋಕ್ ಮೃತ್ಯುಂಜಯ ಇದ್ದರು.

ಸುದ್ದಿ 2 ನಿಮಿಷ

'ಕೈದಿಗಳ ದುಡಿಮೆಗೆ ಕನಿಷ್ಠ ಕೂಲಿ'

ಬೆಂಗಳೂರು: 'ಜೈಲುಗಳಲ್ಲಿ ದುಡಿಯುತ್ತಿರುವ ಕೈದಿಗಳಿಗೆ ರಾಜ್ಯ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಕೂಲಿ ನೀಡಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.



ಕಾರಾಗೃಹ ಅಭಿವೃದ್ಧಿ ಮಂಡಳಿಯ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ₹ 7 ಕೋಟಿ ವಿಶೇಷ ಅನುದಾನ ಬಿಡುಗಡೆ ಆಗಲಿದೆ' ಎಂದರು.

'ಜೈಲುಗಳಲ್ಲಿ ನೇಯ್ಗೆ, ಮರಗೆಲಸ, ಬೇಕರಿ, ಜಮಖಾನ, ಶಾಮಿಯಾನ, ಸಾಬೂನು ಮುಂತಾದ ಕೈಗಾರಿಕಾ ಚಟುವಟಿಕೆ ಸದ್ಯ ನಡೆಯುತ್ತಿದೆ. ಹಾಲಿ ಇರುವ ಯಂತ್ರೋಪಕರಣಗಳ ಉನ್ನತೀಕರಣ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ' ಎಂದರು.

ಸಿಮ್ಯುಲೇಟರ್‌ಗೆ ₹ 5 ಕೋಟಿ

ಬೆಂಗಳೂರು: ರಾಜ್ಯದ 25 ಪ್ರಾದೇಶಿಕ ಸಾರಿಗೆ ಕಚೇರಿ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಲಘು ಮೋಟಾರು (ಎಲ್‌ಎಂವಿ) ವಾಹನ ಚಾಲನಾ ಸಿಮ್ಯುಲೇಟರ್‌ಗಳನ್ನು ಅಳವಡಿಸಲು ಸಾರಿಗೆ ಇಲಾಖೆ ₹ 5 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಬೆಂಗಳೂರು ಕೇಂದ್ರ, ಪಶ್ಚಿಮ, ಪೂರ್ವ, ಉತ್ತರ, ಯಲಹಂಕ, ಜ್ಞಾನಭಾರತಿ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು ಪಶ್ಚಿಮ, ಮಡಿಕೇರಿ, ಚಿಕ್ಕಮಗಳೂರು, ಬೆಳಗಾವಿ, ಧಾರವಾಡ ಪೂರ್ವ (ಹುಬ್ಬಳ್ಳಿ), ಕಾರವಾರ, ಶಿರಸಿ, ಕೊಪ್ಪಳ, ಬೀದರ್, ಯಾದಗಿರಿ, ಅಥಣಿ ಪ್ರಾದೇಶಿಕ ಸಾರಿಗೆ ಕಚೇರಿಗಳು ಮತ್ತು ಪುತ್ತೂರು, ಸಾಗರ, ಹುಣಸೂರು, ದಾಂಡೇಲಿ ಹಾಗೂ ಭಾಲ್ಕಿ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಸಿಮ್ಯುಲೇಟರ್ ಅಳವಡಿಸಲು ಅನುದಾನ ಒದಗಿಸಲಾಗಿದೆ. ರಸ್ತೆ ಸುರಕ್ಷತೆ ಯೋಜನೆಯಡಿ ಈ ಅನುದಾನ ಒದಗಿಸಲಾಗಿದೆ. ಮೂರು ವರ್ಷಗಳ ವಾರೆಂಟಿ ಹಾಗೂ ಮೂರು ವರ್ಷಗಳವರೆಗೆ ಅವುಗಳ ಬಳಕೆಗೆ ತರಬೇತಿ ಹೊಂದಿದ ಸಿಬ್ಬಂದಿ ಒದಗಿಸುವ ಷರತ್ತಿನೊಂದಿಗೆ ಖರೀದಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
ನಂ. 1, 1ನೇ ಮುಖ್ಯರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034
Ph : 080-25526266 / 25526288 , E - mail : csbankblr@gmail.com

ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ನಮ್ಮ ಬ್ಯಾಂಕಿನ 22ನೇ ವಾರ್ಷಿಕ ಅಂದರೆ 2021–22 ರ ಸಾಲಿನ ಸರ್ವಸದಸ್ಯರ ಸಭೆಯನ್ನು ದಿನಾಂಕ 24ನೇ ಜುಲೈ 2022 ರ ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಸೈಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ, ಬಿಡಿಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ, ಬೆಂಗಳೂರು–560034 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ಈ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಸೂಚನಾ ಪತ್ರವನ್ನು ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನು ಸೂಚನಾ ಪತ್ರವೆಂದು ತಿಳಿದು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ವಾರ್ಷಿಕ ವರದಿಯನ್ನು ಬ್ಯಾಂಕಿನ ವೆಬ್‌ಸೈಟ್ (www.csbank.in) ನಲ್ಲಿ ಪ್ರಕಟಿಸಿದ್ದು ತಾವುಗಳು ವೀಕ್ಷಿಸಬಹುದು.

ಆಡಳಿತ ಮಂಡಳಿಯ ಪರವಾಗಿ
ಸಹಿ/–
(ಶಿವಣ್ಣ ಕೆ.ಬಿ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 15–07–2022

ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕೊಠಡಿ ಸಂಖ್ಯೆ: 263, ಎರಡನೇ ಮಹಡಿ, ವಿಧಾನಸೌಧ, ಬೆಂಗಳೂರು – 560001. ದೂರವಾಣಿ ಸಂಖ್ಯೆ: 080–22286773/22033239

ಸಂಖ್ಯೆ: ಕಅಪ್ರಾ/ಕಾ3/02/2022–23 ದಿನಾಂಕ: 15–07–2022

ಟೆಂಡರ್ ಪ್ರಕಟಣೆ

ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು ಇವರು **2022–23ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿದ್ದು ಈ ಕಾರ್ಯಕ್ರಮಗಳ ಆಯೋಜನೆಯನ್ನು ನಿರ್ವಹಿಸುವ ಮತ್ತು ಸಭೆ, ಸಮಾರಂಭಗಳಿಗೆ ಊಟ ಉಪಹಾರಗಳನ್ನು ಪೂರೈಸುವ** ಸಂಸ್ಥೆಗಳಿಂದ ಟೆಂಡರ್ ಅರ್ಜಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.
1) ಟೆಂಡರ್ ಮಾಹಿತಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **www.eproc.karnataka.gov.in** ನಲ್ಲಿ ವೀಕ್ಷಿಸಬಹುದು. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **22–07–2022ರಂದು ಸಂಜೆ 5.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25–07–2022ರಂದು ಬೆಳಿಗ್ಗೆ 10.00 ಗಂಟೆಗೆ.** ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

ಸಹಿ/– ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
ವಾಸಾಸಂಇ/ವಾ.ಪ್ರ/1402/ಅಡ್ವರ್ಟೋರ್/2022–23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕುರುಬರಹಳ್ಳಿ- ರಿಂಗ್ ರಸ್ತೆಗೆ ಮೇಲ್ಸೇತುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕುಮಾರ್ ಸಮಾಧಿ ರಸ್ತೆಯಿಂದ(ಹೊರ ವರ್ತುಲ ರಸ್ತೆ) ಪಶ್ಚಿಮ ಕಾರ್ಡ್ ರಸ್ತೆ ತನಕ ಮೇಲ್ಸೇತುವೆ ನಿರ್ಮಿಸುವ ಯೋಜನೆಯನ್ನು ಬಿಬಿಎಂಪಿ ಸಿದ್ಧಪಡಿಸಿದೆ. ಮೊದಲ ಹಂತದಲ್ಲಿ ಕುರುಬರಹಳ್ಳಿ ತನಕ ಮೇಲ್ಸೇತುವೆ ನಿರ್ಮಾಣವಾಗಲಿದೆ.

ಪೈಪ್‌ಲೈನ್ ರಸ್ತೆಯಲ್ಲಿ ಹೊರ ವರ್ತುಲ ರಸ್ತೆ ಬಳಿಯಿಂದ ಆರಂಭವಾಗುವ ಮೊದಲ ಹಂತದ ಮೇಲ್ಸೇತುವೆ ಕುರುಬರಹಳ್ಳಿಯ ಕಾವೇರಿ ನಗರದ ಶಿವ ದೇವಸ್ಥಾನದ ಬಳಿ ಕೊನೆಗೊಳ್ಳಲಿದೆ. ₹55 ಕೋಟಿ ಮೊತ್ತದ ಯೋಜನೆಗೆ ಟೆಂಡರ್ ಅಂತಿಮಗೊಂಡಿದ್ದು, ಎಂ.ಎಸ್. ಪಿಜೆಬಿ ಎಂಜಿನಿಯರಿಂಗ್ ಪ್ರೈವೆಟ್ ಲಿಮಿಟೆಡ್ ಕಂಪನಿಗೆ ಗುತ್ತಿಗೆ ವಹಿಸಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳ ಕಾಲಾವಕಾಶ ನಿಗದಿ ಮಾಡಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಮುಂದಿನ ದಿನಗಳಲ್ಲಿ ಈ ಸೇತುವೆಯನ್ನು ಪಶ್ಚಿಮ ಕಾರ್ಡ್ ರಸ್ತೆ ಭೋವಿ ಕಾಲೊನಿ ತನಕ ವಿಸ್ತರಣೆ ಮಾಡಲು ಉದ್ದೇಶಿಸಿದೆ. ಒಟ್ಟಾರೆ ₹250 ಕೋಟಿ ಮೊತ್ತದ ಯೋಜನೆ ಇದಾಗಲಿದೆ.

'ವೃಷಭಾವತಿ ರಾಜಕಾಲುವೆಗೆ ಅಡ್ಡಲಾಗಿ ನಿರ್ಮಾಣ ಆಗಲಿರುವ ಈ ಸೇತುವೆಯು ಮಹಾಲಕ್ಷ್ಮೀ ಲೇಔಟ್, ನಾಗರಬಾವಿ, ಕುರುಬರಹಳ್ಳಿ, ರಾಜಾಜಿನಗರ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಹೊರ ವರ್ತುಲ ರಸ್ತೆಯಿಂದ ಸಂಪರ್ಕ ಕೊಂಡಿಯಾಗಲಿದೆ' ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ಮೊದಲ ಹಂತದ ಕಾಮಗಾರಿಗೆ ಭೂಸ್ವಾಧೀನದ ಅಗತ್ಯ ಇಲ್ಲದಿರುವುದರಿಂದ ಕಾಮಗಾರಿ ಬೇಗ ಪೂರ್ಣಗೊಳ್ಳಲಿದೆ' ಎಂದು ಅವರು ಸ್ಪಷ್ಟಪಡಿಸಿದರು.

ನಗರದಲ್ಲಿ ಇಂದು

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದಿಂದ ಸ್ವರ್ಣಿಮ ಭಾರತ ದೆಡೆಗೆ: ಕಲಾವಿದರ ಸಮಾಗಮ, ಅತಿಥಿಗಳು: ಬಿ.ಕೆ.ಸರೋಜಾ, ಬಿ.ಕೆ.ಸುಮಿತ್ರಾ, ರುಕ್ಮಾಂಗದ ಬಾಬು, ತೃಪ್ತಿ ಅರವಿಂದ, ಡಾ.ಉಷಾ ದಾತಾರ್, ಡಾ.ಗೋಪಿ, ಬಿ.ವಿ.ಶ್ರೀನಿವಾಸ್, ಡಾ.ಹೇಮಾ ಪ್ರಸಾದ್. ಆಯೋಜನೆ: ಪ್ರಜಾಪಿತ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ. ಬೆಳಿಗ್ಗೆ 9.30

ಗುರುಪೂರ್ಣಿಮಾ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು: ಅತಿಥಿಗಳು: ಬಿ.ಕೆ. ಪ್ರಕಾಶ ಭಾರದ್ವಾಜ್, ಎಸ್. ಎನ್. ಸೇತುರಾಮ್, ಶ್ರೀನಿವಾಸ್, ಆಯೋಜನೆ: ನಾಟ್ಯ ಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಕಮ್ಮನಹಳ್ಳಿ, ಲಿಂಗರಾಜಪುರ, ಬೆಳಿಗ್ಗೆ 10

ಮೌನೇಶ ಬಡಿಗೇರ ಅವರ 'ಅಭಿನಯ ಕಲಿಸಲು ಸಾಧ್ಯವಿಲ್ಲ' ಮತ್ತು 'ವಿಶಾಂಕೇ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಬಿ. ಜಯಶ್ರೀ, ಎನ್.ಎಸ್. ಶಂಕರ್, ಎಚ್. ಜಿ. ದತ್ತಾತ್ರೇಯ, ಧರ್ಮೇಂದ್ರ ಅರಸ್, ಆಯೋಜನೆ: ಥಿಯೇಟರ್ ತತ್ಕಾಲ್ ಬುಕ್ಸ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಬೆಳಿಗ್ಗೆ 10.30

ಸುರೇಶ್.ಎಸ್ ಅವರ 'ತೋಚಿದ್ದು ಗೀಚಿದ್ದು' ಪುಸ್ತಕ ಬಿಡುಗಡೆ: ಗಂಗಾವತಿ ಪ್ರಾಣೇಶ್, ಅತಿಥಿಗಳು: ಗಿರೀಶ್ ರಾವ್ (ಜೋಗಿ), ವೈ.ಕೆ. ಸಂಧ್ಯಾ ಶರ್ಮಾ, ಪುಂಡಲೀಕ ಕಲ್ಲಿಗನೂರ್, ಆಯೋಜನೆ: ಕನ್ನಡ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಕುರುಕ್ಷೇತ್ರ ಧರ್ಮರಾಜ್ಯ ಸ್ಥಾಪನೆ ಸಾಂಸ್ಕೃತಿಕ ಕಾರ್ಯಕ್ರಮ: ಅಧ್ಯಕ್ಷತೆ: ಎಚ್.ಎಸ್. ರಾಘವೇಂದ್ರ ಶೆಟ್ಟಿ, ಉದ್ಘಾಟನೆ: ಕೆ.ಗೋಪಾಲಯ್ಯ, ಕೆ.ವಿ. ರಾಜೇಂದ್ರಕುಮಾರ್, ಎನ್. ರಾಘವೇಂದ್ರ ನಾಗರಾಜು, ಬಟ್ಟೇಗೌಡ, ಟಿ.ಎನ್. ಹೊನ್ನಪ್ಪ, ಆಯೋಜನೆ: ಬ್ಯಾಟರಾಯ ಸ್ವಾಮಿ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಸ್ಥಳ: ನಂದಿನಿ ಬಡಾವಣೆ, ಹಿರಿಯ ನಾಗರಿಕರ ಉದ್ಯಾನ ಬಯಲು ಮಂದಿರ, ಬೆಳಿಗ್ಗೆ 10.30

'ಗೀತ ಚಿತ್ರ' ಸಂಗೀತ ಕಾರ್ಯಕ್ರಮ: ಪ್ರಸ್ತುತಿ: ಸುಬ್ಬಲಕ್ಷ್ಮಿ ಕೃಷ್ಣಮೂರ್ತಿ, ಕೆ.ಎಂ. ಶೇಷಗಿರಿ, ಅತಿಥಿಗಳು: ತೇಜಸ್ವಿ ಸೂರ್ಯ, ಭರತ ರಾಥೋಡ್, ಆಯೋಜನೆ: ಧ್ಯಾಮಿ ಮೂಕಾಂಬಿಕಾ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಮಹಿಳಾ ಉದ್ಯೋಗ ಮೇಳ–2022: ಸಾನ್ನಿಧ್ಯ ಉದ್ಘಾಟನೆ: ಸೌಮ್ಯನಾಥ ಸ್ವಾಮೀಜಿ, ಅಧ್ಯಕ್ಷತೆ: ಹೇಮಲತಾ ಗೋಪಾಲಯ್ಯ, ಅತಿಥಿಗಳು: ಟಿ.ವೆಂಕಟೇಶ್, ಜಿ.ಸಿ.ಚಂದ್ರಶೇಖರ್, ಅಶ್ವಿನ್ ಗೌಡ, ದೇವರಾಜ್, ಆಯೋಜನೆ: ವಿಶ್ವ ಒಕ್ಕಲಿಗರ ಮಹಾವೇದಿಕೆ ಮಹಿಳಾ ವಿಭಾಗ, ಸ್ಥಳ: ಬಿಜಿಎಸ್ ವರ್ಲ್ಡ್ ಸ್ಕೂಲ್, ಮಹಾಲಕ್ಷ್ಮೀಪುರ, ಬೆಳಿಗ್ಗೆ 10.30

ವ್ಯಾಸವಂದನಾ ಸಮಾರಂಭ–2022: ಅತಿಥಿಗಳು: ಎಂ.ನರಸಿಂಹನ್, ಉಪನ್ಯಾಸ: ರಾಜಗೋಪಾಲ ಶರ್ಮಾ, ಜಿ. ಮಹಾಬಲೇಶ್ವರ ಭಟ್, ಆಯೋಜನೆ: ಭಾರತೀಯ ವಿದ್ಯಾಭವನ, ಜ್ಯೋತಿ ಚಾರಿಟಬಲ್ ಟ್ರಸ್ಟ್, ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 11

ನಾಡಪ್ರಭು ಕೆಂಪೇಗೌಡರ ಜಯಂತಿ: ಉದ್ಘಾಟನೆ: ಬಾಲಕೃಷ್ಣ, ಅಧ್ಯಕ್ಷತೆ: ಎಂ.ಕೃಷ್ಣಪ್ಪ, ಅತಿಥಿಗಳು: ಅಭಿಲಾಶ್ ಡಿ.ದೇವಯ್ಯ, ಆಯೋಜನೆ ಹಾಗೂ ಸ್ಥಳ: ಕೆಂಪೇಗೌಡ ಹಿತರಕ್ಷಣಾ ಸಮಿತಿ ಕಚೇರಿ, ಭುವನೇಶ್ವರಿನಗರ, ಬೆಳಿಗ್ಗೆ 11

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ,

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಐಶ್ವರ್ಯಾ ರೆಡ್ಡಿ, ಉಪಸ್ಥಿತಿ: ಸಂಜಯ್ ಶಾಂತಾರಾಮ್, ವೈ.ಕೆ. ಸಂಧ್ಯಾ ಶರ್ಮಾ, ಭಾವನಾ ರಾಮಣ್ಣ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 5.45

ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಕೆ.ಗೋಪಾಲಯ್ಯ, ಆಯೋಜನೆ: ಬಿಬಿಎಂಪಿ, ಸ್ಥಳ: ಶಿವ ದೇವಸ್ಥಾನ, ಕಾವೇರಿ ನಗರ ಪೈಪ್ ಲೈನ್ ರಸ್ತೆ, ಕುರುಬರಹಳ್ಳಿ, ಬೆಳಿಗ್ಗೆ 11

ಎಸ್‌ಸಿ ಎಸ್‌ಟಿ ಹೆಚ್ಚುವರಿ ಮೀಸಲಾತಿ ಕುರಿತು ಸಾಧಕ–ಬಾಧಕಗಳ ಸಂವಾದ: ಜ್ಞಾನಪ್ರಕಾಶ್ ಸ್ವಾಮೀಜಿ, ಪ್ರಸನ್ನಾನಂದಪುರಿ ಸ್ವಾಮೀಜಿ, ಎಂ.ವೆಂಕಟಸ್ವಾಮಿ, ಆಯೋಜನೆ: ದಲಿತಸೇನೆ, ಸ್ಥಳ: ಹೋಟೆಲ್ ಕಾನಿಷ್ಕ ಗ್ರ್ಯಾಂಡ್, ಗಾಂಧಿನಗರ, ಬೆಳಿಗ್ಗೆ 11.30

ವಿದ್ಯುತ್ ಗುತ್ತಿಗೆದಾರರ ಸಮಾವೇಶ ಹಾಗೂ ಅಭಿನಂದನಾ ಕಾರ್ಯಕ್ರಮ: ಉದ್ಘಾಟನೆ: ಸುನೀಲ್ ಕುಮಾರ್, ಅಧ್ಯಕ್ಷತೆ: ಸಿ. ರಮೇಶ್, ಅತಿಥಿಗಳು: ಕೇಶವ ಪ್ರಸಾದ್ ಎಸ್., ಕುಮಾರ್ ನಾಯಕ್ ಕೆ., ಎನ್.ಮಂಜುಳಾ, ಆಯೋಜನೆ: ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ, ಸ್ಥಳ: ದಿ ರಾಯಲ್ ಸೆನೇಟ್ ಹೋಟೆಲ್, ಮಧ್ಯಾಹ್ನ 12

ಮಧುರಾಣಿ.ಎಚ್.ಎಸ್. ಅವರ 'ನೀಲಿ ಚುಕ್ಕಿಯ ನೆರಳು' ಕವನ ಸಂಕಲನದ ಕುರಿತು ಸಂವಾದ: ಅತಿಥಿಗಳು: ಜೋಗಿ, ಹೇಮಾ.ಎಸ್., ಆಯೋಜನೆ ಮತ್ತು ಸ್ಥಳ: ಬಹುರೂಪಿ ಬುಕ್ ಹಬ್, ಸಂಜಯನಗರ, ಸಂಜೆ 4

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಸಾಧಕರಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ನಿರ್ಮಲಾನಂದನಾಥ ಸ್ವಾಮೀಜಿ, ಎಚ್.ಡಿ.ದೇವೇಗೌಡ, ಎಚ್. ಡಿ.ಕುಮಾರಸ್ವಾಮಿ, ಆರ್. ಅಶೋಕ್, ಡಿ.ಕೆ.ಶಿವಕುಮಾರ್, ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಿ.ಎನ್.ಬಾಲಕೃಷ್ಣ, ಎಂ.ಕೃಷ್ಣಪ್ಪ, ಡಾ.ಗಾ.ನಂ.ಶ್ರೀಕಂಠಯ್ಯ, ಆಯೋಜನೆ: ಚುಂಚಶ್ರೀ ಬಳಗ. ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘದ ಆವರಣ, ವಿವಿ ಪುರ, ಸಂಜೆ 4

ತಿಂಗಳ ಮಾತು–2: ವಿಷಯ: 'ವಡ್ಡರ್ಸೆ ರಘುರಾಮ ಶೆಟ್ಟರ ಬದುಕು ಬರಹದ ಒಳನೋಟ', ಉಪಸ್ಥಿತಿ: ದಿನೇಶ್ ಅಮಿನ್ ಮಟ್ಟು, ಕೃತಿ ಕುರಿತು ಮಾತು: ಜಗದೀಶ ಕೊಪ್ಪ, ಆಯೋಜನೆ: ಮಾನವ ಬಂಧುತ್ವ ವೇದಿಕೆ ಕರ್ನಾಟಕ, ಸ್ಥಳ: ಮಾನವ ಬಂಧುತ್ವ ಕಚೇರಿ, ಸದಾಶಿವನಗರ, ಸಂಜೆ: 4

'ಬಗ್ಗುದ್ರೆ ಜುಟ್ಟು ನಿಂತ್ರೆ ಕಾಲು' ನಾಟಕ ಪ್ರದರ್ಶನ: ನಿರ್ದೇಶನ: ಶೈಲೇಶ್ ಕುಮಾರ್ ಎಂ.ಎಂ., ಆಯೋಜನೆ: ಸ್ಪೈಡ್‌ವಿಂಗ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7



भारत इलेक्ट्रॉनिक्स
BHARAT ELECTRONICS
QUALITY, TECHNOLOGY, INNOVATION
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ-ಮೇಲ್: secretary@bel.co.in, ವೆಬ್‌ಸೈಟ್: www.bel-india.in, ಫೋನ್: 080–25039300, ಫ್ಯಾಕ್ಸ್: 080–25039266

30ನೇ ಜೂನ್ 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕಪರಿಶೋಧಿತವಾಗದ ಲೆಕ್ಕಫಲಿತಾಂಶಗಳ ಸಾರಾಂಶ
(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್ ಅಲೋನ್				ಕ್ರೋಢೀಕೃತ			
		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ	ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ
		30.06.2022	31.03.2022	30.06.2021	31.03.2022	30.06.2022	31.03.2022	30.06.2021	31.03.2022
		(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	3,11,278	6,32,490	1,63,459	15,31,376	3,14,061	6,33,981	1,64,867	15,36,818
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	57,810	1,52,656	1,517	3,15,780	50,424	1,53,113	1,776	3,16,624
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	57,810	1,52,656	1,517	3,15,780	50,424	1,53,113	1,776	3,16,624
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	43,149	1,14,181	1,115	2,34,893	36,633	1,15,509	2,441	2,40,022
5.	ಒಟ್ಟುಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	50,520	93,482	4,456	2,19,972	44,005	94,814	5,783	2,25,105
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	24,366	24,366	24,366	24,366	24,366	24,366	24,366	24,366
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	-	-	-	11,74,060	-	-	-	12,04,227
8.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ (₹ ನಲ್ಲಿ)	1.77	4.69	0.05	9.64	1.50	4.74	0.10	9.85

ಟಿಪ್ಪಣಿಗಳು:
1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ಅಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ **(www.bseindia.com** ಮತ್ತು **www.nseindia.com)** ಮತ್ತು ಕಂಪೆನಿಯ ವೆಬ್‌ಸೈಟ್ **(www.bel-india.in)** ನಲ್ಲಿಯೂ ಲಭ್ಯವಿದೆ.
2. ದಿನಾಂಕ 15 ಜುಲೈ, 2022 ರಂದು ನಡೆದ ಸಭೆಯಲ್ಲಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಈ ಮೇಲಿನ ಹಣಕಾಸಿನ ಫಲಿತಾಂಶಗಳ ವಿವರಣೆಯನ್ನು ಅವಲೋಕನ ಮಾಡಲಾಯಿತು ಮತ್ತು ಅದನ್ನು ದಿನಾಂಕ 16 ಜುಲೈ, 2022 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಯಿತು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಆನಂದಿ ರಾಮಲಿಂಗಮ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (ಹೆಚ್ಚುವರಿ ಪ್ರಭಾರಿ)

ಸ್ಥಳ: ಋಷಿಕೇಶ
ದಿನಾಂಕ: 16 ಜುಲೈ, 2022

ಕೋವಿಡ್ ಕಾಲದಲ್ಲಿ ಕಾರ್ಯಕರ್ತರು ಪಕ್ಷಕ್ಕೆ ನೀಡಿರುವ ಹಣ: ಡಿಕೆಶಿ

‘ಸಂಗ್ರಹಿಸಿದ ಹಣ, ತನಿಖೆಗೆ ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕರು, ಕಾರ್ಯಕರ್ತರು ಕೋವಿಡ್ ಸಮಯದಲ್ಲಿ ಪಕ್ಷಕ್ಕೆ ಕೊಟ್ಟಿರುವ ಹಣ ಮತ್ತು ವೆಚ್ಚದ ವಿಚಾರದಲ್ಲಿ ಸರ್ಕಾರ ತನಗೆ ಬೇಕಾದ ಅಧಿಕಾರಿಗಳಿಂದ ತನಿಖೆ ನಡೆಸಿದರೆ ನಾವು ಸಿದ್ಧ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಕೋವಿಡ್ ಸಮಯದಲ್ಲಿ ಸಂಗ್ರಹಿಸಲಾಗಿದ್ದ ಹಣದ ಬಗ್ಗೆ ಲೆಕ್ಕ ಕೊಡಲಿ ಎಂದು ಮುಖ್ಯಮಂತ್ರಿ ಕೇಳಿದ್ದಾರೆ. ಸರ್ಕಾರದ ವತಿಯಿಂದ ಮಾಡಿದ ಕೆಲಸದ ಲೆಕ್ಕವನ್ನು ಮೊದಲು ಅವರು ಕೊಡಲಿ’ ಎಂದರು.

‘ಕೇಂದ್ರ ಸರ್ಕಾರ ಕೊಟ್ಟ ₹ 50 ಸಾವಿರ ಹಾಗೂ ಸರ್ಕಾರ ಘೋಷಿಸಿದ ₹ 1 ಲಕ್ಷವನ್ನು ಫಲಾನುಭವಿಗಳಿಗೆ ತಲುಪಿಸಲು ಈವರೆಗೂ ಸಾಧ್ಯವಾಗಿಲ್ಲ. ಕೋವಿಡ್‌ನಲ್ಲಿ ನಾವು ಏನೆಲ್ಲಾ ಕೆಲಸ ಮಾಡಿದ್ದೇವೆಂದು ಮಾಹಿತಿ ಕೊಡುತ್ತೇವೆ’ ಎಂದರು.

‘ಬಡ ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ಕೊಡುವ ಯೋಜನೆ ಕೈ ಬಿಡಲು ಮುಂದಾಗುವ ಈ ಸರ್ಕಾರ ಯಾಕಿರಬೇಕು’ ಎಂದು ಪ್ರಶ್ನಿಸಿದ ಅವರು, ‘ಅನೇಕ ವಿಚಾರಗಳಲ್ಲಿ ತನಗೆ ಬೇಕಾದ ನಿರ್ಧಾರ ತೆಗೆದುಕೊಂಡು, ನಂತರ ಅದನ್ನು ಹಿಂಪಡೆದು ಸರ್ಕಾರ ಅಪಮಾನಕ್ಕೀಡಾಗುತ್ತಿದೆ’ ಎಂದರು.

‘ಸಿದ್ದರಾಮಯ್ಯ ಅವರ ಅಮೃತ ಮಹೋತ್ಸವ ವ್ಯಕ್ತಿ ಪೂಜೆ ಅಲ್ಲವೇ?’ ಎಂಬ ಸಚಿವ ಸುಧಾಕರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಈ ವಿಚಾರದಲ್ಲಿ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಪಕ್ಷದ ಅನುಕೂಲಕ್ಕೆ ಬೇಕಾಗಿರುವ ಕಾರ್ಯಕ್ರಮಗಳನ್ನು ನಾವು ಚರ್ಚೆ ಮಾಡಿದರೆ ಬಿಜೆಪಿಯವರಿಗೆ ಹೊಟ್ಟೆಕಿಚ್ಚು ಯಾಕೆ? ನಮ್ಮ ಪಕ್ಷದಲ್ಲಿ ಬಿರುಕು ಮೂಡಿಸಲು ಸಾಧ್ಯವಿಲ್ಲ’ ಎಂದರು.

ಕೋವಿಡ್: ಸಕ್ರಿಯ ಪ್ರಕರಣ 7,296ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು ಏರುಗತಿ ಪಡೆದಿದ್ದು, ಸೋಂಕಿತರ ಸಂಖ್ಯೆ 7,296ಕ್ಕೆ ತಲುಪಿದೆ.



ಬೆಂಗಳೂರಿನಲ್ಲಿ 1,234 ಸೇರಿ ರಾಜ್ಯದಲ್ಲಿ 1,374 ಮಂದಿ ಸೋಂಕಿತರಾಗಿರುವುದು ಶನಿವಾರ ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 28,270 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.86 ರಷ್ಟಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಹಾಗೂ ಬಳ್ಳಾರಿಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 6,704ಕ್ಕೆ ಏರಿಕೆಯಾಗಿದೆ. 14 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳು ಎರಡಂಕಿಯಲ್ಲಿದೆ.

ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.85 ಲಕ್ಷಕ್ಕೆ ಏರಿಕೆಯಾಗಿದೆ. 39.37 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ.

ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,088ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ 0.21ರಷ್ಟಿದೆ.

ಮಂಕಿಪಾಕ್ಸ್ ಬಗ್ಗೆ ಕಟ್ಟೆಚ್ಚರ: ಸುಧಾಕರ್

ಬೆಂಗಳೂರು: ‘ಮಂಕಿಪಾಕ್ಸ್ (ಮಂಗನ ಸಿಡುಬು) ರೋಗದ ಬಗ್ಗೆ ರಾಜ್ಯದಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ವಿಮಾನ ಮತ್ತು ರೈಲು ನಿಲ್ದಾಣಗಳಲ್ಲಿ ತಪಾಸಣೆ ನಡೆಸಲಾಗುತ್ತಿದೆ’ ಎಂದು ಡಾ.ಕೆ. ಸುಧಾಕರ್ ತಿಳಿಸಿದರು.

ನೆರೆಯ ಕೇರಳದಲ್ಲಿ ಪ್ರಕರಣಗಳು ವರದಿಯಾಗಿರುವುದರಿಂದ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ‘ಮಂಕಿಪಾಕ್ಸ್ ಬಗ್ಗೆ ಆರು ತಿಂಗಳ ಹಿಂದೆಯೇ ತಜ್ಞರು ಮತ್ತು ಅಧಿಕಾರಿಗಳ ಜತೆಗೆ ಸಮಾಲೋಚಿಸಿ, ಮುನ್ನೆಚ್ಚರಿಕೆ ಮಾರ್ಗಸೂಚಿ ಹೊರಡಿಸಲಾಗಿತ್ತು. ಕೇರಳದಲ್ಲಿ ಮಂಕಿಪಾಕ್ಸ್ ಪ್ರಕರಣ ಪತ್ತೆಯಾಗಿದೆ. ಗಡಿ ಮತ್ತು ಇತರೆ ಭಾಗಗಳಲ್ಲಿ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಈಗಾಗಲೇ ಇಲಾಖೆ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಆದ್ದರಿಂದ ಈ ರೋಗದ ಬಗ್ಗೆ ಜನರು ಆತಂಕಪಡುವ ಅಗತ್ಯವಿಲ್ಲ’ ಎಂದು ಹೇಳಿದ್ದಾರೆ.



ಡಾ. ಮಂಜುನಾಥ್ ಮುಂದುವರಿಕೆಗೆ ಆಗ್ರಹ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಹುದ್ದೆಯಲ್ಲಿ ಡಾ.ಸಿ.ಎನ್. ಮಂಜುನಾಥ್ ಅವರನ್ನೇ ಮುಂದುವರಿಸಬೇಕು ಎಂದು ಸಂಸ್ಥೆಯ ವೈದ್ಯರು ಹಾಗೂ ಸಿಬ್ಬಂದಿ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಅವರ ಅಧಿಕಾರವಧಿ ಇದೇ 19ಕ್ಕೆ ಅಂತ್ಯವಾಗಲಿದೆ. ಆದ್ದರಿಂದ ಸಂಸ್ಥೆಯ ವೈದ್ಯರು ಹಾಗೂ ಸಿಬ್ಬಂದಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಅವರನ್ನು ಮುಂದುವರಿಸುವಂತೆ ಆಗ್ರಹಿಸಿ, ಮುಂಬರುವ ಮಂಗಳವಾರ ಬೆಳಿಗ್ಗೆ ಹೊರ ರೋಗಿ ವಿಭಾಗ ಪ್ರಾರಂಭಕ್ಕೂ ಮೊದಲು ಪ್ರತಿಭಟನೆ ನಡೆಸಲು ಸಿಬ್ಬಂದಿ ನಿರ್ಧರಿಸಿದ್ದಾರೆ.

ಡಾ. ಸಿ.ಎನ್ ಮಂಜುನಾಥ್

‘ರಾಷ್ಟ್ರೀಯ ವೈದ್ಯಕೀಯ ಪರಿಷತ್ತಿನ (ನ್ಯಾಷನಲ್ ಮೆಡಿಕಲ್ ಕೌನ್ಸಿಲ್) ಪ್ರಕಾರ ಯಾವುದೇ ಸಂಸ್ಥೆಯ ಮುಖ್ಯಸ್ಥರು 70 ವರ್ಷಗಳವರೆಗೆ ಸೇವೆ ಸಲ್ಲಿಸಬಹುದು. ಡಾ.ಸಿ.ಎನ್. ಮಂಜುನಾಥ್ ಅವರಿಗೆ 65 ವರ್ಷವಾಗಿದೆ. ಆದ್ದರಿಂದ ಅವರಿಗೆ ಇನ್ನೂ ಕೆಲ ವರ್ಷಗಳವರೆಗೆ ಆಡಳಿತ ನಿರ್ವಹಿಸುವ ನಾಯಕತ್ವ ಗುಣವಿದೆ. ನಿರ್ದೇಶಕ ಸ್ಥಾನದಲ್ಲಿ ಅವರನ್ನೇ ಮುಂದುವರಿಸಬೇಕು’ ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

‘ಮಂಜುನಾಥ್ ಅವರ ಕಾರ್ಯ ದಕ್ಷತೆ, ದೂರದೃಷ್ಟಿಯಿಂದ ಸಂಸ್ಥೆಯು ಜಗತ್ತಿನಾದ್ಯಂತ ಮನ್ನಣೆ ಪಡೆದಿದೆ’ ಎಂದು ಹೇಳಲಾಗಿದೆ.

ಹೆಲಿಕಾಪ್ಟರ್ ಅಪಘಾತ: 14 ಸಾವು

ಮೆಕ್ಸಿಕೊ (ಎಎಫ್‌ಪಿ): ಉತ್ತರ ಮೆಕ್ಸಿಕೊದಲ್ಲಿ ಮಾದಕವಸ್ತು ಕಳ್ಳ ಸಾಗಣೆದಾರನೊಬ್ಬನನ್ನು ಬಂಧಿಸಿ ಕರೆದೊಯ್ಯುತ್ತಿದ್ದ ಸಮಯದಲ್ಲಿ ಹೆಲಿಕಾಪ್ಟರ್ ಪತನಗೊಂಡು ನೌಕಾಪಡೆಯ ಕನಿಷ್ಠ 14 ಸಿಬ್ಬಂದಿ ಸಾವಿಗೀಡಾಗಿದ್ದಾರೆ ಎಂದು ಮೆಕ್ಸಿಕೊ ನೌಕಾಪಡೆ ತಿಳಿಸಿದೆ.

‘ನೌಕಾಪಡೆಯ ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಸಿನಲೋವಾ ಎಂಬಲ್ಲಿ ಅಪಘಾತಕ್ಕೀಡಾಗಿದ್ದು, ಅವಘಡಕ್ಕೆ ಕಾರಣ ತಕ್ಷಣಕ್ಕೆ ತಿಳಿದುಬಂದಿಲ್ಲ. ಹೆಲಿಕಾಪ್ಟರ್‌ನಲ್ಲಿದ್ದ 15 ಜನರ ಪೈಕಿ ಬದುಕಿಳಿದಿರುವ ಒಬ್ಬರಿಗೆ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ನೌಕಾಪಡೆಯ ಪ್ರಕಟಣೆ ತಿಳಿಸಿದೆ.

ಲಡಾಖ್ ಗಡಿ: ಯೋಧರ ಭೇಟಿ ಮಾಡಿದ ಜಿನ್‌ಪಿಂಗ್

ಬೀಜಿಂಗ್ (ಪಿಟಿಐ): ಲಡಾಖ್ ಗಡಿಗೆ ಹೊಂದಿಕೊಂಡಿರುವ ಕ್ಸಿನ್‌ಜಿಯಾಂಗ್ ಪ್ರದೇಶಕ್ಕೆ ಭೇಟಿ ನೀಡಿದ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಸೈನಿಕರು ಮತ್ತು ಅಧಿಕಾರಿಗಳನ್ನು ಭೇಟಿ ಮಾಡಿದರು.

ಭಾನುವಾರ ಭಾರತ ಮತ್ತು ಚೀನಾ ಮಿಲಿಟರಿ ಮಟ್ಟದ ಅಧಿಕಾರಿಗಳ ನಡುವೆ 16ನೇ ಸುತ್ತಿನ ಮಾತುಕತೆ ನಡೆಯಲಿದೆ.

ಹೀಗಾಗಿ, ಗಡಿಯಲ್ಲಿನ ಯೋಧರು ಹಾಗೂ ಸೇನಾಧಿಕಾರಿಗಳನ್ನು ಷಿ ಅವರು ಭೇಟಿ ಮಾಡಿರುವುದಕ್ಕೆ ಮಹತ್ವ ಬಂದಿದೆ.

ಕೇಂದ್ರೀಯ ಸೇನಾ ಆಯೋಗದ (ಸಿಎಂಸಿ) ಮುಖ್ಯಸ್ಥರಾಗಿರುವ ಷಿ ಅವರು ಶುಕ್ರವಾರ ಕ್ಸಿನ್‌ಜಿಯಾಂಗ್‌ನಲ್ಲಿ ನೆಲೆಸಿರುವ ಅಧಿಕಾರಿಗಳು ಮತ್ತು ಸೈನಿಕರ ಪ್ರತಿನಿಧಿಗಳನ್ನು ಭೇಟಿ ಮಾಡಿ, ಗಡಿ ರಕ್ಷಣೆ ಮತ್ತು ಪ್ರಾಂತ್ಯದ ಆಡಳಿತದಲ್ಲಿ ಸ್ಥಿರತೆ ಕಾಪಾಡುವಲ್ಲಿನ ಅವರ ಕೊಡುಗೆಯನ್ನು ಶ್ಲಾಘಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆದ ‘ಕೋವಿಡ್ ಲಸಿಕಾ ಅಮೃತ ಮಹೋತ್ಸವ’ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬರಿಗೆ ಶುಶ್ರೂಷಕಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ನೀಡಿದರು. ಬಸವರಾಜ ಬೊಮ್ಮಾಯಿ, ಡಾ.ಕೆ. ಸುಧಾಕರ್ ಇದ್ದಾರೆ.

ಶಿವತಾರೆ ಉಚ್ಚಾಟಿಸಿದ ಶಿವಸೇನಾ

ಮುಂಬೈ (ಪಿಟಿಐ): ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇರೆಗೆ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾವು ಮಾಜಿ ಸಚಿವ ವಿಜಯ ಶಿವತಾರೆ ಅವರನ್ನು ಉಚ್ಚಾಟಿಸಿದೆ.

ಪುಣೆ ಜಿಲ್ಲೆಯ ಪುರಂದರ ಕ್ಷೇತ್ರ ಪ್ರತಿನಿಧಿಸುತ್ತಿರುವ ಶಿವತಾರೆ ಅವರ ಉಚ್ಚಾಟನೆ ನಿರ್ಧಾರವನ್ನು ಸೇನಾ ಮುಖವಾಣಿ ‘ಸಾಮ್ನಾ’ದಲ್ಲಿ ಪ್ರಕಟಿಸಲಾಗಿದೆ.

‘ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಬಣವು ನಿಜವಾದ ಶಿವಸೇನಾ’ ಎಂದ ಅವರು 2019ರಲ್ಲಿ ಕಾಂಗ್ರೆಸ್ ಜತೆ ಕೈ ಜೋಡಿಸುವ ನಿರ್ಧಾರ ಬಗ್ಗೆ ಶಿವಸೇನಾದಲ್ಲಿ ಯಾರಿಗೂ ಸಂತೋಷ ಇರಲಿಲ್ಲ. ಬಾಳಾ ಠಾಕ್ರೆ ಆಶಯದಂತೆ ಹಿಂದುತ್ವ ಎತ್ತಿ ಹಿಡಿಯುತ್ತಿರುವುದು ನಿಜವಾದ ಶಿವಸೇನಾ’ ಎಂದು ಅವರು ತಿಳಿಸಿದರು.



‘ನೆಡುತೋಪನ್ನು ಸ್ಮಶಾನವಾಗಿಸಿದ ಡಿ.ಸಿ ಮಂಜುನಾಥ’

ಬೆಂಗಳೂರು: ದಾಸರಹಳ್ಳಿ ಹೋಬಳಿಯ ಹುಸ್ಕೂರು ಎಂಬ ಗ್ರಾಮದಲ್ಲಿರುವ ನೆಡುತೋಪನ್ನು ಬೆಂಗಳೂರು ಜಿಲ್ಲಾಧಿಕಾರಿಯಾಗಿದ್ದ ಜೆ.ಮಂಜುನಾಥ ಸ್ಮಶಾನವಾಗಿ ಪರಿವರ್ತನೆ ಮಾಡಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಹುಸ್ಕೂರು ಗ್ರಾಮದಲ್ಲಿರುವ 2.22 ಎಕರೆ ನೆಡುತೋಪಿನಲ್ಲಿ ಸ್ಥಳೀಯ ಯುವಕರು ವಿವಿಧ ಜಾತಿಯ 130ಕ್ಕೂ ಹೆಚ್ಚು ಗಿಡ-ಮರಗಳನ್ನು ಬೆಳೆಸಿದ್ದಾರೆ. ನೆಡುತೋಪಿನ ಅಭಿವೃದ್ಧಿಗೆ ₹2 ಲಕ್ಷ ಖರ್ಚು ಮಾಡಿದ್ದಾರೆ. ಆದರೆ ಗ್ರಾಮದ ಕೆಲವರ ಒತ್ತಡದ ಮೇರೆಗೆ ಶಾಸಕರು, ಜಿಲ್ಲಾಧಿಕಾರಿಗಳು ನೆಡುತೋಪನ್ನು ಸ್ಮಶಾನಕ್ಕಾಗಿ ಮಂಜೂರು ಮಾಡಿರುವುದು ಖಂಡನೀಯ ಎಂದು ಗ್ರಾಮದ ಶಿವಕುಮಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಈ ಪ್ರಕರಣದ ಕುರಿತು ಜಿಲ್ಲಾಧಿಕಾರಿಯಾಗಿದ್ದ ಜೆ.ಮಂಜುನಾಥ ಅವರಿಗೆ ಮನವರಿಕೆ ಮಾಡಲಾಗಿತ್ತು. ಆದರೂ ಅವರು ರಾಜಕೀಯ ಒತ್ತಡದಿಂದ ಮಾರ್ಚ್ 8, 2022ರಲ್ಲಿ ಸ್ಮಶಾನಕ್ಕಾಗಿ ಭೂಮಿ ಮಂಜೂರು ಮಾಡಿದ್ದಾರೆ. ಗ್ರಾಮದಲ್ಲಿ ಈಗಾಗಲೇ ಸ್ಮಶಾನವಿದೆ. ಮತ್ತೆ ಅದೇ ಉದ್ದೇಶಕ್ಕೆ ಜಮೀನು ಮಂಜೂರು ಮಾಡಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದರು.

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಆದೇಶವನ್ನು ಹಿಂಪಡೆದು, ನೆಡುತೋಪಿನ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ನಾಗಭೂಷಣ ಕುಮಾರ್ ಎಚ್.ಎನ್. ಇದ್ದರು.

ಗೀತಾ ವಸಂತ ಅವರ ‘ಅವಳ ಅರಿವು’ ಕೃತಿ ಬಿಡುಗಡೆ– ಬರಗೂರು ಅಭಿಮತ

ಪುರಾಣ ಪಾತ್ರಗಳ ಪುನರಾವಲೋಕನವಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾಯಣ ಮತ್ತು ಮಹಾಭಾರತದಲ್ಲಿ ಅದ್ಭುತವಾದ ಸ್ತ್ರೀ ಪಾತ್ರಗಳಿವೆ. ಹೆಣ್ಣಿನ ಸಂವೇದನೆಯನ್ನು ಶೋಧಿಸಲು ಪುರಾಣ ಪಾತ್ರಗಳ ಪುನರಾವಲೋಕನ ಆಗಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಜನ ಪ್ರಕಾಶನ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೀತಾ ವಸಂತ ಅವರ ‘ಅವಳ ಅರಿವು’ ಕೃತಿ ಬಿಡುಗಡೆ ಮಾಡಿ, ಮಾತನಾಡಿದರು. ‘ಆಧುನಿಕ ಸಂದರ್ಭದಲ್ಲಿ ವೈಚಾರಿಕತೆ, ವಿಮರ್ಶೆಯ ಹೆಸರಿನಲ್ಲಿ ಕೆಲವು ಪೂರ್ವಗ್ರಹಗಳ ಮೂಲಕ ಪುರಾಣಗಳನ್ನು ನೋಡುವ ಪದ್ಧತಿಯಿದೆ. ಪುರಾಣ ಕಾವ್ಯ ಬೇರೆ, ಪುರಾಣ ಶಾಸ್ತ್ರ ಬೇರೆ. ಕಾವ್ಯಕ್ಕೆ ಸೃಜನಶೀಲತೆಯ ಆಯಾಮವಿರುತ್ತದೆ. ರೂಪಕ, ಸಂದೇಶಗಳ ಮೂಲಕ ಕಾವ್ಯ ಧ್ವನಿಸುತ್ತಿರುತ್ತದೆ. ಪುರಾಣ ಕಾವ್ಯದಲ್ಲಿ ಹಲವು ಸ್ತ್ರೀ ಪಾತ್ರಗಳು ಬರುತ್ತವೆ. ಆ ಪಾತ್ರಗಳ ಮೂಲಕ ಸ್ತ್ರೀ ಸಂವೇದನೆಯ ಹೊಸ ಶೋಧ ನಡೆಸಬೇಕು’ ಎಂದು ಹೇಳಿದರು.

ಬರಗೂರು ರಾಮಚಂದ್ರಪ್ಪ ಅವರು ‘ಅವಳ ಅರಿವು’ ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ಪುಸ್ತಕದ ಲೇಖಕಿ ಗೀತಾ ವಸಂತ, ಪ್ರೊ.ಎಸ್.ಎನ್.ನಾಗರಾಜ ರೆಡ್ಡಿ, ಎಚ್.ಎಲ್. ಪುಷ್ಪಾ ಮತ್ತು ಎಚ್.ಎನ್. ಆರತಿ ಇದ್ದಾರೆ. –ಪ್ರಜಾವಾಣಿ ಚಿತ್ರ

ದ್ರೌಪದಿಯು ’ವ್ಯಾಸ ರಚಿತ ಮಹಾಭಾರತ’ದಲ್ಲಿ ಕೇಳದ ಪ್ರಶ್ನೆಯನ್ನು ’ಕುಮಾರವ್ಯಾಸ ರಚಿತ ಭಾರತ’ದಲ್ಲಿ ಕೇಳುತ್ತಾಳೆ. ಸಮಾಜ ಬದಲಾದಂತೆ ಸ್ತ್ರೀ ಸಂವೇದನೆ ಬದಲಾಗುತ್ತದೆ. ಚಾರಿತ್ರಿಕ ವ್ಯಕ್ತಿಗಳಾದ ಅಕ್ಕಮಹಾದೇವಿ, ಸಂಚಿ ಹೊನ್ನಮ್ಮ ಮತ್ತಿತರರ ಸಂದೇಶಗಳ ಬಗ್ಗೆ ಚಾರಿತ್ರಿಕ ಸಂದರ್ಭ ಹಾಗೂ ಸಮಕಾಲೀನ ವಿವೇಕದ ಮೂಲಕ ನಿರ್ಣಯಕ್ಕೆ ಬರಬೇಕು. ಏಕಮುಖವಾಗಿ ನಿರ್ಣಯ ಕೈಗೊಂಡರೆ ಸಾಹಿತ್ಯಕ್ಕೂ ಅನ್ಯಾಯ ಮಾಡಿದಂತಾಗುತ್ತದೆ’ ಎಂದರು.

ಪುಸ್ತಕ ಪರಿಚಯ
ಪುಸ್ತಕ: ‘ಅವಳ ಅರಿವು’
ಲೇಖಕರು: ಗೀತಾ ವಸಂತ
ಪ್ರಕಾಶನ: ಜನ ಪ್ರಕಾಶನ
ಪುಟಗಳು: 200
ಬೆಲೆ: ₹ 200

‘ಹೆಣ್ಣು, ಗಂಡಿನ ಸಂವೇದನೆ ಬೇರೆ ಬೇರೆಯಾಗಿರುತ್ತದೆ. ಸಮಾಜದಲ್ಲಿನ ಶ್ರೇಣೀಕರಣ ಮತ್ತು ಸಂವೇದನೆಗೆ ಸಂಬಂಧ ಇರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಅಧೀನ ಮಾಡಿಕೊಳ್ಳಲಾಗಿದೆ. ಶ್ರೇಣೀಕರಣದ ವ್ಯವಸ್ಥೆಯಿಂದಾಗಿ ಪುರುಷರಲ್ಲಿಯೂ ಅಧೀನವಾಗಿರುವಂತಹ ಬದುಕು ನಡೆಸುತ್ತಿರುವವರು ಇದ್ದಾರೆ. ಇದಕ್ಕೆ ಸಾಮಾಜಿಕ ಆರ್ಥಿಕ ಸಂರಚನೆ ಕಾರಣ’ ಎಂದರು.

ಹೆಣ್ಣಿನ ಸಂವೇದನೆಯ ಚಿತ್ರಣ: ಲೇಖಕಿ ಎಚ್.ಎಲ್. ಪುಷ್ಪಾ, ‘ಕೃತಿಯಲ್ಲಿ ಮಹಿಳೆಯ ಛಿದ್ರಗೊಂಡ ಹಲವು ಲೋಕಗಳನ್ನು ಪೋಣಿಸುವುದರ ಜತೆಗೆ ಹೆಣ್ಣಿನ ಸಂವೇದನೆಯನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನ್ಯಾಷನಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಸ್.ಎನ್. ನಾಗರಾಜ ರೆಡ್ಡಿ, ‘ಸದ್ಯ ಆಗುತ್ತಿರುವ ಬೆಳವಣಿಗೆಗಳು ಈ ಸಮಾಜಕ್ಕೆ ಬೇಕಾ, ಅವು ಸಮಾಜ ಮುಖಿ ಆಗಿವೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ಪ್ರಜಾಸತ್ತಾತ್ಮಕ ಸಮಾಜ ಎಲ್ಲರನ್ನೂ ಒಟ್ಟುಗೂಡಿಸಿಕೊಂಡು ಸಾಗಬೇಕು. ಆದರೆ, ಏಕರೂಪತೆಯ ಹೆಸರಿನಲ್ಲಿ ಬಹುರೂಪ ಸಂಸ್ಕೃತಿ, ಭಾಷೆಗಳನ್ನು ಮರೆಯಾಗಿಸುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಬಹುರೂಪತೆ ಕಾಯ್ದುಕೊಳ್ಳಬೇಕಾದ ಸವಾಲಿದೆ’ എಂದು ಹೇಳಿದರು.

ಸುದ್ದಿ 2 ನಿಮಿಷ

ತಪ್ಪಾಗಿ ಕನ್ನಡ ಬಳಕೆ: ಕ್ರಮಕ್ಕೆ ಆಗ್ರಹ

ಬೆಂಗಳೂರು: ಸರ್ಕಾರಿ ಆದೇಶದಲ್ಲಿ ಕನ್ನಡವನ್ನು ತಪ್ಪಾಗಿ ಬಳಸಿದ ಅಧಿಕಾರಿಯ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಪತ್ರ ಬರೆದಿದ್ದಾರೆ. ‘ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಉಪಕಾರ್ಯದರ್ಶಿ ಕನ್ನಡವನ್ನು ತಪ್ಪಾಗಿ ಬಳಸಿ, ಭಾಷೆಯನ್ನು ಅಗೌರವಿಸಿದ್ದರ ಬಗ್ಗೆ ದೂರುಗಳು ಬಂದಿವೆ. ಸಾಮಾಜಿಕ ಜಾಲತಾಣದಲ್ಲಿಯೂ ಪ್ರಾಧಿಕಾರವನ್ನು ಗುರುತು ಮಾಡಿ, ದೂರು ಸಲ್ಲಿಸಲಾಗುತ್ತಿದೆ. ಸರ್ಕಾರದಲ್ಲಿ ಜವಾಬ್ದಾರಿಯುತ ಹುದ್ದೆ ಅಲಂಕರಿಸಿರುವವರು ಕನ್ನಡವನ್ನು ತಪ್ಪಾಗಿ ಬರೆದು, ಆದೇಶ ಹೊರಡಿಸುವುದು ಭಾಷೆಯ ಬಗೆಗಿನ ನಿರ್ಲಕ್ಷ್ಯ ತೋರಿಸುತ್ತದೆ’ ಎಂದು ತಿಳಿಸಲಾಗಿದೆ. ‘ಆದೇಶದಲ್ಲಿ ತಪ್ಪಾಗಿ ಕನ್ನಡ ಬಳಸಿದ ಅಧಿಕಾರಿಯ ವಿರುದ್ಧ ಕ್ರಮ ಕೈಗೊಂಡು, ಮುಂದೆ ಇಂತಹ ತಪ್ಪುಗಳು ಆಗದಂತೆ ನೋಡಿಕೊಳ್ಳಬೇಕು’ ಎಂದು ಪತ್ರದಲ್ಲಿ ಹೇಳಲಾಗಿದೆ.

ವಿದ್ಯಾರ್ಥಿಗಳ ಪ್ರಾಜೆಕ್ಟ್ ಪ್ರದರ್ಶನ

ಬೆಂಗಳೂರು: ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಜಿನಿಯರಿಂಗ್‌ನ ಮೂಲ ವಿಜ್ಞಾನ ಮತ್ತು ಮಾನವಿಕ ವಿಭಾಗದಿಂದ ಆಯೋಜಿಸಿದ್ದ ರಾಜ್ಯಮಟ್ಟದ ಪ್ರಾಜೆಕ್ಟ್‌ಗಳ ಪ್ರದರ್ಶನದಲ್ಲಿ ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ನೂತನ ಆವಿಷ್ಕಾರ ಪ್ರದರ್ಶಿಸಿದರು.

ಆ್ಯಂಡ್ರಾಯ್ಡ್ ಅಭಿವೃದ್ಧಿ, ಬ್ಲೂಟೂತ್, ಕೋಡಿಂಗ್, ಸಾರಿಗೆ, ವೈದ್ಯಕೀಯ ತಂತ್ರಜ್ಞಾನ ಸೇರಿದಂತೆ ಉಪಯುಕ್ತ ವಸ್ತುಗಳ ಮಾದರಿಯನ್ನು ಉದಯೋನ್ಮುಖ ಎಂಜಿನಿಯರ್‌ಗಳು ಪ್ರದರ್ಶಿಸಿದರು.

ವಿದ್ಯಾರ್ಥಿಗಳಾದ ಅಕ್ಷಿತಾ ಹಾಗೂ ದೇವೇಶ್ ಅವರು, ಕಣ್ಣಿಲ್ಲದವರು ಸುರಕ್ಷಿತವಾಗಿ ನಡೆಯಲು ಸಹಾಯವಾಗುವ ಸ್ಟಿಕ್ ಅನ್ನು ಪ್ರದರ್ಶಿಸಿದರು.

ಪ್ರಾಂಶುಪಾಲ ಡಾ.ಸಂಜಯ್ ಜೈನ್ ಮಾತನಾಡಿ, ’ಇಂತಹ ಪ್ರದರ್ಶನದಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಕೌಶಲ ಹೆಚ್ಚಿಸಲಿದೆ. ವಿದ್ಯಾರ್ಥಿಗಳು ಪರಸ್ಪರ ಹೊಸ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಅನುಕೂಲ ಆಗಲಿದೆ. ಸಂಶೋಧನಾ ಕೌಶಲ ಹೆಚ್ಚಿಸುತ್ತದೆ‘ ಎಂದು ಹೇಳಿದರು.

ಸೂರು ಕಲ್ಪಿಸುವುದೇ ಗುರಿ

ಆನೇಕಲ್:ತಾಲ್ಲೂಕಿನ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ದೊಡ್ಡನಾಗಮಂಗಲ, ಆನೇಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗೂಳಿಮಂಗಲ, ಕೂಗೂರು, ಆನೇಕಲ್‌ನ ವೆಂಕಟೇಶ್ವರ ಗ್ರಾಮದಲ್ಲಿ ನಿರ್ಮಿಸುತ್ತಿರುವ ಬಹುಮಹಡಿ ವಸತಿ ಸಮುಚ್ಚಯ ಪ್ರದೇಶಕ್ಕೆ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು, ಸೂರಿಲ್ಲದವರಿಗೆ ಸೂರು ನೀಡುವುದೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಗುರಿ. ಈ ನಿಟ್ಟಿನಲ್ಲಿ ರಾಜ್ಯದ ವಿವಿಧೆಡೆ ವಸತಿ ಯೋಜನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು ಕೇಂದ್ರ ಸರ್ಕಾರ ಮೊದಲ ಕಂತಿನಲ್ಲಿ ₹ 600 ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದು ಅವರು ವಿವರಿಸಿದರು.

ನೃತ್ಯ ಪ್ರದರ್ಶನ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್ಸ್ ಸಂಗೀತ ಮತ್ತು ನೃತ್ಯ ಶಾಲೆಯ 25 ವರ್ಷದ ಸಂಭ್ರಮ ಆಚರಣೆಯಲ್ಲಿ ವಿದ್ಯಾರ್ಥಿಗಳು ಮತ್ತು ಕಲಾವಿದರು ಶನಿವಾರ ನೃತ್ಯ ಪ್ರದರ್ಶನ ನೀಡಿದರು. –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/ಜನರಲ್/ಅನಧಿಕೃತ ಬಡಾವಣೆ/12/2022–23 ದಿನಾಂಕ: 13–07–2022

ಸಾರ್ವಜನಿಕ ಪ್ರಕಟಣೆ

ವಿಷಯ: ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಲಾಗುತ್ತಿರುವ/ ನಿರ್ಮಿಸಿರುವ ಬಡಾವಣೆಗಳಲ್ಲಿನ ನಿವೇಶನವನ್ನು ಖರೀದಿಸಬಾರದೆಂದು ಸಾರ್ವಜನಿಕರಿಗೆ ನೀಡುತ್ತಿರುವ ತಿಳುವಳಿಕೆಯ ಪ್ರಕಟಣೆ ಹಾಗೂ ಸದರಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಅಭಿವೃದ್ಧಿದಾರರು / ಭೂ ಮಾಲೀಕರುಗಳಿಗೆ ನೀಡುತ್ತಿರುವ ನೋಟಿಸ್ ನ ಕುರಿತು.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರನ್ವಯ ಸರ್ಕಾರದ ಆದೇಶ ಸಂ.ನಅಇ 63 ಟಿಟಿಪಿ 96, ದಿನಾಂಕ: 27–01–1997 ರಲ್ಲಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರನ್ವಯ ಸರ್ಕಾರದ ಆದೇಶ ಸಂಖ್ಯೆ: ನಅಇ 204 ಟಿಟಿಪಿ 97 ದಿನಾಂಕ: 14–07–1997 ರಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಅದರಂತೆ, ನೆಲಮಂಗಲ ತಾಲ್ಲೂಕಿನ ನೆಲಮಂಗಲ ನಗರವನ್ನು ಒಳಗೊಂಡಂತೆ, ಕಸಬಾ, ತ್ಯಾಮಗೊಂಡ್ಲು ಮತ್ತು ಸೋಂಪುರ ಹೋಬಳಿಗಳ ಒಟ್ಟು 205 ಗ್ರಾಮಗಳು ಮತ್ತು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿಯ 42 ಗ್ರಾಮಗಳು ಮಾಗಡಿ ತಾಲ್ಲೂಕು, ಸೋಲೂರು ಹೋಬಳಿಯ 31 ಗ್ರಾಮಗಳು ಮತ್ತು ಕುದೂರು ಹೋಬಳಿಯ 03 ಗ್ರಾಮಗಳು ಸೇರಿ ಪ್ರಸ್ತುತ ಈ ಪ್ರಾಧಿಕಾರವು ಒಟ್ಟು 281 ಗ್ರಾಮಗಳನ್ನು ಒಳಗೊಂಡಿದ್ದು, 585.35 ಚ.ಕಿ.ಮೀ. ವಿಸ್ತೀರ್ಣದ ವ್ಯಾಪ್ತಿಯ ಪ್ರದೇಶವನ್ನು ಹೊಂದಿರುತ್ತದೆ.

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಮಹಾಯೋಜನೆ–2031 (ಅಂತಿಮ) ಅನ್ನು ಅನುಮೋದಿಸಲಾಗಿದ್ದು, ಸದರಿ ಮಹಾಯೋಜನೆಯಂತೆ ಭೂ ಉಪಯೋಗಗಳು ಹಾಗೂ ವಲಯ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಅನುಸಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕೈಗೊಳ್ಳಬೇಕಾಗಿದ್ದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961 ರಡಿಯಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನ ಖರೀದಿಸುವ ಮೊದಲು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಕೆ.ಟಿ.ಸಿ.ಪಿ ಕಾಯ್ದೆಯಡಿ ಬಡಾವಣೆ ನಕ್ಷೆಗೆ ಅನುಮೋದನೆ ಪಡೆದಿರುವ ಹಾಗೂ ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಆಗಿರುವ ಮತ್ತು ವಸತಿ ಸಮುಚ್ಚಯ / ವಾಣಿಜ್ಯ ಸಮುಚ್ಚಯ / ಕೈಗಾರಿಕಾ / ವೇರ್‌ಹೌಸ್ ಕಟ್ಟಡಗಳಿಗೆ ನಕ್ಷೆ ಅನುಮೋದನೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಿನ್ಯಾಸ / ಬಡಾವಣೆಗಳಲ್ಲಿನ ನಿವೇಶನ ಮತ್ತು ವಸತಿ ಸಮುಚ್ಚಯ / ವಾಣಿಜ್ಯ ಸಮುಚ್ಚಯ / ಕೈಗಾರಿಕಾ / ವೇರ್‌ಹೌಸ್ ಕಟ್ಟಡಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ನೆಲಮಂಗಲ ಯೋಜನಾ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರದ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಲಾದ ಬಡಾವಣೆಯಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ ಸಮುಚ್ಚಯ / ವಾಣಿಜ್ಯ ಸಮುಚ್ಚಯ / ಕೈಗಾರಿಕಾ ನಿವೇಶನಗಳಲ್ಲಿ ಕಟ್ಟಲಾದ ಕಟ್ಟಡಗಳನ್ನು ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ / ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ನೆಲಮಂಗಲ ಸ್ಥಳೀಯ ಯೋಜನಾ ಪ್ರಾದಿಕಾರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಭಿವೃದ್ಧಿ ಪಡಿಸುತ್ತಿರುವ/ ಪಡಿಸಿರುವ ಕೆಲವೊಂದು ಬಡಾವಣೆಗಳ ವಿವರಗಳನ್ನು ಸ್ಥಳ ಪರಿಶೀಲಿಸಿದಾಗ ಕಂಡು ಬಂದಿರುವುದು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಂದಿರುವ ಅನಧಿಕೃತ ಬಡಾವಣೆಗಳ ವಿವರಗಳು

ಕ್ರ.ಸಂ.	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂಬರ್
1	2	3	4	5
1	ನೆಲಮಂಗಲ	ಕಸಬಾ	ಬಾವಿಕೆರೆ	32, 35, 36 ಮತ್ತು 101
2			ಮಲ್ಲರಬಾಣವಾಡಿ	142/2 ಮತ್ತು 142/3
3			ಕೆಂಪಲಿಂಗನಹಳ್ಳಿ	60
4			ಚಿಕ್ಕಮಾರನಹಳ್ಳಿ	19/6
5			ಚಿಕ್ಕಮಾರನಹಳ್ಳಿ	7
6			ಚಿಕ್ಕಮಾರನಹಳ್ಳಿ	7
7			ವರದನಾಯಕನಹಳ್ಳಿ	47
8		ತ್ಯಾಮಗೊಂಡ್ಲು	ತಿಪ್ಪಶೆಟ್ಟಿಹಳ್ಳಿ	66
9			ತಿಪ್ಪಶೆಟ್ಟಿಹಳ್ಳಿ	38
10			ತ್ಯಾಮಗೊಂಡ್ಲು	51

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಭೂ ಮಾಲೀಕರು / ಅಭಿವೃದ್ಧಿದಾರರು ಕೆ.ಟಿ.ಸಿ.ಪಿ ಕಾಯ್ದೆ, 1961 ರ ಕಲಂ 17 ರಂತೆ ಈ ಕಛೇರಿಯಿಂದ ಅನುಮೋದನೆ ಪಡೆಯದೇ ವಿನ್ಯಾಸಗಳನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಬಾರದೆಂದೂ, ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಡಿಯಲ್ಲಿ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರು / ಜಿ.ಪಿ.ಎ. ದಾರರು / ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಮೇಲ್ಕಂಡ ಜಮೀನುಗಳ ಭೂ ಮಾಲೀಕರು / ಅಭಿವೃದ್ಧಿದಾರರುಗಳ ಹೆಸರು / ವಿಳಾಸ ಲಭ್ಯವಿಲ್ಲದ ಕಾರಣ ಮೇಲ್ಕಂಡ ಜಮೀನುಗಳಲ್ಲಿ ಅನಧಿಕೃತವಾಗಿ ಅಭಿವೃದ್ಧಿ ಪಡಿಸುತ್ತಿರುವ ಜಮೀನುಗಳ ಮಾಲೀಕರು / ಜಿ.ಪಿ.ಎದಾರರು / ಅಭಿವೃದ್ಧಿದಾರರುಗಳಿಗೆ ಈ ಪ್ರಕಟಣೆಯನ್ನು ಕೆ.ಟಿ.ಸಿ.ಪಿ. ಕಾಯ್ದೆ ಕಲಂ 17(4) ರಅಡಿಯಲ್ಲಿ ನೀಡಲಾದ ನೋಟಿಸ್ ಎಂದು ತಿಳಿಯತಕ್ಕದ್ದು. ಈ ನೋಟಿಸಿಗೆ 15 ದಿನಗಳೊಳಗೆ ಲಿಖಿತ ರೂಪದ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿದೆ. ಇಲ್ಲವಾದಲ್ಲಿ, ಮುಂದಿನ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1404/ಅಡ್ವಟೋರ್/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಾಪೆ, ದಿಂಬು ಹೊತ್ತು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೆ.ಆರ್.ಪುರದ ಸಂತೆಯಲ್ಲಿ ಸುಂಕ ವಸೂಲಿ ಮಾಡದ ಬಿಬಿಎಂಪಿ ಅಧಿಕಾರಿಗಳ ನಡೆ ಖಂಡಿಸಿ ಅಖಿಲ ಕರ್ನಾಟಕ ರೈತರು ಮತ್ತು ವ್ಯಾಪಾರಿಗಳ ಒಕ್ಕೂಟದ ಕಾರ್ಯಕರ್ತರು ಹಾಗೂ ಸಂತೆ ವ್ಯಾಪಾರಿಗಳು ತಲೆಯ ಮೇಲೆ ಚಾಪೆ, ದಿಂಬು ಹೊತ್ತು ವಿನೂತನವಾಗಿ ಪ್ರತಿಭಟಿಸಿದರು.

ಕೆ.ಆರ್.ಪುರದ ಸಂತೆ ಮೈದಾನದಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ಬಿಬಿಎಂಪಿ ಮಹದೇವಪುರದ ವಲಯ ಕಚೇರಿ ತನಕ ಪಾದಯಾತ್ರೆ ನಡೆಸಿ ಅಧಿಕಾರಿಗಳ ಗಮನ ಸೆಳೆದರು.

ಒಕ್ಕೂಟದ ಅಧ್ಯಕ್ಷ ಎಲೆ ಶ್ರೀನಿವಾಸ್, ‘ಕಳೆದ ಎರಡು ವರ್ಷಗಳಿಂದ ಕೆ.ಆರ್.ಪುರ ಸಂತೆಯಲ್ಲಿ ಸುಂಕ ವಸೂಲಿ ಮಾಡದ ಅಧಿಕಾರಿಗಳು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿದ್ದಾರೆ. ಸಂತೆಯಲ್ಲಿ ಬಿಡಿಎ ನಿರ್ಮಾಣ ಮಾಡಲು ಉದ್ದೇಶಿಸಿರುವ ಕಟ್ಟಡಕ್ಕೆ ರೈತರು ಹಾಗೂ ವ್ಯಾಪಾರಸ್ಥರಿಂದ ಯಾವುದೇ ತಕರಾರು ಇರುವುದಿಲ್ಲ.

ಆದರೆ, ಕೆಲವರು ಸುಳ್ಳು ಮಾಹಿತಿ ನೀಡಿ ಕಟ್ಟಡ ನಿರ್ಮಾಣ ಸಂಬಂಧಿಸಿದಂತೆ ನ್ಯಾಯಾಲಯದ ಮೊಕದ್ದಮೆ ಸಲ್ಲಿಸಿದ್ದಾರೆ. ಇದರ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಿ’ ಎಂದು ಅವರು ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಮಹದೇವಪುರ ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ವ್ಯಾಪಾರಿಗಳ ಅಹವಾಲಿನಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಅಖಿಲ ಕರ್ನಾಟಕ ರೈತರು ಮತ್ತು ವ್ಯಾಪಾರಿಗಳ ಒಕ್ಕೂಟದ ಕಾರ್ಯಕರ್ತರು ಹಾಗೂ ಸಂತೆ ವ್ಯಾಪಾರಿಗಳು ಚಾಪೆ ತಲೆದಿಂಬು ಹೊತ್ತು ವಿನೂತನವಾಗಿ ಪ್ರತಿಭಟನೆ ನಡೆಸಿದರು.



farnazfever



ನಟ ಶಿವರಾಜ್ ಕುಮಾರ್ ಅವರನ್ನು ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘದ ಅಧಿಕಾರಿಗಳು ಭೇಟಿಯಾಗಿ ಸೂಕ್ತ ಸಲಹೆ, ಮಾರ್ಗದರ್ಶನ ನೀಡುವಂತೆ ಕೋರಿದರು.

ಆ.5ರಿಂದ ಫಲಪುಷ್ಪ ಪ್ರದರ್ಶನ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘದ ವತಿಯಿಂದ ಆಗಸ್ಟ್ 5ರಿಂದ 15ರ ವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ಸ್ಪರ್ಧೆ ನಡೆಯಲಿದೆ.

ಈ ಬಾರಿ ಫಲಪುಷ್ಪ ಪ್ರದರ್ಶನದಲ್ಲಿ ನಟರಾದ ರಾಜಕುಮಾರ್ ಹಾಗೂ ಪುನೀತ್ ರಾಜಕುಮಾರ್ ಅವರ ವಿಷಯ ಆಧಾರಿತ ವಿಶೇಷ ಫಲಪುಷ್ಪ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ನಟ ಶಿವರಾಜ್ ಕುಮಾರ್ ಅವರನ್ನು ಭೇಟಿಯಾಗಿ ಸಲಹೆ, ಮಾರ್ಗದರ್ಶನ ನೀಡಬೇಕೆಂದು ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘದ ಅಧಿಕಾರಿಗಳು ಮನವಿ ಮಾಡಿಕೊಂಡರು.

ಮೈಸೂರು ಉದ್ಯಾನ ಕಲಾಸಂಘದ ಉಪಾಧ್ಯಕ್ಷ ವಾಸುದೇವ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ. ಎಂ ಜಗದೀಶ್ ಮತ್ತು ಲಾಲ್‌ಬಾಗ್ ತೋಟಗಾರಿಕೆ ಉಪನಿರ್ದೇಶಕಿ ಜಿ. ಕುಸುಮ ಇದ್ದರು.

ರಾಷ್ಟ್ರಧ್ವಜ ಅಭಿಯಾನ

ಬೆಂಗಳೂರು: ಕೇಂದ್ರ ಸರ್ಕಾರವು ಆಗಸ್ಟ್ 11ರಿಂದ 17ರ ತನಕ ‘ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜ’ (ಹರ್ ಘರ್ ತಿರಂಗಾ) ಹಾರಿಸಿ, ದೇಶಭಕ್ತಿ ಬಿಂಬಿಸುವ ಅಭಿಯಾನ ಹಮ್ಮಿಕೊಂಡಿದೆ.

ಈ ಸಂಬಂಧ ರಾಜ್ಯದ ಎಲ್ಲ ಶಾಲಾ, ಕಾಲೇಜುಗಳಲ್ಲಿ ಜಾಗೃತಿ ಮೂಡಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆ ಸೂಚಿಸಿದೆ.

ಜತೆಗೆ ಅದರ ಛಾಯಾಚಿತ್ರ ಹಾಗೂ ವರದಿಯನ್ನು academic.dpue@karnataka.gov.in ಹಾಗೂ kanbhavblr@gmail.comಗೆ ಕಡ್ಡಾಯವಾಗಿ ಕಳುಹಿಸುವಂತೆ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಬೆಸ್ಕಾಂ ವಿದ್ಯುತ್ ಅದಾಲತ್ 2,900 ಗ್ರಾಹಕರು ಭಾಗಿ

ಬೆಂಗಳೂರು: ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ 47 ತಾಲ್ಲೂಕುಗಳಲ್ಲಿ ಶನಿವಾರ ಆಯೋಜಿಸಿದ್ದ ವಿದ್ಯುತ್ ಅದಾಲತ್‌ನಲ್ಲಿ 2,900 ಗ್ರಾಹಕರು ಭಾಗವಹಿಸಿದ್ದರು.

ಗ್ರಾಹಕರಿಂದ ಸ್ವೀಕರಿಸಿರುವ 1,045 ಮನವಿಗಳ ಪೈಕಿ 330 ಮನವಿಗಳಿಗೆ ಬೆಸ್ಕಾಂ ಅಧಿಕಾರಿಗಳು ಸ್ಥಳದಲ್ಲೇ ಪರಿಹಾರ ಒದಗಿಸಿದರು. ಉಳಿದ 715 ಮನವಿಗಳನ್ನು ಮುಂದಿನ ಕ್ರಮಕ್ಕಾಗಿ ಮೇಲಧಿಕಾರಿಗಳಿಗೆ ರವಾನಿಸಲಾಗಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಗ್ರಾಮೀಣ ಭಾಗದ ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ ಪ್ರತಿ ತಿಂಗಳ ಮೂರನೇ ಶನಿವಾರದಂದು ವಿದ್ಯುತ್ ಅದಾಲತ್ ಆಯೋಜಿಸಲಾಗುತ್ತಿದ್ದು, ಜುಲೈನ ಅದಾಲತ್ 8 ಜಿಲ್ಲೆಗಳ 47 ತಾಲ್ಲೂಕುಗಳ 89 ಹಳ್ಳಿಗಳಲ್ಲಿ ನಡೆಯಿತು.

ವಿದ್ಯುತ್ ಸಂಪರ್ಕ, ವಿದ್ಯುತ್ ಕಳ್ಳತನ, ಮೀಟರ್, ಹೆಚ್ಚುವರಿ ಟ್ರಾನ್ಸ್‌ಫಾರ್ಮರ್, ಬಿಲ್ಲಿಂಗ್, ವಿದ್ಯುತ್ ವ್ಯತ್ಯಯ, ಹೊಸ ಸಂಪರ್ಕ, ಹೊಸ ಟ್ರಾನ್ಸ್‌ಫಾರ್ಮರ್, ಎಲ್.ಟಿ.ಲೈನ್ ಬೇಡಿಕೆ ಸೇರಿ ಹಲವು ಸಮಸ್ಯೆಗಳ ಕುರಿತು ಗ್ರಾಹಕರು ಅದಾಲತ್‌ನಲ್ಲಿ ಅಧಿಕಾರಿಗಳ ಗಮನ ಸೆಳೆದರು.

ಎಡ ಪಕ್ಷಗಳ ರಾಜ್ಯ ಮಟ್ಟದ ಸಮಾವೇಶ

‘ಬಂಡವಾಳಶಾಹಿಗಳ ಪರ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಆರ್ಥಿಕ ಸ್ಥಿತಿ ಸುಧಾರಣೆ, ತಲಾ ಆದಾಯದ ಹೆಚ್ಚಳ, ಸಾಮಾಜಿಕ ತಾರತಮ್ಯ ನಿವಾರಿಸಲು ಪರ್ಯಾಯ ನೀತಿಗಳನ್ನು ರೂಪಿಸಿ ಸೌಹಾರ್ದ ಕರ್ನಾಟಕವನ್ನು ಉಳಿಸಿಕೊಳ್ಳುವತ್ತ ಎಡ ಮತ್ತು ಜಾತ್ಯತೀತ ಪಕ್ಷಗಳು ಹೆಜ್ಜೆ ಇಟ್ಟಿವೆ.

ಶನಿವಾರ ಇಲ್ಲಿ ನಡೆದ ಸಮಾವೇಶದಲ್ಲಿ ಸಿಪಿಐ, ಸಿಪಿಐ(ಎಂ), ಎಸ್‌ಯುಸಿಐ, ಆರ್‌ಪಿಐ, ಸ್ವರಾಜ್ ಇಂಡಿಯಾ, ಎಐಎಫ್‌ಬಿ, ಸಿಪಿಐ (ಎಂಎಲ್) ಪಕ್ಷದ ಪ್ರಮುಖರು ಈ ಸಮಾವೇಶದಲ್ಲಿ ಪಾಲ್ಗೊಂಡು ಸಮಾಲೋಚನೆ ನಡೆಸಿದರು.

ಸೌಹಾರ್ದ, ಸಮೃದ್ಧ ಮತ್ತು ಜನಪರ ಕರ್ನಾಟಕ ನಿರ್ಮಾಣಕ್ಕೆ ಅಗತ್ಯವಾದ ನೀತಿಗಳನ್ನು ರೂಪಿಸುವ ಬಗ್ಗೆ ಚರ್ಚೆ ನಡೆಯಿತು.

2021ರ ಅಂಕಿಅಂಶದ ಪ್ರಕಾರ ರಾಜ್ಯದಲ್ಲಿ ಪ್ರತಿ ಕುಟುಂಬದ ವಾರ್ಷಿಕ ಆದಾಯ ₹1 ಲಕ್ಷಕ್ಕಿಂತ ಕಡಿಮೆ ಇದೆ. ಇಂದಿನ ಬೆಲೆ ಏರಿಕೆ ದಿನಗಳಲ್ಲಿ ಪ್ರತಿಯೊಬ್ಬರ ತಲಾ ಆದಾಯ ಕೇವಲ ₹50ಕ್ಕಿಂತ ಕಡಿಮೆ ಇದೆ. ಸರ್ಕಾರಗಳು ಬಂಡವಾಳಶಾಹಿಗಳ ಪರವಾಗಿ ಕೆಲಸ ಮಾಡುತ್ತಿರುವುದಕ್ಕೆ ಇದೇ ಸಾಕ್ಷಿ. ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆದ ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಪರ್ಯಾಯ ನೀತಿಗಳಿಗಾಗಿ ರಾಜ್ಯಮಟ್ಟದ ಸಮಾವೇಶದಲ್ಲಿ (ಎಡದಿಂದ) ಸ್ವರಾಜ್ ಇಂಡಿಯಾ ಮುಖಂಡ ವೀರಗಂಗಯ್ಯ, ಎಸ್.ಯು.ಸಿ.ಐ(ಸಿ) ರಾಜ್ಯ ಸಮಿತಿ ಸದಸ್ಯ ಎಂ.ಎನ್. ಶ್ರೀರಾಮ್, ಎಸ್.ಯು.ಸಿ.ಐ(ಸಿ) ರಾಜ್ಯ ಕಾರ್ಯದರ್ಶಿ ಕೆ. ಉಮಾ, ಸಿಪಿಐ ರಾಜ್ಯ ಕಾರ್ಯದರ್ಶಿ ಸ್ವಾತಿ ಸುಂದರೇಶ್, ಸಿಪಿಐ ಮುಖಂಡ ರಾಮಕೃಷ್ಣ ಮತ್ತು ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಇದ್ದರು –ಪ್ರಜಾವಾಣಿ ಚಿತ್ರ

ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿ, ’2020ರ ಭೂಸುಧಾರಣಾ ತಿದ್ದುಪಡಿ ಕಾಯ್ದೆ ಹಿಂಪಡೆಯಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸಬೇಕು. ಕಾರ್ಪೊರೇಟ್ ಕೃಷಿಗೆ ಬದಲಾಗಿ ಸಹಕಾರಿ ಕೃಷಿ ಅಭಿವೃದ್ಧಿಗೊಳಿಸಬೇಕು. ಎಂದು ಆಗ್ರಹಿಸಿದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್ ಮಾತನಾಡಿದರು. ಕ್ಲಿಫ್ಟನ್.ಡಿ.ರೊಸಾರಿಯೋ ಶಿವಶಂಕರ್ ಜಿ. ಆರ್., ಆರ್. ಮೋಹನ್ ರಾಜ್, ಇದ್ದರು.

ಉತ್ಪಾದನಾ ವಲಯಕ್ಕೂ ನೆರವು

ಬೆಂಗಳೂರು: ಕರ್ನಾಟಕ ರಾಜ್ಯ ಹಣಕಾಸು ನಿಗಮವು (ಕೆಎಸ್ಎಫ್‌ಸಿ) ಸೇವಾ ಕ್ಷೇತ್ರದಲ್ಲಿನ ಮಹಿಳಾ ಉದ್ಯಮಿಗಳಿಗೆ ನೀಡುತ್ತಿರುವ ಶೇಕಡ 4ರ ಬಡ್ಡಿದರದ ಸಾಲ ಸೌಲಭ್ಯವನ್ನು ಉತ್ಪಾದನಾ ಕ್ಷೇತ್ರಕ್ಕೂ ವಿಸ್ತರಿಸುವ ಚಿಂತನೆ ನಡೆಸಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಾ. ಏಕರೂಪ್ ಕೌರ್ ತಿಳಿಸಿದರು.

ನಗರದಲ್ಲಿ ಇತ್ತೀಚೆಗೆ ಕೆಎಸ್ಎಫ್‌ಸಿ ಹಮ್ಮಿಕೊಂಡಿದ್ದ ಉದ್ದಿಮೆದಾರರ ಸಭೆಯಲ್ಲಿ ಮಾತನಾಡಿ, 'ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ರಾಜ್ಯ ಸರ್ಕಾರ ಬಡ್ಡಿ ಸಹಾಯಧನದ ಸೌಲಭ್ಯವುಳ್ಳ ಸಾಲ ಒದಗಿಸುತ್ತಿದೆ. ಪಡೆದ ಸಾಲವನ್ನು ಸರಿಯಾಗಿ ಬಳಸಿಕೊಂಡು ಅಭಿವೃದ್ಧಿ ಹೊಂದುವ ಮುತುವರ್ಜಿ ವಹಿಸಬೇಕು' ಎಂದರು.

ಕೆಎಸ್ಎಫ್‌ಸಿ ಕಾರ್ಯನಿರ್ವಾಹಕ ನಿರ್ದೇಶಕ ಎನ್. ವೆಂಕಟೇಶ್ ಮಾತನಾಡಿ, 'ಕೋವಿಡ್ ಸಂಕಷ್ಟದ ಅವಧಿಯಲ್ಲಿ ನಿಗಮವು ₹ 670 ಕೋಟಿಯಷ್ಟು ಸಾಲವನ್ನು ಮರುಹೊಂದಾಣಿಕೆ ಮಾಡಿದೆ ಎಂದರು.

ನಿಗಮದ ಪ್ರಧಾನ ವ್ಯವಸ್ಥಾಪಕ ಕಿಶೋರ್ ಕುಮಾರ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಎನ್. ಸುರೇಶ್, ನರೇಂದ್ರ ಬಾಬು, ನಿಗಮದ ಬೆಂಗಳೂರು ಗ್ರಾಮಾಂತರ ಮತ್ತು ಕೇಂದ್ರ ಶಾಖೆಗಳ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ವೈ.ಕೆ. ಬಸವರಾಜು, ಬಿ.ಎನ್. ಪ್ರಸಾದ್ ಸಭೆಯಲ್ಲಿದ್ದರು.

ರುದ್ರಪ್ಪ ಹನಗವಾಡಿಯವರ 'ಋಣದ ಗಣಿ' ಪುಸ್ತಕ ಬಿಡುಗಡೆ

'ಮಾನಸಿಕ ಮಲ ಹೊರುವ ಸ್ಥಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಬೇಡ್ಕರ್ ಅವರ ಆಶಯಗಳನ್ನು ಬದುಕಿನ ಭಾಗವಾಗಿಸಿಕೊಂಡಿದ್ದ ಕೆಲ ದಲಿತರು ಮಾನಸಿಕ ಮಲ ಹೊರುವ ಕಾರ್ಯಕ್ಕೆ ತೆರೆದುಕೊಂಡಿದ್ದಾರೆ ಎಂದು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ಗಾಂಧಿ ಭವನದಲ್ಲಿ ಶನಿವಾರ ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್ ಹಮ್ಮಿಕೊಂಡಿದ್ದ ರುದ್ರಪ್ಪ ಹನಗವಾಡಿ ಅವರ 'ಋಣದ ಗಣಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಮಲಹೊರುವ ಪದ್ಧತಿಯು ಸಂವಿಧಾನ ಕೊಟ್ಟ ಅಸ್ತ್ರದಿಂದ ನಿರ್ಮೂಲನೆ ಆಯಿತು. ಆದರೆ, ಕೆಲವರು ಇಂದಿಗೂ ಮಾನಸಿಕವಾಗಿ ಮಲ ಹೊರುತ್ತಲೇ ಇದ್ದಾರೆ. ಬೆಳೆಸಿದ ಸಮಾಜವನ್ನೇ ತುಳಿಯುತ್ತಿದ್ದಾರೆ. ಬಹುತ್ವದ ಭಾರತ ಇಲ್ಲವಾಗುತ್ತಿದೆ. ಸಾವಿರಾರು ವರ್ಷಗಳಿಂದ ಅಸಮಾನತೆಗೆ ಕಾರಣರಾದವರು ವಿಜೃಂಭಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಸಮಾನತೆಯಲ್ಲಿ ನಂಬಿಕೆ ಇಟ್ಟವರು ಕಣ್ಣು, ಕಿವಿ ಕಳೆದುಕೊಳ್ಳದೆ ಎಚ್ಚರ ವಹಿಸಬೇಕು ಎಂದು ಸಲಹೆನೀಡಿದರು.

ರುದ್ರಪ್ಪ ಅವರು ಹುಟ್ಟಿನಿಂದ ಬಂದ ದಲಿತ ಸಂವೇದನೆಯನ್ನು ಕಾಪಾಡಿಕೊಂಡಿದ್ದಾರೆ. ಅವರ ಬರಹಗಳಲ್ಲಿ ಸಮಾಜಕ್ಕಾಗಿ ಮರಳಿ ನೀಡಿದ ಕುರುಹುಗಳಿವೆ. ಅಧಿಕಾರ ಬಂದಾಗಲೂ ನಡೆದು ಬಂದ ದಾರಿ ಸ್ಮರಿಸಿಕೊಳ್ಳುವ, ಸಮ ಸಮಾಜಕ್ಕೆ ತುಡಿಯುವ ಮನಸ್ಸು ಕಾಣಬಹುದು. ನಾಯಕರು ಸರಿದಾರಿಯಲ್ಲಿ ಸಾಗಿದರೆ ಸಮಾಜದ ಜನರೂ ಅನುಸರಿಸುತ್ತಾರೆ ಎನ್ನುವುದಕ್ಕೆ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು.

ಕೃತಿ ಕುರಿತು ಮಾತನಾಡಿದ ಪ್ರಾಧ್ಯಾಪಕ ಕೆ.ವೈ. ನಾರಾಯಣಸ್ವಾಮಿ ಅವರು, ಪ್ರಸ್ತುತ ಕಾಲಘಟ್ಟದಲ್ಲಿ ಶಿಕ್ಷಣ, ಮಾನವೀಯತೆ ಸಮಾಧಿಯಾಗುತ್ತಿದೆ. ಸಮಾಧಿಯನ್ನೇ ವಿಜೃಂಭಿಸುವ ಕೆಲಸಗಳು ನಡೆಯುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪುಸ್ತಕ ಬಿಡುಗಡೆ ಮಾಡಿದರು. ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಇಂದಿರಾ ಕೃಷ್ಣಪ್ಪ ಪ್ರಾಸ್ತಾವಿಕ ಮಾತನಾಡಿದರು. ಬಿ.ಆರ್.ಪೊಲೀಸ ಪಾಟೀಲ, ಗಾಯಕ ಚೆನ್ನಿ, ಹೆಗ್ಗೆರೆ ರಂಗಪ್ಪ ಗೀತೆಗಳನ್ನು ಹಾಡಿದರು.

ಮಾಜಿ ಸಚಿವ ಎಚ್.ಸಿ.ಮಹದೇವಪ್ಪ, ಚಿಂತಕ ಕೆ.ಮರುಳಸಿದ್ದಪ್ಪ, ಲೇಖಕ ರುದ್ರಪ್ಪ, ಗಾಯತ್ರಿ ರುದ್ರಪ್ಪ ಉಪಸ್ಥಿತರಿದ್ದರು.

ನಗರದ ಗಾಂಧಿ ಭವನದಲ್ಲಿ ಶನಿವಾರ ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ 'ಋಣದ ಗಣಿ' ಪುಸ್ತಕ ಲೋಕಾರ್ಪಣೆ ಮಾಡಿದರು. ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಇಂದಿರಾ ಕೃಷ್ಣಪ್ಪ, ಸಾಹಿತಿ ಕೆ.ಮರುಳಸಿದ್ದಪ್ಪ, ಪುಸ್ತಕದ ಲೇಖಕ ರುದ್ರಪ್ಪ ಹನಗವಾಡಿ, ಗಾಯತ್ರಿ ರುದ್ರಪ್ಪ, ಸಾಹಿತಿಗಳಾದ ಎಸ್‌.ಜಿ.ಸಿದ್ದರಾಮಯ್ಯ, ಕೆ.ವೈ.ನಾರಾಯಣಸ್ವಾಮಿ ಇದ್ದರು.

ಪುಸ್ತಕ ಪರಿಚಯ

- ಪುಸ್ತಕ: ಋಣದ ಗಣಿ
- ಲೇಖಕ:ರುದ್ರಪ್ಪ ಹನಗವಾಡಿ
- ಪ್ರಕಾಶಕರು: ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್
- ಪುಟಗಳು:308
- ಬೆಲೆ: ₹ 450

ತಹಶೀಲ್ದಾರ್ ಕೊರತೆಯ ನೆಪ

ಕೆರೆ ಮತ್ತು ರಾಜಕಾಲುವೆಗಳ ಒತ್ತುವರಿ ತೆರವು ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಮತ್ತು ರಾಜಕಾಲುವೆಗಳ ಒತ್ತುವರಿ ತೆರವಿಗೆ ಮೀನಮೇಷ ಎಣಿಸುತ್ತಿರುವ ಬಿಬಿಎಂಪಿ, ವಿಳಂಬಕ್ಕೆ ತಹಶೀಲ್ದಾರ್‌ಗಳ ಕೊರತೆಯೇ ಕಾರಣ ಎಂದು ಹೇಳುತ್ತಿದೆ.

'ಒತ್ತುವರಿ ತೆರವು ಕಾರ್ಯಕ್ಕೆ ಪ್ರತ್ಯೇಕ ಕೋಶ ರಚಿಸಿ ಎರಡು ವಲಯಗಳಿಗೆ ಒಬ್ಬರಂತೆ ನಾಲ್ವರು ತಹಶೀಲ್ದಾರ್‌ಗಳ ತಂಡ ನಿಯೋಜಿಸಲಾಗಿತ್ತು. ಅವರಲ್ಲಿ ಮೂವರನ್ನು ಕಂದಾಯ ಇಲಾಖೆ ವಾಪಸ್ ಪಡೆದುಕೊಂಡಿದ್ದು, ಒಬ್ಬರೇ ತಹಶೀಲ್ದಾರ್ ಉಳಿದುಕೊಂಡಿದ್ದಾರೆ. ತಹಶೀಲ್ದಾರ್‌ಗಳು ಇಲ್ಲದಿರುವುದರಿಂದ ತೆರವು ಕಾರ್ಯಾಚರಣೆ ಸಾಧ್ಯವಾಗುತ್ತಿಲ್ಲ. ತಹಶೀಲ್ದಾರ್‌ಗಳನ್ನು ಒದಗಿಸುವಂತೆ ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ' ಎಂದು ಹೈಕೋರ್ಟ್‌ಗೆ ಬಿಬಿಎಂಪಿ ವಿವರ ಸಲ್ಲಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದ ಸುಬ್ರಹ್ಮಣ್ಯ ಕೆರೆಯನ್ನು 2016ರಲ್ಲಿ ಬಿಬಿಎಂಪಿ ವಶಕ್ಕೆ ಪಡೆದಿದೆ. ಕೆರೆ ಒತ್ತುವರಿ ಬಗ್ಗೆ 2014ರಲ್ಲೇ ಸಿಟಿಜನ್ಸ್ ಆ್ಯಕ್ಷನ್ ಗ್ರೂಪ್ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದೆ. ಕೆರೆಯನ್ನು ಮೋಜಣಿ ಮಾಡಿ ವರದಿ ಸಲ್ಲಿಸುವಂತೆ ಕಂದಾಯ ಇಲಾಖೆಗೆ ಹೈಕೋರ್ಟ್ ನಿರ್ದೇಶನ ನೀಡಿತ್ತು. 2021ರಲ್ಲಿ ಕಂದಾಯ ಇಲಾಖೆ ಸುಬ್ರಹ್ಮಣ್ಯಪುರ ಕೆರೆಯ ನಕ್ಷೆ ತಯಾರಿಸಿ ಸಲ್ಲಿಸಿತ್ತು.

ಆ ನಕ್ಷೆ ಪ್ರಕಾರ, ಉತ್ತರಹಳ್ಳಿ ಗ್ರಾಮದ ಸರ್ವೆ ನಂಬರ್ 64ರಲ್ಲಿ 18 ಎಕರೆ 6 ಗುಂಟೆ ಹಾಗೂ ಮಾರಸಂದ್ರ ಸರ್ವೆ ನಂಬರ್ 6ರಲ್ಲಿ 1 ಎಕರೆ 15 ಗುಂಟೆ ಮುಳುಗಡೆ ಪ್ರದೇಶ.

ಈ ಪೈಕಿ 3 ಎಕರೆ 39 ಗುಂಟೆ ಜಾಗದಲ್ಲಿ ರಸ್ತೆ ಹಾಗೂ 200ಕ್ಕೂ ಹೆಚ್ಚು ಆರ್‌ಸಿಸಿ ಮತ್ತು ಶೀಟ್ ಮನೆಗಳು ನಿರ್ಮಾಣವಾಗಿವೆ. ಇದರ ನಡುವೆ 2005ರ ಏಪ್ರಿಲ್‌ನಲ್ಲಿ ಸರ್ಕಾರ ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯಲ್ಲಿ ಈ ಜಾಗವನ್ನು (ಭುವನೇಶ್ವರಿನಗರ) ಕೊಳಚೆ ಪ್ರದೇಶವೆಂದು ಅಧಿಕೃತಗೊಳಿಸಲಾಗಿದೆ. ಒತ್ತುವರಿ ತೆರವುಗೊಳಿಸಿ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆ ಈಗ ಆರಂಭವಾಗಬೇಕಿದೆ.

ಕೆರೆ ಒತ್ತುವರಿ ತೆರವುಗೊಳಿಸಲು ಹೈಕೋರ್ಟ್ ಪದೇ ಪದೇ ಆದೇಶ ನೀಡುತ್ತಿರುವುದರಿಂದ ಈಗ ತಹಶೀಲ್ದಾರ್‌ಗಳ ಕೊರತೆಯ ಕಾರಣವನ್ನು ಬಿಬಿಎಂಪಿ ನೀಡಿದೆ. ಅಲ್ಲದೇ ಈ ವಿಷಯದಲ್ಲಿ ಕಂದಾಯ ಇಲಾಖೆ ಮತ್ತು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಸೂಕ್ತ ನಿರ್ದೇಶನ ನೀಡುವಂತೆಯೂ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದೆ.

ಕೆರೆ ಒತ್ತುವರಿ ತೆರವುಗೊಳಿಸಿ ಅಲ್ಲಿನ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಕೆಲಸ ಮಾಡದೆ ಬಿಬಿಎಂಪಿ ನೆಪ ಹೇಳಿಕೊಂಡು ಕಾಲ ತಳ್ಳುತ್ತಿದೆ ಎಂಬುದು ಕೆರೆ ಉಳಿಸಲು ಹೋರಾಟ ನಡೆಸುತ್ತಿರುವ ಆರೋಪ.

ಉದ್ಯಾನದಲ್ಲಿ ಮನೆ ನಿರ್ಮಾಣಕ್ಕೆ ನೋಟಿಸ್

ಬೆಂಗಳೂರು: ಉದ್ಯಾನಕ್ಕೆ ಮೀಸಲಿಟ್ಟ ನಿವೇಶನದಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸಲು ಉದ್ದೇಶಿಸಿರುವ 100 ಮನೆಗಳ ನಿರ್ಮಾಣಕ್ಕೆ ತಡೆ ಕೋರಿದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಗ್ರಾಮದ ನಾಗರಭಾವಿಯಲ್ಲಿ, 'ಶ್ರೀ ವಿನಾಯಕ ಹೌಸಿಂಗ್ ಕೋ-ಆಪ್ ಸೊಸೈಟಿ' ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಉದ್ಯಾನಕ್ಕೆ ಮೀಸಲಿಟ್ಟ ಪ್ರದೇಶದ ಬಳಕೆಯನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

ಈ ಕುರಿತಂತೆ ನಾಗರಭಾವಿ 11ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ವಿನಾಯಕ ಲೇ ಔಟ್ ಸಿಟಿಜನ್ ಫೋರಂ ಮತ್ತು ನಾಗರಭಾವಿ ಎರಡನೇ ಹಂತದ 13ನೇ ಬಿಡಿಎ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಕರಣದಲ್ಲಿ ರಾಜ್ಯ ಸರ್ಕಾರದ ಕಾರ್ಯದರ್ಶಿ, ಬಿಡಿಎ ಆಯುಕ್ತ, ಬಿಡಿಎ ಅಧ್ಯಕ್ಷ, ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಕರ್ನಾಟಕ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಮಹಾಲಕ್ಷ್ಮಿಲೇಔಟ್ ಹಾಗೂ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ

"ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ"

ಉದ್ಘಾಟನೆ ಹಾಗೂ ಶಂಕುಸ್ಥಾಪನೆ: ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು

17ನೇ ಜುಲೈ 2022

ಮಹಾಲಕ್ಷ್ಮಿಲೇಔಟ್ ವಿಧಾನಸಭಾ ಕ್ಷೇತ್ರದ ಕಾರ್ಯಕ್ರಮ		ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾರ್ಯಕ್ರಮ
ಬೆಳಿಗ್ಗೆ 11.00 ಗಂಟೆಗೆ	ಸಮಯ	ಮಧ್ಯಾಹ್ನ 12.30 ಗಂಟೆಗೆ
ಶಿವ ದೇವಸ್ಥಾನದ ಹತ್ತಿರ, ಕಾವೇರಿನಗರ ಪೈಪ್ ಲೈನ್ ರಸ್ತೆ, ಕುರುಬರಹಳ್ಳಿ, ಬೆಂಗಳೂರು	ಸ್ಥಳ	ಪೀಣ್ಯ ಗ್ರಾಮದ ಎಸ್.ಆರ್.ಎಸ್ ಬಸ್ ನಿಲ್ದಾಣದ ಹತ್ತಿರ, ತುಮಕೂರು ರಸ್ತೆ, ಬೆಂಗಳೂರು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಅಂದಾಜು ರೂ 480 ಲಕ್ಷ ವೆಚ್ಚದಲ್ಲಿ ನಾಗಪುರ ವಾರ್ಡ್ ಸಂಖ್ಯೆ-67ರ ಡಾ॥ ರಾಜಕುಮಾರ್ ರಸ್ತೆಯ ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ ವೃತ್ತದಲ್ಲಿ ಅಭಿವೃದ್ಧಿಪಡಿಸಿರುವ "ಬಸವಧಾಮ ಉದ್ಯಾನವನ"ದ ಉದ್ಘಾಟನೆ

ಅಂದಾಜು ರೂ 700 ಲಕ್ಷ ವೆಚ್ಚದಲ್ಲಿ ಮಾರಪ್ಪನಪಾಳ್ಯ ವಾರ್ಡ್ ಸಂಖ್ಯೆ-44ರ ಅಶೋಕಪುರದಲ್ಲಿ ಅಭಿವೃದ್ಧಿಪಡಿಸಿರುವ "ಡಾ॥ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ"ದ ಉದ್ಘಾಟನೆ

ಅಂದಾಜು ರೂ 392 ಲಕ್ಷ ವೆಚ್ಚದಲ್ಲಿ ವೃಷಭಾವತಿನಗರ ವಾರ್ಡ್ ಸಂಖ್ಯೆ-102ರ ಬಿ.ಇ.ಎಂ.ಎಲ್ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ "ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಡಾ॥ ಬಾಲಗಂಗಾಧರನಾಥ ಮಹಾಸ್ವಾಮೀಜಿ ಉದ್ಯಾನವನ"ದ ಉದ್ಘಾಟನೆ

ನಾಗಪುರ ವಾರ್ಡ್ ಸಂಖ್ಯೆ-67ರ ವ್ಯಾಪ್ತಿಯ ಭೋವಿ ಪಾಳ್ಯದಲ್ಲಿ ನಿರ್ಮಿಸಲಾಗಿರುವ ಮನೆಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳ ವತಿಯಿಂದ "ಹಕ್ಕು ಪತ್ರ ವಿತರಣೆ"

ಅಂದಾಜು ರೂ 5500 ಲಕ್ಷ ವೆಚ್ಚದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯ ಅಡಿಯಲ್ಲಿ ಮಹಾಲಕ್ಷ್ಮಿಲೇಔಟ್ ಹಾಗೂ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊರವರ್ತುಲ ರಸ್ತೆಯಿಂದ ಪಶ್ಚಿಮ ಕಾರ್ಡ್‌ರಸ್ತೆಗೆ (ಕುರುಬರಹಳ್ಳಿ ಪೈಪ್‌ಲೈನ್ ರಸ್ತೆ ಮಾರ್ಗವಾಗಿ) ನಿರ್ಮಿಸಲು ಉದ್ದೇಶಿಸಿರುವ "ಮೇಲುಸೇತುವೆ ಕಾಮಗಾರಿ"ಯ ಶಂಕುಸ್ಥಾಪನೆ

ಪೀಣ್ಯ ಗ್ರಾಮದ ಎಸ್.ಆರ್.ಎಸ್ ಬಸ್ ನಿಲ್ದಾಣದ ಹತ್ತಿರ ಇರುವ ಅಂದಾಜು ರೂ. 750.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಿರುವ "ಸರ್ಕಾರಿ ಪದವಿ ಪೂರ್ವ ಕಾಲೇಜು" ಉದ್ಘಾಟನೆ

ಪೀಣ್ಯ ಗ್ರಾಮದ ಎಸ್.ಆರ್.ಎಸ್ ಜಂಕ್ಷನ್ ಹತ್ತಿರ ಇರುವ ಅಂದಾಜು ರೂ. 550.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಿರುವ "ಸರ್ಕಾರಿ ಮಾದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ನೂತನ ಕಟ್ಟಡ"ದ ಉದ್ಘಾಟನೆ

ಪೀಣ್ಯ ಗ್ರಾಮದ ಎಸ್.ಆರ್.ಎಸ್ ಜಂಕ್ಷನ್ ಹತ್ತಿರ ಇರುವ ಅಂದಾಜು ರೂ. 2000.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಿರುವ "ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೂತನ ಕಟ್ಟಡ"ದ ಉದ್ಘಾಟನೆ

ಶ್ರೀ ಕೆ. ಗೋಪಾಲಯ್ಯ, ಮಾನ್ಯ ಅಬಕಾರಿ ಸಚಿವರು ಹಾಗೂ ಶ್ರೀ ಎನ್. ಮುನಿರತ್ನ, ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು ಅಧಿಕಾರಿಯವರೊಂದಿಗೆ ಸ್ಥಳ ಪರಿಶೀಲಿಸುತ್ತಿರುವುದು.

ದಿವ್ಯ ಸಾನಿಧ್ಯ

ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಮಹಾಸಂಸ್ಥಾನ ಮಠ

ಜ್ಯೋತಿ ಬೆಳಗಿಸುವವರು

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ

ಶ್ರೀ ಕೆ. ಗೋಪಾಲಯ್ಯ
ಮಾನ್ಯ ಅಬಕಾರಿ ಸಚಿವರು ಹಾಗೂ ಶಾಸಕರು, ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ

ಶ್ರೀ ಎನ್. ಮುನಿರತ್ನ
ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಘನ ಉಪಸ್ಥಿತಿ

ಶ್ರೀ ಡಿ.ವಿ.ಸದಾನಂದಗೌಡ
ಮಾನ್ಯ ಸಂಸದರು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ

ಶ್ರೀ ಡಿ.ಕೆ.ಸುರೇಶ್
ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ಆರ್. ಅಶೋಕ — ಮಾನ್ಯ ಕಂದಾಯ ಸಚಿವರು
ಡಾ॥ ಸಿ.ಎನ್. ಅಶ್ವತ್ಥ ನಾರಾಯಣ — ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ವಿ. ಸೋಮಣ್ಣ — ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಶ್ರೀ ಬಿ.ಸಿ. ನಾಗೇಶ್ — ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು
ಶ್ರೀ ಬಿ.ಎ. ಬಸವರಾಜ — ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್ — ಮಾನ್ಯ ಸಹಕಾರ ಸಚಿವರು
ಶ್ರೀ ಎನ್. ನಾಗರಾಜು (ಎಂ.ಟಿ.ಬಿ) — ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್ — ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ — ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ

ಶ್ರೀ ಎಂ. ಸತೀಶ್ ರೆಡ್ಡಿ — ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್ — ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನ ಪರಿಷತ್)
ಶ್ರೀ ಜೈರಾಮ್ ರಮೇಶ್ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಗ್ಗೇಶ್ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಲೇಹರ್ ಸಿಂಗ್ ಸಿರೋಯಾ — ಮಾನ್ಯ ಸಂಸದರು (ರಾಜ್ಯಸಭೆ)
ಡಾ॥ ಎಲ್. ಹನುಮಂತಯ್ಯ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಪುಟ್ಟಣ್ಣ — ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)

ಶ್ರೀ ಟಿ.ಎ.ಶರವಣ — ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಕೆ. ಗೋವಿಂದರಾಜ್ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪಿ.ಆರ್. ರಮೇಶ್ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಯು.ಬಿ. ವೆಂಕಟೇಶ್ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಅ. ದೇವೇಗೌಡ — ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಮುನಿರಾಜು ಗೌಡ .ಪಿ.ಎಂ (ತುಳಸಿ) — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಎಂ. ನಾಗರಾಜು — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಎಸ್. ಕೇಶವ ಪ್ರಸಾದ್ — ಮಾನ್ಯ ಶಾಸಕರು (ವಿಧಾನ ಪರಿಷತ್)

ರಾಕೇಶ್ ಸಿಂಗ್, ಭಾ.ಆ.ಸೇ
ಆಡಳಿತಗಾರರು, ಬಿಬಿಎಂಪಿ

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ

ತುಷಾರ್ ಗಿರಿ ನಾಥ್, ಭಾ.ಆ.ಸೇ
ಮುಖ್ಯ ಆಯುಕ್ತರು, ಬಿಬಿಎಂಪಿ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು"
ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು-560002

ತುಂಗಭದ್ರಾ ನದಿಯ ಪ್ರವಾಹದಿಂದಾಗಿ ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಕೋಟೆ ಜನವಸತಿ ಪ್ರದೇಶಕ್ಕೆ ತೆರಳುವ ಹೊಳೆ ಆಂಜನೇಯ ದೇವಸ್ಥಾನ ಸೇತುವೆ ಜಲಾವೃತವಾಗಿದ್ದು, ಶನಿವಾರ ಶಾಲಾ ಮಕ್ಕಳು ಪ್ರವಾಹದ ನೀರಿನಲ್ಲೇ ನಡೆದುಕೊಂಡು ಹೋದರು (ಎಡಚಿತ್ರ), ತಮಿಳುನಾಡಿನ ಮೆಟ್ಟೂರು ಜಲಾಶಯ ಭರ್ತಿಯಾಗಿದ್ದು, ಎಲ್ಲ ಗೇಟ್‌ಗಳ ಮೂಲಕ ಕಾವೇರಿ ನದಿಗೆ ನೀರು ಹರಿಸಲಾಯಿತು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.54	88,836	85,639
ಹಾರಂಗಿ	2,859	2,854.95	12,840	10,000
ಕಬಿನಿ	2284.00	2282.35	32,791	32,000
ಹೇಮಾವತಿ	2,922	2,920.30	46,063	47,130
ಲಿಂಗನಮಕ್ಕಿ	1,819	1791.65	50,481	2,847.76
ಸೂಪಾ (ಮೀ)	564	537.50	36,930.1	0
ಮಾಣಿ	594	581.40	8,795	-
ತುಂಗಭದ್ರಾ	1,633	1,630.20	1,49,766	1,49,766
ಮಲಪ್ರಭಾ	2079.5	2,063.70	12,416	194
ಘಟಪ್ರಭಾ	2175	2,136.40	25,165	128
ಭದ್ರಾ	186	182.8	32,865	53,339
ಆಲಮಟ್ಟಿ (ಮೀ)	519.6	517.28	1,29,872	1,50,000
ನಾರಾಯಣಪುರ (ಮೀ)	492.25	491.24	1,50,000	1,62,518

* ನೆಲಮಟ್ಟದಿಂದ

ನಾಲ್ವರ ಸಾವು • ಫೋಟೊ ತೆಗೆಯಲು ಹೋಗಿ ನೀರಿನಲ್ಲಿ ಮುಳುಗಿದ ಆಟೋ ಚಾಲಕ

ಮಳೆ: ನೂರಾರು ಎಕರೆ ಜಮೀನು ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶನಿವಾರವೂ ಮಳೆಯ ಆರ್ಭಟ ಮುಂದುವರಿದಿದ್ದು, ನಾಲ್ವರು ಸಾವಿಗೀಡಾಗಿದ್ದಾರೆ. ಮಳೆಯಿಂದಾಗಿ ಹಲವೆಡೆ ಕೃಷಿ ಜಮೀನುಗಳು ಜಲಾವೃತಗೊಂಡು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿಯಲ್ಲಿ ತುಂಗಭದ್ರಾ ನದಿಯಲ್ಲಿ ಸ್ನಾನಕ್ಕೆ ಇಳಿದಿದ್ದ ಪರಮೇಶ್ವರ ನಾಯ್ಕ್ (35) ಸಾವಿಗೀಡಾಗಿದ್ದಾರೆ. ಪರಮೇಶ್ವರ ಚನ್ನಗಿರಿ ತಾಲ್ಲೂಕಿನ ರಾಜಗೊಂಡನಹಳ್ಳಿಯವರು.

ತುಮಕೂರು ನಗರದ ಹೆಗಡೆ ಕಾಲೊನಿಯ ರೈಲ್ವೆ ಅಂಡರ್‌ಪಾಸ್ ಸಮೀಪ ಫೋಟೊ ತೆಗೆಯುವಾಗ ಜಾರಿಬಿದ್ದು ಆಟೋರಿಕ್ಷಾ ಚಾಲಕ ಅಮ್ಜದ್ ಖಾನ್ (42) ಸಾವಿಗೀಡಾಗಿದ್ದಾರೆ. ನೀರಿಗೆ ಬಿದ್ದ ಮೊಬೈಲ್ ತೆಗೆದುಕೊಳ್ಳಲು ಅಂಡರ್‌ಪಾಸ್‌ನಲ್ಲಿ ಇಳಿದಾಗ ಅವರು ಕೊಚ್ಚಿಕೊಂಡು ಹೋಗಿದ್ದಾರೆ.

ಕೊಡಗು ಜಿಲ್ಲೆಯ ಶನಿವಾರಸಂತೆ ಹೋಬಳಿಯ ಸುಳುಗಳಲೆ ಕಾಲೊನಿಯಲ್ಲಿ ಮನೆಯ ಸ್ನಾನದ ಕೋಣೆಯ ಗೋಡೆ ಕುಸಿದು ಗಾಯಗೊಂಡಿದ್ದ ವಸಂತಮ್ಮ ಎಂಬುವರು ಚಿಕಿತ್ಸೆಗೆ ಸ್ಪಂದಿಸದೇ ಸಾವಿಗೀಡಾಗಿದ್ದಾರೆ. ಬೆಳಗಾವಿ ನಿಪ್ಪಾಣಿ ತಾಲ್ಲೂಕಿನ ಮಾಂದೂರು ಗ್ರಾಮದ ಬಳಿ ದೂಧಗಂಗಾ ನದಿಯಲ್ಲಿ ಮೀನು ಹಿಡಿಯಲು ಹೋದ ಶಿವಾಜಿ ಕೊರವಿ (54) ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಶಿವಮೊಗ್ಗದ ನವಲೆ ಶಾಂತಿನಗರದಲ್ಲಿ ಮನೆ ಗೋಡೆ ಕುಸಿದು ತಾಯಿ, ಮಗಳು ಗಾಯಗೊಂಡಿದ್ದಾರೆ. ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಹರಿಹರ ತಾಲ್ಲೂಕುಗಳಲ್ಲಿ ತುಂಗಭದ್ರಾ ನದಿ ಪ್ರವಾಹ ಸ್ಥಿತಿ ಮುಂದುವರಿದಿದೆ.

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಬಳಿಯ ಬಿಕ್ಕರಣೆ ಬಳಿ ಹೊಳೆಯಲ್ಲಿ ಮೃತದೇಹವೊಂದು ತೇಲಿಹೋಗಿದೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಯಾವುದೇ ಮೃತದೇಹ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಸಮೀಪದ ಸೂಳೆಮುರ್ಕಿ ಕ್ರಾಸ್‌ನಲ್ಲಿ ಗುಡ್ಡ ಕುಸಿದು ಹೊನ್ನಾವರ–ಮುಳಬಾಗಿಲು ರಾಷ್ಟ್ರೀಯ ಹೆದ್ದಾರಿ–69ರ ಸಂಪರ್ಕ ಕಡಿತಗೊಂಡಿದೆ. ಶಿರಸಿ ತಾಲ್ಲೂಕಿನ ಮೊಗಳ್ಳಿ ಗ್ರಾಮ ಜಲದಿಗ್ಬಂಧನಕ್ಕೆ ತುತ್ತಾಗಿದೆ. ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಸುಣಧೋಳಿ, ಅವರಾದಿ ಸೇತುವೆಗಳ ಮೇಲೆ ನೀರು ಹರಿದಿದ್ದು, 15 ಹಳ್ಳಿಗಳಿಗೆ ಮುಖ್ಯರಸ್ತೆಯಿಂದ ಸಂಪರ್ಕ ಕಡಿತಗೊಂಡಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕಾವೇರಿ ನದಿಯಂಚಿನ ನೂರಾರು ಎಕರೆ ಕಬ್ಬು, ಅಡಿಕೆ, ಬಾಳೆ, ತೆಂಗಿನ ತೋಟಗಳು ಮುಳುಗಿವೆ.

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ತೋಟ, ಗದ್ದೆಗಳು ಜಲಾವೃತವಾಗಿವೆ.

ವಿಜಯನಗರ ಜಿಲ್ಲೆಯಲ್ಲಿ ತಾವರಗುಂದಿ, ನಿಟ್ಟೂರು ಗ್ರಾಮದಲ್ಲಿ ನೂರಾರು ಎಕರೆ ಬೆಳೆ ಜಲಾವೃತವಾಗಿದೆ. ಹಾವೇರಿ ತಾಲ್ಲೂಕಿನಲ್ಲಿ ತುಂಗಭದ್ರಾ, ವರದಾ ನದಿಯ ಪ್ರವಾಹಕ್ಕೆ ಸಾವಿರಾರು ಎಕರೆ ಜಮೀನಿನಲ್ಲಿರುವ ಬೆಳೆಗಳು ಜಲಾವೃತವಾಗಿವೆ. ಉಡುಪಿ ಜಿಲ್ಲೆಯ ಕೊಲ್ಲೂರು, ಗೋಳಿಹೊಳೆ, ಕಾಲ್ತೋಡು, ಹೇರೂರು, ಶಿರೂರು ಗ್ರಾಮಗಳಲ್ಲಿ ಸುಮನಾ ನದಿ ಹಾಗೂ ಸೌಪರ್ಣಿಕಾ ನದಿ ತೀರದ ಭತ್ತದ ಗದ್ದೆಗಳು, ತೋಟಗಳು ಮುಳುಗಡೆಯಾಗಿವೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮಕರಬ್ಬಿ–ಬ್ಯಾಲಹುಣ್ಣಿ ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

ರಾಯಚೂರು ಜಿಲ್ಲೆಯಲ್ಲಿ ನಡುಗಡ್ಡೆ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಬಹುತೇಕ ಮುಳುಗಡೆ ಆಗಿದೆ. ರಾಯಚೂರು ತಾಲ್ಲೂಕಿನ ಗುರ್ಜಾಪುರ ಬಳಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ನ ಗೇಟ್‌ಗಳನ್ನು ತೆರೆಯಲು ಶನಿವಾರ ಕೇರಳದಿಂದ ತಜ್ಞರ ತಂಡ ಬಂದಿದ್ದು, 4 ಕ್ರೇನ್ ಮತ್ತು ಇನ್ನಿತರ ಸಾಧನಗಳನ್ನು ಬಳಸಿದರೂ ಪ್ರಯೋಜನ ಆಗಲಿಲ್ಲ. ಒಟ್ಟು 194 ಪೈಕಿ 94 ಗೇಟ್‌ಗಳನ್ನು ಮಾತ್ರ ಈವರೆಗೆ ತೆರೆಯಲಾಗಿದೆ.

ಹಾನಿ ವೀಕ್ಷಣೆ: ಕೆಸರಿನಲ್ಲಿ ಕಾಲು ಸಿಲುಕಿ ಸಚಿವ ಪರದಾಟ

ಚಿಕ್ಕಮಗಳೂರು: ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರು ಅರೇನೂರು ಬಳಿ ಹಾನಿ ವೀಕ್ಷಣೆಗೆ ಬಂದಿದ್ದ ಸಂದರ್ಭದಲ್ಲಿ ಕೆಸರಿನಲ್ಲಿ ಅವರ ಕಾಲುಗಳು ಸಿಲುಕಿದ್ದ ಘಟನೆ ನಡೆಯಿತು. ಬಳಿಕ ಸಿಬ್ಬಂದಿ ಅವರನ್ನು ಎತ್ತಿ ಪಕ್ಕಕ್ಕೆ ಕರೆದೊಯ್ದರು. ಹಾನಿ ಪ್ರದೇಶ ವೀಕ್ಷಿಸಿದ ಸಚಿವರು ಸಂತ್ರಸ್ತರಿಗೆ ಪರಿಹಾರ ಒದಗಿಸಲು ಕ್ರಮವಹಿಸುವುದಾಗಿ ಭರವಸೆ ನೀಡಿದರು.



ಚಿಕ್ಕಮಗಳೂರು ತಾಲ್ಲೂಕಿನ ಅರೇನೂರು ಬಳಿ ತೋಟದಲ್ಲಿ ಕೆಸರಿನಲ್ಲಿ ಸಿಲುಕಿಕೊಂಡಿದ್ದ ಸಚಿವ ಭೈರತಿ ಬಸವರಾಜ ಅವರನ್ನು ಸಿಬ್ಬಂದಿ ರಕ್ಷಿಸಿದರು

ಮೆಟ್ಟೂರು ಜಲಾಶಯ ಭರ್ತಿ

ಚಾಮರಾಜನಗರ: ರಾಜ್ಯದ ಕಬಿನಿ ಹಾಗೂ ಕೆಆರ್‌ಎಸ್ ಜಲಾಶಯಗಳಿಂದ ನದಿಗೆ ಹೆಚ್ಚುವರಿ ನೀರು ಬಿಡುತ್ತಿರುವುದರಿಂದ ನೆರೆಯ ತಮಿಳುನಾಡಿನ ಮೆಟ್ಟೂರು ಜಲಾಶಯ ಶನಿವಾರ ಭರ್ತಿಯಾಗಿದೆ.

ಸಾಮಾನ್ಯವಾಗಿ ಅಕ್ಟೋಬರ್ ನವೆಂಬರ್ ಅವಧಿಯಲ್ಲಿ ಭರ್ತಿಯಾಗುತ್ತಿದ್ದ ಜಲಾಶಯ ಈ ಬಾರಿ ಜುಲೈನಲ್ಲೇ ತುಂಬಿದೆ. ಜಲಾಶಯದ 16 ಗೇಟ್‌ಗಳಿಂದಲೂ ನೀರು ನದಿಗೆ ಬಿಡಲಾಗುತ್ತಿದೆ.

ಮಳೆ: ಎಲ್ಲಿ, ಎಷ್ಟು?

ಸ್ಥಳ	ಸೆಂ.ಮೀ
ಶಿವಮೊಗ್ಗ ಜಿಲ್ಲೆ	
ಆಗುಂಬೆ	16.94
ಉಡುಪಿ ಜಿಲ್ಲೆ	
ಜಡ್ಕಲ್	20.5
ಆಲೂರು	19.4
ಚಿಕ್ಕಮಗಳೂರು ಜಿಲ್ಲೆ	
ಕೆರೆಕಟ್ಟೆ	13.7
ಕಿಗ್ಗಾ	13.1
ಕಮ್ಮರಡಿ	9
ಉತ್ತರ ಕನ್ನಡ	
ಹೊನ್ನಾವರ	12.7
ಸಿದ್ದಾಪುರ	10.9
ಕುಮಟಾ	10.7
ಭಟ್ಕಳ	9.8
ಅಂಕೋಲಾ	8.06

ಎರಡು ದಿನ ವಿವಿಧೆಡೆ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರವೂ ಭಾರಿ ಮಳೆಯಾಗಲಿದೆ. ಸೋಮವಾರದಿಂದ ಕೆಲವೆಡೆ ಮಳೆ ಪ್ರಮಾಣ ಕಡಿಮೆ ಆಗುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ 48 ಗಂಟೆಗಳು ರಾಜ್ಯದ ಬಹುತೇಕ ಕಡೆ ಮಳೆಯಾಗಲಿದೆ. ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು, ಬೀದರ್, ಕಲಬುರಗಿ, ಬೆಳಗಾವಿ, ಹಾಗೂ ಹಾಸನ ಜಿಲ್ಲೆಗಳಲ್ಲಿ ಭಾನುವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸೋಮವಾರವೂ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 40 ಕಿ.ಮೀ. ನಿಂದ 50 ಕಿ.ಮೀ. ಇದೆ. ಈ ವೇಗವು 48 ಗಂಟೆ ಅವಧಿಯಲ್ಲಿ 60 ಕಿ.ಮೀ. ತಲುಪುವ ಸಾಧ್ಯತೆಯಿದೆ. ಮೀನುಗಾರರು ಸಮುದ್ರಕ್ಕೆ ತೆರಳಬಾರದು. ಬೆಂಗಳೂರಿನಲ್ಲಿ ಸಾಧಾರಣ ಮಳೆ ಯಾಗುವ ಸಾಧ್ಯತೆಯಿದೆ ಎಂದೂ ಹವಾಮಾನ ಇಲಾಖೆ ತಿಳಿಸಿದೆ.

ಮಳೆ: ಕೇರಳದಲ್ಲಿ ನಾಲ್ವರ ಸಾವು

ತಿರುವನಂತಪುರ: ದೇಶದ ವಿವಿಧೆಡೆ ವರ್ಷಧಾರೆ ಮುಂದುವರಿದಿದ್ದು, ಕೇರಳದಲ್ಲಿ ಶನಿವಾರ ನಾಲ್ವರು ಮೃತಪಟ್ಟಿದ್ದಾರೆ. ಒಳಹರಿವಿನ ಹೆಚ್ಚಳದಿಂದಾಗಿ ಹಲವು ಜಲಾಶಯಗಳೂ ಭರ್ತಿಯಾಗಿವೆ. ನದಿ ಪಾತ್ರದ ಗ್ರಾಮಗಳು ಮುಳುಗಡೆಯಾಗಿವೆ.

ಕೊಯಿಕ್ಕೋಡ್‌ನಲ್ಲಿ 13 ವರ್ಷದ ಬಾಲಕ ಸೇರಿ ಇಬ್ಬರು ನೀರು ಪಾಲಾಗಿದ್ದಾರೆ. ಕಾಸರಗೋಡಿನಲ್ಲಿ ತೆಂಗಿನ ಮರ ಉರುಳಿಬಿದ್ದು ಬಾಲಕನೊಬ್ಬ ಮೃತಪಟ್ಟಿದ್ದಾನೆ. ಭೂಕುಸಿತದಿಂದಾಗಿ ವಯನಾಡು ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ಅಸುನೀಗಿದ್ದಾರೆ.

300 ಗ್ರಾಮಗಳು ಮುಳುಗಡೆ (ಪಿಟಿಐ ವರದಿ): 'ಆಂಧ್ರಪ್ರದೇಶದ ಆರು ಜಿಲ್ಲೆಗಳ ಸುಮಾರು 300 ಗ್ರಾಮಗಳು ಜಲಾವೃತಗೊಂಡಿವೆ. ಇನ್ನೂ 177 ಗ್ರಾಮಗಳು ಮುಳುಗಡೆ ಭೀತಿ ಎದುರಿಸುತ್ತಿವೆ. ಸಂತ್ರಸ್ತರಿಗಾಗಿ ವಿವಿಧ ಜಿಲ್ಲೆಗಳಲ್ಲಿ 220 ಕೇಂದ್ರಗಳನ್ನು ತೆರೆಯಲಾಗಿದ್ದು, ಇಲ್ಲಿ ಸುಮಾರು 62,337 ಮಂದಿಗೆ ಆಶ್ರಯ ಕಲ್ಪಿಸಲಾಗಿದೆ.

'ಮಹಾರಾಷ್ಟ್ರದ ವಿವಿಧೆಡೆ ಜೋರು ಮಳೆ ಸುರಿಯುತ್ತಿದ್ದು, ಅಪಾಯ ಲೆಕ್ಕಿಸದೆ ಕೆಲಸಕ್ಕೆಂದು ತೆರಳಿದ್ದ 10 ಮಂದಿ ಕಾರ್ಮಿಕರು ಪಾಲ್ಘರ್ ಜಿಲ್ಲೆಯ ವೈತರಣಾ ನದಿ ಮಧ್ಯಭಾಗದಲ್ಲಿ ಸಿಲುಕಿದ್ದರು. ಎರಡು ದಿನ ಊಟವಿಲ್ಲದೆ ಬಳಲಿದ್ದ ಇವರನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸರ್ಕಾರಿ ಆದೇಶದಲ್ಲಿ ಅಕ್ಷರ ದೋಷ

ಒಂದನೇ ಪುಟದಿಂದ...

ಇಲಾಖೆಗಳ ಕಚೇರಿಗಳಲ್ಲಿ ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸುವ ನಿರ್ಧಾರಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗುವ ಸುಳಿವು ಸಿಗುತ್ತಿದ್ದಂತೆ, ಅದನ್ನು ವಾಪಸು ಪಡೆಯುವಂತೆ ಡಿಪಿಎಆರ್ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ರಾತ್ರಿ 9 ಗಂಟೆ ಸುಮಾರಿಗೆ ಈ ಬಗ್ಗೆ ನಿರ್ದೇಶನ ನೀಡಲಾಗಿದ್ದರೂ, ಆದೇಶ ಹೊರಬಿದ್ದಿದ್ದು ಮಾತ್ರ ರಾತ್ರಿ 2 ಗಂಟೆಗೆ.

ಆದೇಶದ ಪ್ರತಿ ಶನಿವಾರ ಬೆಳಗ್ಗೆಯಿಂದಲೇ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಜೊತೆಗೆ, ಆದೇಶದಲ್ಲಿದ್ದ ಅಕ್ಷರ ದೋಷಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಕಾರ್ಯವೈಖರಿಗೆ ಟೀಕೆ ವ್ಯಕ್ತವಾಗಿತ್ತು. ಸರ್ಕಾರದ ನಡೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಂಗ್ಯ ಭರಿತ ಮಾತುಗಳು ಹರಿದಾಡಿದ್ದವು. ತಕ್ಷಣವೇ ಎಚ್ಚೆತ್ತುಕೊಂಡ ಡಿಪಿಎಆರ್, ಪರಿಷ್ಕೃತ ಆದೇಶವನ್ನು ಮತ್ತೊಮ್ಮೆ ಹೊರಡಿಸಿತು.

ಇಲಾಖೆಗಳ ಕಚೇರಿಗಳಲ್ಲಿ ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸಿದ ಆದೇಶ ಹೊರಬೀಳುತ್ತಿದ್ದಂತೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಆರ್‌ಎಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್. ಸೇರಿದಂತೆ ಹಲವರು ಸರ್ಕಾರದ ನಡೆಯನ್ನು ಟೀಕಿಸಿದ್ದರು.

'ಗಮನಕ್ಕೆ ಬಂದಿರಲಿಲ್ಲ'

'ಸರ್ಕಾರಿ ಕಚೇರಿಗಳಲ್ಲಿ ಫೋಟೊ ವಿಡಿಯೊ ಮಾಡದಂತೆ ಆದೇಶ ಹೊರಡಿಸಿದ್ದು ನನ್ನ ಗಮನಕ್ಕೆ ಬಂದಿರಲಿಲ್ಲ. ಯಾವುದೇ ರೀತಿಯ ನಿಷೇಧ ಆಗಬಾರದು, ಮೊದಲು ಇದ್ದಂತೆ ಇರಲಿ ಎಂಬ ಕಾರಣಕ್ಕೆ ಆ ಆದೇಶವನ್ನು ವಾಪಸು ಪಡೆಯುವ ತಾತ್ವಿಕ ತೀರ್ಮಾನ ತೆಗೆದುಕೊಂಡಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ನಮ್ಮ ಸರ್ಕಾರ ಪಾರದರ್ಶಕವಾಗಿ ನಡೆಯುತ್ತಿದೆ. ಯಾವುದನ್ನೂ ಮುಚ್ಚಿಡುವುದಿಲ್ಲ. ಯಾರೂ ಏನೇ ಹೇಳಿಕೊಳ್ಳಲಿ' ಎಂದ ಅವರು, 'ಸರ್ಕಾರಿ ಕಚೇರಿಗಳಲ್ಲಿ ಫೋಟೊ, ವಿಡಿಯೊ ಮಾಡದಂತೆ ಕೆಲವು ಸರ್ಕಾರಿ ನೌಕರರು ಬಹಳ ದಿನಗಳಿಂದ ಹೇಳುತ್ತಿದ್ದರು. ಅವರು ಹೇಳುವುದರಲ್ಲೂ ಅರ್ಥವಿದೆ. ಕೆಲವು ಹೆಣ್ಣುಮಕ್ಕಳ ಫೋಟೋ ತೆಗೆದು ತೊಂದರೆ ಆಗಿತ್ತು' ಎಂದರು.

ಪೌಲ್ ಜಾಮೀನು ಅರ್ಜಿ: ಆಕ್ಷೇಪಣೆ ಸಲ್ಲಿಕೆಗೆ ಕಾಲಾವಕಾಶ ಕೋರಿಕೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಆರೋಪಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡುವಂತೆ ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ಮನವಿ ಮಾಡಿದೆ.

ಈ ಕುರಿತಂತೆ ಪ್ರಾಸಿಕ್ಯೂಷನ್ ಪರ ವಕೀಲರು ಶನಿವಾರ ಒಂದನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶ ಆನಂದ ಚೌಹಾಣ್ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ, ಅಮ್ರಿತ್ ಪೌಲ್ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡುವ ಬಗ್ಗೆ ಉತ್ತರಿಸುವಂತೆ ಪ್ರಾಸಿಕ್ಯೂಷನ್ ಶುಕ್ರವಾರವಷ್ಟೇ (ಜುಲೈ 15) ಮನವಿ ಸಲ್ಲಿಸಿತ್ತು. 'ಈ ಮನವಿಗೆ ಇದೇ 19ರಂದು ಉತ್ತರಿಸಲಾಗುವುದು' ಎಂದು ಅಮ್ರಿತ್ ಪೌಲ್ ಪರ ವಕೀಲರು ಕೋರ್ಟ್‌ಗೆ ತಿಳಿಸಿದರು.

ಇದನ್ನು ದಾಖಲು ಮಾಡಿಕೊಂಡ ನ್ಯಾಯಾಧೀಶರು ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿದರು. ಅಮ್ರಿತ್ ಪೌಲ್, ಪಿಎಸ್‌ಐ ನೇಮಕಾತಿ ವಿಭಾಗದ ಎಡಿಜಿಪಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಪ್ರಕರಣದಲ್ಲಿ ಅವರು 35ನೇ ಆರೋಪಿಯಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮಂಕಿಪಾಕ್ಸ್: ನೋಡಲ್ ಕೇಂದ್ರ ಸ್ಥಾಪನೆ

ನವದೆಹಲಿ (ಪಿಟಿಐ): ದೇಶದಲ್ಲಿ ಮಂಕಿಪಾಕ್ಸ್‌ನ ಮೊದಲ ಪ್ರಕರಣ ವರದಿಯಾದ ಹಿನ್ನೆಲೆಯಲ್ಲಿ, ದೆಹಲಿ ಸರ್ಕಾರವು ಲೋಕನಾಯಕ್ ಜಯ ಪ್ರಕಾಶ್ ನಾರಾಯಣ (ಎಲ್‌ಎನ್‌ಜೆಪಿ) ಆಸ್ಪತ್ರೆಯಲ್ಲಿ ನೋಡಲ್ ಕೇಂದ್ರವನ್ನು ಆರಂಭಿಸಿದ್ದು, ವೈದ್ಯರಿಗೆ ತರಬೇತಿಯನ್ನು ನೀಡುತ್ತಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

3 ತಿಂಗಳಲ್ಲಿ 470 ಕಡೆ 'ನಮ್ಮ ಕ್ಲಿನಿಕ್'

ಬೆಂಗಳೂರು: 'ಮೂರು ತಿಂಗಳ ಒಳಗೆ ಬೆಂಗಳೂರಿನಲ್ಲಿ 243 ಕಡೆ ಸೇರಿ ರಾಜ್ಯದ 470 ಕಡೆ 'ನಮ್ಮ ಕ್ಲಿನಿಕ್' ಪ್ರಾರಂಭಿಸಲಾಗುತ್ತದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಆರೋಗ್ಯ ಇಲಾಖೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ವಿತರಣೆ ಕಾರ್ಯಕ್ರಮ 'ಕೋವಿಡ್ ಲಸಿಕಾ ಅಮೃತ ಮಹೋತ್ಸವ'ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

'ಜುಲೈ ಕೊನೆಯ ವಾರ ಅಥವಾ ಆಗಸ್ಟ್ ಮೊದಲ ವಾರ ಬೆಂಗಳೂರಿನಲ್ಲಿ ಮೊದಲ 'ನಮ್ಮ ಕ್ಲಿನಿಕ್' ಕಾರ್ಯಾರಂಭಿಸಲಿದೆ. 18 ರಿಂದ 59 ವರ್ಷದ ನಾಲ್ಕೂವರೆ ಕೋಟಿ ಜನರಿಗೆ 75 ದಿನಗಳಲ್ಲಿ ಕೋವಿಡ್ ಲಸಿಕೆಯ ಮೂರನೇ ಡೋಸ್ ವಿತರಿಸಲಾಗುತ್ತದೆ. ಜನರು ಇದರ ಲಾಭ ಪಡೆಯಬೇಕು' ಎಂದು ಡಾ.ಕೆ. ಸುಧಾಕರ್ ಹೇಳಿದರು.

ಶಾಸಕ ಜಮೀರ್‌ಗೆ ಎಸಿಬಿಯಿಂದ ನೋಟಿಸ್

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣದಲ್ಲಿ ದಾಖಲೆಗಳೊಂದಿಗೆ 10 ದಿನಗಳೊಳಗೆ ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ಶಾಸಕ ಬಿ.ಝೆಡ್. ಜಮೀರ್ ಅಹಮ್ಮದ್ ಖಾನ್ ಅವರಿಗೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ನೋಟಿಸ್ ಜಾರಿ ಮಾಡಿದೆ.

ಇ.ಡಿ ರವಾನಿಸಿದ್ದ ವರದಿ ಆಧರಿಸಿ ಜಮೀರ್ ಅಹಮ್ಮದ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಎಸಿಬಿ, ಜುಲೈ 5ರಂದು ಶಾಸಕರ ಮನೆ, ಕಚೇರಿಗಳ ಮೇಲೆ ದಾಳಿ ಮಾಡಿತ್ತು. ಅಧಿಕೃತ ಆದಾಯಕ್ಕೆ ಹೋಲಿಸಿದರೆ ಜಮೀರ್ ಅವರು ₹87.34 ಕೋಟಿ ಮೌಲ್ಯದ ಅಕ್ರಮ ಆಸ್ತಿ ಹೊಂದಿದ್ದಾರೆ ಎಂಬ ಆರೋಪ ಎಫ್‌ಐಆರ್‌ನಲ್ಲಿದೆ.

'ಇ.ಡಿ ವರದಿಯಲ್ಲಿರುವ ಅಂಶಗಳು, ನಗರದ ಕಂಟೋನ್ಮೆಂಟ್ ರೈಲು ನಿಲ್ದಾಣದ ಬಳಿ ಶಾಸಕರು ಬಂಗಲೆ ನಿರ್ಮಾಣ ವೆಚ್ಚ, ವರಮಾನದ ಮೂಲಗಳು ಸೇರಿದಂತೆ ಹಲವು ಅಂಶಗಳ ಕುರಿತು ವಿಚಾರಣೆ ನಡೆಸಲು ತನಿಖಾ ತಂಡ ಸಿದ್ಧತೆ ಮಾಡಿಕೊಂಡಿದೆ. ಈ ಕುರಿತು ಶಾಸಕರಿಗೆ ಶನಿವಾರ ಲಿಖಿತ ನೋಟಿಸ್ ಜಾರಿಮಾಡಲಾಗಿದೆ. ಹತ್ತು ದಿನಗಳೊಳಗೆ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಜೈಪುರದಲ್ಲಿರುವ ಫೈನ್ ಡೈನಿಂಗ್ ರೆಸ್ಟೋರೆಂಟ್ ಗೆ ದಕ್ಷಿಣ ಭಾರತೀಯ ಬಾಣಸಿಗ/ ಅಡಿಗೆಭಟ್ಟರು ಬೇಕಾಗಿದ್ದಾರೆ. ಕರ್ನಾಟಕ ಶೈಲಿಯ ಅಡಿಗೆಯ ಅನುಭವವಿರಬೇಕು,ಸಂಬಳ ಪ್ರಸ್ತುತ ಉದ್ಯಮದಲ್ಲಿರುವಂತೆ, ಊಟ,ವಸತಿಯಿದೆ..ಸಂಪರ್ಕಿಸಿ: 9886395565.

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-. 9513330916, 9513330914.

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

Sites

Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಚಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರೆಂಟಲ್ ಪ್ರಾಪರ್ಟೀಸ್

Accommodation Wanted

Commercial

A Leading Healthcare Service Provider requires
1. Land with a Development potential of 90,000 Sq.ft to Build to Suit
2. Stand-alone Completed / Under Construction, Hotel/ Service Apartment (45-100 Rooms)
3. Stand-alone Commercial and Residential complexes (30,000 - 90,000 Sq.ft). For long- term rent in Bangalore and Chennai.
The Building / Land should have all necessary Government approvals & Licenses.
Kindly send in your details to requirementchs@gmail.com Ph: 6363218016

Accommodation Available

Commercial

ಸಾಗರದ ಜೆ.ಸಿ.ರೋಡ್‌ನಲ್ಲಿ 16x90 ಅಳತೆಯ ನೆಲ ಮಾಳಿಗೆ ಮತ್ತು ಮಹಡಿ ಬಾಡಿಗೆಗೆ ಇದೆ ಕೂಡಲೇ ಸಂಪರ್ಕಿಸಿ: 9448138143, 9900218256.

ವೈವಾಹಿಕ

Brides Wanted

Bride Required Others

ಕನ್ಯೆ ಬೇಕಾಗಿದೆ
32 ವರ್ಷದ ಹುಡುಗನಿಗೆ ಕನ್ಯೆ ಬೇಕಾಗಿದೆ. ಯಾವುದೇ ದುಶ್ಚಟಗಳಿಲ್ಲ. ಜಾತಿ, ವಯಸ್ಸು ಅವಶ್ಯಕತೆ ಇಲ್ಲ. ಬಾಳು ಬೇಕು ಅನ್ನುವವರು ನೇರ ಸಂಪರ್ಕಿಸಿ : 9036447585

Grooms Wanted

Others

ವರ ಬೇಕಾಗಿದೆ
26 ವರ್ಷದ ವಧು, 5'3" ಎತ್ತರ, ಬಿಳಿ ಬಣ್ಣ, PUC II ಓದಿರುವ (ಹಿಂದೂ ಲಿಂಗಾಯತ ವಧು), ತಂದೆ ತಾಯಿ ಅಗಲಿದ್ದಾರೆ. ಸೋದರಮಾವನ ಕಡೆ ವಾಸಿಸುತ್ತಿರುವ, 5 ಎಕರೆ ಜಮೀನು ಹೊಂದಿರುವ ವಧುವಿಗೆ ಯಾವುದೇ ಜಾತಿಯ ವರ ಬೇಕಾಗಿದ್ದಾರೆ 83788 79264 84325 81131

Muslim

SUNNI MUSLIM Family seeks an alliance for their 1999 born beautiful daughter, father working as a finance professional, Please contact (080-69074922)

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ ರಜಾ ದಿನಗಳಲ್ಲಿ ಅಗಸ್ಟ್ 12 ರಿಂದ 15ರವರೆಗೆ ನವಗ್ರಹ ದರ್ಶನ ತಂಜಾವೂರು ಕುಂಭಕೋಣಂ ಚಿದಂಬರಂ,ವೇಲಾಂಗಣಿ ಪೂಂಪುಹಾರ್‌ಬೀಚ್ ಇತ್ಯಾದಿ 18 ಕ್ಷೇತ್ರಗಳು 6200/. ಕಾಶಿ,ವೈಷ್ಣೋದೇವಿ,ದ್ವಾರಕಾ ಉಜ್ಜಯಿನಿ,ಸೋಮನಾಥ್ ಶಿರಡಿ,ಅಹೋಬಿಲಂ ಪ್ರವಾಸಗಳಿಗೆ ಸಂಪರ್ಕಿಸಿ: 9448390735 9449721678 9731159966

ನೇಪಾಳ-ಕಠ್ಮಂಡು 10 ದಿನದ ವಿದೇಶ ಪ್ರವಾಸ. ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ವಿಶ್ವಮಾನವ ಕುವೆಂಪು ಕಲಾ ಉತ್ಸವ-2022. ದಿನಾಂಕ:12-09-2022 ರಿಂದ ನೇಪಾಳಕಠ್ಮಂಡು ಪೋಕ್ರಾ ಗೋರಕಪುರ ಲುಂಬಿನಿ ಮುಕ್ತಿನಾಥ ಚಿತವಾನ್ ಮನೋಕಾಮನ ಜನಕಪುರಿ. ಸಂಪರ್ಕಿಸಿ: 09880988298/ 09448025130.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸುವರ್ಣ ಯಾತ್ರ, ಕಾಶಿ ಪ್ರವಾಸ 7ದಿನಗಳು 9.8.2022. ಪುರಿ ಭುವನೇಶ್ವರ 3ದಿನಗಳು 18.8.2022. ನೇಪಾಳ ಮುಕ್ತಿನಾಥ 8ದಿನಗಳು 20.8.2022. ಕೇರಳ 6ದಿನಗಳು 8.9.2022. ಗೋವಾ 2.9.2022 5ದಿನಗಳು. 9019462508, 8970949434.

ಭವಿಷ್ಯ

Astrology

★||ಶ್ರೀಕೇದಾರನಾಥ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9535088827"

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಕುಟ್ಟಿಚಾತನ್ ಮಹಿಮೆ, ವ್ಯಾಪಾರ, ಮದುವೆ, ಜಾಗ ಮಾರಾಟ, ಜಗಳ, ವಶೀಕರಣ, ನಿಮ್ಮೆಲ್ಲಾ ಸಮಸ್ಯೆಗಳಿಗೆ ಕೇರಳದಚಾತನ್ ಶಕ್ತಿಯಿಂದ ಪರಿಹಾರ ಮಾಡಲಾಗುವುದು. ಕೇರಳ: 9037926310

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
ಲೇಟ್ ರೈಲ್ವೆ ವೆಂಕಟಯ್ಯನವರ ಧರ್ಮಪತ್ನಿ
ಜನನ :24.04.1933 ಮರಣ :18.07.2021
ಶ್ರೀಮತಿ ಲಕ್ಷ್ಮಮ್ಮ ರವರ ಮೊದಲನೇ ವರ್ಷದ ಪುಣ್ಯಸ್ಮರಣೆಯನ್ನು ದಿನಾಂಕ : 17/07/2022 ಭಾನುವಾರ ಮಧ್ಯಾಹ್ನ 12.30 ಗಂಟೆಗೆ ಶಿವಸ್ಮಿತಾ ಪಾರ್ಟಿಹಾಲ್ ಹೆರೋಹಳ್ಳಿ ಕ್ರಾಸ್ ಮಾಗಡಿ ರಸ್ತೆ ಬೆಂಗಳೂರು–560091 ರಲ್ಲಿ ಏರ್ಪಡಿಸಲಾಗಿದೆ.
ಇಂತಿ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

ನಿಧನ

ಶ್ರೀ ಟಿ.ಎಲ್.ಸತ್ಯನಾರಾಯಣ
ಕೋಂ. ದಿ. ಟಿ.ಎನ್.ಲಕ್ಷ್ಮೀನರಸಿಂಹಯ್ಯ
ಜನನ: 09.12.1966 ಮರಣ: 15.07.2022
ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ಪಾರ್ಥಿವ ಶರೀರವನ್ನು ಜೆ.ಪಿ. ನಗರ, 2ನೇ ಹಂತ, ಇವರ ಮನೆಯ ಆವರಣದಲ್ಲಿ ಬೆಳಿಗ್ಗೆ 8:30 ರಿಂದ ಮಧ್ಯಾಹ್ನ 12:30 ರವರೆಗೆ ಇಡಲಾಗುವುದು. 17.07.2022 ರಂದು ಮಧ್ಯಾಹ್ನ 1:30 ಗಂಟೆಯ ನಂತರ ಬನಶಂಕರಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು.
ಇಂತಿ ದುಃಖತಪ್ತರು
ಕುಟುಂಬ ವರ್ಗದವರು
ಸಂಪರ್ಕಿಸಿ: 98454 45857, 95382 44713, 91088 78215

4ನೇ ವರ್ಷದ ಚಿರಸ್ಮರಣೆ



ಶ್ರೀ ಬಿ.ಪಿ. ತಿಪ್ಪಯ್ಯ BA, BL, B.Ed
Director of Public Instruction DPI (Retd.)
(ನಿಧನ: 17.07.2018)
ನಿಮ್ಮ ಮಾರ್ಗದರ್ಶನವೇ ನಮ್ಮ ಜೀವನ ಸಾಧನೆಯ ನಂದಾದೀಪ, ನೀವು ನಮ್ಮಲ್ಲಿ ಬಿಟ್ಟು ಹೋಗಿರುವ ಸವಿನೆನಪುಗಳೆ ನಮಗೆ ಧೈರ್ಯ, ಸ್ಥೈರ್ಯ. ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ನಮ್ಮ ಮನದಾಳದಲ್ಲಿ ನಿಮ್ಮ ನೆನಪುಗಳು ಸ್ಥಿರವಾಗಿವೆ. ನಿಮಗೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ನಮ್ರತೆಯಿಂದ ಪ್ರಾರ್ಥಿಸುತ್ತೇವೆ.
ಸದಾ ನಿಮ್ಮನ್ನು ಸ್ಮರಿಸುವ: ಪತ್ನಿ ಮತ್ತು ಮಕ್ಕಳು.

LOOKING FOR JOB OPPORTUNITY
Refer Classifieds on Wednesday

ಬೊಮ್ಮಾಯಿ ಸರ್ಕಾರಕ್ಕೆ ವರ್ಷ: ದೊಡ್ಡಬಳ್ಳಾಪುರದಲ್ಲಿ ನಡೆಸಲು ಬಿಜೆಪಿ ಚಿಂತನ ಸಭೆ ನಿರ್ಧಾರ

ಆ.28ಕ್ಕೆ ಬೃಹತ್ ಸಾಧನಾ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ವರ್ಷ ಪೂರೈಸುತ್ತಿರುವ ಪ್ರಯುಕ್ತ ಆಗಸ್ಟ್ 28ರಂದು ದೊಡ್ಡಬಳ್ಳಾಪುರದಲ್ಲಿ ಬೃಹತ್ ಸಾಧನಾ ಸಮಾವೇಶ ನಡೆಸಲು ಬಿಜೆಪಿ ನಿರ್ಧರಿಸಿದೆ.

ವಿಧಾನಸಭಾ ಚುನಾವಣಾ ತಯಾರಿ ಕುರಿತಂತೆ ಚರ್ಚಿಸಲು ದೇವನಹಳ್ಳಿಯಲ್ಲಿ ಶುಕ್ರವಾರ ನಡೆದ ಬಿಜೆಪಿ ರಾಜ್ಯಮಟ್ಟದ ಚಿಂತನ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ದೊಡ್ಡಬಳ್ಳಾಪುರದಲ್ಲಿ ನಡೆಯುವ ಸಮಾವೇಶಕ್ಕೆ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಅನುಕೂಲ ಪಡೆದಿರುವ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಲು ತೀರ್ಮಾನಿಸಲಾಗಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ, 'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು 150 ಸ್ಥಾನ ಗಳಿಸುವ ಗುರಿ ಹೊಂದಿದೆ. ಅದಕ್ಕೆ ಪೂರಕವಾಗಿ ಸಮಾವೇಶ ಆಯೋಜಿಸಲಾಗುವುದು. ಪ್ರತಿ ತಿಂಗಳು ಎರಡು ಜಿಲ್ಲೆಗಳಲ್ಲಿ ಸಮಾವೇಶ ನಡೆಸುವುದಕ್ಕೂ ನಿರ್ಧರಿಸಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಪ್ರಮುಖ ನಾಯಕರು ಈ ಸಮಾವೇಶಗಳಲ್ಲಿ ಭಾಗವಹಿಸಲಿದ್ದಾರೆ' ಎಂದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆಯಲ್ಲಿ 39 ಜಿಲ್ಲಾ ಘಟಕಗಳ ವ್ಯಾಪ್ತಿಯಲ್ಲಿ ತಲಾ ಒಂದು ದಿನದ ಸಮಾವೇಶ ಆಯೋಜಿಸಲಾಗುವುದು. ಏಳು ವಲಯಗಳಲ್ಲಿ ಬಿಜೆಪಿ ಯುವ ಮೋರ್ಚಾ ಸಮಾವೇಶ ನಡೆಯಲಿದೆ. ಮುಖ್ಯಮಂತ್ರಿಯವರು 50 ವಿಧಾನಸಭಾ ಕ್ಷೇತ್ರಗಳಲ್ಲಿ ರ್‍ಯಾಲಿ ನಡೆಸಿ, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದು ವಿವರಿಸಿದರು.

ಬಿಜೆಪಿಯ 312 ಮಂಡಲ ಘಟಕಗಳಲ್ಲಿ ಆ.9ರಿಂದ 15ರವರೆಗೆ 'ಹರ್ ಘರ್ ತಿರಂಗಾ' ಕಾರ್ಯಕ್ರಮ ನಡೆಯಲಿದೆ. ಆ.1ರಿಂದ 15ರವರೆಗೆ ಪಕ್ಷದ ಯುವ ಮೋರ್ಚಾ ನೇತೃತ್ವದಲ್ಲಿ 224 ಕ್ಷೇತ್ರಗಳ ವ್ಯಾಪ್ತಿಯಲ್ಲಿ ತಲಾ 75 ಕಿ.ಮೀ. ಉದ್ದದ ಬೈಕ್ ರ್‍ಯಾಲಿ ನಡೆಸಲಾಗುವುದು ಎಂದು ಅವರು ಹೇಳಿದರು.

ಕಲ್ಯಾಣ ಕರ್ನಾಟಕದ 41 ವಿಧಾನಸಭಾ ಕ್ಷೇತ್ರಗಳ ಪೈಕಿ 15ರಲ್ಲಿ ಬಿಜೆಪಿ ಶಾಸಕರಿದ್ದಾರೆ. ಅದನ್ನು ದ್ವಿಗುಣಗೊಳಿಸುವ ಗುರಿಯೊಂದಿಗೆ ಕೆಲಸ ಮಾಡಲು ತೀರ್ಮಾನಿಸಲಾಗಿದೆ. ಹಳೆ ಮೈಸೂರು ಭಾಗದ 51 ಕ್ಷೇತ್ರಗಳ ಪೈಕಿ ಒಂಬತ್ತರಲ್ಲಿ ಬಿಜೆಪಿ ಗೆದ್ದಿತ್ತು. ಆ ಭಾಗದಲ್ಲೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

'ಕಲ್ಯಾಣ ಕರ್ನಾಟಕ ಮತ್ತು ಹಳೆ ಮೈಸೂರು ಭಾಗದ ಜೆಡಿಎಸ್, ಕಾಂಗ್ರೆಸ್‌ನ ಹಲವು ಶಾಸಕರು ಬಿಜೆಪಿ ಸೇರಲು ಉತ್ಸುಕರಾಗಿದ್ದಾರೆ. ಆ ಪಕ್ಷಗಳ ಹಲವು ನಾಯಕರೂ ಬಿಜೆಪಿ ಸಂಪರ್ಕದಲ್ಲಿದ್ದಾರೆ. ಅವರೆಲ್ಲರನ್ನೂ ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಸೇರಿಸಿಕೊಳ್ಳಲಾಗುವುದು' ಎಂದರು.

ಇಷ್ಟು ದಿನ ಭಾರತ್ ತೋಡೋ ಮಾಡಿದ್ದರು: ರವಿಕುಮಾರ್

'ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸುವುದು, ಜಾತಿ ಹೆಸರಿನಲ್ಲಿ ಸಮಾಜ ಒಡೆಯುವುದು, ಭಯೋತ್ಪಾದನೆಗೆ ಬೆಂಬಲ ನೀಡುವ ಮೂಲಕ ಕಾಂಗ್ರೆಸ್‌ನವರು ಇಷ್ಟು ದಿನ ಭಾರತ್ ತೋಡೋ ಅಭಿಯಾನ ಮಾಡಿದ್ದರು. ಈಗ ಭಾರತ್ ಜೋಡೋ ಕಾರ್ಯಕ್ರಮ ಮಾಡಲು ಹೊರಟಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಟೀಕಿಸಿದರು.

'ಬಾಗಲಕೋಟೆಯ ಕೆರೂರಿನಲ್ಲಿ ಖಾಸಗಿ ಆಸ್ಪತ್ರೆಗೆ ಶುಕ್ರವಾರ ಭೇಟಿ ನೀಡಿದ್ದ ಸಿದ್ದರಾಮಯ್ಯ, ಮುಸ್ಲಿಂ ಕುಟುಂಬಕ್ಕೆ ₹ 2 ಲಕ್ಷ ನೀಡಿದ್ದರು. ಹಿಂದೂ ಕುಟುಂಬಕ್ಕೆ ₹ 50 ಸಾವಿರ ಮಾತ್ರ ನೀಡಿದ್ದಾರೆ. ಇದು ಅವರ ದೃಷ್ಟಿಕೋನಕ್ಕೆ ಸಾಕ್ಷಿ. ಈ ನಡೆ ಖಂಡನೀಯ. ಇದಕ್ಕಾಗಿ ಸಿದ್ದರಾಮಯ್ಯ ಅವರು ಜನರ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು.

'ಟಿ.ಸಿ ನೀಡಲು ಹಿಜಾಬ್ ತೆಗೆಯಬೇಕೆಂದರು'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಹಿಜಾಬ್‌ಗೆ ಅವಕಾಶ ಇಲ್ಲದ ಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸಲು ಮನಸ್ಸಿರಲಿಲ್ಲ. ನಮಗೆ ವರ್ಗಾವಣೆ ಪ್ರಮಾಣಪತ್ರ (ಟಿ.ಸಿ.) ಕೊಡಬೇಕಾದರೂ ಹಿಜಾಬ್ ತೆಗೆಯಬೇಕೆಂದರು. ಟಿ.ಸಿ.ಗಾಗಿ ಸಹಪಾಠಿ ಮುಸ್ಕಾನ್ ಆರು ಸಲ ಕಾಲೇಜಿಗೆ ಅಲೆಯಬೇಕಾಯಿತು. ಎಷ್ಟೇ ಸತಾಯಿಸಿದರೂ ಸಂವಿಧಾನ ಬದ್ಧ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟದಿಂದ ಹಿಂದೆ ಸರಿಯುವುದಿಲ್ಲ' ಎಂದು ಹಿಜಾಬ್ ಧರಿಸುವ ಹಕ್ಕಿಗಾಗಿ ಹೋರಾಡುತ್ತಿರುವ ಉಡುಪಿಯ ವಿದ್ಯಾರ್ಥಿನಿ ಅಲಿಯಾ ಅಸ್ಸಾದಿ ಹೇಳಿದರು.

ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ವತಿಯಿಂದ ಶನಿವಾರ ಇಲ್ಲಿ ಏರ್ಪಡಿಸಿದ್ದ 'ಹುಡುಗಿಯರ ಸಮಾವೇಶ'ದಲ್ಲಿ ಅವರು ಹಿಜಾಬ್ ಹೋರಾಟದ ಕಹಿ ನೆನಪುಗಳನ್ನು ಬಿಚ್ಚಿಟ್ಟರು.

'ಈ ಹೋರಾಟದಿಂದ ಸಂಯಮ ಕಲಿತಿದ್ದೇವೆ. ನನ್ನ ಭಾರತ ಎತ್ತ ಸಾಗುತ್ತಿದೆ ಎಂಬುದು ತಿಳಿಯಿತು. ಸುಪ್ರೀಂ ಕೋರ್ಟ್, ನ್ಯಾಯವನ್ನು ಎತ್ತಿಹಿಡಿಯುತ್ತದೆ ಎಂಬ ವಿಶ್ವಾಸವಿದೆ. ಶಿಕ್ಷಣ ಮುಂದುವರಿಸುತ್ತೇವೆ. ಘನತೆಯಿಂದ ಹಿಜಾಬ್ ಧರಿಸಿಯೇ ಕಾಲೇಜಿಗೆ ಹೋಗುತ್ತೇವೆ' ಎಂದರು.

ಇದೇ ವೇಳೆ ಕೆಲ ಮಾಧ್ಯಮಗಳ ವರ್ತನೆ ಬಗ್ಗೆಯೂ ಅಲಿಯಾ ಅವರು ಬೇಸರ ತೋಡಿಕೊಂಡರು.

ಹಿಜಾಬ್ ಹೋರಾಟಗಾರ್ತಿ ಮಂಗಳೂರಿನ ಗೌಸಿಯಾ, 'ಕಲಿಯಬೇಕಾದ ಪಾಠಗಳನ್ನು ಕೈಬಿಟ್ಟು ಕಲಿಯಬಾರದ್ದನ್ನೆಲ್ಲ ಪಠ್ಯದಲ್ಲಿ ಸೇರಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಚುಚ್ಚುವುದಕ್ಕಾಗಿ ಎಬಿವಿಪಿ ವಿದ್ಯಾರ್ಥಿಗಳಿಗೆ ತ್ರಿಶೂಲ ದೀಕ್ಷೆ ನೀಡಲಾಗುತ್ತಿದೆ. ಇಂತಹ ವಿದ್ಯಾರ್ಥಿಗಳ ತಾಯಂದಿರು ತಮ್ಮ ಮಕ್ಕಳ ಭವಿಷ್ಯ ಏನಾಗುತ್ತಿದೆ ಎಂದು ಒಮ್ಮೆ ಯೋಚಿಸಬೇಕು' ಎಂದರು.

ಸಿಎಫ್‌ಐ ರಾಷ್ಟ್ರೀಯ ಅಧ್ಯಕ್ಷ ಎಂ.ಎಸ್.ಸಾಜಿದ್, ರಾಜ್ಯ ಘಟಕದ ಅಧ್ಯಕ್ಷ ಅಥಾವುಲ್ಲಾ ಪುಂಜಾಲಕಟ್ಟೆ, ಸಾಮಾಜಿಕ ಕಾರ್ಯಕರ್ತೆಯರಾದ ಗುಜರಾತಿನ ಕುಂಕುಮ್‌ಬೆನ್ ರಾಥೋಡ್, ಡಾ.ರುಕ್ಸಾನಾ ಹಸನ್, ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದ ಸಿಎಫ್‌ಐ ಘಟಕದ ಅಧ್ಯಕ್ಷ ಫೌಜಿಯಾ ಭಾಗವಹಿಸಿದರು.

ಮೀಸಲಾತಿ: ಕುಡುಒಕ್ಕಲಿಗರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಹಾಗೂ ಜೀವನೋಪಾಯಕ್ಕೆ ಕೃಷಿ ನಂಬಿರುವ ಕುಡುಒಕ್ಕಲಿಗ ಸಮುದಾಯಕ್ಕೆ ಪ್ರವರ್ಗ 3ಎ ಅಥವಾ 2ಎ ದಲ್ಲಿ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ನಗರದಲ್ಲಿ ಶನಿವಾರ ಅಖಿಲ ಭಾರತೀಯ ಲಿಂಗಾಯತ ಕುಡುಒಕ್ಕಲಿಗ ಮಹಾಸಭಾದ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ಸುಮಾರು 15 ಜಿಲ್ಲೆಗಳಿಂದ ಬಂದ ಸಮುದಾಯದ ಪ್ರಮುಖರು ಮತ್ತು ಕಾರ್ಯಕರ್ತರು ಮೊದಲು ಬಹಿರಂಗ ಸಭೆ ನಡೆಸಿ, ನಂತರ ಐವಾನ್-ಇ-ಶಾಹಿ ಅತಿಥಿಗೃಹದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಂತರ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ಮನವಿ ಪತ್ರ ಸಲ್ಲಿಸಿದರು.

'ಲಿಂಗಾಯತ ಉಪ ಪಂಗಡವಾದ ಕುಡುಒಕ್ಕಲಿಗ ಸಮುದಾಯವು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದೆ. ರಾಜ್ಯ ಸರ್ಕಾರವು ಜಾತಿಪಟ್ಟಿಯಲ್ಲಿ ಲಿಂಗಾಯತ ಕುಡುಒಕ್ಕಲಿಗ ಎಂದು ಉಲ್ಲೇಖಿಸಿ ಪ್ರವರ್ಗ-3ಎ ಅಥವಾ 2ಎ ಅಡಿ ಮೀಸಲಾತಿ ನೀಡಬೇಕು' ಎಂದು ಸಮುದಾಯದ ಮುಖಂಡರು ಕೋರಿದರು.

ಮೀಸಲಾತಿಗೆ ಒತ್ತಾಯಿಸಿ ಅಖಿಲ ಭಾರತೀಯ ಲಿಂಗಾಯತ ಕುಡುಒಕ್ಕಲಿಗ ಮಹಾಸಭಾ ನೇತೃತ್ವದಲ್ಲಿ ಸಮುದಾಯದ ಸಹಸ್ರಾರು ಜನರು ಶನಿವಾರ ಕಲಬುರಗಿಯಲ್ಲಿ ಮೆರವಣಿಗೆ ನಡೆಸಿದರು. –ಪ್ರಜಾವಾಣಿ ಚಿತ್ರ

'ವಿವಿಧ ಶಾಲಾ ಪ್ರಮಾಣಪತ್ರಗಳು ಮತ್ತು ಇತರ ದಾಖಲೆಪತ್ರಗಳಲ್ಲಿ ಲಿಂಗಾಯತ ಕೂಡಾವಕ್ಕಲ, ಲಿಂಗಾಯತ ಕುಡುವಕ್ಕಲ, ಕುಡೇವಕ್ಕಲಗ, ಕುಡವಕ್ಕಲೇಗರ, ಕುಡುಒಕ್ಕಲ, ಕುಡುವೂಕ್ಕಲ, ಕುಡೊಕ್ಕಲಿಗಾರ, ಹಿಂದೂ ಲಿಂಗಾಯತ ಕುಡು ಒಕ್ಕಲಿಗ, ಹಿಂದು ಕುಡು ಒಕ್ಕಲಿಗ, ವೀರಶೈವ-ಲಿಂಗಾಯತ ಕುಡುಒಕ್ಕಲಿಗ ಮತ್ತು ಇತರ ಮೂಲ ಕುಡಒಕ್ಕಲಿಗ ಜಾತಿಯ ವಿವಿಧ ಒಕ್ಕಣಿಕೆಗಳನ್ನು ಮೀಸಲಾತಿಗೆ ಲಿಂಗಾಯತ ಕುಡುಒಕ್ಕಲಿಗ ಜಾತಿ, ಉಪ ಪಂಗಡಕ್ಕೆ ಸಮಾನ ಪದವೆಂದು ಪರಿಗಣಿಸಬೇಕು' ಎಂದರು.

ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಬಾಪುಗೌಡ ಪಾಟೀಲ ಶೇಗುಣಸಿ, ಉಪಾಧ್ಯಕ್ಷ ಗುರುಲಿಂಗಪ್ಪಗೌಡ ಪೊಲೀಸ್ ಪಾಟೀಲ, ಬಾಬುಗೌಡ ಪಾಟೀಲ ತೆಲ್ಲೂರ, ರುದ್ರಗೌಡ ಪಾಟೀಲ ಕುಸನೂರ, ಎಫ್.ಬಿ. ಯಾವಗಲ್ ಮತ್ತು ರವೀಂದ್ರ ಕುಡುಒಕ್ಕಲಿಗೇರ ಇದ್ದರು.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ,
ಆನಂದರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಇಎಸ್‌ಟಿ/2022-23 ದಿನಾಂಕ: 12.07.2022

ಕಾನೂನು ಸಲಹೆಗಾರರ ಹುದ್ದೆಗೆ ಗುತ್ತಿಗೆ ನೇಮಕಾತಿಗಾಗಿ ಅರ್ಜಿ ಆಹ್ವಾನ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಯಲ್ಲಿನ ಅಧಿಕಾರಿ/ನೌಕರರುಗಳು ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ದಾಖಲಿಸುವ ನ್ಯಾಯಾಲಯ ಪ್ರಕರಣಗಳ ನಿರ್ವಹಣೆಗಾಗಿ ಮತ್ತು ಸಂಸ್ಥೆಯ ಇನ್ನಿತರೆ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳ ಕಾನೂನು ಸಲಹೆಗಾರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನಿವೃತ್ತ ನ್ಯಾಯಾಧೀಶರನ್ನು ಕೆಳಕಂಡ ಷರತ್ತುಗಳನ್ವಯ ನೇಮಕ ಮಾಡಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಯನ್ನು (Expression of Interest) ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು (1) ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು. (2) ನಿವೃತ್ತಿಯ ನಂತರ ಸರ್ಕಾರಿ ಕಛೇರಿಗಳಲ್ಲಿ ಸಚಿವಾಲಯದಲ್ಲಿ ಕಾನೂನು ಸಲಹೆಗಾರರಾಗಿ ಸೇವೆ ಸಲ್ಲಿಸಿದವರನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು. (3) ಆಯ್ಕೆಯಾದ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಅವರ ಹಿಂದಿನ ಅನುಭವ ಹಾಗೂ ಪರಿಜ್ಞಾನದ ಅನುಸಾರ ಮಾಸಿಕ ಸಂಚಿತ ವೇತನವನ್ನು ನಿಗಧಿಪಡಿಸಲಾಗುವುದು. (4) ಕಾನೂನು ಸಲಹೆಗಾರರ ಅಧಿಕಾರಿ ಹುದ್ದೆಯ ಆಯ್ಕೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ರವರ ನಿರ್ಧಾರವೇ ಅಂತಿಮ. ಅರ್ಜಿಗಳನ್ನು ಅಂಚೆ ಮುಖಾಂತರವಾಗಲೀ ಅಥವಾ ಖುದ್ದಾಗಿಯಾಗಲೀ, **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, "ಗ್ರಾಮೀಣಾಭಿವೃದ್ಧಿ ಭವನ" 4ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560 009 ಈ ವಿಳಾಸದಲ್ಲಿ ದಿನಾಂಕ 01.08.2022 ರಂದು ಸಂಜೆ 5.00 ಗಂಟೆ ಒಳಗೆ ಸಲ್ಲಿಸುವುದು.** ವಿವರಗಳನ್ನು ಕೆಆರ್‌ಐಡಿಎಲ್ ವೆಬ್‌ಸೈಟ್ **www.kridl.org** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಣೆಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ: ಮುಖ್ಯ ಆಡಳಿತಾಧಿಕಾರಿಗಳು, ಕೆಆರ್‌ಐಡಿಎಲ್, ಬೆಂಗಳೂರು, ದೂರವಾಣಿ ಸಂ.: 080-28015607/28015635.

ಸಹಿ/-ವ್ಯವಸ್ಥಾಪಕ ನಿರ್ದೇಶಕರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಆಯುಕ್ತರ ಕಛೇರಿ, ನಂ. 16-ಡಿ, 3ನೇ ಮಹಡಿ, ಡಿ.ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.

ಸಂಖ್ಯೆ: ಹಿಂವಕ/ತ-4/ಸೇಆಪೂತ/ಸಿಆರ್-01/2022-23 ದಿನಾಂಕ:16.07.2022

ಪ್ರಕಟಣೆ

ಭಾರತೀಯ ಸೇನೆ / ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗಳ ಅರ್ಹ ಅಭ್ಯರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2022-23ನೇ ಸಾಲಿನಲ್ಲಿ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. (ಬಾಲಕರಿಗೆ ಮಾತ್ರ).

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ನಿಗದಿಗೊಳಿಸಿರುವ ಸಾಮಾನ್ಯ ಅರ್ಹತೆಗಳು:

1) ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ಗರಿಷ್ಠ ವಾರ್ಷಿಕ ಆದಾಯ ಮಿತಿ (ಪ್ರವರ್ಗ-1ಕ್ಕೆ ರೂ. 2.50 ಲಕ್ಷಗಳು ಹಾಗೂ ಪ್ರವರ್ಗ-2(ಎ), 3(ಎ) ಮತ್ತು 3(ಬಿ) ಗಳಿಗೆ ರೂ. 1.00 ಲಕ್ಷಗಳು).
2) **ಕನಿಷ್ಠ ವಿದ್ಯಾರ್ಹತೆ :** ಅಭ್ಯರ್ಥಿಯು 10ನೇ ತರಗತಿಯನ್ನು ಉತ್ತೀರ್ಣವಾಗಿದ್ದು, ಪ್ರತಿ ವಿಷಯದಲ್ಲಿ ಕನಿಷ್ಠ 33 ಅಂಕಗಳನ್ನು ಪಡೆದಿರಬೇಕು. ಗ್ರೇಡಿಂಗ್ ಸಿಸ್ಟಂ ಇದ್ದಲ್ಲಿ ಮೇಲ್ಕಂಡಂತೆ ಸಮಾನವಾದ ಗ್ರೇಡ್ ಪಡೆದಿರಬೇಕು.
3) **ವಯೋಮಿತಿ :** ಅಕ್ಟೋಬರ್ 01, 2022ಕ್ಕೆ ಅನ್ವಯಿಸುವಂತೆ ಅಭ್ಯರ್ಥಿಯು ವಯಸ್ಸನ್ನು ಪರಿಗಣಿಸಲಾಗುವುದು. (ಅಭ್ಯರ್ಥಿಯು 01, ಅಕ್ಟೋಬರ್ 2000ದಿಂದ 01, ಏಪ್ರಿಲ್ 2005 (17½ - 22) ರ ದಿನಾಂಕಗಳ ನಡುವೆ ಜನಿಸಿರಬೇಕು).
4) **ತರಬೇತಿ ನೀಡುವ ಸ್ಥಳಗಳು :** ತರಬೇತಿಯನ್ನು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ನೀಡಲಾಗುವುದು. ಅಭ್ಯರ್ಥಿಗಳು ಸದರಿ ಮೂರು ಜಿಲ್ಲೆಗಳಲ್ಲಿ ತರಬೇತಿಗೆ ಆಯ್ಕೆ ಮಾಡಿಕೊಳ್ಳುವ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಬಹುದು.
5) ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ **https://bcwd.karnataka.gov.in** ನಿಂದ ಪಡೆಯಬಹುದಾಗಿದೆ.
6) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **30ನೇ ಜುಲೈ 2022.**

ಸಹಾಯವಾಣಿ ದೂರವಾಣಿ ಸಂಖ್ಯೆಗಳು (ಸಮಯ ಬೆಳಗ್ಗೆ 10.00ರಿಂದ ಸಂಜೆ 5.30ರವರೆಗೆ) (ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ)	
ದಕ್ಷಿಣ ಕನ್ನಡ ಜಿಲ್ಲೆ : 0824-2225078	ಉಡುಪಿ ಜಿಲ್ಲೆ : 0820-2574881
ಉತ್ತರ ಕನ್ನಡ ಜಿಲ್ಲೆ : 08382-226589	ಕೇಂದ್ರ ಕಛೇರಿ : 8050770004

ಸಹಿ/-
ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/1406/2022-23

ಕೋವಿಡ್-19 - ಗಾಬರಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಮಾಜ ಕಲ್ಯಾಣ ಇಲಾಖೆ ಮತ್ತು
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಕಲ್ಯಾಣ ಯೋಜನೆಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

2022-2023ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ಸ್ವಯಂ ಉದ್ಯೋಗ ಯೋಜನೆಗಳು

ಅರ್ಹ ನಿರುದ್ಯೋಗಿ ಅಭ್ಯರ್ಥಿಗಳಿಂದ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು:

1) ನೇರ ಸಾಲ: ಸಣ್ಣ ಆದಾಯಗಳಿಸುವ ಆರ್ಥಿಕ ಚಟುವಟಿಕೆಗಳಿಗಾಗಿ ಘಟಕ ವೆಚ್ಚ ಗರಿಷ್ಠ ರೂ. 1.00 ಲಕ್ಷಗಳು. ಇದರಲ್ಲಿ 50% ಸಾಲ & 50% ಸಹಾಯಧನ.

2) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:
   i) ಇ.ವಿ ಮತ್ತು ಇತರೆ ದ್ವಿಚಕ್ರ ವಾಹನ ಖರೀದಿ (ಇ-ಕಾಮರ್ಸ್‌ನಡಿಯಲ್ಲಿ ಕಂಪನಿಗಳಿಂದ ಗ್ರಾಹಕರಿಗೆ ಸರಕು ತಲುಪಿಸಲು): ಗರಿಷ್ಠ ರೂ. 50,000/- ಸಹಾಯಧನ, ಉಳಿದ ಮೊತ್ತ ಬ್ಯಾಂಕ್ ಸಾಲ.
   ii) ಐ.ಎಸ್.ಬಿ ಚಟುವಟಿಕೆಗಳಿಗಾಗಿ ಸಹಾಯಧನ: ಗರಿಷ್ಠ ರೂ. 2.00 ಲಕ್ಷ, ಉಳಿದ ಮೊತ್ತ ಬ್ಯಾಂಕ್‌ನಿಂದ ಸಾಲ.
   iii) ಸರಕು ಸಾಗಾಣಿಕೆ ವಾಹನ: ಗರಿಷ್ಠ ರೂ. 3.50 ಲಕ್ಷ ಸಹಾಯಧನ, ಉಳಿದ ಮೊತ್ತ ಬ್ಯಾಂಕ್ ಸಾಲ.

ಮೈಕ್ರೊ ಕ್ರೆಡಿಟ್ ಯೋಜನೆ

ಮಹಿಳೆಯರಲ್ಲಿ ಗುಂಪು ಆರ್ಥಿಕ ಚಟುವಟಿಕೆಗೆ ಉತ್ತೇಜನ ನೀಡಿ ಆದಾಯ ಗಳಿಸಲು ಅನುವಾಗುವಂತೆ ಕನಿಷ್ಠ 10 ಸದಸ್ಯರಿರುವ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಗರಿಷ್ಠ ರೂ. 2.50 ಲಕ್ಷಗಳನ್ನು ಮಂಜೂರು ಮಾಡಲಾಗುವುದು. ಇದರಲ್ಲಿ ರೂ. 1.50 ಲಕ್ಷ ಸಹಾಯ ಧನ ಮತ್ತು ರೂ. 1.00 ಲಕ್ಷ ಸಾಲ.

ಭೂ ಒಡೆತನ ಯೋಜನೆ

ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಕನಿಷ್ಠ 0.20 ಎಕರೆ ಮೇಲ್ಪಟ್ಟು ಘಟಕ ವೆಚ್ಚದಲ್ಲಿ ಗರಿಷ್ಠ ಎಷ್ಟು ವಿಸ್ತೀರ್ಣ ಬರುತ್ತದೆಯೋ ಅಷ್ಟು ಜಮೀನನ್ನು ಖರೀದಿಸಿ ಕೊಡಲಾಗುವುದು.

ಗಂಗಾ ಕಲ್ಯಾಣ ಯೋಜನೆ

ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ ಖುಷ್ಕಿ / ಒಣ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು 'ಕಲ್ಯಾಣ ಮಿತ್ರ ಏಕೀಕೃತ ಎಸ್.ಸಿ./ಎಸ್.ಟಿ. ಸಹಾಯವಾಣಿ' ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಸಾರಿಗೆ ಇಲಾಖೆ ಸಚಿವರಾದ ಶ್ರೀ ಬಿ. ಶ್ರೀರಾಮುಲುರವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ಆಯಾ ನಿಗಮದ ವ್ಯಾಪ್ತಿಯಲ್ಲಿ ಬರುವ ಸಮುದಾಯಗಳು
ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ: https://suvidha.karnataka.gov.in

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿ ಅಥವಾ ನಿಗಮಗಳ ವೆಬ್‌ಸೈಟ್ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ ಸಹಾಯವಾಣಿ **9482300400** ಸಂಪರ್ಕಿಸುವುದು

ವಿಶೇಷ ಸೂಚನೆ: (i) ಮಂಡಳಿ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸುವಿಧಾ ಪೋರ್ಟಲ್ ಮೂಲಕವೇ ಸಲ್ಲಿಸುವುದು. (ii) ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20-08-2022

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ
http://adcl.karnataka.gov.in
ಈ ನಿಗಮದ ವ್ಯಾಪ್ತಿಯಲ್ಲಿ ಬರುವ ಸಮುದಾಯಗಳು ಮತ್ತು ಅಲೆಮಾರಿ ಕೋಶದ ವ್ಯಾಪ್ತಿಯಲ್ಲಿ ಗುರುತಿಸಿರುವ ಮತ್ತು ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯದವರು ಅರ್ಜಿ ಸಲ್ಲಿಸುವುದು.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
https://kmvstdcl.karnataka.gov.in
ನಿಗಮದ ವ್ಯಾಪ್ತಿಯಲ್ಲಿ ಬರುವ ಸಮುದಾಯಗಳು ಮತ್ತು ಅಲೆಮಾರಿ / ಅರಣ್ಯ ಆಧಾರಿತ ಸಮುದಾಯಗಳು ಅರ್ಜಿ ಸಲ್ಲಿಸುವುದು.

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
https://adijambava.karnataka.gov.in

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ
https://banjarathanda.kar.nic.in

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ
https://kbdc.karnataka.gov.in
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಕ್ಕೆ ದಿನಾಂಕ 20.07.2022ರಿಂದ ಅರ್ಜಿ ಸಲ್ಲಿಸುವುದು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ
https://ksskdc.kar.nic.in
ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು / ಸಫಾಯಿ ಕರ್ಮಚಾರಿಗಳು ಮತ್ತು ಅವಲಂಬಿತರು ಅರ್ಜಿ ಸಲ್ಲಿಸುವುದು.

ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ನಿಗಮಗಳು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಅಹವಾಲುಗಳ ಮಳೆ; ಪರಿಹಾರದ ಆಶಾಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿಯಲ್ಲಿ ಆಗಾಗ ಬೀಳುವ ಕಸ, ಅವ್ಯವಸ್ಥೆಯಿಂದ ಕೂಡಿರುವ ಪಾದಚಾರಿ ಮಾರ್ಗ, ಅಡ್ಡಾದಿಡ್ಡಿ ನಿಲ್ಲುವ ವಾಹನಗಳು, ಕದ್ದು ಕುಳಿತು ವಾಹನ ಹಿಡಿಯುವ ಪೊಲೀಸರು... ಹೀಗೆ ಹತ್ತು ಹಲವು ದೂರು–ದುಮ್ಮಾನಗಳನ್ನು ಹೊತ್ತು ಬಂದಿದ್ದ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಜನರಿಗೆ ಕೊಂಚ ಸಮಾಧಾನ ದೊರೆಯಿತು.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಶನಿವಾರ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮವು ಕಚೇರಿ ಅಲೆದು ಸುಸ್ತಾಗಿದ್ದ ಜನರಲ್ಲಿ ಆಶಾಭಾವ ಮೂಡಿಸಿತು. ನಾಗರಿಕರು ಹೊತ್ತು ಬಂದಿದ್ದ ಸಮಸ್ಯೆಗಳನ್ನು ಮೂರೂವರೆ ಗಂಟೆಗಳಿಗೂ ಹೆಚ್ಚು ಕಾಲ ತಾಳ್ಮೆಯಿಂದ ಆಲಿಸಿದ ಶಾಸಕ ರಿಜ್ವಾನ್ ಅರ್ಷದ್, ಕೆಲ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸುವ ಪ್ರಯತ್ನ ಮಾಡಿದರು. ಕೆಲವರು ಏರುಧ್ವನಿಯಲ್ಲಿ ಎತ್ತಿದ ಪ್ರಶ್ನೆಗಳಿಗೂ ಶಾಸಕರು ಸಮಾಧಾನದಿಂದ ಉತ್ತರ ನೀಡಿ ಪರಿಹರಿಸುವ ಭರವಸೆ ನೀಡಿದರು.

ಗಂಭೀರ ಸಮಸ್ಯೆಗಳನ್ನು ಜನ ಹಂಚಿಕೊಂಡಾಗ, ಸಭೆ ಮುಗಿದ ಕೂಡಲೇ ಸ್ಥಳಕ್ಕೆ ಹೋಗಿ ಸಮಸ್ಯೆ ಬಗೆಹರಿಸಿದ ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ‘ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಪದೇ ಪದೇ ಹೇಳಿದರೂ ಗಮನಹರಿಸದಿದ್ದರೆ ಅಂತಹ ಅಧಿಕಾರಿಗಳನ್ನು ಬದಲಾವಣೆ ಮಾಡಿಸಬೇಕಾಗುತ್ತದೆ’ ಎಂದೂ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಮೊದಲನೇ ಪ್ರಶ್ನೆಯೇ ಕಸ ವಿಲೇವಾರಿ ಸಮಸ್ಯೆಯದ್ದಾಗಿತ್ತು.

‘ಕಸ ಸುರಿಯುವ ತಾಣವಾಗಿದ್ದ ಹಲವು ಪ್ರದೇಶಗಳನ್ನು ಗುರುತಿಸಿ ನಾವೇ ಖುದ್ದು ಸ್ವಚ್ಛಗೊಳಿಸುವ ಕೆಲಸ ಮಾಡಿದ್ದೇವೆ. ಸಂಪೂರ್ಣವಾಗಿ ಸಮಸ್ಯೆ ಸರಿಯಾಗಿದೆ ಎಂದು ಹೇಳುವುದಿಲ್ಲ. ಶಕ್ತಿಮೀರಿ ಪ್ರಯತ್ನ ಮಾಡಿದ್ದೇನೆ. ಸಮಸ್ಯೆಗಳು ಇದ್ದರೆ ನೇರವಾಗಿ ಜನ ನಮ್ಮನ್ನು ಪ್ರಶ್ನಿಸಬಹುದು, ಬೇಸರಪಡದೆ ಪರಿಹರಿಸಲು ಯತ್ನಿಸುತ್ತೇನೆ’ ಎಂದರು.

ಸಂಪಂಗಿರಾಮನಗರದಲ್ಲಿ ಸಂಚಾರ ದಟ್ಟಣೆ ಸಮಸ್ಯೆ, ರಸ್ತೆ ಬದಿ ಅಡ್ಡಾದಿಡ್ಡಿ ನಿಲ್ಲುವ ವಾಹನಗಳು ಸಂಚಾರಕ್ಕೆ ಕಿರಿಕಿರಿ ಉಂಟು ಮಾಡುತ್ತಿರುವ ಬಗ್ಗೆ ಹಲವರು ಶಾಸಕರ ಗಮನಕ್ಕೆ ತಂದರು. ಇಡೀ ಬಡಾವಣೆಯಲ್ಲಿ ಪಾದಯಾತ್ರೆ ನಡೆಸಿ ಸಮಸ್ಯೆ ಬಗೆಹರಿಸುವ ಭರವಸೆಯನ್ನು ರಿಜ್ವಾನ್ ಅರ್ಷದ್ ನೀಡಿದರು.

ಮುಖ್ಯಮಂತ್ರಿ ಗೃಹ ಕಚೇರಿ, ವಿರೋಧ ಪಕ್ಷದ ನಾಯಕರು, ಸಚಿವರ ಬಂಗಲೆಗಳು ಇರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಕುಮಾರಕೃಪಾ ಪಶ್ಚಿಮದಲ್ಲೂ ಕಸದ ಸಮಸ್ಯೆಯನ್ನು ನಿವಾಸಿಗಳು ಹೇಳಿಕೊಂಡರು. ಸಮಯಕ್ಕೆ ಸರಿಯಾಗಿ ಬಾರದ ಬಿಎಂಟಿಸಿ ಬಸ್‌ಗಳು, ಬಂದರೂ ನಿಲ್ದಾಣಗಳ ಬಳಿ ನಿಲ್ಲಿಸದೆ ಪರದಾಡುವ ಪ್ರಯಾಣಿಕರು, ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಿಂದ ಫೀಡರ್ ಬಸ್‌ಗಳ ಅಗತ್ಯದ ಬಗ್ಗೆಯೂ ಶಾಸಕರಿಗೆ ಜನ ಮನವರಿಕೆ ಮಾಡಿಕೊಟ್ಟರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿದರು. (ಎಡದಿಂದ) ಬೆಂಗಳೂರು ಪೂರ್ವ ಸಂಚಾರ ವಿಭಾಗದ ಎಸಿಪಿ ಎಂ.ಸಿ.ಕವಿತಾ, ಸಾರ್ವಜನಿಕ ಆರೋಗ್ಯಾಧಿಕಾರಿ ಡಾ.ಎಸ್‌.ಕೆ.ಸವಿತಾ, ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಸಿ.ಗೀತಾ, ಯಲಹಂಕ ತಹಶೀಲ್ದಾರ್ ಎಸ್‌.ಕವಿತಾ, ಬಿಬಿಎಂಪಿ ಪೂರ್ವ ವಲಯ ಆಯುಕ್ತ ಪಿ.ಎನ್‌.ರವೀಂದ್ರ, ಮುಖ್ಯ ಎಂಜಿನಿಯರ್ ಆರ್‌.ಸುಗುಣಾ ಮತ್ತು ಜಂಟಿ ಆಯುಕ್ತೆ ಆರ್‌.ಶಿಲ್ಪಾ ಇದ್ದರು. –ಪ್ರಜಾವಾಣಿ ಚಿತ್ರ

ಶಿವಾಜಿನಗರಕ್ಕೆ ಹೊಸ ಲುಕ್

‘ಅಭಿವೃದ್ಧಿ ವಿಷಯದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಶಿವಾಜಿನಗರಕ್ಕೆ ಇನ್ನು ಕೆಲವೇ ದಿನಗಳಲ್ಲಿ ಹೊಸ ಲುಕ್ ಬರಲಿದೆ’ ಎಂದು ರಿಜ್ವಾನ್ ಅರ್ಷದ್ ತಿಳಿಸಿದರು.

‘ಕಾಮರಾಜ ರಸ್ತೆಯಿಂದ ಎಚ್‌ಕೆಪಿ ರಸ್ತೆ ತನಕ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಪೂರ್ಣಗೊಂಡ ಬಳಿಕ ಶಿವಾಜಿ ರಸ್ತೆಯ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗುವುದು. ರಸೆಲ್ ಮಾರುಕಟ್ಟೆ ಎದುರಿನ ಪ್ರದೇಶ ಸೇರಿ ಇಡೀ ಪ್ರದೇಶವನ್ನು ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ಈ ಪ್ರದೇಶದ ಚಿತ್ರಣವೇ ಬದಲಾಗಲಿದೆ’ ಎಂದರು.

ಜನಸ್ಪಂದನ ಸಿಟಿಜ಼ನ್ಸ್ ಫಾರ್ ಚೇಂಜ್

ಅಂತರರಾಷ್ಟ್ರೀಯ ಮಟ್ಟದ ಶಾಲೆ

‘ಶಿವಾಜಿನಗರದಲ್ಲಿ ಸರ್ಕಾರಿ ಶಾಲೆಯೊಂದನ್ನು ಅಂತರರಾಷ್ಟ್ರೀಯ ಮಟ್ಟದ ಮೂಲಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದು ರಿಜ್ವಾನ್ ಅರ್ಷದ್ ಹೇಳಿದರು.

‘ಇದಲ್ಲದೇ 6 ಸರ್ಕಾರಿ ಶಾಲೆಗಳನ್ನು ಮಾದರಿಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಒಟ್ಟಾರೆ ₹10 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ(ಸಿಎಸ್‌ಆರ್) ನಿಧಿ ಮತ್ತು ಸರ್ಕಾರದ ಅನುದಾನ ಬಳಸಿಕೊಳ್ಳಲಾಗುತ್ತಿದೆ’ ಎಂದರು.

ತಿಂಗಳಿಗೆ 2 ವಾರ್ಡ್ ಸಮಿತಿ ಸಭೆ

‘ಮುಂದಿನ ದಿನಗಳಲ್ಲಿ ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ವಾರ್ಡ್ ಸಮಿತಿ ಸಭೆಗಳು ಕಡ್ಡಾಯವಾಗಿ ನಡೆಯಲಿವೆ’ ಎಂದು ಬಿಬಿಎಂಪಿ ಪೂರ್ವ ವಲಯ ಆಯುಕ್ತ ಪಿ.ಎನ್. ರವೀಂದ್ರ ತಿಳಿಸಿದರು.

‘ಪ್ರತಿ ವಾರ್ಡ್‌ಗೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ ಶುಕ್ರವಾರವಷ್ಟೇ ಆದೇಶ ಹೊರಡಿಸಿದ್ದೇನೆ. ಮೂರು–ನಾಲ್ಕು ವಾರ್ಡ್‌ಗೆ ಒಬ್ಬ ಮೇಲ್ವಿಚಾರಕರು ಇರಲಿದ್ದಾರೆ. ಸಭೆಗೆ ಮೂರು ದಿನ ಮುಂಚೆಯೇ ಅಜೆಂಡಾ ನೀಡಬೇಕು. ಅದರ ಹೊರತಾಗಿ ವಿಷಯಗಳು ಬಂದರೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ನಂತರ ಮೂರು–ನಾಲ್ಕು ದಿನಗಳಲ್ಲಿ ನಡಾವಳಿ ಸಿದ್ಧಪಡಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಸೂಚನೆ ನೀಡಲಾಗಿದೆ’ ಎಂದು ಹೇಳಿದರು.

ಸಮಸ್ಯೆಗಳ ಹೇಳಿಕೊಂಡ 93ರ ವೃದ್ಧೆ

ಟಾಸ್ಕರ್‌ಟೌನ್‌ನ 93 ವರ್ಷ ವೃದ್ಧೆ ಅಂಕ್ಲೇಶರಿ ಎಂಬುವವರು ಜನಸ್ಪಂದನಕ್ಕೆ ಆಗಮಿಸಿ ಗಮನ ಸೆಳೆದರು.

ತಮ್ಮ ಬಡಾವಣೆಯಲ್ಲಿನ ಕಸದ ಸಮಸ್ಯೆ ಕುರಿತು ಬೆಳಕು ಚೆಲ್ಲಿದರು.

ಬೆಸ್ಕಾಂ ಅಳವಡಿಸಿರುವ ವಿದ್ಯುತ್ ಪರಿವರ್ತಕದ ಕೆಳಭಾಗದಲ್ಲಿ ಕಸ ತಂದು ಸುರಿಯಲಾಗುತ್ತಿದೆ. ಅಲ್ಲಿಂದ ಕಸ ವಿಲೇವಾರಿ ಆಗುತ್ತಿಲ್ಲ. ಬೆಸ್ಕಾಂ ಹಾಗೂ ಬಿಬಿಎಂಪಿ ಮಧ್ಯೆ ಸಮನ್ವಯ ಇಲ್ಲ ಎಂದು ದೂರಿದರು.

ಅಂಕ್ಲೇಶರಿ

ಅದಕ್ಕೆ ಉತ್ತರಿಸಿದ ಶಾಸಕ ರಿಜ್ವಾನ್, ‘ಯುವಕರೇ ನಾಗರಿಕರ ಸಮಸ್ಯೆಗಳ ಬಗೆಹರಿಸಲು ಪ್ರಯತ್ನಿಸುವುದಿಲ್ಲ. ಇವರ ಕಾಳಜಿ ಮೆಚ್ಚಲೇಬೇಕು. ಇಂತಹ ಸ್ಥಳಗಳನ್ನು ಗುರುತಿಸಿ ಕಸ ವಿಲೇವಾರಿ ಮಾಡಬೇಕು. ಅಧಿಕಾರಿಗಳಿಗೆ ಸಾಧ್ಯವಾಗದಿದ್ದರೆ ನಾನೇ ಸ್ವಯಂ ಸೇವಕರೊಂದಿಗೆ ಹೋಗುತ್ತೇನೆ’ ಎಂದರು.

ತ್ಯಾಜ್ಯ, ಪಾರ್ಕಿಂಗ್, ಅಶುದ್ಧ ಕೆರೆ ನೀರು...ಸಮಸ್ಯೆಗಳು ನೂರು

ಮುಖ್ಯಾಂಶಗಳು

- ಸಂಪಂಗಿರಾಮನಗರದ ಪ್ರತಿ ಮನೆಗೂ ಕಸದಬುಟ್ಟಿ ವಿತರಣೆಗೆ ಕ್ರಮ
- ಇ-ಶೌಚಾಲಯ ಯಶಸ್ವಿಯಾದರೆ 30 ಸ್ಥಳಗಳಲ್ಲಿ ಅದೇ ಮಾದರಿ ಶೌಚಾಲಯ ನಿರ್ಮಾಣ
- ಸೂಕ್ಷ್ಮ ಪ್ರದೇಶದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ
- ಕಾಮಗಾರಿ ವಿವರದ ಫಲಕ ಅಳವಡಿಕೆಗೆ ಕ್ರಮ



ನಗರದ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಬಂಜಾರ ಭವನದಲ್ಲಿ ಶನಿವಾರ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ದಿನಪತ್ರಿಕೆ ಆಯೋಜಿಸಿದ್ದ ಜನಸ್ಪಂದನದಲ್ಲಿ ಭಾಗವಹಿಸಿದ್ದ ಸಾರ್ವಜನಿಕರು ಪ್ರಜಾವಾಣಿ ಚಿತ್ರ

ಆ್ಯಂಡ್ರೊ ಪೀಟರ್, ವಸಂತನಗರ

• **ಪ್ರಶ್ನೆ: 8ನೇ ಮುಖ್ಯರಸ್ತೆಯ 5ನೇ ಅಡ್ಡ ರಸ್ತೆಯಲ್ಲಿ ತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಚರಂಡಿಗಳೂ ತ್ಯಾಜ್ಯದಿಂದ ತುಂಬಿ ಕೊಳಚೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ.**

ಉತ್ತರ: **ಶಾಸಕ ರಿಜ್ವಾನ್ ಅರ್ಷದ್**

–ವಸಂತನಗರದ ಸಮಸ್ಯೆ ನನ್ನ ಗಮನಕ್ಕೆ ಬಂದಿದೆ. ಕಸ ವಿಲೇವಾರಿ ಜವಾಬ್ದಾರಿ ತೆಗೆದುಕೊಂಡ ಗುತ್ತಿಗೆದಾರರು ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ ಬದಲಾಯಿಸುವಂತೆ ಸೂಚಿಸಿದ್ದೇನೆ. ನೋಟಿಸ್ ಕೊಟ್ಟರೂ ಕಸ ವಿಲೇವಾರಿ ಮಾಡದಿದ್ದರೆ ಬದಲಾವಣೆ ಅನಿವಾರ್ಯ. ಜವಾಬ್ದಾರಿ ತೆಗೆದುಕೊಂಡವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಬಡಾವಣೆ ಜನರ ಹಿತದೃಷ್ಟಿಯಿಂದ ಕ್ರಮ ಕೈಗೊಳ್ಳುತ್ತೇನೆ.

ರವೀಂದ್ರ

ಇದೇ ಪ್ರಶ್ನೆಗೆ ವಲಯ ಆಯುಕ್ತ ರವೀಂದ್ರ ಪ್ರತಿಕ್ರಿಯೆ.

–ಶುಚಿತ್ವ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ವಸಂತ ನಗರದ ಸಮಸ್ಯೆಯನ್ನು ಕೂಡಲೇ ಬಗೆಹರಿಸಲಾಗುವುದು.

ಎಂ.ಚಂದ್ರಶೇಖರ್, ಸಂಪಂಗಿರಾಮನಗರ

• **ಪ್ರಶ್ನೆ: ಇಲ್ಲಿನ 6ನೇ ಕ್ರಾಸ್‌ನಲ್ಲಿ ಎರಡೂ ಬದಿಯಲ್ಲಿ ನೂರಾರು ವಾಹನ ನಿಲುಗಡೆಯಿಂದ ಸ್ಥಳೀಯರಿಗೆ ತೊಂದರೆ ಆಗುತ್ತಿದೆ. ಬಡಾವಣೆಯಲ್ಲಿ ಹಳೇ ಶಾಲೆಯಿದ್ದು, ಮಳೆಗಾಲದಲ್ಲಿ ಸೋರುತ್ತಿದೆ. ದುರಸ್ತಿ ಪಡಿಸಬೇಕು.**

ಶಾಸಕ: ಸಂಚಾರ ವ್ಯವಸ್ಥೆ ಸುಧಾರಣೆಗೆ ಹೊಸ ಯೋಜನೆ ರೂಪಿಸಲು ಪೊಲೀಸರಿಗೆ ಸೂಚಿಸಿರುವೆ. ರಸ್ತೆ ಬದಿಯಲ್ಲಿ ನಿಂತಿರುವ ವಾಹನ ತೆರವುಗೊಳಿಸಲು ಸೂಕ್ತ ಸ್ಥಳದ ಅವಶ್ಯವಿದೆ. ಅಧಿವೇಶನದಲ್ಲಿ ಇದನ್ನು ಪ್ರಶ್ನಿಸುವೆ. ಶಾಲೆ ಅಭಿವೃದ್ಧಿಗೆ ₹ 15 ಲಕ್ಷದ ಟೆಂಡರ್‌ಗೆ ಅನುಮೋದನೆ ಸಿಕ್ಕಿದೆ.

ಪ್ರಕಾಶ್, ಕೃಷ್ಣ ಗಾರ್ಡನ್

• **ಪ್ರಶ್ನೆ: ಬಸ್ ನಿಲ್ದಾಣವಿದ್ದರೂ ಬಸ್‌ಗಳು ಬರುತ್ತಿಲ್ಲ. ಬಂದ ಬಸ್‌ಗಳೂ ನಿಲುಗಡೆ ಮಾಡುತ್ತಿಲ್ಲ. ಶಾಲಾ ಮಕ್ಕಳು ಒಂದೂವರೆ ಕಿ.ಮೀ. ನಡೆದು ಶಾಲೆಗೆ ತೆರಳುತ್ತಿದ್ದಾರೆ. ಬೈಕ್‌ನಲ್ಲಿ ಹೋದರೆ ಪೊಲೀಸರು ಕಂಡಕಂಡಲ್ಲಿ ದಂಡ ವಿಧಿಸುತ್ತಾರೆ.**

ಶಾಸಕ: ಕೋವಿಡ್‌ನಿಂದ ನಷ್ಟದ ಕಾರಣ ನೀಡಿ ಹಲವು ಮಾರ್ಗಗಳಲ್ಲಿ ಬಸ್ ಸಂಚಾರ ರದ್ದು ಪಡಿಸಲಾಗಿತ್ತು. ಆ ಮಾರ್ಗದಲ್ಲಿ ಮತ್ತೆ ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡುವೆ.

ಮಹೇಂದ್ರಕುಮಾರ್ ಜೈನ್, ಅಧ್ಯಕ್ಷ, ಹಲಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ

• **ಪ್ರಶ್ನೆ: ಹಲಸೂರು ಕೆರೆ ಅಭಿವೃದ್ಧಿ ಪಡಿಸಬೇಕು. ಮಕ್ಕಳ ಆಟಕ್ಕೆ ಸೂಕ್ತ ಮೈದಾನ ಇಲ್ಲ.**

ಶಾಸಕ: ಕೆರೆ ನೀರಿನ ಶುದ್ಧೀಕರಣಕ್ಕೆ ₹ 5 ಕೋಟಿ ಅನುದಾನ ಸಿಕ್ಕಿದೆ. ಆದರೆ, ಕೆರೆಯ ಸೌಂದರ್ಯೀಕರಣಕ್ಕೆ ಅನುದಾನ ಸಿಕ್ಕಿಲ್ಲ. ಪ್ರಮುಖ ವೃತ್ತಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಕ್ಷೇತ್ರಕ್ಕೆ ₹ 20 ಲಕ್ಷ ಅನುದಾನ ನಿಗದಿಯಾಗಿದೆ. ಪ್ರಮುಖ ವೃತ್ತದಲ್ಲಿ ಕ್ಯಾಮೆರಾ ಅಳವಡಿಸಲಾಗುವುದು. ಎನ್‌.ವಿ ಗಾರ್ಡನ್‌ನಲ್ಲಿ ಮೈದಾನವಿದ್ದು, ₹ 8 ಕೋಟಿ ವೆಚ್ಚದಲ್ಲಿ ಸ್ಟೇಡಿಯಂ ನಿರ್ಮಿಸಲಾಗುವುದು.

ವಿನೋದ್, ಚಿನ್ನಪ್ಪ ಗಾರ್ಡನ್

• **ಪ್ರಶ್ನೆ: ಈ ಭಾಗದಲ್ಲಿ ಖಾಲಿ ನಿವೇಶನಗಳು ಹೆಚ್ಚಾಗಿವೆ. ಅವುಗಳು ಅಕ್ರಮ ಚಟುವಟಿಕೆಯ ತಾಣಗಳಾಗಿವೆ. ಯುವಕರು ಅಲ್ಲಿಗೆ ಬಂದು ಗಾಂಜಾ ಸೇವಿಸುತ್ತಾರೆ.**

ಶಾಸಕ: ಈ ಭಾಗದ ಖಾಲಿ ಪ್ರದೇಶಗಳು ವಿವಾದದಿಂದ ಕೂಡಿವೆ. ಬೆಳೆದಿರುವ ಗಿಡಗಂಟಿಗಳನ್ನು ಬಿಬಿಎಂಪಿಯಿಂದಲೇ ತೆರವುಗೊಳಿಸಿ, ಬಳಿಕ ಮಾಲೀಕರಿಂದ ಖರ್ಚು ವಸೂಲಿ ಮಾಡಲು ಸಾಧ್ಯವೇ ಎಂದು ಪರಿಶೀಲಿಸಲಾಗುವುದು. ವಿವಾದಾತ್ಮಕ ಅಥವಾ ಖಾಸಗಿ ಜಾಗಕ್ಕೆ ಸರ್ಕಾರದಿಂದ ಕಾಂಪೌಂಡ್ ನಿರ್ಮಿಸಲು ಸಾಧ್ಯವಿಲ್ಲ. ಈ ಭಾಗದಲ್ಲಿ ಮತ್ತೊಮ್ಮೆ ಪಾದಯಾತ್ರೆ ನಡೆಸುವೆ.

ಜಯಸೂರ್ಯ, ಮುದ್ದಪ್ಪ ಗಾರ್ಡನ್

• **ಪ್ರಶ್ನೆ: ದಚಾರಿ ಮಾರ್ಗದಲ್ಲಿ ನಡೆಯಲು ಸಾಧ್ಯವಿಲ್ಲ. ಫುಟ್‌ಪಾತ್‌ಗಳು ಏರುಪೇರಾಗಿವೆ.**

ಶಾಸಕ: ದುರಸ್ತಿಗಾಗಿ ತಕ್ಷಣವೇ ಕ್ರಮ ಕೈಗೊಳ್ಳಲಾಗುವುದು.

ಮಾಯಾ, ಕುಮಾರಕೃಪ

• **ಪ್ರಶ್ನೆ: ವಸತಿಯುತ ಬಡಾವಣೆಯಲ್ಲಿಯೇ ವೈನ್ಸ್ ಶಾಪ್ ಇದ್ದು, ನಾಗರಿಕರಿಗೆ ಕಿರಿಕಿರಿ ಉಂಟಾಗುತ್ತಿದೆ.**

ಶಾಸಕ: ರಾತ್ರೋರಾತ್ರಿ ನಿರಾಕ್ಷೇಪಣಾ ಪತ್ರ ಪಡೆದುಕೊಂಡಿದ್ದಾರೆ. ಜನವಸತಿ ಪ್ರದೇಶದಲ್ಲಿ ವೈನ್ಸ್ ಶಾಪ್‌ಗೆ ಅನುಮತಿ ಯಾರು ಕೊಟ್ಟರೋ? ಕ್ರಮಕ್ಕೆ ಸೂಚಿಸುತ್ತೇನೆ.

ಡಿ.ಆರ್.ಪ್ರಕಾಶ್, ಸ್ಥಾಪಕ ಅಧ್ಯಕ್ಷ, ಆಸ್ಟನ್ ರಸ್ತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಒಕ್ಕೂಟ

• **ಪ್ರಶ್ನೆ: ರಸ್ತೆ ಕಾಮಗಾರಿ ನಡೆದ ವಿವರದ ಬಗ್ಗೆ ಫಲಕ ಅಳವಡಿಸಬೇಕು. ಫುಟ್‌ಪಾತ್‌ಗಳು ಅವೈಜ್ಞಾನಿಕವಾಗಿದ್ದು ಸರಿ ಪಡಿಸಬೇಕು.**

ಶಾಸಕ: ಕಾಮಗಾರಿ ವಿವರದ ಫಲಕ ಅಳವಡಿಸಲು ಬಿಬಿಎಂಪಿಗೆ ನಿರ್ದೇಶನ ನೀಡಲಾಗಿದೆ. ಈ ಪ್ರದೇಶಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸುವೆ.

ಗಿರೀಶ್, ಸಂಪಂಗಿರಾಮನಗರ

• **ಪ್ರಶ್ನೆ: ನೀರಿನ ಶುಲ್ಕವು ₹ 6 ಸಾವಿರದಷ್ಟು ಬಂದಿದೆ. ಕುಡಿಯುವ ನೀರು ಸಹ ಶುದ್ಧವಾಗಿಲ್ಲ.**

ಶಾಸಕ: ನೀರಿನ ಶುಲ್ಕದ ಹಿಂಬಾಕಿ ಮನ್ನಾ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸುವ ಕುರಿತು ಅಧಿಕಾರಿಗಳು ಹಾಗೂ ಸಚಿವರೊಂದಿಗೆ ಚರ್ಚಿಸಲಾಗುವುದು.

ಒಂಟಿ ಕಾಲಿನಲ್ಲಿ ನಿಂತು ಪ್ರತಿಭಟನೆ

ಶಿವಮೊಗ್ಗ: ಕಸ್ತೂರಿ ರಂಗನ್ ವರದಿ ಜಾರಿ ವಿರೋಧಿಸಿ ಶಾಂತವೇರಿ ಗೋಪಾಲಗೌಡ ಸಮಾಜವಾದಿ ಅಧ್ಯಯನ ಕೇಂದ್ರದ ಪದಾಧಿಕಾರಿಗಳು ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಒಂಟಿ ಕಾಲಿನಲ್ಲಿ ನಿಂತು ಪ್ರತಿಭಟನೆ ನಡೆಸಿದರು.

ಪಶ್ಚಿಮ ಘಟ್ಟಗಳ 10 ಜಿಲ್ಲೆಗಳನ್ನೊಳಗೊಂಡ 20,000 ಚದರ ಕಿ.ಮೀ ಪ್ರದೇಶವನ್ನು ಕೇಂದ್ರದ ಪರಿಸರ ಇಲಾಖೆ ಅವೈಜ್ಞಾನಿಕವಾಗಿ ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಣೆ ಮಾಡಿದೆ. ಇದು ಜನವಿರೋಧಿ. ಇದರಿಂದ ಅರಣ್ಯವಾಸಿ ಹಾಗೂ ಆದಿವಾಸಿಗಳ ಬದುಕನ್ನು ಕಸಿದುಕೊಂಡಂತಾಗುತ್ತದೆ. ಈಗಿರುವ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಕಾನೂನುಗಳನ್ನೇ ಕಟ್ಟುನಿಟ್ಟಾಗಿ ಜಾರಿಗೊಳಿಸಿದರೆ ಸಾಕು. ಹೊಸ ಆದೇಶವೇನೂ ಬೇಕಾಗಿಲ್ಲ ಎಂದು ಪ್ರತಿಭಟನಕಾರರು ಪ್ರತಿಪಾದಿಸಿದರು.

ಸರ್ಕಾರ ತಕ್ಷಣವೇ ಕಸ್ತೂರಿ ರಂಗನ್ ವರದಿ ಜಾರಿ ಮಾಡುವುದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಬೆಂಗಳೂರಿನಲ್ಲಿ ಜುಲೈ 18ರಂದು ಮಲೆನಾಡು ಭಾಗದ ಶಾಸಕರ, ಜನಪ್ರತಿನಿಧಿಗಳ ಸಭೆ ನಡೆಯಲಿದೆ. ಈ ಸಭೆಯಲ್ಲಿ ಕಸ್ತೂರಿ ರಂಗನ್ ವರದಿ ಜಾರಿಗೊಳಿಸದಂತೆ ತೀರ್ಮಾನ ತೆಗೆದುಕೊಂಡು ಕೇಂದ್ರಕ್ಕೆ ರಾಜ್ಯ ಸರ್ಕಾರ ತಿಳಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಶಾಂತವೇರಿ ಗೋಪಾಲಗೌಡ ಸಮಾಜವಾದಿ ಅಧ್ಯಯನ ಕೇಂದ್ರದ ವ್ಯವಸ್ಥಾಪಕ ಟ್ರಸ್ಟಿ ಕಲ್ಲೂರು ಮೇಘರಾಜ್, ಪ್ರಮುಖರಾದ ಎಲ್.ಆರ್. ಗೋಪಾಲಕೃಷ್ಣ, ಎಚ್.ಎಂ. ಸಂಗಯ್ಯ, ಟಿ.ಆರ್. ಕೃಷ್ಣಪ್ಪ, ಎಸ್.ವಿ. ರಾಜಮ್ಮ, ಚಾಬೂಸಾಬ್, ಶಂಕ್ರಾನಾಯ್ಕ ಇದ್ದರು.

‘ನಿರಾಶ್ರಿತರಿಗೆ ಆರು ಎಕರೆ ಜಾಗ’

ಕಾಚರಕನಹಳ್ಳಿ ಕಾರ್ಮಿಕರ ಗುಡಿಸಲಿಗೆ ಬೆಂಕಿ ಬಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಚರಕನಹಳ್ಳಿ ಕೊಳೆಗೇರಿ ಪ್ರದೇಶದಲ್ಲಿನ ವಲಸೆ ಕಾರ್ಮಿಕರ ಗುಡಿಸಲುಗಳಿಗೆ ಬೆಂಕಿ ಬಿದ್ದ ಪ್ರಕರಣದಲ್ಲಿ ಸಂತ್ರಸ್ತ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು 6 ಎಕರೆ ಜಾಗವನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರ ಮಾಡಲಾಗಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ವಲಸೆ ಕಾರ್ಮಿಕರ ಗುಡಿಸಲುಗಳಿಗೆ ಬೆಂಕಿ ಬಿದ್ದ ಪ್ರಕರಣದಲ್ಲಿ ವಕೀಲೆ ವೈಶಾಲಿ ಹೆಗಡೆ ಬರೆದ ಪತ್ರ ಆಧರಿಸಿ ಹೈಕೋರ್ಟ್ ದಾಖಲಿಸಿಕೊಂಡಿದ್ದ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ಬಿ.ವಿ. ವಿದ್ಯುಲ್ಲತಾ, ‘ಈ ಪ್ರಕರಣದಲ್ಲಿ 200 ಕುಟುಂಬಗಳಿಗೆ ಆಶ್ರಯ ಇಲ್ಲದಂತಾಗಿದೆ. ಅವರ ಪುನರ್ವಸತಿಗೆ ಪರ್ಯಾಯ ಜಾಗ ಒದಗಿಸುವ ಸಂಬಂಧ ಸರ್ಕಾರ ನಿಲುವು ಏನು ಎಂಬುದು ಇನ್ನೂ ಗೊತ್ತಾಗಿಲ್ಲ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರಿ ವಕೀಲರು, ‘ನಿರಾಶ್ರಿತರಿಗಾಗಿಯೇ 6 ಎಕರೆ ಜಾಗವನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಲಾಗಿದೆ’ ಎಂದು ಮಾಹಿತಿ ನೀಡಿದರು. ‘ಸರ್ಕಾರ ಹಸ್ತಾಂತರಿಸಿದ ಜಾಗ ಸ್ವಾಧೀನಕ್ಕೆ ಬಂದ ತಕ್ಷಣವೇ ಪುನರ್ವಸತಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಕೊಳೆಗೇರಿ ಅಭಿವೃದ್ಧಿ ಮಂಡಳಿ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು. ವಿಚಾರಣೆ ಮುಂದೂಡಲಾಗಿದೆ.

ಜಾರ್ಖಂಡ್ ಸಿ.ಎಂ–ಸಿನ್ಹಾ ಭೇಟಿ

ನವದೆಹಲಿ(ಪಿಟಿಐ): ರಾಷ್ಟ್ರಪತಿ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಶುಕ್ರವಾರವಷ್ಟೇ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಬೆಂಬಲ ಘೋಷಿಸಿದೆ. ಆದರೆ, ವಿರೋಧಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾ ಅವರನ್ನು ಮುಖ್ಯಮಂತ್ರಿ ಹಾಗೂ ಜೆಎಂಎಂ ಮುಖ್ಯಸ್ಥ ಹೇಮಂತ್ ಸೊರೇನ್ ಅವರು ತಮ್ಮ ಅಧಿಕೃತ ನಿವಾಸಕ್ಕೆ ಆಹ್ವಾನಿಸಿರುವ ವಿಷಯವು ಈಗ ಚರ್ಚೆಗೆ ಗ್ರಾಸವಾಗಿದೆ.

ಸಿನ್ಹಾ ಅವರ ಆಪ್ತ ಸಹಾಯಕ ಸುಧೀಂದ್ರ ಕುಲಕರ್ಣಿ ಅವರು ತಮ್ಮ ಟ್ವಿಟ್ಟರ್ ಖಾತೆಯಲ್ಲಿ ‘ರಾಜಕೀಯದಲ್ಲಿ ಕಣ್ಣಿಗೆ ಕಾಣುವುದಕ್ಕಿಂತ ಹೆಚ್ಚಿನದು ಯಾವಾಗಲೂ ಇರುತ್ತದೆ. ಜಾರ್ಖಂಡ್ ಮುಖ್ಯಮಂತ್ರಿ ಮತ್ತು ಜೆಎಂಎಂ ಮುಖ್ಯಸ್ಥ ಹೇಮಂತ್ ಸೊರೇನ್ ಅವರು ರಾಷ್ಟ್ರಪತಿ ಚುನಾವಣೆಯ ವಿರೋಧ ಪಕ್ಷದ ಅಭ್ಯರ್ಥಿ ಯಶವಂತ ಸಿನ್ಹಾ ಅವರನ್ನು ಶನಿವಾರ ರಾಂಚಿಯಲ್ಲಿರುವ ತಮ್ಮ ಅಧಿಕೃತ ನಿವಾಸಕ್ಕೆ ಆಹ್ವಾನಿಸಿದ್ದಾರೆ’ ಎಂದು ಬರೆದು ಇಬ್ಬರ ಭೇಟಿಯ ಚಿತ್ರವನ್ನೂ ಹಂಚಿಕೊಂಡಿದ್ದಾರೆ.

‘ವಾರ್ಡ್ ಮರುವಿಂಗಡಣೆ ಅವೈಜ್ಞಾನಿಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಗೆ ಅನುಕೂಲ, ಸಾರ್ವಜನಿಕರಿಗೆ ಅನನುಕೂಲವಾಗುವಂತೆ ಅವೈಜ್ಞಾನಿಕವಾಗಿ ಬಿಬಿಎಂಪಿ ವಾರ್ಡ್‌ಗಳನ್ನು ಮರುವಿಂಗಡಣೆ ಮಾಡಲಾಗಿದೆ. ಈ ಬಗ್ಗೆ ಮೂರು ಸಾವಿರಕ್ಕೂ ಹೆಚ್ಚು ಆಕ್ಷೇಪಣೆ ಸಲ್ಲಿಕೆಯಾಗಿದ್ದರೂ ಹೆಸರು ಬದಲಾವಣೆ ಹೊರತು, ವಾರ್ಡ್‌ಗಳ ವಿಂಗಡಣೆ ಬದಲಾಗಿಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ವಾರ್ಡ್‌ಗಳ ಹೆಸರು ಬದಲಾವಣೆ ಅಧಿಕಾರ ಸರ್ಕಾರಕ್ಕಿದೆ. ಆದರೆ, ಇಲ್ಲಿ ವಾರ್ಡ್ ಮರುವಿಂಗಡಣಾ ಸಮಿತಿಯೇ ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಹೆಸರುಗಳನ್ನು ಬದಲಿಸಿದೆ’ ಎಂದರು.

‘ಈ ಬಾರಿ ಬಿಜೆಪಿ ಶಾಸಕರು, ಸಂಸದರ ಕಚೇರಿಯಲ್ಲಿ ವಾರ್ಡ್ ವಿಂಗಡಣೆ ನಿರ್ಧಾರವಾಗಿ, ಕೇಶವಕೃಪದಲ್ಲಿ ಅಂತಿಮ ಒಪ್ಪಿಗೆ ಪಡೆಯಲಾಗಿದೆ. ಸಲ್ಲಿಕೆಯಾದ ಆಕ್ಷೇಪಗಳನ್ನು ಕಂದಾಯ ಅಧಿಕಾರಿಗಳಾಗಲಿ, ಜಂಟಿ ಆಯುಕ್ತರಾಗಲಿ ಪರಿಶೀಲನೆ ನಡೆಸಲೇ ಇಲ್ಲ’ ಎಂದು ದೂರಿದರು.

‘ಈ ವಿಂಗಡಣೆಯ ಮೂಲಕ, ಕಾಂಗ್ರೆಸ್ ಪಕ್ಷ ಎಲ್ಲಿ ಗೆಲ್ಲಲು ಸಾಧ್ಯವಿದೆಯೋ ಅಲ್ಲಿ ಮತ ವಿಭಜಿಸಿ ಸೋಲಿಸುವ ಪ್ರಯತ್ನ ಮಾಡಲಾಗಿದೆ. ಆದರೆ, ಶೇ 20ರಷ್ಟು ತಟಸ್ಥ ಮತದಾರರು ಯಾವುದೇ ಪಕ್ಷಕ್ಕೆ ಸೇರದೆ ಮತ ಹಾಕುತ್ತಾರೆ. ಅವರ ಮತಗಳೇ ನಿರ್ಣಾಯಕವಾಗುತ್ತವೆ. ಈ ವಿಶ್ಲೇಷಣೆಯನ್ನು ಬಿಜೆಪಿಯವರು ಚುನಾವಣೆ ಫಲಿತಾಂಶ ಬಂದಾಗ ಮಾಡಿಕೊಳ್ಳಲಿ’ ಎಂದರು.

‘ಜನಸಂಖ್ಯೆ ಆಧರಿಸಿದರೆ, ಪ್ರತಿ ವಾರ್ಡ್‌ನಲ್ಲಿ ಸರಾಸರಿ 35 ಸಾವಿರ ಜನಸಂಖ್ಯೆ ಇರಬೇಕು. ಕಾಂಗ್ರೆಸ್ ಪಕ್ಷ ಇರುವ ಕಡೆಗಳಲ್ಲಿ ಪ್ರತಿ ವಾರ್ಡ್ ಜನಸಂಖ್ಯಾ ಪ್ರಮಾಣ 36,753 ಇದೆ. ಬಿಜೆಪಿ ಇರುವ ಕಡೆಗಳಲ್ಲಿ 33,927 ಮತದಾರರು ಬರುತ್ತಾರೆ. ಗೋವಿಂದರಾಜ ನಗರ ಕ್ಷೇತ್ರದ ವಾರ್ಡ್‌ಗಳಲ್ಲಿ 30 ಸಾವಿರಕ್ಕಿಂತಲೂ ಕಡಿಮೆ ಮತದಾರರಿದ್ದಾರೆ. 35 ಸಾವಿರ ಸರಾಸರಿ ನೋಡಿದರೆ, ಬಿಜೆಪಿ ಇರುವ ಕ್ಷೇತ್ರಗಳಲ್ಲಿ 140 ವಾರ್ಡ್‌ಗಳು ಇರಬೇಕಿತ್ತು. ಆದರೆ, ಈಗ 145 ವಾರ್ಡ್‌ಗಳನ್ನು ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಲ್ಲಿ 103 ವಾರ್ಡ್‌ಗಳು ಬರಬೇಕಿತ್ತು. ಕೇವಲ 98 ವಾರ್ಡ್‌ಗಳಿವೆ. ಬ್ಯಾಟರಾಯನಪುರ, ಜಯನಗರ, ಚಾಮರಾಜಪೇಟೆ, ದಾಸರಹಳ್ಳಿ ಕ್ಷೇತ್ರಗಳಲ್ಲಿ ಜನಸಂಖ್ಯೆ ಪರಿಗಣಿಸಿದರೆ ಒಂದು ವಾರ್ಡ್ ಕಡಿಮೆ ಮಾಡಿ ಬಿಜೆಪಿ ಇರುವ ಕ್ಷೇತ್ರಗಳಲ್ಲಿ ಸೇರಿಸಿಕೊಂಡಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗುತ್ತೀರಾ ಎಂಬ ಪ್ರಶ್ನೆಗೆ, ‘ವಕೀಲರನ್ನು ಸೋಮವಾರ ಭೇಟಿ ಮಾಡಿ ಅಭಿಪ್ರಾಯ ಪಡೆಯುತ್ತೇವೆ. ಈ ವಿಚಾರವನ್ನು ಒಂದು ವಾರದಲ್ಲಿ ಸರಿಪಡಿಸಬಹುದು. ಚುನಾವಣೆ ಮುಂದೂಡುವಂತೆ ನಾವು ಹೇಳುವುದಿಲ್ಲ. ನ್ಯಾಯಾಲಯಕ್ಕೆ ಹೋದರೂ 10-15 ದಿನಗಳಲ್ಲಿ ಅರ್ಜಿ ಇತ್ಯರ್ಥ ಮಾಡುವಂತೆ ಮನವಿ ಮಾಡುತ್ತೇವೆ’ ಎಂದರು.

ಜಯತೀರ್ಥರ ಆರಾಧನಾ ಮಹೋತ್ಸವ ಇಂದಿನಿಂದ

ಯರಗೋಳ (ಯಾದಗಿರಿ ಜಿಲ್ಲೆ): ಯರಗೋಳ ಸೇರಿ ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡದ ಜಯತೀರ್ಥರ ಮೂಲ ವೃಂದಾವನದಲ್ಲಿ ಇದೇ 17 ರಿಂದ 19ರ ವರೆಗೆ ಜಯತೀರ್ಥರ ಆರಾಧನಾ ಮಹೋತ್ಸವ ನಡೆಯಲಿದೆ.

ಸತ್ಯಾತ್ಮತೀರ್ಥರು

ಉತ್ತರಾದಿ ಮಠಾಧೀಶ ಸತ್ಯಾತ್ಮತೀರ್ಥರ ಸಾನ್ನಿಧ್ಯದಲ್ಲಿ ಇದೇ 17ರಂದು ಯರಗೋಳದಲ್ಲಿ ಪೂರ್ವಾರಾಧನೆ, 18ರಂದು ಮಳಖೇಡದಲ್ಲಿ ಮಧ್ಯಾರಾಧನೆ ಮತ್ತು 19ರಂದು ಉತ್ತರಾರಾಧನೆ ಜರುಗಲಿದೆ.

ನಿತ್ಯವೂ ಮೂಲ ರಾಮದೇವರ ಪೂಜೆ, ಅಕ್ಷೋಭ್ಯ ತೀರ್ಥರು ಮತ್ತು ರಘುನಾಥ ತೀರ್ಥರ ವೃಂದಾವನ ವಿಶೇಷ ಪೂಜೆ, ಅಭಿಷೇಕ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ. ಕಲಾವಿದರ ದಾಸವಾಣಿ, ಪಂಡಿತರ ಉಪನ್ಯಾಸ ಮತ್ತು ಶ್ರೀಪಾದಂಗಳವರ ಅನುಗ್ರಹ ಸಂದೇಶ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವೀಂದ್ರ ಅವರು ನಗರದಲ್ಲಿ ಬುಧವಾರ ಪೌರಕಾರ್ಮಿಕರಿಗೆ ಸೀರೆ, ಪ್ಯಾಂಟು–ಅಂಗಿ ಹಾಗೂ ಆಟೊ ಚಾಲಕರಿಗೆ ಸಮವಸ್ತ್ರ ವಿತರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಇದ್ದಾರೆ

ನಗರದ ಮಹಾರಾಣಿ ಕಾಲೇಜಿನಲ್ಲಿ ಶುಲ್ಕ ಹೆಚ್ಚಿಸಿರುವುದನ್ನು ವಿರೋಧಿಸಿ ವಿದ್ಯಾರ್ಥಿಗಳು ಶುಕ್ರವಾರ ಹೋರಾಟ ನಡೆಸಿದರು –ಪ್ರಜಾವಾಣಿ ಚಿತ್ರ

ಪಠ್ಯಪುಸ್ತಕ ಪರಿಷ್ಕರಣೆ ಕುರಿತ ಚರ್ಚೆಯಲ್ಲಿ ರಾಜ್ಯಸಭಾ ಸದಸ್ಯ ಹನುಮಂತಯ್ಯ ಹೇಳಿಕೆ

‘ಅಂಬೇಡ್ಕರ್ ವಿಚಾರಕ್ಕೆ ತಿಲಾಂಜಲಿ; ಪ್ರತಿಮೆಗೆ ಮನ್ನಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಬೇಡ್ಕರ್ ಅವರ ವಿಚಾರಗಳನ್ನು ಕೈಬಿಟ್ಟು, ಅವರ ಪ್ರತಿಮೆಗಳಿಗಷ್ಟೆ ಆದ್ಯತೆ ನೀಡುವ ಮೂಲಕ ಬಿಜೆಪಿ ದಲಿತ ವೋಟ್ ಬ್ಯಾಂಕ್‌ನ ಹೊಸ ರಾಜಕಾರಣ ಆರಂಭಿಸಿದೆ ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ದೂರಿದರು.

ವಿಶ್ವ ಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ, ವಿಚಾರ ವೇದಿಕೆ ಶನಿವಾರ ಹಮ್ಮಿಕೊಂಡಿದ್ದ ಪಠ್ಯಪುಸ್ತಕ ಪರಿಷ್ಕರಣೆ ಕುರಿತ ಚರ್ಚೆಯಲ್ಲಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳಿಂದ ದಲಿತ, ತಳ ಸಮುದಾಯಗಳನ್ನು ತುಳಿಯುತ್ತಲೇ ಬಂದಿರುವ ಪುರೋಹಿತಶಾಹಿ ವರ್ಗ ಈಗ ದಲಿತರ ಸಮಾನತೆಯ ಕುರಿತು ಹುಸಿ ಭರವಸೆಗಳನ್ನು ನೀಡುತ್ತಿದೆ. ಪಠ್ಯಪುಸ್ತಕ ಪರಿಷ್ಕರಣೆಯ ನೆಪದಲ್ಲಿ ಸನಾತನ ಧರ್ಮವನ್ನು ಪುನರ್ ಪ್ರತಿಷ್ಠಾಪಿಸುವ ಯೋಜನೆ ರೂಪಿಸಿದೆ. ಪುರಾಣಗಳನ್ನೇ ಚರಿತ್ರೆಗಳೆಂದು ಬಿಂಬಿಸಿ, ಗೊಂದಲ ಸೃಷ್ಟಿಸುತ್ತಾ ಕೋಮುವಾದಿ ರಾಜಕಾರಣಕ್ಕೆ ಮುನ್ನುಡಿ ಬರೆಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ, ವಿಚಾರ ವೇದಿಕೆ ಆಯೋಜಿಸಿದ್ದ ಪಠ್ಯಪುಸ್ತಕ ಪರಿಷ್ಕರಣೆ ಕುರಿತ ಚರ್ಚೆಯಲ್ಲಿ ಕವಿ ಎಲ್‌.ಎನ್ ಮುಕುಂದರಾಜ್ ಮಾತನಾಡಿದರು. ಸಾಮಾಜಿಕ ಚಿಂತಕಿ ಅಖಿಲಾ ವಿದ್ಯಾಸಂದ್ರ, ರಾಜ್ಯಸಭಾ ಸದಸ್ಯ ಡಾ.ಎಲ್ ಹನುಮಂತಯ್ಯ, ಆಶೀರ್ವಾದದ ನಿರ್ದೇಶಕ ರೆ.ಫಾ. ಅರುಣ್ ಲೂಯಿಸ್, ಪತ್ರಕರ್ತ ಶಿವಸುಂದರ್ ಇದ್ದರು

ಪಠ್ಯ ಪರಿಷ್ಕರಣೆ, ಪಠ್ಯ ಕ್ರಮದ ವಿರುದ್ಧ ಈಗ ನಡೆಯುತ್ತಿರುವ ಹೋರಾಟ ಪ್ರಜಾ ಹೋರಾಟವಾಗಿ ರೂಪುಗೊಳ್ಳದಿದ್ದರೆ ಭವಿಷ್ಯದ ಬದಲಾವಣೆ ಅಸಾಧ್ಯ. ಆರ್‌ಎಸ್‌ಎಸ್ ಹಿಡಿತದಲ್ಲಿರುವ ಬಿಜೆಪಿ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ಎಚ್ಚರಿಸಿದರು.

ಪತ್ರಕರ್ತ ಶಿವಸುಂದರ್, ರಾಜ್ಯ ಸರ್ಕಾರದ ಆಡಳಿತ ವಿಧಾನಸೌಧದಿಂದ ಕೇಶವಕೃಪಾಕ್ಕೆ ಸ್ಥಳಾಂತರವಾಗಿದೆ. ಮನುಷ್ಯರಲ್ಲಿನ ಮೃಗತ್ವವನ್ನು ಹೊಸ ಪಠ್ಯ ನೀತಿಯ ಮೂಲಕ ಉದ್ದೀಪನಗೊಳಿಸಿ, ಮೃಗೀಯ ಸಮಾಜ ಕಟ್ಟಲು ಹವಣಿಸಲಾಗುತ್ತಿದೆ ಎಂದು ಆರೋಪಿಸಿದರು.

ಬ್ರಾಹ್ಮಣೀಯ ಭಾರತ ಕಟ್ಟುವ ನೆಪದಲ್ಲಿ ಪ್ರಜಾಪ್ರಭುತ್ವದ ಆಶಯಗಳನ್ನೇ ನಿರಾಕರಣೆ ಮಾಡಲಾಗುತ್ತಿದೆ. ಜಾತಿ ವ್ಯವಸ್ಥೆಯನ್ನೇ ಅದ್ಭುತ ಚಿಂತನೆ ಎಂದು ಪ್ರತಿಪಾದಿಸಲಾಗುತ್ತಿದ್ದು, ವೇದಗಳ ಕಾಲದ ಭಾರತವನ್ನು ಅಪ್ಪಿಕೊಳ್ಳುವಂತೆ ಪ್ರೇರೇಪಿಸಲಾಗುತ್ತಿದೆ. ಹುಸಿ ಶ್ರೇಷ್ಠತೆಯ ವ್ಯಸನಗಳನ್ನು ಮಕ್ಕಳ ತಲೆಗೆ ತುಂಬುವ ಪ್ರಯತ್ನ ನಡೆದಿದೆ ಎಂದು ದೂರಿದರು.

ಸಾಮಾಜಿಕ ಚಿಂತಕಿ ಅಖಿಲಾ ವಿದ್ಯಾಸಂದ್ರ, ಬಿಎಸ್ಸಿ ಓದಿದ ಪಂಡಿತರಿಗೆ ಪಠ್ಯಪುಸ್ತಕ ಪರಿಷ್ಕರಣೆ ಹೊಣೆ ನೀಡುವ ಮೂಲಕ ಬಿಜೆಪಿಯಲ್ಲಿ ಬೌದ್ಧಿಕ ದಿವಾಳಿತನ ಇರುವುದನ್ನು ಸರ್ಕಾರ ದೃಢಪಡಿಸಿದೆ. ಸುಳ್ಳು ಹೇಳುವ ವ್ಯಕ್ತಿ ರೂಪಿಸಿದ ಪಠ್ಯಗಳ ಮೂಲಕ ಸತ್ಯವನ್ನೇ ನಂಬದ ವಿದ್ಯಾರ್ಥಿ ಸಮೂಹ ಸೃಷ್ಟಿಸುವ ಪ್ರಯತ್ನಗಳು ನಡೆದಿದೆ. ಕುಟುಂಬ ಬೇಸಾಯ, ಬೀದಿಬದಿ ವ್ಯಾಪಾರಗಳನ್ನೂ ಸರ್ವನಾಶ ಮಾಡುವ ಕುತಂತ್ರ ನಡೆದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕವಿ ಎಲ್.ಎನ್.ಮುಕುಂದರಾಜ್, ಆಶೀರ್ವಾದ ಸಂಸ್ಥೆಯ ನಿರ್ದೇಶಕ ರೆ.ಫಾ.ಅರುಣ್ ಲೂಯಿಸ್ ಉಪಸ್ಥಿತರಿದ್ದರು.

ಶಿರಾಡಿ ಘಾಟಿ ಮಾರ್ಗದಲ್ಲಿ ಸಂಚಾರ ಸ್ಥಗಿತ • ಸಾಲುಗಟ್ಟಿ ನಿಂತ ವಾಹನಗಳು

ಮತ್ತೊಮ್ಮೆ ಕಡಿದ ಕರಾವಳಿ ಸಂಪರ್ಕ

• ಚಿದಂಬರಪ್ರಸಾದ

ಮುಖ್ಯಾಂಶಗಳು
- ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಭೂಕುಸಿತ
- ದುಸ್ತರವಾದ ಹಾಸನ–ಮಂಗಳೂರು ಪ್ರಯಾಣ: ಜನರ ಆಕ್ರೋಶ
- ಶಾಶ್ವತ ಕಾಮಗಾರಿ ನಡೆಸದ ಗುತ್ತಿಗೆದಾರ: ಅಧಿಕಾರಿಗಳ ನಿರ್ಲಕ್ಷ್ಯ

ಹಾಸನ: ಬೆಂಗಳೂರು– ಮಂಗಳೂರು ನಡುವೆ ಸಂಪರ್ಕ ಕಲ್ಪಿಸುವ ಶಿರಾಡಿ ಘಾಟಿ ರಸ್ತೆ ಮತ್ತೊಮ್ಮೆ ಬಂದ್ ಆಗಿದೆ. ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಭೂಕುಸಿತ ಉಂಟಾಗಿದ್ದು, ಎಲ್ಲ ರೀತಿಯ ವಾಹನಗಳ ಸಂಚಾರವನ್ನು ನಿಷೇಧಿಸಿರುವುದರಿಂದ ಕರಾವಳಿ ಹಾಗೂ ರಾಜಧಾನಿಗೆ ಇದ್ದ ಸಂಪರ್ಕ ಕೊಂಡಿ ಕಳಚಿದೆ.

ಪ್ರಮುಖವಾಗಿ ವಾಣಿಜ್ಯ ವಹಿವಾಟು ಹಾಗೂ ಪ್ರಯಾಣಿಕ ಸಾರಿಗೆಗೆ ಸಮಸ್ಯೆ ಉಂಟಾಗಿದೆ. ಸರಕುಗಳನ್ನು ಹೊತ್ತು ಮಂಗಳೂರಿನ ಎನ್‌ಎಂಪಿಟಿಗೆ ತೆರಳುತ್ತಿದ್ದ ಸರಕು ಸಾಗಣೆ ಲಾರಿಗಳು ನಗರದ ಹೊರವಲಯದ ದೇವರಾಯಪಟ್ಟಣದ ಬಳಿ ಸಾಲುಗಟ್ಟಿ ನಿಂತಿವೆ.

ಲಘು ವಾಹನಗಳಿಗೆ ಪರ್ಯಾಯ ಮಾರ್ಗ ತೋರಿಸಿದ್ದರೂ, ಭಾರಿ ಸರಕು ಸಾಗಣೆ ವಾಹನಗಳಿಗೆ ಯಾವ ಮಾರ್ಗದಲ್ಲಿ ಸಂಚರಿಸಬೇಕು ಎನ್ನುವ ಮಾಹಿತಿಯೇ ಇಲ್ಲ. ಎರಡು ದಿನಗಳಿಂದ ನಗರದಲ್ಲಿಯೇ ನಿಂತಿರುವ ವಾಹನಗಳ ಚಾಲಕರು, ಮುಂದೇನು ಮಾಡಬೇಕು ಎಂದು ಚಿಂತೆಯಲ್ಲಿದ್ದಾರೆ.

‘ಹೆದ್ದಾರಿ ಬಂದ್ ಆಗಿರುವ ಬಗ್ಗೆ ನಮಗೆ ಯಾವುದೇ ಮಾಹಿತಿ ಇರಲಿಲ್ಲ. ಚೆನ್ನೈನಿಂದ ಮಂಗಳೂರಿಗೆ ಹೊರಟಿದ್ದು, ಇದೀಗ ಇಲ್ಲಿ ತಡೆದು ನಿಲ್ಲಿಸಲಾಗಿದೆ. ಯಾವ ದಾರಿಯಲ್ಲಿ ಹೋಗಬೇಕು ಎಂಬುದೂ ಗೊತ್ತಿಲ್ಲ. ಹೆದ್ದಾರಿ ಬಂದ್ ಆಗಿರುವ ವಿಷಯ ಮೊದಲೇ ತಿಳಿದಿದ್ದರೆ, ಲಾರಿಗೆ ಸರಕನ್ನೇ ತುಂಬುತ್ತಿರಲಿಲ್ಲ’ ಎಂದು ಮಂಗಳೂರಿನ ಲಾರಿ ಚಾಲಕ ರಫೀಕ್ ಹೇಳಿದರು.

‘ಶುಕ್ರವಾರ ಮಧ್ಯಾಹ್ನದಿಂದ ಇಲ್ಲಿ ಲಾರಿಗಳನ್ನು ನಿಲ್ಲಿಸಲಾಗಿದೆ. ದೋಣಿಗಲ್ ಬಳಿ ಭೂಕುಸಿತ ಆಗಿದ್ದರಿಂದ ಸಂಚಾರ ಬಂದ್ ಆಗಿದೆ. ಇತ್ತ ಕುಶಾಲನಗರದ ಮೂಲಕ ಹೋಗಬೇಕಾದರೂ, ಅಲ್ಲಿಯೂ ಸಂಚಾರ ನಿಷೇಧವಿದೆ. ಏನು ಮಾಡುವುದು ಎಂಬುದು ತಿಳಿಯುತ್ತಿಲ್ಲ’ ಎಂದು ತಮಿಳುನಾಡಿನ ಚಾಲಕ ಸೆಲ್ವಂ ಹೇಳಿದರು.

ಅಪಾರ ಪ್ರಮಾಣದ ಸರಕುಗಳನ್ನು ಹೊತ್ತು ನಿಂತಿರುವ ಲಾರಿಗಳಲ್ಲಿ ಆಹಾರ ಪದಾರ್ಥಗಳೂ ಇವೆ. ಹಾಗಾಗಿ ಅವುಗಳನ್ನು ಬೇಗನೆ ನಿಗದಿತ ಸ್ಥಳಕ್ಕೆ ತಲುಪಿಸುವ ಚಿಂತೆ ಲಾರಿ ಚಾಲಕರದ್ದು. ಒಂದು ವೇಳೆ ತಡವಾದರೆ, ಆ ವಸ್ತುಗಳೆಲ್ಲ ಹಾಳಾಗುತ್ತವೆ. ಅದರ ನಷ್ಟವನ್ನೂ ಲಾರಿಯವರೇ ಭರಿಸಬೇಕು ಎನ್ನುತ್ತಾರೆ ಲಾರಿ ಚಾಲಕರು.

ಬಸ್ ಸಂಚಾರಕ್ಕೂ ಅಡಚಣೆ: ಬೆಂಗಳೂರಿನಿಂದ ಹಾಸನದ ಮೂಲಕ ಮಂಗಳೂರಿಗೆ ತೆರಳುತ್ತಿದ್ದ ಸಾರಿಗೆ ಸಂಸ್ಥೆ ಬಸ್‌ಗಳು ಈಗ ಬೇರೆ ಮಾರ್ಗದಲ್ಲಿ ಸಂಚರಿಸಬೇಕಿದೆ. ಎಲ್ಲ ರೀತಿಯ ಲಘು ವಾಹನಗಳಿಗೆ ಹಾಸನದಿಂದ ಬೇಲೂರು– ಮೂಡಿಗೆರೆ– ಚಾರ್ಮಾಡಿ ಘಾಟಿ, ಬೆಳ್ತಂಗಡಿ ಮೂಲಕ ಮಂಗಳೂರು ಅಥವಾ ಹಾಸನದಿಂದ ಅರಕಲಗೂಡು– ಕುಶಾಲನಗರ– ಸಂಪಾಜೆ ಮೂಲಕ ಮಂಗಳೂರಿಗೆ ಸಂಚರಿಸಬೇಕಾಗಿದೆ.

‘ಇದು ಪ್ರಯಾಸಕರ ಪ್ರಯಾಣವಾಗಿದ್ದು, ಹಣ ನೀಡಿಯೂ ಇಷ್ಟೊಂದು ಸಮಸ್ಯೆ ಎದುರಿಸಬೇಕಾಗಿದೆ. ಹೀಗಾದರೆ, ಮಂಗಳೂರಿಗೆ ಹೋಗುವುದನ್ನೇ ಬಿಡಬೇಕಾಗುತ್ತದೆ’ ಎಂದು ನಗರದ ವರ್ತಕ ಹಿಮೇಶ್ ಜೈನ್ ಅಲವತ್ತುಕೊಂಡರು.

‘ಕರ್ನಾಟಕ ಸಾರಿಗೆ ಬಸ್‌ಗಳು ಚಾರ್ಮಾಡಿ ಮೂಲಕ ಮಂಗಳೂರಿಗೆ ಹೋಗುತ್ತಿವೆ. ಮಲ್ಟಿ ಎಕ್ಸೆಲ್, ವೋಲ್ವೊ ಬಸ್‌ಗಳು ಕುಶಾಲನಗರ, ಸಂಪಾಜೆ ಮೂಲಕ ಮಂಗಳೂರಿಗೆ ಹೋಗುತ್ತಿವೆ. ಬೆಂಗಳೂರಿನಿಂದ ಬರುವ ಕೆಲ ಬಸ್‌ಗಳು ಹಾಸನಕ್ಕೆ ಬರದೇ ಚನ್ನರಾಯಪಟ್ಟಣದಿಂದಲೇ ಕುಶಾಲನಗರ ಮಾರ್ಗದಲ್ಲಿ ಸಂಚರಿಸುತ್ತಿವೆ’ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅರುಣ್ ತಿಳಿಸಿದರು.

ಹಾಸನದ ಹೊರವಲಯದಲ್ಲಿ ನಿಂತಿರುವ ಲಾರಿಗಳು ಪ್ರಜಾವಾಣಿ ಚಿತ್ರ/ಆತೀಖುರ್ ರಹಮಾನ್ ಎಂ.ಎನ್.

ಯಾರು ಹೊಣೆ: ಜನರ ಪ್ರಶ್ನೆ

ಪ್ರತಿ ವರ್ಷ ದೋಣಿಗಲ್‌ನಲ್ಲಿ ಇದೇ ಸ್ಥಿತಿ ಮರುಕಳಿಸುತ್ತಿದೆ. ಜಿಲ್ಲಾಡಳಿತವಾಗಲಿ, ಹೆದ್ದಾರಿ ಪ್ರಾಧಿಕಾರವಾಗಲಿ ಶಾಶ್ವತ ಪರಿಹಾರ ರೂಪಿಸಲು ಮುಂದಾಗುತ್ತಿಲ್ಲ. ಇದೀಗ ಮತ್ತೊಮ್ಮೆ ಸಂಚಾರ ಬಂದ್ ಆಗಿದೆ. ಇದರಿಂದ ಉಂಟಾಗುತ್ತಿರುವ ನಷ್ಟಕ್ಕೆ ಯಾರು ಹೊಣೆ ಎಂದು ಜನ ಪ್ರಶ್ನಿಸುತ್ತಿದ್ದಾರೆ.

‘ಕಳಪೆ ಕಾಮಗಾರಿ, ನಿಧಾನಗತಿಯಿಂದಲೇ ಸಮಸ್ಯೆ ಉಂಟಾಗುತ್ತಿದೆ. ಸರ್ಕಾರಕ್ಕೆ ಅಧಿಕಾರಿಗಳು, ಗುತ್ತಿಗೆದಾರರ ಮೇಲೆ ಹಿಡಿತವಿಲ್ಲ. ಕಮಿಷನ್ ದಂಧೆಯಿಂದಾಗಿ ಶಿರಾಡಿ ರಸ್ತೆಗೆ ದುಸ್ಥಿತಿ ಬಂದಿದೆ. ಸೌಕರ್ಯ ಒದಗಿಸದ ಜನಪ್ರತಿನಿಧಿಗಳು ಯಾವ ಮುಖ ಇಟ್ಟುಕೊಂಡು ಚುನಾವಣೆಯಲ್ಲಿ ಮತ ಕೇಳುತ್ತಾರೆ’ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಿ.ಸಿ. ಸಣ್ಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಹೆದ್ದಾರಿಯನ್ನು ಒಂದು ಗಂಟೆ ಬಂದ್ ಮಾಡಿದರೆ, ಪ್ರಕರಣ ದಾಖಲಿಸಲಾಗುತ್ತಿದೆ. ಪ್ರತಿ ವರ್ಷ ತಿಂಗಳುಗಟ್ಟಲೆ ಹೆದ್ದಾರಿ ಬಂದ್ ಆಗುತ್ತಿದೆ. ಅದಕ್ಕೆ ಕಾರಣರಾದವರ ಮೇಲೂ ಪ್ರಕರಣ ದಾಖಲಿಸಬೇಕು. ಅವರಿಂದಲೇ ನಷ್ಟ ವಸೂಲಿ ಮಾಡಬೇಕು’ ಎಂದು ಕಾಫಿ ಬೆಳೆಗಾರ ವಿಜಿತ್ ಒತ್ತಾಯಿಸಿದ್ದಾರೆ.

ತಂತಿ ಬಿದ್ದು ಬಾಲಕ ಸಾವು

ಮಳೆ– ಗಾಳಿಯಿಂದಾಗಿ ತುಂಡಾದ ವಿದ್ಯುತ್ ತಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ-ಗಾಳಿಯಿಂದಾಗಿ ತುಂಡಾದ ವಿದ್ಯುತ್ ತಂತಿ ಮೈ ಮೇಲೆ ಬಿದ್ದು ಬಾಲಕ ಲುಕ್ಮಾನ್ (12) ಮೃತಪಟ್ಟಿದ್ದು, ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿರುವುದಾಗಿ ಕುಟುಂಬದವರು ದೂರಿದ್ದಾರೆ.

‘ಯಶವಂತಪುರ ಠಾಣೆ ವ್ಯಾಪ್ತಿಯ ಷರೀಫ್ ನಗರದಲ್ಲಿ ಶನಿವಾರ ಈ ಅವಘಡ ಸಂಭವಿಸಿದೆ. ಬಾಲಕ ಲುಕ್ಮಾನ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಲಕ ಲುಕ್ಮಾನ್ ಮನೆ ಮೇಲೆಯೇ ವಿದ್ಯುತ್ ತಂತಿ ಹಾದು ಹೋಗಿದೆ. ಶನಿವಾರ ಸಂಜೆ ಬಾಲಕ ಮನೆ ಮುಂದೆ ಆಟವಾಡುತ್ತಿದ್ದ. ಇದೇ ವೇಳೆ ಬೀಸಿದ ಗಾಳಿಯಿಂದಾಗಿ ವಿದ್ಯುತ್ ತಂತಿ ತುಂಡರಿಸಿ ಬಾಲಕನ ಮೈ ಮೇಲೆ ಬಿದ್ದಿತ್ತು. ವಿದ್ಯುತ್ ಪ್ರವಹಿಸಿದ್ದರಿಂದ ಬಾಲಕ ಸ್ಥಳದಲ್ಲೇ ಮೃತಪಟ್ಟಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳುತ್ತಿದ್ದಾರೆ.’

‘ಬಾಲಕನ ಸಾವಿನ ಬಗ್ಗೆ ಕುಟುಂಬದವರು ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆದು ಕಾನೂನು ಕ್ರಮ ಕೈಗೊಳ್ಳಲಾಗುವುದು. ಬೆಸ್ಕಾಂ ನಿರ್ಲಕ್ಷ್ಯದ ಬಗ್ಗೆ ದೂರಿನಲ್ಲಿ ಉಲ್ಲೇಖಿಸಿದರೆ, ಅವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದೂ ಮೂಲಗಳು ತಿಳಿಸಿವೆ.

ವಿಧಾನಸೌಧ ಸಭಾಂಗಣ: ವಿದ್ಯುತ್ ಅವಘಡ

ಬೆಂಗಳೂರು: ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದ (ಕೊಠಡಿ ಸಂಖ್ಯೆ 334) ಹವಾ ನಿಯಂತ್ರಿತ ಘಟಕದಲ್ಲಿ ಶನಿವಾರ ಸಂಜೆ ಬೆಂಕಿ ಕಾಣಿಸಿಕೊಂಡು, ಕೆಲಹೊತ್ತು ಆತಂಕದ ವಾತಾವರಣ ಸೃಷ್ಟಿಯಾಯಿತು. ಆದರೆ, ಯಾವುದೇ ಅನಾಹುತ ಸಂಭವಿಸಿಲ್ಲ.

ಸಂಜೆ 6.40ರ ಸುಮಾರಿಗೆ ಈ ಘಟನೆ ನಡೆದಿದೆ. ಸಭಾಂಗಣದ ಗೋಡೆಗೆ ಅಳವಡಿಸಿದ್ದ ಏರ್ ಕಂಡೀಷನರ್‌ನಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿದೆ. ತಕ್ಷಣ ಅಲ್ಲಿದ್ದ ಸಿಬ್ಬಂದಿ ವಿಧಾನಸೌಧದ ಆವರಣದಲ್ಲಿರುವ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು.

ವಿಷಯ ಗೊತ್ತಾಗುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ, ತಕ್ಷಣವೇ ಬೆಂಕಿ ನಂದಿಸಿ, ಇನ್ನಷ್ಟು ಸ್ಥಳಕ್ಕೆ ವ್ಯಾಪಿಸದಂತೆ ತಡೆದಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಘಟನೆ ಸಂಭವಿಸಿರುವ ಅನುಮಾನವಿದೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಕೆ.ಆರ್.ಪುರ: ’ಮುಲಾಜಿಲ್ಲದೆ ರಾಜಕಾಲುವೆ ಒತ್ತುವರಿ ತೆರವುಗೊಳಿಸಿ‘ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಆಯುಕ್ತರ ನಡೆ ವಲಯವಾರು ಕಡೆ ಕಾರ್ಯಕ್ರಮ ಅಂಗವಾಗಿ ಬಿಬಿಎಂಪಿ ಮಹದೇವಪುರ ವಲಯಕ್ಕೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಅಲಿಸಿ ನಂತರ ಮಾತನಾಡಿದರು.

ಒತ್ತುವರಿ ಆಗಿರುವ ರಾಜಕಾಲುವೆ ಯಾವುದೇ ಒತ್ತಡ, ಪ್ರಭಾವಕ್ಕೆ ಒಳಗಾಗದೇ ತೆರವುಗೊಳಿಸಬೇಕು. ರಾಜಕಾಲುವೆ ಒತ್ತುವರಿಯಿಂದ ನಗರದಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ತಗ್ಗು ಪ್ರದೇಶದ ಬಡವರ ಮನೆಗಳಿಗೆ ನುಗ್ಗುತ್ತಿವೆ. ಇದ್ದರಿಂದ ನಾನಾ ಬಗೆಯ ನಷ್ಟ ಉಂಟಾಗುತ್ತಿದೆ. ಇದನ್ನು ತಡೆಯಲು ಪ್ರಭಾವಿಗಳಿದ್ದರೂ ತೆರವುಗೊಳಿಸಬೇಕು ಎಂದು ಸೂಚನೆ ನೀಡಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು

ಕೊಳಚೆ ನೀರು ಶುದ್ಧೀಕರಿಸದೇ ನೇರವಾಗಿ ಕೆರೆಗಳಿಗೆ ಬಿಡುವುದನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ಮನೆಯಲ್ಲಿ ಡ್ರಗ್ಸ್: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದ ಆರೋಪದಡಿ ಮಹಿಳೆಯರೂ ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮಾಗಡಿ ರಸ್ತೆ ನಿವಾಸಿಗಳಾದ ಸೀತಾ, ಸುಮಿತ್ರಾ ಹಾಗೂ ಚಂದ್ರಶೇಖರ್ ಬಂಧಿತರು.

‘ಮನೆಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮಾದಕ ವಸ್ತು ನಿಗ್ರಹ ದಳದ ಅಧಿಕಾರಿಗಳು ಮನೆ ಮೇಲೆ ದಾಳಿ ಮಾಡಿ, ಡ್ರಗ್ಸ್ ಮಾರಾಟ ಜಾಲ ಭೇದಿಸಿದ್ದಾರೆ’ ಎಂದು ಸಿಸಿಬಿಯ ಅಧಿಕಾರಿಯೊಬ್ಬರು ಹೇಳಿದರು.

‘₹ 90 ಲಕ್ಷ ಮೌಲ್ಯದ 940 ಗ್ರಾಂ ಹಶೀಷ್, 10 ಕೆ.ಜಿ ಗಾಂಜಾ, ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ. ಆರೋಪಿಗಳ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ’ ಎಂದು ತಿಳಿಸಿದರು.

ಆಂಧ್ರಪ್ರದೇಶದಲ್ಲಿ ಖರೀದಿ: ‘ಆರೋಪಿಗಳು ಆಂಧ್ರಪ್ರದೇಶದ ಹಳ್ಳಿಯೊಂದರಲ್ಲಿ ಡ್ರಗ್ಸ್ ಖರೀದಿಸಿ ನಗರಕ್ಕೆ ತರುತ್ತಿದ್ದರು. ಅದನ್ನೇ ಮನೆಯಲ್ಲಿಟ್ಟುಕೊಂಡು ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು’ ಎಂದು ಅಧಿಕಾರಿ ಹೇಳಿದರು.

‘ಆರೋಪಿ ಚಂದ್ರಶೇಖರ್ ಈ ಹಿಂದೆಯೂ ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ. ಈತನೇ ಮಹಿಳೆಯರ ಮೂಲಕ ಡ್ರಗ್ಸ್ ಮಾರಿಸುತ್ತಿದ್ದ ಮಾಹಿತಿ ಇದೆ. ಎನ್‌ಡಿಪಿಎಸ್ ಕಾಯ್ದೆಯಡಿ ಮೂವರ ವಿರುದ್ಧವೂ ಮಾಗಡಿ ರಸ್ತೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದರು.

ಪ್ರೀತಿ ಸಂದೇಶ ಕಳುಹಿಸಿದ್ದಕ್ಕೆ ಕೊಲೆ

ಬೆಂಗಳೂರು: ಯುವತಿಯೊಬ್ಬರಿಗೆ ಪ್ರೀತಿ ಸಂದೇಶ ಕಳುಹಿಸಿ ಕಿರುಕುಳ ನೀಡಿದರೆಂಬ ಕಾರಣಕ್ಕೆ ಪ್ರಜ್ವಲ್ (19) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಬನಶಂಕರಿ ನಿವಾಸಿ ಪ್ರಜ್ವಲ್ ಹಳೇ ದಿನಪತ್ರಿಕೆ ಸಂಗ್ರಹಿಸಿ ಗುಜರಿ ಅಂಗಡಿಗೆ ಮಾರುವ ಕೆಲಸ ಮಾಡುತ್ತಿದ್ದರು. ಇವರ ಕೊಲೆ ಸಂಬಂಧ ನಾಗೇಂದ್ರ ಹಾಗೂ ಈತನ ಇಬ್ಬರು ಸ್ನೇಹಿತರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಜ್ವಲ್ ಹಾಗೂ ಆರೋಪಿ ನಾಗೇಂದ್ರ ಸಂಬಂಧಿಕರೇ ಆಗಿದ್ದರೆಂದು ಗೊತ್ತಾಗಿದೆ’ ಎಂದು ತಿಳಿಸಿವೆ.

ಅಣ್ಣನ ಮಗಳಿಗೆ ಕಿರುಕುಳ: ‘ಆರೋಪಿ ನಾಗೇಂದ್ರನ ಅಣ್ಣನ ಮಗಳ ಮೊಬೈಲ್‌ಗೆ ಆರೋಪಿ ಪ್ರಜ್ವಲ್ ನಿರಂತರವಾಗಿ ಸಂದೇಶ ಕಳುಹಿಸುತ್ತಿದ್ದ. ಪ್ರೀತಿಸುವಂತೆ ಒತ್ತಾಯಿಸಿ ಕಿರುಕುಳ ನೀಡುತ್ತಿದ್ದ. ಈ ವಿಷಯ ಗೊತ್ತಾಗುತ್ತಿದ್ದಂತೆ ನಾಗೇಂದ್ರ, ಪ್ರಜ್ವಲ್‌ಗೆ ಎಚ್ಚರಿಕೆ ನೀಡಲು ತೀರ್ಮಾನಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಜ್ವಲ್‌ಗೆ ಕರೆ ಮಾಡಿದ್ದ ಆರೋಪಿಗಳು, ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣಕ್ಕೆ ಶುಕ್ರವಾರ ಕರೆಸಿಕೊಂಡಿದ್ದರು. ನಿಲ್ದಾಣ ಬಳಿಯೇ ಪ್ರಜ್ವಲ್ ಜೊತೆ ಜಗಳ ತೆಗೆದು, ತಲೆಗೆ ದೊಣ್ಣೆಯಿಂದ ಹೊಡೆದಿದ್ದರು. ಕುಸಿದು ಬಿದ್ದ ಪ್ರಜ್ವಲ್ ಅವರನ್ನು ಆರೋಪಿಗಳೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಪ್ರಜ್ವಲ್ ಅಸುನೀಗಿದರು’ ಎಂದೂ ತಿಳಿಸಿವೆ.

ಶೌಚಾಲಯ ನೆಪ: ಮಹಿಳೆಯರು ಪರಾರಿ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆತರಲಾಗಿದ್ದ ಮಹಿಳೆಯರಿಬ್ಬರು ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿಲ್ಸನ್ ಗಾರ್ಡನ್‌ನ ಎ. ಸುಜಾತಾ ಹಾಗೂ ಲಕ್ಷ್ಮಿದೇವಿ ಎಂಬುವರು ನ್ಯಾಯಾಲಯದ ಆವರಣದಿಂದ ಪರಾರಿಯಾಗಿದ್ದಾರೆ. ಈ ಬಗ್ಗೆ ಕೋರಮಂಗಲ ಠಾಣೆ ಹೆಡ್ ಕಾನ್‌ಸ್ಟೆಬಲ್ ಅಶೋಕ ಕುಮಾರ್ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳನ್ನು 41ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಲು ಜುಲೈ 11ರಂದು ಮಧ್ಯಾಹ್ನ ಕರೆತಂದಾಗ ಈ ಘಟನೆ ನಡೆದಿದೆ.

ಚಾಕು ಇರಿತ: ಮೆಕ್ಯಾನಿಕ್ ಸಾವು

ಶಿವಾಜಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು: ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಶಿವಾಜಿನಗರ ಠಾಣೆ ವ್ಯಾಪ್ತಿಯಲ್ಲಿ ಚಾಕು ಇರಿತದಿಂದ ಜವಾದ್ ಖಾನ್ (25) ಎಂಬುವರು ಮೃತಪಟ್ಟಿದ್ದು, ಈ ಸಂಬಂಧ ದಂಪತಿಯನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

‘ಸ್ಥಳೀಯ ನಿವಾಸಿ ಜವಾದ್ ಖಾನ್ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ. ಮೈ ಮೇಲಿನ ಗಾಯದ ಗುರುತು ಆಧರಿಸಿ ಕೊಲೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳು ಎನ್ನಲಾದ ಜಿಹಾನ್ ಹಾಗೂ ಇವರ ಪತ್ನಿ ಸಿಮ್ರಾನ್ ಅವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮನೆಗೆ ನುಗ್ಗಿದ್ದ ಜವಾದ್: ‘ಹವಾನಿಯಂತ್ರಕದ (ಎ.ಸಿ) ಮೆಕ್ಯಾನಿಕ್ ಆಗಿದ್ದ ಜವಾದ್, ವಿವಾಹಿತೆ ಸಿಮ್ರಾನ್ ಅವರ ಹಿಂದೆ ಬಿದ್ದಿದ್ದರು. ತಮ್ಮೊಂದಿಗೆ ಅಕ್ರಮ ಸಂಬಂಧವಿಟ್ಟುಕೊಳ್ಳುವಂತೆ ಒತ್ತಾಯಿಸಿ ಕಿರುಕುಳ ನೀಡಲಾರಂಭಿಸಿದ್ದರೆಂದು ಗೊತ್ತಾಗಿದೆ. ಶನಿವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಜವಾದ್ ಚಾಕು ಸಮೇತ ಸಿಮ್ರಾನ್ ಮನೆಗೆ ನುಗ್ಗಿದ್ದರೆಂಬುದಕ್ಕೆ ಪುರಾವೆಗಳು ಸಿಕ್ಕಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿಮ್ರಾನ್ ಜೊತೆ ಪತಿ ಜಿಹಾನ್ ಸಹ ಮನೆಯಲ್ಲಿದ್ದರು. ಜವಾದ್ ವರ್ತನೆಯನ್ನು ಪ್ರಶ್ನಿಸಿ ದಂಪತಿ ಮನೆಯಿಂದ ಹೋಗುವಂತೆ ಎಚ್ಚರಿಸಿದ್ದರು. ಅದಕ್ಕೆ ಒಪ್ಪದ ಜವಾದ್, ದಂಪತಿ ಜೊತೆ ಜಗಳ ತೆಗೆದಿದ್ದರು. ತಳ್ಳಾಟ–ನೂಕಾಟ ನಡೆದಿತ್ತು. ಇದೇ ವೇಳೆಯೇ ಜವಾದ್ ಕುತ್ತಿಗೆಗೆ ಚಾಕು ಚುಚ್ಚಿದ್ದರಿಂದ ರಕ್ತ ಸೋರಲಾರಂಭಿಸಿತ್ತು.’

‘ಪ್ರಾಣ ಹೋಗುವ ಭಯದಲ್ಲಿ ಜವಾದ್ ಮನೆಯಿಂದ ಹೊರಗೆ ಬಂದು ಆಸ್ಪತ್ರೆಯತ್ತ ಓಡಿದ್ದರು. ಆಸ್ಪತ್ರೆ ಬಾಗಿಲು ಬಳಿಯೇ ಕುಸಿದು ಬಿದ್ದು, ಮೃತಪಟ್ಟಿದ್ದರು. ಈತನ ಸಾವಿನ ಬಗ್ಗೆ ವೈದ್ಯರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ಹೇಳಿವೆ.

‘ದಂಪತಿಯೇ ಜವಾದ್ ಅವರಿಗೆ ಚಾಕುವಿನಿಂದ ಇರಿದರೋ ಅಥವಾ ಜವಾದ್ ಅವರೇ ಇರಿದುಕೊಂಡರೋ ಎಂಬ ಬಗ್ಗೆ ಗೊಂದಲಗಳಿವೆ. ದಂಪತಿ ವಿಚಾರಣೆಯಿಂದಲೇ ನಿಜಾಂಶ ತಿಳಿಯಬೇಕಿದೆ’ ಎಂದೂ ತಿಳಿಸಿವೆ.

‘ಮನೆ ಸ್ಥಳಾಂತರ ನೆಪದಲ್ಲಿ ಸ್ನೇಹ’

‘ಜವಾದ್, ಎ.ಸಿ ದುರಸ್ತಿಗೆಂದು ಜಿಹಾನ್ ಹಾಗೂ ಸಿಮ್ರಾನ್ ದಂಪತಿ ಮನೆಗೆ ಹೋಗಿದ್ದರು. ಇದೇ ವೇಳೆಯೇ ಸಿಮ್ರಾನ್ ಅವರನ್ನು ಮಾತನಾಡಿಸಿದ್ದರು. ದಂಪತಿ ಮನೆ ಖಾಲಿ ಮಾಡಲು ತೀರ್ಮಾನಿಸಿದ್ದರು. ಹೊಸ ಮನೆ ಹುಡುಕಿಕೊಡುವುದಾಗಿ ಹೇಳಿದ್ದ ಜವಾದ್, ಸಿಮ್ರಾನ್ ಸ್ನೇಹ ಬೆಳೆಸಲು ಯತ್ನಿಸಿದ್ದರೆಂಬುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜವಾದ್ ಕಿರುಕುಳದ ವಿರುದ್ಧ ದಂಪತಿ ಶಿವಾಜಿನಗರ ಠಾಣೆಗೆ ಈ ಹಿಂದೆ ದೂರು ಸಹ ನೀಡಿದ್ದರು. ಜವಾದ್ ಅವರನ್ನು ಠಾಣೆಗೆ ಕರೆಸಿದ್ದ ಪೊಲೀಸರು, ಮುಚ್ಚಳಿಕೆ ಬರೆಸಿಕೊಂಡು ಕಳುಹಿಸಿದ್ದರೆಂಬ ಮಾಹಿತಿ ಇದೆ’ ಎಂದೂ ತಿಳಿಸಿವೆ.

ಬಾಲಕಿ ಮದುವೆಯಾಗಲು ಯತ್ನ: ದಾಖಲೆ ತಿದ್ದಿದ್ದ ಆರೋಪಿ ಬಂಧನ

ಬೆಂಗಳೂರು: ಬಾಲಕಿ ಮದುವೆಯಾಗಬೇಕೆಂದು ಆಕೆಯ ಜನ್ಮ ದಿನಾಂಕದ ದಾಖಲೆ ತಿದ್ದಿದ್ದ ಆರೋಪದಡಿ ಮನು ಎಂಬಾತನನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಲಗ್ಗೆರೆ ಉಪ ನೋಂದಣಾಧಿಕಾರಿ ಕಚೇರಿಗೆ ಬಾಲಕಿ ಸಮೇತ ಬಂದಿದ್ದ ಮನು, ವಿವಾಹ ನೋಂದಣಿ ಮಾಡಿಸಲು ದಾಖಲೆಗಳನ್ನು ನೀಡಿದ್ದರು. ಮನು ಹಾಗೂ ಬಾಲಕಿ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದರು. ಬಾಲಕಿಯ ವಯಸ್ಸಿನ ದಾಖಲೆ ತಿದ್ದಿರುವುದು ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು. ಆರೋಪಿ ಮನುವನ್ನು ಬಂಧಿಸಲಾಗಿದೆ. 18 ವರ್ಷ ವಯಸ್ಸಾಗದ ಬಾಲಕಿಯನ್ನು ಮದುವೆಯಾಗುವ ಉದ್ದೇಶದಿಂದ, ಜನ್ಮ ದಿನಾಂಕದ ದಾಖಲೆಯನ್ನು ನಿಯಮಬಾಹಿರವಾಗಿ ತಿದ್ದಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ’ ’ ಎಂದು ಮೂಲಗಳು ಹೇಳಿವೆ..

₹2.20 ಲಕ್ಷ ಪಡೆದು ವಂಚನೆ

ಬೆಂಗಳೂರು: ಮದುವೆಯಾಗಬೇಕಾದ ಹುಡುಗನನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧಿಸಿರುವುದಾಗಿ ಹೇಳಿ ನಗರದ ಯುವತಿಯೊಬ್ಬರಿಂದ ₹ 2.20 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಸವನಗುಡಿ ನಿವಾಸಿಯಾಗಿರುವ 29 ವರ್ಷದ ಯುವತಿ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ನೀಲ್ ಯಶ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ಮದುವೆ ಬಗ್ಗೆ ಮಾತನಾಡಲೆಂದು ಭಾರತಕ್ಕೆ ಬರುವುದಾಗಿ ನೀಲ್ ಯಶ್ ಎಂಬಾತ ಹೇಳಿದ್ದ. ಇದಾಗಿ ಎರಡು ದಿನಗಳ ನಂತರ ಯುವತಿಗೆ ಕರೆ ಮಾಡಿದ್ದ ಅಪರಿಚಿತ ಮಹಿಳೆಯೊಬ್ಬರು, ‘ನಿಮಗೆ ಪರಿಚಯವಿರುವ ನೀಲ್ ಯಶ್ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿದ್ದಾರೆ. ಅವರನ್ನು ಬಿಡುಗಡೆ ಮಾಡಲು ಕಸ್ಟಮ್ಸ್ ಶುಲ್ಕ ಪಾವತಿಸಬೇಕು’ ಎಂದಿದ್ದರು. ಅದಕ್ಕೆ ಒಪ್ಪಿದ್ದ ಯುವತಿ ಹಣ ಪಾವತಿಸಿದ್ದರು. ಬಳಿಕ ಮೊಬೈಲ್ ಸ್ವಿಚ್ ಆಫ್ ಆಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ನೆಲಮಂಗಲ ತಾಲ್ಲೂಕಿನ ಗೊಲ್ಲಹಳ್ಳಿ ಬೈಲಾಂಜನೇಯ ಸರ್ಕಾರಿ ಶಾಲೆಯಲ್ಲಿ ಕೆಪಿಸಿಸಿ ವೀಕ್ಷಕ ಎನ್.ಶ್ರೀನಿವಾಸ್ ನೋಟ್‌ಬುಕ್ ಹಾಗೂ ಬ್ಯಾಗ್‌ಗಳನ್ನು ವಿತರಿಸಿದರು. ಚಿತ್ರದಲ್ಲಿ ಸಿ.ಆರ್.ಗೌಡ, ವಿಧಾನ ಪರಿಷತ್ ಸದಸ್ಯರಾದ ರವಿ, ಬಿಎಂಎಲ್ ಕಾಂತರಾಜು, ಎಂ.ಕೆ.ನಾಗರಾಜು ಇದ್ದಾರೆ

‘ಕಾಳಜಿ ತೋರದ ಸರ್ಕಾರ’

ನೆಲಮಂಗಲ: ಶಾಲೆಗಳು ಪ್ರಾರಂಭವಾದರೂ ಪಠ್ಯಪುಸ್ತಕ, ಸೈಕಲ್, ಶೂ ವಿತರಿಸಿಲ್ಲ. ಸರ್ಕಾರಕ್ಕೆ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇಲ್ಲ. ಮಹಾಪುರುಷರ ಇತಿಹಾಸಗಳನ್ನು ತಿರುಚುವ ಮೂಲಕ ಶಿಕ್ಷಣವನ್ನು ಕೇಸರೀಕರಣ ಮಾಡಲು ಹೊರಟಿದೆ ಎಂದು ವಿಧಾನಪರಿಷತ್ ಸದಸ್ಯ ರವಿ ಆರೋಪಿಸಿದರು.

ತಾಲ್ಲೂಕಿನ ಗೊಲ್ಲಹಳ್ಳಿ ಬೈಲಾಂಜನೇಯ ಸರ್ಕಾರಿ ಶಾಲೆಯಲ್ಲಿ ನೋಟ್‌ಬುಕ್ ಹಾಗೂ ಬ್ಯಾಗ್ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಧಾನಪರಿಷತ್ ಸದಸ್ಯ ಬಿಎಂಎಲ್ ಕಾಂತರಾಜು ಮಾತನಾಡಿ, ’ಸ್ಥಳೀಯ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಹ್ಯಾಟ್ರಿಕ್ ಗೆಲುವು ಸಾಧಿಸುವುದು ಕಷ್ಟಸಾಧ್ಯ. ರಾಜಕೀಯ ಧ್ರುವೀಕರಣ ಆಗುವುದು ನಿಶ್ಚಿತ. ರಾಜ್ಯದಲ್ಲಿ ಜೆಡಿಎಸ್ 100ರಿಂದ 120 ಕ್ಷೇತ್ರ ಗೆಲ್ಲುವ ಶಕ್ತಿ ಹೊಂದಿಲ್ಲ‘ ಎಂದರು.

ಕೆಪಿಸಿಸಿ ವೀಕ್ಷಕ ಎನ್.ಶ್ರೀನಿವಾಸ್, ’ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ತೊಡಕಾಗಬಾರದೆಂದು ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಬ್ಯಾಗ್ ವಿತರಿಸಲು ಮುಂದಾಗಿದ್ದೇನೆ‘ ಎಂದರು.

ಗೊಲ್ಲಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಟ್ಟೆಪಾಳ್ಯ, ಹ್ಯಾಡಾಳ್, ಅರ್ಜುನ ಬೆಟ್ಟಹಳ್ಳಿ, ಬೋಳಮಾರನಹಳ್ಳಿ, ಬೆಟ್ಟಹಳ್ಳಿ, ಮೈಲನಹಳ್ಳಿ, ಬೆಟ್ಟಹಳ್ಳಿಪಾಳ್ಯ ಶಾಲೆಗಳಲ್ಲಿ ವಿತರಿಸಲಾಯಿತು.

ವರದನಾಯಕನಹಳ್ಳಿ ನಾಗರಾಜು, ಎಂ.ಕೆ.ನಾಗರಾಜು, ಸಿ.ಆರ್.ಗೌಡ, ಬಮೂಲ್ ನಿರ್ದೇಶಕ ಭಾಸ್ಕರ್ ಇದ್ದರು.

ಲಕ್ಷ ಅನಾಥ ಶವಸಂಸ್ಕಾರ ಮಾಡಿದ್ದ ಮಹದೇವ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾಥ ಶವಗಳ ಅಂತ್ಯಸಂಸ್ಕಾರ ನೆರವೇರಿಸುತ್ತಿದ್ದ ಎಂ. ಮಹದೇವ್ (59) ಅವರು ಅನಾರೋಗ್ಯದಿಂದಾಗಿ ಗುರುವಾರ (ಜುಲೈ 14) ನಿಧನರಾದರು.

ರಾಜರಾಜೇಶ್ವರಿನಗರದಲ್ಲಿ ನೆಲೆಸಿದ್ದ ಮಹದೇವ್ ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಮಹದೇವ್ ಅವರನ್ನು ಕೆಲ ದಿನಗಳ ಹಿಂದೆಯಷ್ಟೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು.

9ನೇ ವಯಸ್ಸಿನಿಂದಲೇ ಅನಾಥ ಶವಗಳ ಅಂತ್ಯಸಂಸ್ಕಾರ ನೆರವೇರಿಸಲಾರಂಭಿಸಿದ್ದ ಮಹದೇವ್ ಅವರಿಗೆ ವಿಕ್ಟೋರಿಯಾ ಆಸ್ಪತ್ರೆಯೇ ಮನೆಯಂತಾಗಿತ್ತು. ಅಪಘಾತ, ಆತ್ಮಹತ್ಯೆ ಹೀಗೆ ಹಲವು ಕಾರಣಗಳಿಂದ ಮೃತಪಡುತ್ತಿದ್ದ ಅನಾಥ ಶವಗಳನ್ನು ಮರಣೋತ್ತರ ಪರೀಕ್ಷೆ ಬಳಿಕ ಕೊಂಡೊಯ್ಯುತ್ತಿದ್ದ ಮಹದೇವ, ಸಂಬಂಧಿಕರ ಸ್ಥಾನದಲ್ಲಿ ನಿಂತು ಅಂತ್ಯಸಂಸ್ಕಾರ ನೆರವೇರಿಸುತ್ತಿದ್ದರು. ಪೊಲೀಸರು ಹಾಗೂ ವೈದ್ಯರು ಮಹದೇವ ಅವರನ್ನು ‘ಅನಾಥ ಶವಗಳ ತ್ರಿವಿಕ್ರಮ‘ ಎಂದೇ ಕರೆಯುತ್ತಿದ್ದರು.

ಎಂ. ಮಹದೇವ್

ಶವಗಳನ್ನು ಆಟೊದಲ್ಲಿ ಸ್ಮಶಾನಕ್ಕೆ ಸಾಗಿಸುತ್ತಿದ್ದ ಮಹದೇವ್ ಅವರಿಗೆ ಐಎಎಸ್ ಅಧಿಕಾರಿ ಮದನ್ ಗೋಪಾಲ್, ಒಮ್ನಿ ವಾಹನ ನೀಡಿದ್ದರು. ನಂತರ, ಅದರಲ್ಲೇ ಶವ ಸಾಗಣೆ ಮುಂದುವರಿದಿತ್ತು. 51 ವರ್ಷಗಳ ನಿರಂತರ ಕೆಲಸದಲ್ಲಿ ಮಹದೇವ ಅವರು 1 ಲಕ್ಷಕ್ಕಿಂತ ಹೆಚ್ಚು ಅನಾಥ ಶವಗಳ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆಂದು ವಿಕ್ಟೋರಿಯಾ ಆಸ್ಪತ್ರೆ ವೈದ್ಯರು ಹೇಳುತ್ತಾರೆ.

ಮಹದೇವ್ ಅವರ ಕೆಲಸಕ್ಕೆ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಶಸ್ತಿ ಲಭಿಸಿತ್ತು.

ಮಕ್ಕಳಿಂದ ಕೆಲಸ ಮುಂದುವರಿಕೆ: ಮಹದೇವ್ ಅವರ ಕೆಲಸವನ್ನು ಮಕ್ಕಳಾದ ಪ್ರವೀಣ್ ಹಾಗೂ ಕಿರಣ್ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

‘1 ತಿಂಗಳಿನಿಂದ ತಂದೆಗೆ ಹುಷಾರು ಇರಲಿಲ್ಲ. ಆಸ್ಪತ್ರೆಯಲ್ಲಿ ಇರುವಾ ಗಲೂ ಅವರು ಅನಾಥ ಶವಗಳ ಬಗ್ಗೆಯೇ ಹೆಚ್ಚು ಯೋಚಿಸುತ್ತಿದ್ದರು. ನಾನು ಹಾಗೂ ಅಣ್ಣ ಸೇರಿಕೊಂಡು ಅನಾಥ ಶವಗಳಸಂಸ್ಕಾರ ಮಾಡುತ್ತಿದ್ದೇವೆ. ತಂದೆಯ ಕೆಲಸವನ್ನು ಮುಂದುವರಿಸಿದರೆ, ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ’ ಎಂದು ಮಗ ಕಿರಣ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬೈರತಿ ಸುರೇಶ್ ವಿರುದ್ಧ ಕಟ್ಟಾ ಸುಬ್ರಮಣ್ಯ ನಾಯ್ಡು ಆರೋಪ

‘ಹೆಬ್ಬಾಳ ಕ್ಷೇತ್ರದಲ್ಲಿ ಶೇ 60ರಷ್ಟು ಭ್ರಷ್ಟಾಚಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕ ಬೈರತಿ ಸುರೇಶ್ ಭಾರಿ ಭ್ರಷ್ಟಾಚಾರ ನಡೆಸುತ್ತಿದ್ದು, ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನದಲ್ಲಿ ಶೇಕಡ 60ರಷ್ಟು ಲೂಟಿಯಾಗುತ್ತಿದೆ ಎಂದು ಆ ಕ್ಷೇತ್ರದ ಮಾಜಿ ಶಾಸಕರೂ ಆಗಿರುವ ಬಿಜೆಪಿ ಮುಖಂಡ ಕಟ್ಟಾ ಸುಬ್ರಮಣ್ಯ ನಾಯ್ಡು ಆರೋಪಿಸಿದರು.

ಕಟ್ಟಾ ಸುಬ್ರಮಣ್ಯ ನಾಯ್ಡು

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹೆಬ್ಬಾಳ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಇತ್ತೀಚೆಗೆ ಬಿಡುಗಡೆಯಾದ ₹650 ಕೋಟಿ ಅನುದಾನದಲ್ಲಿ ಬಹುಪಾಲು ಮೊತ್ತದಲ್ಲಿ ಕೆಲಸವನ್ನೇ ಮಾಡಿಲ್ಲ. ಶೇ 40ರಷ್ಟು ಮಾತ್ರ ಕೆಲಸ ನಡೆದಿದೆ. ಗುತ್ತಿಗೆದಾರರು ಲಂಚ ಕೊಡಲೇ ಬೇಕಾದ ಸ್ಥಿತಿ ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿದೆ. ಹಣ ಕೊಡದಿದ್ದರೆ ಶಾಸಕರು ಕಾಮಗಾರಿಯ ಭೂಮಿಪೂಜೆಗೆ ಬರುವುದೇ ಇಲ್ಲ. ಕಾಮಗಾರಿಗಳ ಕುರಿತು ಮಾಹಿತಿ ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದರೂ ದಾಖಲೆ ನೀಡುತ್ತಿಲ್ಲ’ ಎಂದು ದೂರಿದರು.

ಎಸಿಬಿ ತನಿಖೆಗೆ ಆಗ್ರಹ: ಹೆಬ್ಬಾಳ ಕ್ಷೇತ್ರದಲ್ಲಿ ನಡೆದಿರುವ ಅನುದಾನ ದುರ್ಬಳಕೆ ಕುರಿತು ದಾಖಲೆ ಸಂಗ್ರಹಿಸಲಾಗುತ್ತಿದೆ. ಈ ಕುರಿತು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆಗೆ ಆದೇಶಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಗುವುದು. ಬೈರತಿ ಸುರೇಶ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಅವರನ್ನು ಬಂಧಿಸಬೇಕು ಎಂದು ನಾಯ್ಡು ಆಗ್ರಹಿಸಿದರು.

ಅಧಿಕಾರ ದುರ್ಬಳಕೆ: ‘ನಾನು ಹೆಬ್ಬಾಳ ಕ್ಷೇತ್ರದ ಶಾಸಕನಾಗಿದ್ದ ಅವಧಿಯಲ್ಲಿ ಅಲ್ಲಿನ ಕೊಳೆಗೇರಿ ನಿವಾಸಿಗಳಿಗೆ ಮನೆಗಳ ಹಕ್ಕುಪತ್ರ ಕೊಡಿಸಿದ್ದೆ. ಈಗ ಶಾಸಕರು ಅಧಿಕಾರ ದುರ್ಬಳಕೆ ಮಾಡಿಕೊಂಡು ತಮ್ಮ ಭಾವಚಿತ್ರ ಮುದ್ರಿಸಿಕೊಂಡು ಅದೇ ಫಲಾನುಭವಿಗಳಿಗೆ ಹಕ್ಕುಪತ್ರ ಹಂಚುತ್ತಿದ್ದಾರೆ’ ಎಂದು ಆರೋಪಿಸಿದರು.

‘ಕಟ್ಟಾ ವಿರುದ್ಧ ಇರುವ ಪ್ರಕರಣಗಳೆಷ್ಟು?’

ಬೆಂಗಳೂರು: ತಮ್ಮ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿರುವ ಕಟ್ಟಾ ಸುಬ್ರಮಣ್ಯ ನಾಯ್ಡು ವಿರುದ್ಧ ಪತ್ರಿಕಾ ಹೇಳಿಕೆ ಮೂಲಕ ತೀವ್ರ ವಾಗ್ದಾಳಿ ನಡೆಸಿರುವ ಶಾಸಕ ಬೈರತಿ ಸುರೇಶ್, ‘ಕಟ್ಟಾ ಅವರೇ, ಭ್ರಷ್ಟಾಚಾರದ ಆರೋಪದಡಿ ನಿಮ್ಮ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳೆಷ್ಟು’ ಎಂದು ಪ್ರಶ್ನಿಸಿದ್ದಾರೆ.

ಬೈರತಿ ಸುರೇಶ್

ಕಟ್ಟಾ ಅವರಿಗೆ 15 ಪ್ರಶ್ನೆಗಳನ್ನು ಕೇಳಿರುವ ಸುರೇಶ್, ‘ಹೆಬ್ಬಾಳ ವ್ಯಾಪ್ತಿಯ ಕುಂತಿ ಗ್ರಾಮದಲ್ಲಿ ನೀವು ಅಕ್ರಮವಾಗಿ ಸರ್ಕಾರಿ ಜಮೀನಿಗೆ ₹ 200 ಕೋಟಿ ಮೌಲ್ಯದ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನು (ಟಿಡಿಆರ್) ಪಡೆದಿರುವ ಪ್ರಕರಣದ ನ್ಯಾಯಾಲಯದ ವಿಚಾರಣೆ ಯಾವ ಹಂತದಲ್ಲಿದೆ’ ಎಂದು ಕೇಳಿದ್ದಾರೆ.

‘ಕೆಐಎಡಿಬಿ ಭೂ ಹಗರಣದಲ್ಲಿ ಲೋಕಾಯುಕ್ತ, ಜಾರಿ ನಿರ್ದೇಶನಾಲಯದ ನಡೆಸುತ್ತಿರುವ ತನಿಖೆಗಳು ಯಾವ ಹಂತದಲ್ಲಿವೆ? ವೈದ್ಯಕೀಯ ಕಾರಣ ನೀಡಿ ಜಾಮೀನು ಪಡೆದಿರುವ ನೀವು ಈಗಲೂ ಚಿಕಿತ್ಸೆ ಪಡೆಯುತ್ತಿದ್ದೀರಾ? ಅಥವಾ ಸಾಮಾನ್ಯ ಜಾಮೀನು ಪಡೆದಿದ್ದೀರಾ’ ಎಂದು ಪ್ರಶ್ನಿಸಿದ್ದಾರೆ.

‘ಹೆಬ್ಬಾಳ ಕ್ಷೇತ್ರಕ್ಕೆ ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನನ್ನನ್ನು ‘ಅತ್ಯುತ್ತಮ ಶಾಸಕ’ ಎಂದು ಸಾರ್ವಜನಿಕ ವೇದಿಕೆಯಲ್ಲೇ ಪ್ರಶಂಸಿಸಿದ್ದರು. ಇದಕ್ಕೆ ನಿಮ್ಮ ಅಭಿಪ್ರಾಯವೇನು’ ಎಂದು ಕೇಳಿದ್ದಾರೆ.

ಚಿತ್ರಾವಳಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಆಯುರ್ವೇದ ವೈದ್ಯ ಹಾಗೂ ಲೇಖಕ ಡಾ.ಎನ್‌.ಅನಂತರಾಮನ್ ತಮ್ಮ ಜೀವನಾನುಭವ ಹಂಚಿಕೊಂಡರು. ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಮತ್ತು ವೈದ್ಯ ಡಾ.ಎಚ್‌.ಎಸ್‌.ಶ್ರೀಪ್ರಸಾದ್ ಇದ್ದಾರೆ – ಪ್ರಜಾವಾಣಿ ಚಿತ್ರ

ಪೆಟ್ ಪ್ರಾಕ್ಟೀಷನರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ರಾಷ್ಟ್ರೀಯ ಪಶುವೈದ್ಯಕೀಯ ಪ್ರತಿಷ್ಠಾನದ ವತಿಯಿಂದ ಜುಲೈ 15ರಿಂದ 17ರ ವರೆಗೆ ಮಾನ್ಯತಾ ಟೆಕ್ ಪಾರ್ಕ್‌ನ ಹೋಟೆಲ್ ಹಿಲ್ಟನ್ ಗಾರ್ಡನ್‌ನಲ್ಲಿ ‘ವೆಟೊಪಿಯಾ–2022’ ವಿಚಾರಸಂಕಿರಣ ನಡೆಯುತ್ತಿದೆ. ದೇಶದ 500ಕ್ಕೂ ಹೆಚ್ಚು ಪಶು ವೈದ್ಯಕೀಯ ತಜ್ಞರು ಇದರಲ್ಲಿ ಭಾಗವಹಿಸಿದ್ದಾರೆ

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕ ವಿಜ್ಞಾನ ಹಾಗೂ ತಂತ್ರಜ್ಞಾನ ಅಕಾಡೆಮಿ ಮುಖ್ಯಸ್ಥ ಪ್ರೊ.ಎಸ್‌.ಅಯ್ಯಪ್ಪನ್ ಅವರು ವಿದ್ಯಾರ್ಥಿನಿಗೆ ಪದವಿ ಪ್ರದಾನ ಮಾಡಿದರು. ವಿಜ್ಞಾನಿ ಡಾ.ಎಲ್‌.ಎಂ.ಪಟ್ನಾಯಕ್, ಅಧ್ಯಕ್ಷ ಸಿ.ಎನ್‌.ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಕೋನಪ್ಪರೆಡ್ಡಿ, ಎಂ.ಪುಟ್ಟಸ್ವಾಮಿ, ಡಾ.ಎಂ.ಯು.ಅಶ್ವತ್ಥ್ ಹಾಜರಿದ್ದರು

ಸಾರಿಗೆ: ಎಲ್ಲವೂ ಆನ್‌ಲೈನ್ ಸರ್ವರ್ ಆಫ್‌ಲೈನ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ವಾಹನ ಚಾಲನಾ ಕಲಿಕಾ ಪರವಾನಗಿಯಿಂದ ಆದಿಯಾಗಿ ವಾಹನ ನೋಂದಣಿ ತನಕ ಸಾರಿಗೆ ಇಲಾಖೆಯ ಎಲ್ಲಾ ಸೇವೆಗಳು ಈಗ ಆನ್‌ಲೈನ್. ಆದರೆ, ಸರ್ವರ್ ಮಾತ್ರ ಆಫ್‌ಲೈನ್. ಆಗಾಗ ಕಾಡುವ ಸರ್ವರ್ ಡೌನ್ ಸಮಸ್ಯೆ ಜನರನ್ನು ಹೈರಾಣಾಗಿಸಿದೆ.

ಚಾಲನಾ ಪರವಾನಗಿ, ಕಲಿಕಾ ಪರವಾನಗಿ, ಕಂಡಕ್ಟರ್ ಪರವಾನಗಿ, ವಾಹನ ನೋಂದಣಿ, ಫ್ಯಾನ್ಸಿ ನಂಬರ್, ನ್ಯಾಷನಲ್ ಪರ್ಮಿಟ್, ವಾಹನಗಳ ಎಫ್‌ಸಿ (ಫಿಟ್‌ನೆಸ್ ಸರ್ಟಿಫಿಕೇಟ್), ತೆರಿಗೆ ಪಾವತಿ ಸೇರಿ ಎಲ್ಲಾ ಸೇವೆಗಳನ್ನೂ ಈಗ ಆನ್‌ಲೈನ್ ಮಾಡಲಾಗಿದೆ. ‘ಪರಿವಾಹನ’ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ದಾಖಲೆಗಳನ್ನು ಪರಿಶೀಲಿಸಿ ಅಧಿಕಾರಿಗಳು ಆನ್‌ಲೈನ್‌ನಲ್ಲೇ ಅನುಮೋದನೆ ನೀಡುತ್ತಾರೆ.

ಮಧ್ಯವರ್ತಿಗಳು ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಈ ಪ್ರಯತ್ನವನ್ನು ಸಾರಿಗೆ ಇಲಾಖೆ ಮಾಡಿದೆ. ಈ ವ್ಯವಸ್ಥೆ ಅನುಷ್ಠಾನಕ್ಕೆ ಬಂದ ಬಳಿಕ ಸಾರಿಗೆ ಇಲಾಖೆ ಕಚೇರಿಗೆ ಬರುವ ಜನ ಕಡಿಮೆಯಾಗಿದ್ದಾರೆ. ಆದರೆ, ಸಾರಿಗೆ ಇಲಾಖೆ ಸುತ್ತಮುತ್ತ ತಲೆ ಎತ್ತಿದ್ದ ಕಂಪ್ಯೂಟರ್ ಸೆಂಟರ್‌ಗಳಲ್ಲಿ ಜನ ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ ಬಂದಿದೆ.

ವಾಹನಕ್ಕೆ ಎಫ್‌ಸಿ ಮಾಡಿಸಬೇಕೆಂದರೆ ವಾಯು ಮಾಲಿನ್ಯ ತಪಾಸಣೆ ಕಡ್ಡಾಯ. ಅದೂ ಕೂಡ ಆನ್‌ಲೈನ್ ವ್ಯವಸ್ಥೆಯೇ ಆಗಿದೆ, ಸರ್ವರ್ ಡೌನ್ ಆದರೆ ಎಲ್ಲವೂ ವಿಳಂಬ. ಇಷ್ಟೆಲ್ಲಾ ಸೇವೆಗಳನ್ನು ಆನ್‌ಲೈನ್ ಮಾಡಿರುವ ಸಾರಿಗೆ ಇಲಾಖೆ, ಸಾಫ್ಟ್‌ವೇರ್ ಸಾಮರ್ಥ್ಯ ಹೆಚ್ಚಿಸುವ ಕೆಲಸ ಮಾಡಿಲ್ಲ. ಆನ್‌ಲೈನ್ ವ್ಯವಸ್ಥೆಗೆ ಒಗ್ಗಿಕೊಳ್ಳಲು ಸಾರಿಗೆ ಇಲಾಖೆ ಅಧಿಕಾರಿಗಳು ಮತ್ತು ಜನಸಾಮಾನ್ಯರು ಪರದಾಡುವಂತಾಗಿದೆ.

ಸಾರಿಗೆ ಇಲಾಖೆ ಕಚೇರಿಗಳಲ್ಲೂ ಸರ್ವರ್ ಡೌನ್ ಸಮಸ್ಯೆ ಸಿಬ್ಬಂದಿಯನ್ನು ಕಾಡುತ್ತಿದೆ. ಅರ್ಜಿಗಳನ್ನು ಪರಿಶೀಲಿಸಲು ಸಾಧ್ಯವಾಗದೆ ಒದ್ದಾಟ ನಡೆಸಬೇಕಾದ ಪರಿಸ್ಥಿತಿ ಇದೆ. ‘12 ವರ್ಷಗಳ ಹಿಂದೆ ಖರೀದಿಸಿದ್ದ ಕಂಪ್ಯೂಟರ್‌ಗಳು ನಮ್ಮ ಕಚೇರಿಯಲ್ಲಿವೆ. ಇಲಾಖೆಗೆ ಕಂಪ್ಯೂಟರ್ ಎಂಜಿನಿಯರ್ ನೇಮಕವೇ ಆಗಿಲ್ಲ. ಇರುವ ಒಬ್ಬ ತಾಂತ್ರಿಕ ಸಿಬ್ಬಂದಿ ಎಲ್ಲಾ ಕಂಪ್ಯೂಟರ್‌ಗಳ ಉಸ್ತುವಾರಿ ನೋಡಿಕೊಳ್ಳಬೇಕು. ಅವರು ರಜೆಯಲ್ಲಿದ್ದಾಗ ಸರ್ವರ್ ಕೈಕೊಟ್ಟರೆ ಅಂದಿನ ಕೆಲಸ ಅಲ್ಲೇ ಸ್ಥಗಿತಗೊಳ್ಳುತ್ತದೆ’ ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.

‘ಉದ್ದೇಶವೇನೋ ಸರಿಯಾಗಿದೆ. ಆದರೆ, ಅದಕ್ಕೆ ಪೂರಕವಾದ ಸಾಫ್ಟ್‌ವೇರ್ ವ್ಯವಸ್ಥೆ ಬೇಕು. ಎಲ್ಲಾ ಪೂರ್ವ ಸಿದ್ಧತೆ ಮಾಡಿಕೊಂಡು ಪ್ರಾಯೋಗಿಕವಾಗಿ ಪರಿಶೀಲನೆ ನಡೆಸಿ ಅನುಷ್ಠಾನಕ್ಕೆ ತಂದಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಏಕಾಏಕಿ ಆನ್‌ಲೈನ್ ವ್ಯವಸ್ಥೆಗೆ ಬದಲಾವಣೆ ಮಾಡಿದ್ದರಿಂದ ಜನ ಪರಿತಪಿಸುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿವಳಿಕೆ ಇಲ್ಲದವರು ಒಂದಕ್ಕೆ ನಾಲ್ಕರಷ್ಟು ಹಣ ಕಳೆದುಕೊಳ್ಳುವುದಲ್ಲದೇ, ಸೇವೆಗಾಗಿ ವಾರಗಟ್ಟಲೆ ಕಾಯುವ ಸ್ಥಿತಿ ಇದೆ’ ಎಂದು ವಿವರಿಸಿದರು.

ಪರೀಕ್ಷೆ ನೀವೇ ಬರೆಯಬೇಕಿಲ್ಲ

ವಾಹನ ಚಾಲನೆ ಕಲಿಕಾ ಪರವಾನಗಿ (ಎಲ್‌ಎಲ್‌ಆರ್) ಪಡೆಯಲು ಈಗ ಆನ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಪರವಾನಗಿ ಪಡೆಯಲು ಬಯಸುವವರು ತಾವೇ ದಾಖಲೆಗಳನ್ನು ತುಂಬಿ, ಆನ್‌ಲೈನ್ ಪರೀಕ್ಷೆ ಬರೆದು ಎಲ್‌ಎಲ್‌ಆರ್ ಪಡೆಯಬಹುದು.

ಆದರೆ, ಪರೀಕ್ಷೆ ಬರೆಯಬೇಕಾದರೆ ಕೆಲವು ಕಾನೂನು, ನಿಯಮಾವಳಿಗಳನ್ನು ಓದಬೇಕು. ಇದನ್ನು ಯಾರೂ ಇಷ್ಟಪಡುವುದಿಲ್ಲ. ಬದಲಿಗೆ ಚಾಲನಾ ತರಬೇತಿ ಸಂಸ್ಥೆಗಳಿಗೆ ಹೋಗಿ ಒಂದಷ್ಟು ದುಡ್ಡು ಕೊಡುತ್ತಾರೆ. ಈ ಸಂಸ್ಥೆಯ ಪ್ರತಿನಿಧಿಗಳು ‘ಸೇವಾ ಶುಲ್ಕ’ ಪಡೆದು, ಆನ್‌ಲೈನ್‌ನಲ್ಲಿ ದಾಖಲೆಗಳು ಅಪ್‌ಲೋಡ್ ಆಗುತ್ತಿದ್ದಂತೆ ಅಭ್ಯರ್ಥಿಯ ಸ್ಥಳದಲ್ಲಿ ತಾವೇ ಕುಳಿತು ಪರೀಕ್ಷೆ ಬರೆಯುತ್ತಾರೆ. ಹೀಗೆ ಪಡೆದ ಶುಲ್ಕದ ಒಂದು ಭಾಗ ಅಧಿಕಾರಿಗಳಿಗೆ ಸಲ್ಲುತ್ತದೆ. ‘ನಾವು ಪ್ರತಿ ತಿಂಗಳೂ ಇಂತಿಷ್ಟು ಹಣ ಕೊಡಲೇಬೇಕಾಗುತ್ತದೆ’ ಎನ್ನುತ್ತಾರೆ ಮಂಗಳೂರಿನ ಚಾಲನಾ ತರಬೇತಿ ಸಂಸ್ಥೆಯೊಂದರ ಪ್ರತಿನಿಧಿ.

ಅಂಕಿ–ಅಂಶ

1,30,809
ಒಂದು ವರ್ಷದ ಅವಧಿಯಲ್ಲಿ ಹೊಸದಾಗಿ ನೋಂದಣಿಯಾದ ವಾಹನಗಳ ಸಂಖ್ಯೆ

1,21,582
ಒಂದು ವರ್ಷದ ಅವಧಿಯಲ್ಲಿ ಹೊಸದಾಗಿ ನೋಂದಣಿಯಾದ ಸಾರಿಗೇತರ ವಾಹನಗಳು

9,227
ಒಂದು ವರ್ಷದ ಅವಧಿಯಲ್ಲಿ ಹೊಸದಾಗಿ ನೋಂದಣಿಯಾದ ಸಾರಿಗೆ ವಾಹನಗಳು

ಎಚ್‌ಎಸ್‌ಆರ್‌ಪಿ: ಏಕಸ್ವಾಮ್ಯದ ಅಪಾಯ

ಹೈ ಸೆಕ್ಯುರಿಟಿ ನೋಂದಣಿ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಅಳವಡಿಕೆ ಪರಿಪೂರ್ಣವಾಗಿ ಜಾರಿಯಾಗಿಲ್ಲ. ಇದರ ನಡುವೆ ನಂಬರ್ ಪ್ಲೇಟ್ ತಯಾರಿಕೆ ಒಂದೇ ಕಂಪನಿಗೆ ವಹಿಸಲು ಸರ್ಕಾರ ಸಿದ್ಧತೆ ನಡೆಸಿದೆ.

2019ರ ಏಪ್ರಿಲ್‌ನಿಂದ ಹೊಸ ವಾಹನಗಳಿಗಷ್ಟೇ ಹೈ ಸೆಕ್ಯುರಿಟಿ ನಂಬರ್ ಪ್ಲೇಟ್ ಅಳವಡಿಸಲಾಗುತ್ತಿದೆ. ಅದಕ್ಕೂ ಹಿಂದಿನ ವಾಹನಗಳನ್ನು ಈ ವ್ಯವಸ್ಥೆಗೆ ಪರಿವರ್ತಿಸುವ ಪ್ರಸ್ತಾಪ ಹಾಗೇ ಉಳಿದುಕೊಂಡಿದೆ. ರಾಜ್ಯದಲ್ಲಿ 1.7 ಕೋಟಿ ಹಳೆಯ ವಾಹನಗಳು ಎಚ್‌ಎಸ್‌ಆರ್‌ಪಿ ಆಗಿ ಬದಲಾಗಬೇಕಿದ್ದು, ಸುಮಾರು ₹600 ಕೋಟಿ ಮೊತ್ತದ ವ್ಯವಹಾರ ಇದಾಗಿದೆ.

2021ರ ಅಕ್ಟೋಬರ್‌ನಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿ ಟೆಂಡರ್ ಪ್ರಕ್ರಿಯೆ ಆರಂಭಿಸಿತ್ತು. ₹100 ಕೋಟಿಗೂ ಕಡಿಮೆ ವಹಿವಾಟು ಹೊಂದಿರುವ ಕಂಪನಿಗಳು ಭಾಗವಹಿಸದಂತೆ ನಿರ್ಬಂಧಿಸಿದ್ದ ಷರತ್ತಿನ ವಿರುದ್ಧ ನಂಬರ್ ಪ್ಲೇಟ್ ಮಾರಾಟಗಾರ ಕಂಪನಿಗಳು ದೂರು ನೀಡಿದ್ದವು.

ನಂಬರ್ ಪ್ಲೇಟ್ ತಯಾರಿಸುವ ಜವಾಬ್ದಾರಿಯನ್ನು ಒಂದೇ ಕಂಪನಿಗೆ ವಹಿಸುವ ಸಿದ್ಧತೆಯನ್ನು ಸಾರಿಗೆ ಇಲಾಖೆ ಮಾಡುತ್ತಿದೆ. ಅದರ ಜತೆಗೆ ಚಾಲನಾ ಪರವಾನಗಿ (ಡಿ.ಎಲ್) ಮತ್ತು ಆರ್.ಸಿ ಕಾರ್ಡ್‌ಗಳನ್ನು ಮುದ್ರಿಸಲು ನೆಲಮಂಗಲದ ಬಳಿ ಕೇಂದ್ರೀಕೃತ ಪ್ರೊಸೆಸಿಂಗ್ ಕೇಂದ್ರ ತೆರೆಯಲು ಸಿದ್ಧತೆ ನಡೆಸಿದೆ.

‘ನಂಬರ್ ಪ್ಲೇಟ್ ತಯಾರಿಸಲು ಒಂದೇ ಕಂಪನಿಗೆ ಅನುಮತಿ ನೀಡಿದರೆ ಮುಂದೆ ತೊಂದರೆ ಎದುರಾಗಲಿದೆ. ನಂಬರ್ ಪ್ಲೇಟ್‌ಗಾಗಿ ತಿಂಗಳುಗಟ್ಟಲೆ ಕಾಯಬೇಕಾದ ಸ್ಥಿತಿ ಬರಲಿದೆ. ಅದರ ಬದಲು ನಿರ್ದಿಷ್ಟ ಮಾರ್ಗಸೂಚಿ ಸಿದ್ಧಪಡಿಸಿ ಬೇರೆ ಬೇರೆ ಕಂಪನಿಗಳಿಗೆ ಅವಕಾಶ ನೀಡಿದರೆ ಜನರಿಗೆ ಸಕಾಲಕ್ಕೆ ನಂಬರ್ ಪ್ಲೇಟ್ ದೊರಕಿಸಲು ಸಾಧ್ಯ’ ಎಂದು ಸಾರಿಗೆ ತಜ್ಞರು ಹೇಳುತ್ತಾರೆ.

‘ಎಚ್‌ಎಸ್‌ಆರ್‌ಪಿ ನಿಯಮಗಳ ಪ್ರಕಾರ, ನಂಬರ್ ಪ್ಲೇಟ್ ಸ್ಕ್ಯಾನ್ ಮಾಡಿದರೆ ವಾಹನದ ಚಾಸಿ ಸಂಖ್ಯೆ, ಆರ್.ಸಿ. ಕಾರ್ಡ್ ಮಾಹಿತಿ ಸೇರಿ ಎಲ್ಲವೂ ಸಿಗಬೇಕು. ಆದರೆ, ಸದ್ಯ ಹೊಸ ವಾಹನಗಳಿಗೆ ಅಳವಡಿಕೆ ಆಗುತ್ತಿರುವ ನಂಬರ್ ಪ್ಲೇಟ್‌ಗಳಲ್ಲಿ ಯಾವ ಮಾಹಿತಿಯೂ ಸಿಗುವುದಿಲ್ಲ. ಹಳೇ ನಂಬರ್ ಪ್ಲೇಟ್ ಮತ್ತು ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್‌ಗೂ ವ್ಯತ್ಯಾಸವೇ ಇಲ್ಲ’ ಎಂದು ಸಾರಿಗೆ ಇಲಾಖೆ ಅಧಿಕಾರಿಗಳೇ ಹೇಳುತ್ತಾರೆ.

ಸುಲಿಗೆ ಕೇಂದ್ರವಾಗಿರುವ ಚೆಕ್‌ಪೋಸ್ಟ್!

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ರಾಜ್ಯ ಪ್ರವೇಶಿಸುವ ವಾಹನಗಳು ಅದರಲ್ಲೂ ಸರಕು ವಾಹನಗಳ ತಪಾಸಣೆಗಾಗಿ ಗಡಿಭಾಗಗಳಲ್ಲಿ ತೆರೆಯಲಾಗಿರುವ ಆರ್‌ಟಿಒ ಚೆಕ್‌ಪೋಸ್ಟ್‌ಗಳು, ಭ್ರಷ್ಟ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಜೇಬು ತುಂಬಿಸುವ ಕೇಂದ್ರಗಳಾಗಿ ಮಾರ್ಪಟ್ಟಿವೆ. ಲಾರಿ ಚಾಲಕರು, ಮಾಲೀಕರು ಕೂಡ ಇದಕ್ಕೆ ‘ಕೈ’ ಜೋಡಿಸಿರುವುದರಿಂದ ಯಾವುದೇ ಅಡ್ಡಿ- ಆತಂಕ ಇಲ್ಲದೇ ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತಿದೆ. ಪ್ರತಿದಿನ ಲಕ್ಷಾಂತರ ರೂಪಾಯಿ ಹರಿದಾಡುತ್ತಿದ್ದು, ಚೆಕ್‌ಪೋಸ್ಟ್‌ಗಳು ಇಲಾಖೆ ಪಾಲಿಗೆ ಅಕ್ಷಯ ಪಾತ್ರೆಯಂತಾಗಿವೆ.

ಮಹಾರಾಷ್ಟ್ರ, ತೆಲಂಗಾಣ, ಹೈದರಾಬಾದ್, ತಮಿಳುನಾಡು ಹಾಗೂ ಕೇರಳ ಮೂಲಕ ಬರುವ ಸರಕು ವಾಹನಗಳನ್ನು ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆಗೆ ಒಳಪಡಿಸಲಾಗುತ್ತದೆ. ಚಾಲನಾ ಪರವಾನಗಿ, ವಾಹನ ದಾಖಲೆಗಳ ತಪಾಸಣೆ, ವಾಣಿಜ್ಯ ತೆರಿಗೆ ಪಾವತಿಸಿದ ಬಿಲ್‌ಗಳು ವಾಹನದ ಕಂಡಿಷನ್, ಓವರ್‌ಲೋಡ್, ಇನ್ನಿತರ ಅಂಶಗಳ ಬಗ್ಗೆ ಅಧಿಕಾರಿಗಳು ಪರಿಶೀಲಿಸುತ್ತಾರೆ. ಯಾವುದಾದರೂ ನಿಯಮ ಉಲ್ಲಂಘಿಸಿದ್ದು ಕಂಡುಬಂದರೆ ಭಾರಿ ಪ್ರಮಾಣದ ದಂಡ ವಿಧಿಸುತ್ತಾರೆ. ಇಲ್ಲದಿದ್ದರೆ, ಹಣ ವಸೂಲಿಗೆ ಇಳಿಯುತ್ತಾರೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಮಹಾರಾಷ್ಟ್ರದಿಂದ ಸೊಲ್ಲಾಪುರ ಮಾರ್ಗವಾಗಿ ಬರುವ ಸರಕು ಲಾರಿಗಳು ವಿಜಯಪುರ ಜಿಲ್ಲೆಯ ಝಳಕಿ ಚೆಕ್‌ಪೋಸ್ಟ್ ಮೂಲಕ ರಾಜ್ಯ ಪ್ರವೇಶಿಸುತ್ತವೆ. ಪ್ರತಿದಿನ ಕನಿಷ್ಠ ಒಂದೂವರೆ ಸಾವಿರ ಲಾರಿಗಳು ಸಂಚರಿಸುತ್ತವೆ. ರಾಜ್ಯದಲ್ಲಿ ಅತಿಹೆಚ್ಚು ಹಣದ ಹೊಳೆ ಹರಿಯುವುದೇ ಈ ಚೆಕ್‌ಪೋಸ್ಟ್‌ನಲ್ಲಿ. ನಿಯಮ ಉಲ್ಲಂಘನೆಯ ಪ್ರಮಾಣದ ಮೇಲೆ ಲಂಚ ವಸೂಲಿ ಮಾಡಲಾಗುತ್ತಿದೆ. ಸಣ್ಣಪುಟ್ಟ ಲೋಪಕ್ಕಾಗಿ ₹ 500- ₹ 1000ವರೆಗೆ, ಲೋಪ ದೊಡ್ಡ ಪ್ರಮಾಣದ್ದಾಗಿದ್ದರೆ ₹5 ಸಾವಿರದಿಂದ ₹15 ಸಾವಿರ, ₹20 ಸಾವಿರದವರೆಗೂ ವಸೂಲಿ ಮಾಡುತ್ತಾರೆ. ರಾಜ್ಯದ ಇತರ ಚೆಕ್‌ಪೋಸ್ಟ್‌ಗಳ ಸ್ಥಿತಿಯು ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ ಎನ್ನುವುದು ಲಾರಿ ಚಾಲಕರ ಮಾತು.

ಅನಿವಾರ್ಯ: ‘ಹಣ ನೀಡದಿದ್ದರೆ ಅಧಿಕಾರಿಗಳು ಹತ್ತೆಂಟು ನಿಯಮ ಉಲ್ಲಂಘಿಸಿದ್ದಾರೆಂದು ದಂಡದ ರಸೀದಿ ಹರಿಯುತ್ತಾರೆ. ಇವು ಸುಳ್ಳೆಂದು ವಾದಿಸಲು ಕೋರ್ಟ್‌ಗೆ ಹೋಗಬೇಕಾಗುತ್ತದೆ. ಅಲ್ಲಿಯವರೆಗೆ ಲಾರಿ ವಶಕ್ಕೆ ಪಡೆಯುತ್ತಾರೆ. ಅದರಲ್ಲಿರುವ ಸರಕು ನಿಗದಿತ ಸಮಯದೊಳಗೆ ಖರೀದಿದಾರರಿಗೆ ತಲುಪಿಸಲು ಸಾಧ್ಯವಾಗುವುದಿಲ್ಲ. ಕೋರ್ಟ್‌ಗೆ ಹೋಗಿ ವಕೀಲರನ್ನು ಇಟ್ಟುಕೊಂಡು ವಾದಿಸಲು ನಮ್ಮ ಬಳಿ ಅಷ್ಟೊಂದು ಹಣವಾಗಲಿ, ಸಮಯವಾಗಲಿ ಇಲ್ಲ. ಹೀಗಾಗಿ ಅನಿವಾರ್ಯವಾಗಿ ಹಣ ನೀಡಿ, ಬರುತ್ತೇವೆ’ ಎಂದು ಝಳಕಿ ಚೆಕ್‌ಪೋಸ್ಟ್ ಬಳಿ ಲಾರಿ ಚಾಲಕರೊಬ್ಬರು ಹೇಳಿದರು.

ಭಾರಿ ಲಾಬಿ: ವಿಜಯಪುರದ ಝಳಕಿ ಚೆಕ್‌ಪೋಸ್ಟ್‌ಗೆ ಬರಲು ಆರ್‌ಟಿಒ ಅಧಿಕಾರಿಗಳು ಭಾರಿ ಲಾಬಿ ನಡೆಸುವ ವಿಚಾರ ಗುಟ್ಟಾಗಿ ಉಳಿದಿಲ್ಲ. ಮೇಲಧಿಕಾರಿಗಳಿಗೆ ಅಲ್ಲದೇ ರಾಜಕಾರಣಿಗಳಿಗೂ ‘ಕಪ್ಪ-ಕಾಣಿಕೆ’ ಸಂದಾಯ ಮಾಡಿ ಬರುತ್ತಾರೆ. ಇಲ್ಲಿ ಕೆಲಸ ಮಾಡಲು ಹಣ ಬಲದ ಜೊತೆ ರಾಜಕೀಯದ ಬಲವೂ ಬೇಕು. ಹೀಗೆ ಬಂದವರು, ಪ್ರತಿದಿನ ಲಕ್ಷ- ಲಕ್ಷಗಟ್ಟಲೆ ಎಣಿಸುತ್ತಾರೆ. ಇದರಲ್ಲಿ ಒಂದಿಷ್ಟು ಪಾಲು ಪೊಲೀಸರಿಗೆ ಹಾಗೂ ರಾಜಕಾರಣಿಗಳಿಗೂ ತಲುಪುತ್ತದೆ ಎನ್ನುವ ಮಾತು ಜನಜನಿತ.

ಟೋಕನ್ ವ್ಯವಸ್ಥೆಯೂ ಇದೆ...

ಚೆಕ್‌ಪೋಸ್ಟ್‌ಗಳಲ್ಲಿ ಹಣ ವಸೂಲಿ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ತಿಂಗಳಿಗೆ ಇಂತಿಷ್ಟು ಹಣ ಫಿಕ್ಸ್ ಮಾಡಿ ಲಾರಿ ಮಾಲೀಕರೇ ಆರ್‌ಟಿಒ ಅಧಿಕಾರಿಗಳಿಗೆ ನೀಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅವರ ಲಾರಿಗಳಿಗೆ ಟೋಕನ್ ನೀಡಲಾಗುತ್ತದೆ. ಇಂತಹ ಟೋಕನ್ ಇರುವ ಲಾರಿಗಳನ್ನು ಯಾವುದೇ ತಪಾಸಣೆಯಿಲ್ಲದೆ ಚೆಕ್‌ಪೋಸ್ಟ್‌ಗಳಲ್ಲಿ ಬಿಟ್ಟುಕಳುಹಿಸುತ್ತಾರೆ. ಟೋಕನ್ ಇಲ್ಲದ ವಾಹನಗಳಿಗೆ ದೊಡ್ಡ ಪ್ರಮಾಣದಲ್ಲಿ ದಂಡ ವಿಧಿಸುತ್ತಾರೆ ಅಥವಾ ಹಣ ವಸೂಲಿ ಮಾಡಿ ಕಳುಹಿಸುತ್ತಾರೆ

ಬಿ.ಚನ್ನಾರೆಡ್ಡಿ, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ

ಕಾಯಬೇಕಾದ ಅನಿವಾರ್ಯ

ಹೊರ ರಾಜ್ಯಗಳಿಗೆ ಹೋಗಲು ವಿಶೇಷ ಅನುಮತಿಯನ್ನು ಆನ್‌ಲೈನ್‌ನಲ್ಲೇ ಪಡೆಯಲು ಅವಕಾಶ ಇದೆ. ಆದರೆ, ಆ ರಾಜ್ಯಗಳ ಪೋರ್ಟಲ್‌ಗಳು ಬಂದ್ ಆಗಿದ್ದರೆ ಚೆಕ್‌ಪೋಸ್ಟ್‌ಗಳಲ್ಲಿ ಕಾಯಬೇಕಾದ ಸ್ಥಿತಿ ಮುಂದುವರಿದಿದೆ.

ಗಡಿಗಳಲ್ಲಿನ ಚೆಕ್‌ಪೋಸ್ಟ್‌ಗಳಲ್ಲೇ ಕಾದು ನಿಂತು ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಇಂದಿಗೂ ಇದೆ. ಎಲ್ಲಾ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ 2021ರ ಸೆಪ್ಟೆಂಬರ್‌ನಲ್ಲೇ ಆದೇಶ ನೀಡಿದೆ. ಆದರೂ ಆನ್‌ಲೈನ್ ವ್ಯವಸ್ಥೆ ಸಮರ್ಪಕವಾಗಿ ಇಲ್ಲದಿರುವುದರಿಂದ ಚೆಕ್‌ಪೋಸ್ಟ್‌ಗಳು ಉಳಿದುಕೊಂಡಿವೆ

ಕೆ. ರಾಧಾಕೃಷ್ಣ ಹೊಳ್ಳ, ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ

ಆರು ತಿಂಗಳಿಗಷ್ಟೇ ಪ್ರಮಾಣ ಪತ್ರ

‘ಮಾಲಿನ್ಯ ನಿಯಂತ್ರಣ’ದ ಗೋಲ್‌ಮಾಲ್

ಪ್ರಜಾವಾಣಿ ವಾರ್ತೆ

ತುಮಕೂರು: ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಹೊಗೆ ಉಗುಳುವ ವಾಹನದ ಪಕ್ಕದಲ್ಲಿ ಸುಸ್ಥಿತಿಯಲ್ಲಿ ಇರುವ ಮತ್ತೊಂದು ವಾಹನ ನಿಲ್ಲಿಸಿ, ಮಾಪಕದ ನಳಿಕೆಯನ್ನು ಇದೇ ವಾಹನದ ಸೈಲೆನ್ಸರ್ ಒಳಗೆ ಹಾಕಲಾಗುತ್ತದೆ. ಕ್ಯಾಮೆರಾವನ್ನು ಹೊಗೆ ಹೆಚ್ಚು ಉಗುಳುವ ವಾಹನದ ಮುಂದೆ ಹಿಡಿದು ತಪಾಸಣೆ ಮಾಡುತ್ತಿರುವಂತೆ ತೋರಿಸಿ ಪ್ರಮಾಣಪತ್ರ ಸಿದ್ಧಪಡಿಸುವ ಜಾಲ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿದೆ.

ಇಂತಹ ‘ಕಾರ್ಯವಿಧಾನ’ದಿಂದಾಗಿ ಎಷ್ಟೇ ಹೊಗೆ ಉಗುಳುವ ವಾಹನಕ್ಕಾದರೂ ಸುಲಭವಾಗಿ ಪ್ರಮಾಣ ಪತ್ರ ಪಡೆಯಬಹುದು ಎಂಬುದು ಜಾಲದ ಒಳಹೊರಗನ್ನೂ ಬಲ್ಲವರ ಅನುಭವದ ಮಾತುಗಳು.

ರಸ್ತೆಗಿಳಿಯುವ ಪ್ರತಿ ವಾಹನವೂ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರ ಹೊಂದಿರಬೇಕು. ಆದರೆ, ಈ ಪ್ರಮಾಣ ಪತ್ರವನ್ನು ನೀಡುವುದು ನೋಂದಾಯಿತ ಖಾಸಗಿ ಸಂಸ್ಥೆಯವರು. ಇದು ಭ್ರಷ್ಟಾಚಾರದ ಇನ್ನೊಂದು ಮೂಲ ಎನ್ನುತ್ತಾರೆ ಅನುಭವಸ್ಥರು.

ಸಾರಿಗೆ ಇಲಾಖೆಯಲ್ಲಿ ಮಾಲಿನ್ಯ ತಪಾಸಣೆ ಮಾಡಲು ಬೇರೆ ವ್ಯವಸ್ಥೆ ಇಲ್ಲವಾಗಿದ್ದು, ವಾಹನ ಸುಸ್ಥಿತಿಯಲ್ಲಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಖಾಸಗಿಯವರು ನೀಡುವ ಪ್ರಮಾಣ ಪತ್ರವನ್ನೇ ಅವಲಂಬಿಸಬೇಕಾಗಿದೆ. ಹೀಗಾಗಿ ಪ್ರಮಾಣಪತ್ರ ನೀಡುವ ಪ್ರತಿಯೊಂದು ಕೇಂದ್ರದಿಂದಲೂ ಇಲಾಖೆಗೆ ತಿಂಗಳಿಗೆ ಇಂತಿಷ್ಟು ಎಂದು ನಿಗದಿಯಾಗಿರುತ್ತದೆ ಎಂಬ ಆರೋಪ ಸಾಮಾನ್ಯ.

ವಾಹನಗಳ ವಾಯುಮಾಲಿನ್ಯ ತಪಾಸಣಾ ಕೇಂದ್ರದಲ್ಲಿ ಒಂದು ವರ್ಷದ ಅವಧಿಗೆ ನೀಡಬೇಕಿದ್ದ ಪ್ರಮಾಣ ಪತ್ರವನ್ನು ಕೇವಲ ಆರು ತಿಂಗಳಿಗೆ ನೀಡುತ್ತಿದ್ದು, ವಾಹನ ಮಾಲೀಕರು ವರ್ಷಕ್ಕೆ ಎರಡು ಬಾರಿ ತಪಾಸಣೆ ಮಾಡಿಸಬೇಕಿರುವುದು ದುಬಾರಿಯಾಗಿ ಪರಿಣಮಿಸಿದೆ. 2018ರ ಏಪ್ರಿಲ್ 1ರ ನಂತರ ಖರೀದಿಯಾದ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ಒಂದು ವರ್ಷದವರೆಗೆ ಹಾಗೂ ಉಳಿದ ಎಲ್ಲಾ ವಾಹನಗಳಿಗೆ ಆರು ತಿಂಗಳವರೆಗೆ ಮಾತ್ರ ಪ್ರಮಾಣ ಪತ್ರ ನೀಡಲಾಗುತ್ತಿದೆ.

ತುಮಕೂರಿನ ವಾಯುಮಾಲಿನ್ಯ ತಪಾಸಣಾ ಕೇಂದ್ರದಲ್ಲಿ ದ್ವಿಚಕ್ರವಾಹನದ ತಪಾಸಣೆ ನಡೆಯುತ್ತಿರುವುದು

ಇಲ್ಲಿ ಎಲ್ಲರೂ ಪಾಲುದಾರರು!

ಒಂದನೇ ಪುಟದಿಂದ

ಆನ್‌ಲೈನ್‌ನಲ್ಲೂ ಧೋಖಾ: ಇಲಾಖೆಯು ಅನೇಕ ಸೇವೆಗಳನ್ನು ಈಗ ಆನ್‌ಲೈನ್ ಮೂಲಕ ಒದಗಿಸುತ್ತಿದೆ. ಆದರೆ ಈ ಆನ್‌ಲೈನ್ ಜುಟ್ಟು ಅಧಿಕಾರಿಗಳ ಕೈಯಲ್ಲಿದೆ. ವಾಹನ ಚಾಲನಾ ತರಬೇತಿ ನೀಡುವ ಖಾಸಗಿ ಸಂಸ್ಥೆಗಳು ಇದರ ದುರುಪಯೋಗ ಪಡೆಯುತ್ತಿದ್ದರೆ, ಕೆಲವು ಸೇವೆಗಳಿಗೆ ಅಧಿಕಾರಿಗಳ ಅಪ್ರೂವಲ್ ಬೇಕಾಗಿದ್ದು, ತಮ್ಮ ‘ಪಾಲು’ ಸಿಗದೆ ಅವರು ಅಪ್ರೂವಲ್ ಕೊಡುವುದಿಲ್ಲ. ಆದ್ದರಿಂದ ಅನ್‌ಲೈನ್‌ನಿಂದಾಗಿ ಸೇವೆಗಳನ್ನು ಪಡೆಯುವುದು ಸ್ವಲ್ಪ ಸುಲಭವಾಗಿದೆಯೇ ವಿನಾ ಭ್ರಷ್ಟಾಚಾರ ಕಡಿಮೆಯಾಗಿಲ್ಲ ಎನ್ನುತ್ತಾರೆ ಜನಸಾಮಾನ್ಯರು.

ಸಿಬ್ಬಂದಿಯೂ ಬೇಕಿಲ್ಲ: ಬಹುತೇಕ ಆರ್‌ಟಿಒ ಕಚೇರಿಗಳಲ್ಲಿ ಸಿಬ್ಬಂದಿಯ ಕೊರತೆ ಇದೆ. ಆದರೆ ಅದು ಅಲ್ಲಿ ಸಮಸ್ಯೆ ಎನಿಸಿಯೇ ಇಲ್ಲ.

‘ಡಾಟಾ ಎಂಟ್ರಿ ಮುಂತಾದ ಕೆಲಸಗಳಿಗೆ ಕೆಲವು ಕಚೇರಿಗಳಲ್ಲಿ ತಾವಾಗಿಯೇ ಒಂದಷ್ಟು ಮಂದಿಯನ್ನು ನೇಮಕ ಮಾಡಿಕೊಂಡಿದ್ದಾರೆ. ಲಂಚದಿಂದ ಬರುವ ದುಡ್ಡಿನಲ್ಲಿ ಸ್ವಲ್ಪ ಭಾಗ ವನ್ನು ಅವರಿಗೆ ಸಂಬಳದ ರೂಪದಲ್ಲಿ ಕೊಡುತ್ತಾರೆ. ಜೊತೆಗೆ ಅವರೂ ಒಂದಷ್ಟು ‘ದುಡಿದುಕೊಳ್ಳುತ್ತಾರೆ’ ಎಂದು ಆರ್‌ಟಿಒ ಕಚೇರಿಗೆ ಫಿಟ್‌ನೆಸ್ ಸರ್ಟಿಫಿಕೆಟ್ ಪಡೆಯಲು ಪ್ರತಿ ವರ್ಷ ಹೋಗುವ ವಾಹನ ಮಾಲೀಕರೊಬ್ಬರು ಹೇಳುತ್ತಾರೆ.

ಎಲ್ಲರಿಗೂ ಪಾಲು ನಿಗದಿ: ಕಚೇರಿಯಲ್ಲಿ ಕೆಳಹಂತದ ಕ್ಲರ್ಕ್‌ನಿಂದ, ಉನ್ನತ ಮಟ್ಟದ ಅಧಿಕಾರಿಯವರೆಗೆ ಲಂಚದ ಹಣದಲ್ಲಿ ಪಾಲು ನಿಗದಿ ಆಗಿರುತ್ತದೆ. ಏಜೆಂಟರ ಮೂಲಕ ಬರುವ ಫೈಲ್‌ಗಳ ಮೇಲೆ ಯಾವ ಏಜೆಂಟರದ್ದು ಎಂದು ತಿಳಿಯಲು ಸಂಜ್ಞೆ ಇರುತ್ತದೆ. ಹಾಗೆ ಇರುವ ಫೈಲ್‌ಗಳು ಮಾತ್ರ ಬೇಗನೆ ಮುಂದೆ ಸಾಗುತ್ತವೆ. ಸಂಜೆ ವೇಳೆಗೆ ಯಾರಿಂದ ಎಷ್ಟು ಬರಬೇಕು ಎಂಬುದು ಲೆಕ್ಕಾಚಾರವಾಗಿ, ಹಣ ಕೈಸೇರುತ್ತದೆ. ಈ ರೀತಿ ದಿನಕ್ಕೆ ₹10,000ದಿಂದ ₹15,000ದಷ್ಟು ‘ದುಡಿಯುವ’ವರೂ ಇದ್ದಾರೆ.

ಜಿಲ್ಲಾ ಮಟ್ಟದ ಕಚೇರಿಗಳಲ್ಲೇ ಪ್ರತಿನಿತ್ಯ ಕೆಲವು ಲಕ್ಷ ರೂಪಾಯಿಗಳು ಕೈಬದಲಾಗುತ್ತವೆ. ಬೆಂಗಳೂರಿನ ಕಚೇರಿಗಳಲ್ಲಿ ಇದರ ಹತ್ತು ಪಟ್ಟು ವಹಿವಾಟು ನಡೆಯುತ್ತದೆ. ಕಚೇರಿಯೊಂದರಲ್ಲಿ ನಿತ್ಯ ನಡೆಯುವ ಒಟ್ಟು ವ್ಯವಹಾರದಲ್ಲಿ ಶೇ 30ರಿಂದ ಶೇ 40ರಷ್ಟು ಹಣ ಮಾತ್ರ ಕಾನೂನು ಪ್ರಕಾರ ಸರ್ಕಾರಕ್ಕೆ ಸಲ್ಲುತ್ತದೆ. ಉಳಿದ ಹಣ ಯಾರ್‍ಯಾರದ್ದೋ ಜೇಬು ತುಂಬುತ್ತದೆ.

‘ಹೀಗೆ ಸಂಗ್ರಹವಾಗುವ ಹಣ ಸಾರಿಗೆ ಇಲಾಖೆಯ ಅಧಿಕಾರಿಗಳಿಗಷ್ಟೇ ಅಲ್ಲ, ‘ಮೇಲಿನವರೆಗೆ’ ಹೋಗುತ್ತದೆ. ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಹಾಗೂ ಕೆಲವು ಜನಪ್ರತಿನಿಧಿಗಳಿಗೂ ಪಾಲು ಸಲ್ಲುತ್ತದೆ’ ಎನ್ನುತ್ತಾರೆ ಇಲಾಖೆಯಿಂದ ನಿವೃತ್ತಿಹೊಂದಿರುವ ಸಿಬ್ಬಂದಿ.

ಕಠಿಣ ವ್ಯವಸ್ಥೆ ಅಗತ್ಯ

‘ಅಕ್ರಮ ಮಾರ್ಗದಲ್ಲಿ ಪರೀಕ್ಷೆ ಬರೆದು ಚಾಲನಾ ಪರವಾನಗಿ ಪಡೆದ ಯುವಕ – ಯುವತಿಯರೇ ಹೆಚ್ಚಿನ ಸಂಖ್ಯೆಯಲ್ಲಿರುವಾಗ, ರಸ್ತೆಗಳಲ್ಲಿ ಶಿಸ್ತನ್ನು ನಿರೀಕ್ಷಿಸುವುದಾದರೂ ಹೇಗೆ? ವಾಹನ ಪಾರ್ಕ್ ಮಾಡುವುದೂ ಗೊತ್ತಿಲ್ಲದವರಿಗೆ ಪರವಾನಗಿ ನೀಡಲಾಗುತ್ತಿದೆ. ಅಮೆರಿಕ ಹಾಗೂ ಇತರ ಕೆಲವು ರಾಷ್ಟ್ರಗಳಲ್ಲಿ ಇರುವಂಥ ಕಟ್ಟುನಿಟ್ಟಿನ ನಿಯಮಗಳನ್ನು ನಮ್ಮಲ್ಲೂ ಜಾರಿ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ರಸ್ತೆಗಳು ಇನ್ನಷ್ಟು ಅಪಾಯಕಾರಿಯಾಗುವುದು ಖಚಿತ’ ಎಂದು ಮಂಗಳೂರಿನ ಸಾಮಾಜಿಕ ಕಾರ್ಯಕರ್ತ ಜಿ.ಕೆ. ಭಟ್ ಹೇಳುತ್ತಾರೆ.

‘ಫೈನಲ್’ ಆದಮೇಲೆ ಅಪ್ರೂವಲ್

ಹಿಂದೆಲ್ಲ ಹೊಸ ವಾಹನವನ್ನು ನೋಂದಣಿ ಮಾಡಿಸಲು ಅದನ್ನು ಆರ್‌ಟಿಒ ಕಚೇರಿಗೆ ಒಯ್ಯುವುದು ಕಡ್ಡಾಯವಾಗಿತ್ತು. ಈಗ ಅದಕ್ಕೂ ಆನ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ವಾಹನ ಮಾರಾಟ ಮಾಡುವ ಡೀಲರ್‌ಗಳೇ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಿ, ಆನ್‌ಲೈನ್‌ನಲ್ಲಿಯೇ ನೋಂದಣಿ ಮಾಡುತ್ತಾರೆ. ಆದರೆ ಇದಕ್ಕೆ ಕೊನೆಯಲ್ಲಿ ಸಂಬಂಧಪಟ್ಟ ಅಧಿಕಾರಿಯ ಅಪ್ರೂವಲ್ ಕಡ್ಡಾಯ.

ಡೀಲರ್‌ಗಳು ಆರ್‌ಟಿಒ ಕಚೇರಿಗೆ ಫೈಲ್‌ಅನ್ನು ಕಳುಹಿಸುವುದರ ಜತೆಗೆ ವ್ಯವಹಾರ ‘ಫೈನಲ್’ ಮಾಡಬೇಕು. ಅದಾದ ನಂತರವೇ ಅಪ್ರೂವಲ್ ಲಭಿಸುತ್ತದೆ ಎನ್ನುತ್ತಾರೆ ಬೆಂಗಳೂರಿನ ವಾಹನ ಮಾರಾಟ ಸಂಸ್ಥೆಯೊಂದರಲ್ಲಿ ಆರ್‌ಟಿಒ ವ್ಯವಹಾರಗಳನ್ನು ನೋಡುತ್ತಿರುವ ಹೆಸರು ಹೇಳಲು ಬಯಸದ ವ್ಯಕ್ತಿ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 17-7-1997

● **ಕೆಪಿಸಿಸಿ ಅಧ್ಯಕ್ಷರಾಗಿ ಧರ್ಮಸಿಂಗ್ ಆಯ್ಕೆ**

ಬೆಂಗಳೂರು, ಜುಲೈ 16– ಬಹು ದಿನಗಳಿಂದ ತೀವ್ರ ಕುತೂಹಲ ಕೆರಳಿಸಿದ್ದ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಕೊನೆಗೂ ಇಂದು ನಡೆದ ಚುನಾವಣೆಯಲ್ಲಿ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಹಾಲಿ ಅಧ್ಯಕ್ಷ ಧರ್ಮಸಿಂಗ್ ಭಾರಿ ಬಹುಮತದಿಂದ ಜಯಗಳಿಸಿದರು.

ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದ ಈ ಚುನಾವಣೆಯಲ್ಲಿ ಧರ್ಮಸಿಂಗ್ ಅವರು ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ಬೆಂಬಲಿತ ಅಭ್ಯರ್ಥಿಯಾಗಿದ್ದ ಮಾಜಿ ಲೋಕಸಭಾ ಸದಸ್ಯ ಎಂ. ರಾಜಶೇಖರನ್ ಅವರ ವಿರುದ್ಧ 246 ಮತಗಳ ಅಂತರದಿಂದ ಭರ್ಜರಿ ಜಯಗಳಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 17-7-1972

● **‘ಸಮೃದ್ಧ, ಸ್ವಾಯತ್ತ’ ಕರ್ನಾಟಕ ಸ್ಥಾಪನೆಗೆ ಹೊಸ ರಾಜಕೀಯ ಪಕ್ಷ**

ಬೆಂಗಳೂರು, ಜುಲೈ 16– ಸಮಾಜವಾದದ ಗುರಿಯೊಡನೆ ‘ಸಮೃದ್ಧ, ಸ್ವಾಯತ್ತ ಕರ್ನಾಟಕದ ಸ್ಥಾಪನೆಗಾಗಿ ಹೋರಾಟ ನಡೆಸುವ ರಾಜ್ಯ ಮಟ್ಟದ ಹೊಸ ಪಕ್ಷವೊಂದು ಅಸ್ತಿತ್ವಕ್ಕೆ ಬಂದಿದೆ.

ಇತ್ತೀಚೆಗೆ ಸೋಷಲಿಸ್ಟ್ ಪಕ್ಷವನ್ನು ಬಿಟ್ಟ ವಿಧಾನಸಭಾ ಸದಸ್ಯ ಶ್ರೀ ಎಸ್. ಬಂಗಾರಪ್ಪ ಅವರು ನೂತನ ಪಕ್ಷದ ರಚನೆಯನ್ನು ಇಂದು ಪ್ರಕಟಿಸಿದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜುಲೈ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಚತುರ್ಥಿ ಗಂ. 10-50 ನಕ್ಷತ್ರ: ಶತಭಿಷ ಗಂ. 13-25 ಯೋಗ: ಸೌಭಾಗ್ಯ ಗಂ. 17-49, ಕರಣ: ಬಾಲವ ಗಂ. 10-50, ಮಿಥುನ ಮಾಸದ 32 ನೇ ದಿನ.
ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ : 06-16 ಸೂರ್ಯಾಸ್ತ : 06-58 ಮುಸ್ಲಿಂ ದಿನಾಂಕ : 17 ಜುಲ್‌ಹಿಜಾನ್
ದಿನ ವಿಶೇಷ : ಕರ್ಕಾಟಕ ಸಂಕ್ರಾಂತಿ, ದಕ್ಷಿಣಾಯನ ಪುಣ್ಯಕಾಲ
ಅದೃಷ್ಟ ಸಂಖ್ಯೆ : 3, 12

ಮೇಷ: ಅಕ್ಕಪಕ್ಕದಲ್ಲಿ ಮತ್ತು ವ್ಯವಹಾರದಲ್ಲಿ ಅನಗತ್ಯ ವಿಷಯಗಳತ್ತ ಗಮನಹರಿಸದೇ ಇರುವ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ವಿಶೇಷ ವಿನ್ಯಾಸದ ಉಡುಪುಗಳ ರಫ್ತಿನಿಂದ ಲಾಭ. ಇನ್ನೂ ಹೆಚ್ಚಿನ ಬೇಡಿಕೆ ಇರುವುದು.

ವೃಷಭ: ದಾಂಪತ್ಯದಲ್ಲಿ ಸಂಶಯದ ವಾತಾವರಣದಿಂದ ಅಸಮಾಧಾನ. ಸಮಸ್ಯೆಯಿಂದ ಹೊರಬರಲು ಯಾವುದೇ ರೀತಿಯ ಮುಚ್ಚುಮರೆ ಇಲ್ಲದೇ ಇರುವುದು ಒಂದೇ ದಾರಿ. ದೈವಾನುಗ್ರಕ್ಕೆ ಸದಾಕಾಲ ನಿಮ್ಮ ಪ್ರಾರ್ಥನೆ ಇರಲಿ.

ಮಿಥುನ: ಆಸ್ತಿ ಖರೀದಿಯ ವಿಚಾರದಲ್ಲಿ ನಿಮ್ಮ ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ಪ್ರೀತಿ ವಾತ್ಸಲ್ಯ ತೋರುವ ಜನರು ನಿಮ್ಮೊಂದಿಗಿ ಇದ್ದಾರೆಂಬುದು ನಿಮ್ಮ ಆತ್ಮವಿಶ್ವಾಸ ಹೆಚ್ಚಲು ಕಾರಣವಾಗಲಿದೆ.

ಕರ್ಕಾಟಕ: ವ್ಯವಹಾರದ ವಿಷಯಗಳಲ್ಲಿ ಯಾವುದೇ ಸಂಬಂಧಗಳಿಗೆ ಆಸ್ಪದ-ವಿರದಂತೆ ನೋಡಿಕೊಳ್ಳುವುದು ಒಳ್ಳೆಯದು. ಇಲ್ಲವಾದಲ್ಲಿ ದಾಕ್ಷಿಣ್ಯ ಸ್ವಭಾವ-ದವರಾದ ನಿಮಗೆ ಅಗೌರವ, ನಷ್ಟದಂತಹ ಪರಿಸ್ಥಿತಿ ಎದುರಾಗಬಹುದು.

ಸಿಂಹ: ಯಾವುದೇ ಮಹತ್ವದ ಮಾತುಕತೆ ನಡೆಸಲು ಈ ದಿನ ಸರಿಯಲ್ಲ. ಹಣಕಾಸಿನ ವಿಚಾರದಲ್ಲಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು ಈ ದಿನ ಕಷ್ಟವಾಗುವುದು. ಬಂಧುಗಳೊಡನೆ ಸುಖ ಭೋಜನ ನಡೆಯಬಹುದು.

ಕನ್ಯಾ: ಹಾಲು ಮತ್ತು ಹಾಲಿನ ಉತ್ಪನ್ನ ವಸ್ತುಗಳ ಮಾರಾಟಗಳಿಂದ ಹೆಚ್ಚಿನ ಸಂಪಾದನೆ. ತಂದೆ ತಾಯಿಯವರ ಮಾತಿನಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಸಲುವಾಗಿ ಯೋಜನೆಯನ್ನು ಕೈಗೊಳ್ಳುವಿರಿ.

ತುಲಾ: ದಿನಸಿ ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ನೂತನ ಯೋಜನೆಯನ್ನು ಮುಂದುವರೆಯಲು ಸಹಾಯ. ಬರವಣಿಗೆಗಳಿಂದ ಹೆಚ್ಚಿನ ಆದಾಯ ಕಂಡುಕೊಳ್ಳುವಿರಿ. ಹಸಿರು ಬಣ್ಣ ಅದೃಷ್ಟ ತರುವುದು.

ವೃಶ್ಚಿಕ: ನಿಮ್ಮ ಬಹುದಿನದ ಪ್ರಯತ್ನಗಳು ನಿಷ್ಫಲವೆನಿಸುವುದಿಲ್ಲ. ಎಂಜಿನಿಯರ್‌ಗಳು ಹೊರ ರಾಜ್ಯದಲ್ಲಿ ಕೆಲಸ ನಿರ್ವಹಿಸಬೇಕಾಗುವುದು. ಕಂಪನಿಯ ರಾಜಕೀಯ ಸನ್ನಿವೇಷ ನಿಮಗನುಕೂಲವಾಗಿದೆ, ಸ್ವಲ್ಪ ಜಾಣತನ ಪ್ರದರ್ಶಿಸಿ.

ಧನು: ಸೌಂದರ್ಯ ವರ್ಧಕ ವಸ್ತುಗಳ ಮಾರಾಟಗಳಿಂದಾಗಿ ಹೆಚ್ಚಿನ ಆದಾಯ. ಮನಸ್ಸಿಗೆ ಹೆಚ್ಚು ಮುದ ನೀಡುವಂತಹ ಸಂಗತಿಗಳು ಜರುಗುತ್ತದೆ. ನೀವು ನಿಮ್ಮ ಗುರಿಯನ್ನು ತಲುಪಬೇಕಾಗಿದ್ದಲ್ಲಿ ತುಸು ಹೆಚ್ಚೇ ಪರಿಶ್ರಮ ಪಡ ಬೇಕಾದೀತು.

ಮಕರ: ಕಹಿ ಘಟನೆಗಳಿಂದ ಕಲಿತ ಪಾಠ, ಬಡತನದಿಂದ ಕಲಿತ ಪಾಠ ಉತ್ತಮ ರೀತಿಯಲ್ಲಿ ಉಪಯೋಗವಾಗಲಿದೆ. ರಾಜಕೀಯದಲ್ಲಿ ಪ್ರಭಾವಯುತ ಸ್ಥಾನ ಗಳಿಸಲಿದ್ದೀರಿ. ಹಿಂಬಾಲಕರ ಮಾತುಗಳಿಗೆ ಹೆಚ್ಚಿನ ಮಹತ್ವ ಸಲ್ಲದು.

ಕುಂಭ: ಷೇರು ಪೇಟೆಯ ಲೆಕ್ಕಾಚಾರಗಳನ್ನು ಚೆನ್ನಾಗಿ ಅರಿತಿರುವ ನೀವು ಹೆಚ್ಚಿನ ಸಂಪಾದನೆ ಮಾಡುವಿರಿ. ಟ್ರಾವೆಲ್ ಏಜೆಂಟರುಗಳಿಗೆ ಶುಭ ದಿನ. ಮಗನ ತಾಂತ್ರಿಕ ವಿದ್ಯಾಭ್ಯಾಸಕ್ಕೆ ಅಡ್ಡಿ ಬಾರದಂತೆ ಶ್ರೀ ಶಾರದಾ ದೇವಿಯನ್ನು ಪ್ರಾರ್ಥಿಸಿ.

ಮೀನ: ನಿಮ್ಮ ದ್ವಂದ್ವ ರೀತಿಯ ಆಲೋಚನೆಗಳಿಂದಾಗಿಯೇ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬವಾಗುತ್ತಿರುವುದು. ವೈದ್ಯರ ಸಲಹೆಯಂತೆ ಮನಸ್ಸಿನ ಸಂಯಮಕ್ಕಾಗಿ ಯೋಗ, ಧ್ಯಾನ ದೇವತಾರಾಧನೆಗಳತ್ತ ಗಮನ ಹರಿಸಿ.

ಪದಬಂಧ 5021 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಿವೇಕವೇ ಇಲ್ಲದಿರುವುದು (4)
3.ತಲೆಯ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
4.ಯೋಗವಿದ್ದರೂ ಈ ಅಗಲುವಿಕೆ! (3)
5.ಅನ್ಯಾಯವಾದ ಆರೋಪಣೆ (4)
7.ತೀಡಿ ತೀಡಿ ಮಾಡಿರುವ ಸುಧಾರಣೆ (4)
9.ರೂಢಿಗೆ ವಿರೋಧವಾದ ನಡೆಯಿದು (4)
11.ಬುದ್ಧಿಯಿರಿಸಿಕೊಂಡು ನೀಡಿರುವ ಒಪ್ಪಿಗೆ (4)
12.ಪಾವತಿ ಪತ್ರವಿದು (3)
14.ಅತ್ಯಂತ ಆತ್ಮೀಯ ಸ್ನೇಹಿತ (4)
15.ಜಲವುಣಿಸಿ ಬೆಳೆಸಿದ ಶ್ರೀಗಂಧ (4)

ಮೇಲಿಂದ ಕೆಳಕ್ಕೆ
1.ಅಲೆಯುತ್ತಿದ್ದಾಗ ಅಪ್ಪಳಿಸಿದ ತರಂಗ! (2)
2.ಲಲಿತ ಕಲೆಗಳನ್ನೆಲ್ಲಾ ಬಲ್ಲವನೀತ (4)
3.ಗರತಿ ಪ್ರವೇಶಿಸಿರುವ ಇಯತ್ತೆ! (4)
6.ಪತಿಯದ್ದು ಇದೇ ರೂಢಿ! (3)
8.ಇದು ಬಹಳ ಶ್ರೇಷ್ಠ (3)
10.ಪ್ರಚಾರದ ಚೀಟಿ (4)
11.ಕ್ರಮವನ್ನು ಉಲ್ಲಂಘಿಸುವುದು (4)
13.ಧಾನ್ಯದ ಕಾಳು (2)



5020ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. 1.ಧನಸಹಾಯ 3.ಕೈಲಾಸ
5.ನಿರಪರಾಧಿ 7.ಅವ್ಯಯ
8.ಅಂಗರಕ್ಷಕ 10.ಅಗುಳು
11.ಗುಣವಾಚಕ 14.ರಹಸ್ಯ
15.ಏಕೀಕರಣ

ಮೇಲಿಂದ ಕೆಳಕ್ಕೆ:
1.ಧಮನಿ 2.ಸಲ್ಲಾಪ
4.ಸಮಯ 6.ರಾಜ್ಯಾಂಗ
7.ಅಳ್ಳಕ 8.ಅಂಗುಳು
9.ಕ್ಷಪಣ 10.ಅಬ್ಬರ
12.ವಾದಕ 13.ಕಲ್ಯಾಣ

ಸುಡೊಕು 5407

		6			8	5		1
			2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5406 ಸುಡೊಕು



8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೈಕೋರ್ಟ್ ಅಭಿಪ್ರಾಯದ ವಿರುದ್ಧ ಅಧಿಕಾರಿಗಳ ಮೇಲ್ಮನವಿ

ಸುಪ್ರೀಂ ಕೋರ್ಟ್‌ನಲ್ಲಿ ನಾಳೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಉಪ ತಹಶೀಲ್ದಾರ್ ಜಾಮೀನು ಅರ್ಜಿಯ ವಿಚಾರಣೆಯ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರ ಅಭಿಪ್ರಾಯಗಳ ವಿರುದ್ಧ ಎಸಿಬಿ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಹಾಗೂ ಐಎಎಸ್ ಅಧಿಕಾರಿ ಜೆ.ಮಂಜುನಾಥ್ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆಯಲಿದೆ.

ಜಾಮೀನು ಅರ್ಜಿ ವಿಚಾರಣೆ ವೇಳೆ ತಮ್ಮ ಕಾರ್ಯವೈಖರಿ ಟೀಕಿಸಿದ್ದನ್ನು ಪ್ರಶ್ನಿಸಿ ಸೀಮಂತ್ ಕುಮಾರ್ ಸಿಂಗ್ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಾಲಯವು ಮಂಗಳವಾರ ಮೇಲ್ಮನವಿಯ ವಿಚಾರಣೆ ನಡೆಸಿ, ಮೂರು ದಿನಗಳ ಕಾಲ ಜಾಮೀನು ಅರ್ಜಿಯ ವಿಚಾರಣೆ ನಡೆಸದಂತೆ ಕರ್ನಾಟಕ ಹೈಕೋರ್ಟ್‌ಗೆ ಸೂಚಿಸಿತ್ತು.

ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತ್ತು.

ನ್ಯಾಯಮೂರ್ತಿ ಹೇಳಿಕೆಯನ್ನು ಪ್ರಶ್ನಿಸಿ ಜೆ.ಮಂಜುನಾಥ್ ಅವರೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಎಲ್ಲಾ ಮೇಲ್ಮನವಿಗಳನ್ನು ಒಟ್ಟಿಗೆ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿ ಸೂಚಿಸಿತ್ತು.

ಔರಂಗಾಬಾದ್, ಉಸ್ಮಾನಾಬಾದ್ ಮರುನಾಮಕರಣಕ್ಕೆ ಸಮ್ಮತಿ

ಮುಂಬೈ: ಔರಂಗಾಬಾದ್ ಹಾಗೂ ಉಸ್ಮಾನಾಬಾದ್ ಜಿಲ್ಲೆಗಳಿಗೆ ಕ್ರಮವಾಗಿ ಛತ್ರಪತಿ ಸಂಭಾಜಿನಗರ ಹಾಗೂ ಧಾರಾಶಿವ ಎಂದು ಮರುನಾಮಕರಣ ಮಾಡಲು ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದಲ್ಲಿ ಶನಿವಾರ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ ಆಘಾಡಿ (ಎಂವಿಎ) ಸರ್ಕಾರವು ಕಳೆದ ತಿಂಗಳ 29ರಂದು ಈ ಜಿಲ್ಲೆಗಳ ಹೆಸರು ಬದಲಿಸುವ ನಿರ್ಣಯ ಕೈಗೊಂಡಿತ್ತು. ಅದರ ಬೆನ್ನಲ್ಲೇ ಆ ಸರ್ಕಾರ ಪತನಗೊಂಡಿತ್ತು.

'ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರವು ಮರುನಾಮಕರಣದ ನಿರ್ಣಯ ಕೈಗೊಂಡಿದ್ದಾಗ ಅವರಿಗೆ ಬಹುಮತ ಇರಲಿಲ್ಲ. ಆ ನಿರ್ಣಯಕ್ಕೇ ಒಪ್ಪಿಗೆ ನೀಡಿದ್ದರೆ ಮುಂದೆ ಕಾನೂನು ತೊಡಕುಗಳು ಎದುರಾಗುವ ಸಾಧ್ಯತೆ ಇತ್ತು. ಹೀಗಾಗಿ ಈ ವಿಚಾರವಾಗಿ ಹೊಸ ಪ್ರಸ್ತಾವನೆ ಸಲ್ಲಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿತ್ತು. ಅವರು ಸಲ್ಲಿಸಿದ್ದ ಪ್ರಸ್ತಾವನೆಗೆ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ' ಎಂದು ಏಕನಾಥ ಶಿಂಧೆ ತಿಳಿಸಿದ್ದಾರೆ.

ಉದ್ಧವ್ ನೇತೃತ್ವದ ಸಭೆಯಲ್ಲಿ ಔರಂಗಾಬಾದ್‌ಗೆ ಸಂಭಾಜಿನಗರ ಎಂದು ಮರುನಾಮಕರಣ ಮಾಡಲು ತೀರ್ಮಾನಿಸಲಾಗಿತ್ತು. ಶಿಂಧೆ ಸರ್ಕಾರವು ಈ ಹೆಸರಿನ ಹಿಂದೆ ಛತ್ರಪತಿ ಎಂದು ಸೇರ್ಪಡೆ ಮಾಡಿದೆ.

ಮರುನಾಮಕರಣದ ವಿಷಯ ತಿಳಿದು ಬಿಜೆಪಿ ಕಾರ್ಯಕರ್ತರು ಔರಂಗಾಬಾದ್‌ನ ವಿವಿಧೆಡೆ ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ. ಸಿಹಿ ಕೂಡ ಹಂಚಿದ್ದಾರೆ.

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ-2/ಟೆಂಡರ್/2022-23 ದಿ: 07.07.2022

ಟೆಂಡರ್ ಪ್ರಕಟಣೆ ಸಂಖ್ಯೆ:11/2022-23
(ಇ-ಪ್ರೊಕ್ಯೂರ್‌ಮೆಂಟ್) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3,4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಪಾವಗಡ ಉಪ-ವಿಭಾಗಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು ಇ ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.eproc.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.200.00 ಲಕ್ಷ ಗಳವರೆಗೆ ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ **28.07.2022** ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **29.07.2022** ರ ಸಂಜೆ 4.00 ಗಂಟೆ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.08.2022** ರ ಸಂಜೆ 4.00 ಗಂಟೆ ನಂತರ. ವಿಚಾರಣೆ: ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: **26.07.2022** ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/311/MCA/2022-23

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಶಿಕಾರಿಪುರ-5777427

Ph.No: 08187-222593 ಇ-ಮೇಲ್: cdposkp@gmail.com

ಸಂ.ಶಿಅಯೋಶಿ/ಮಮಅಇ/ಕೋ.ಮೊ/ಟೆಂಡರ್/22-23/156 ದಿ:15/07/2022

ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯ ಐಸಿಡಿಎಸ್ ಯೋಜನೆಗೆ ಮೊಟ್ಟೆಗಳ ಪೂರೈಕೆಗೆ ಟೆಂಡರ್ ದಸ್ತಾವೇಜು

E-PROCUREMENTTENDER NOTIFICATION

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಷಯ:-ಶಿಕಾರಿಪುರ ಶಿಶು ಅಭಿವೃದ್ಧಿ ಯೋಜನೆಯ 302 ಅಂಗನವಾಡಿ ಫಲಾನುಭವಿಗಳಿಗೆ ವಿತರಿಸಲು ಮೊಟ್ಟೆ ಪೂರೈಕೆಗೆ ಇ-ಟೆಂಡರ್ ಆಹ್ವಾನಿಸುತ್ತಿರುವ ಕುರಿತು. **ಉಲ್ಲೇಖ:-1)** ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ರವರ ಪತ್ರ ಸಂ:WCD/ICDS/EGG/1/2021/E-597342 ದಿ:24/06/2022. 2) ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿವಮೊಗ್ಗ ರವರ ಪತ್ರ ಸಂ:ಉನಿಶಿ:ಮಮಅಇ:ಎಸ್‌ಎನ್‌ಪಿ:ಕೋ.ಮೊ:2022-23 ದಿ: 12/07/2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1), (2) ರ ಪ್ರಕಾರ ಶಿಕಾರಿಪುರ ಶಿಶು ಅಭಿವೃದ್ಧಿ ಯೋಜನೆಯ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ನೀಡಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಪೂರೈಕೆಗೆ (ಸಾರಿಗೆ ಸಹಿತ) ಗರಿಷ್ಠ ರೂ. 6/- ಮೀರದಂತೆ ಅರ್ಹ ಸಂಸ್ಥೆಗಳಿಂದ/ ಮಾರಾಟಗಾರರಿಂದ/ ಟೆಂಡರ್‌ದಾರರಿಂದ ಸೂಚಿಸಲಾದ ನಿಬಂಧನೆ ಮತ್ತು ಷರತ್ತಿಗೊಳಪಟ್ಟು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (ಕೆಟಿಪಿಪಿ) 1999 ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ (Two Cover System)ಮಾದರಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಉತ್ಪಾದಕ ಸಂಸ್ಥೆಗಳು/ಮಾರಾಟಗಾರರು/ ಟೆಂಡರ್‌ದಾರರುತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ಮಾಹಿತಿಯನ್ನು Website: https://eproc.karnataka.gov.in ನಲ್ಲಿ ಸಲ್ಲಿಸಬೇಕು. ಇ-ಟೆಂಡರ್ ವೇಳಾ ಪಟ್ಟಿ ಈ ಕೆಳಕಂಡಂತಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕಾರಿಪುರ ವಿಳಾಸ ಆಡಳಿತ ಸೌಧ, ನೆಲ ಮಹಡಿ ಕೊಠಡಿ ಸಂಖ್ಯೆ-11 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಕಾರಿಪುರ

ವಾ.ಸಾ.ಸಂ.ಇ/ಎಂಸಿಎ/ಶಿ/90/07/22-23/602

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001
ದೂ: 080-2558 1383/ 2558 9112 ಫ್ಯಾಕ್ಸ್: 080-2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂ: ಮಾನಿಮಂ/143/ಹಿಪಅ/ಗಣಿ/ಪಸಾಸ/2022-23/2665 ದಿನಾಂಕ: 16.07.2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, ರವರು "ಸೋವಿನಹಳ್ಳಿ ಮರಳು ಬ್ಲಾಕ್" ನಲ್ಲಿ (Block No. HPT-OSB-06) ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ದಂಡೆ ಸರ್ವೆ ನಂ. 01, ಸೋವಿನಹಳ್ಳಿ ಗ್ರಾಮ, ಹೂವಿನ ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಒಟ್ಟು 29-65 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 79,881 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನುಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಗೆ ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ : SEIAA 234 MIN 2021 ದಿನಾಂಕ: 15.11.2021 ಮತ್ತು ಉದ್ದಿಮೆದಾರರು ಮಂಡಳಿಗೆ ಸಲ್ಲಿಸಿದ ನಿವೇದನಾ ಪತ್ರ ದಿನಾಂಕ : 30.03.2022ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ: ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರಪೊರೇಶನ್ ಲಿಮಿಟೆಡ್, (ಕರ್ನಾಟಕ ಸರ್ಕಾರದ ಉದ್ದಿಮೆ) ಟಿ.ಟಿ.ಎಮ್.ಸಿ. ಬಿಲ್ಡಿಂಗ್. "ಎ" ಬ್ಲಾಕ್ 5ನೇ ಮಹಡಿ, ಬಿ.ಎಮ್.ಟಿ.ಸಿ. ಕೆ.ಹೆಚ್.ರಸ್ತೆ, ಶಾಂತಿನಗರ , ಬೆಂಗಳೂರು-560027.**
2.	**ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 01, ಸೋವಿನಹಳ್ಳಿ ಗ್ರಾಮ, ಹೂವಿನ ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ, ಕರ್ನಾಟಕ.**
3.	**ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ: ವರ್ಷಕ್ಕೆ 79,881 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆ.**
4.	**ಉದ್ದೇಶಿತ ಮಾಲಿನ್ಯ ನಿಯಂತ್ರಣ ಕ್ರಮಗಳು:** ರಸ್ತೆಗಳಲ್ಲಿ ನಿಯಮಿತವಾಗಿ ನೀರು ಚಿಮುಕಿಸುವುದು, ಅವೆನ್ಯೂ ಪ್ಲಾಂಟೇಶನ್, ಲೋಡ್ ವಾಹನವನ್ನು ಟಾರ್ಪಾಲಿನ್‌ನಿಂದ ಮುಚ್ಚುವುದು, ನಿಯಮಿತ ರಸ್ತೆ ನಿರ್ವಹಣೆ, ಹಸಿರು ಪಟ್ಟಿರಚನೆ ಇತ್ಯಾದಿ. ವಾಹನದ ನಿಯಮಿತ ನಿರ್ವಹಣೆ, ಗ್ರೀನ್ ಬೆಲ್ಟ್ ಅಭಿವೃದ್ಧಿ, ಸರಿಯಾದ ರಸ್ತೆ ಗ್ರೇಡಿಯಂಟ್ ನಿರ್ವಹಣೆ ಇತ್ಯಾದಿ. ಅನುಮತಿಸುವ ಶಬ್ದ ಮಟ್ಟಗಳು ಮತ್ತು ಆ ಮಟ್ಟಗಳಿಗೆ ಗರಿಷ್ಠ ಮಾನ್ಯತೆ ಬಗ್ಗೆ ಕಾರ್ಮಿಕರಿಗೆ ಅರಿವು ನೀಡಲಾಗುವುದು. ಭೂ ಮಾಲೀಕರೊಂದಿಗೆ ಸಮಾಲೋಚಿಸಿ ಅಂತರ್ಜಲ ಮರುಪೂರಣ ಪಿಟ್, ಮಳೆ ನೀರು ಕೊಯ್ಲು ಕೆಲಸ, ಮರಳು ಬ್ಲಾಕ್ನ ಹಬೆಯ ಕಡೆಗೆ ಜಲಾನಯನ ಪ್ರದೇಶದ ಪುನಶ್ಚೇತನ, ಗಲ್ಲಿ ಪ್ಲಗ್ ಮತ್ತುಚೆಕ್ ಡ್ಯಾಂಗಳನ್ನು ಕೈಗೊಳ್ಳಲು ಉದ್ದೇಸಿಸಲಾಗಿದೆ. ಮೇಲ್ಮೈ ನೀರಿನ ಮಾರ್ಗವನ್ನುತಿರುಗಿಸಲಾಗುವುದಿಲ್ಲ. ಲೀಸ್‌ನಗಡಿಯುದ್ದಕ್ಕೂ ಮಳೆ ನೀರು ಕೆಲಸದ ಸ್ಥಳಕ್ಕೆ ಹೋಗುವುದನ್ನು ತಪ್ಪಿಸಲು ಹೂಮಾಲೆ ಚರಂಡಿಯನ್ನು ರಚಿಸಲಾಗುತ್ತದೆ ಮತ್ತು ನೀರನ್ನು ನೈಸರ್ಗಿಕ ನೀರಿನ ಹರಿವಿಗೆ ಬಿಡಲಾಗುತ್ತದೆ.
5.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 17-08-2022 (ಬುಧವಾರ) ರಂದು ಬೆಳಗ್ಗೆ 11:30ಗಂಟೆ, ಸರ್ವೆ ನಂ. 01, ಸೋವಿನಹಳ್ಳಿ ಗ್ರಾಮ, ಹೂವಿನ ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ, ಕರ್ನಾಟಕ.**
6.	**ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ವಿಜಯನಗರ ಜಿಲ್ಲೆ, ವಿಜಯನಗರ (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ವಿಜಯನಗರ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ (ಈ) ತಾಲ್ಲೂಕು ಪಂಚಾಯತಿ ಕಾರ್ಯಲಯ, ಹೂವಿನ ಹಡಗಲಿ (ಉ) ತಹಶೀಲ್ದಾರರ ಕಾರ್ಯಲಯ, ವಿಜಯನಗರ (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಮಣ್ಣೂರ್ ಸುಗುರ್ (ಋ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ (ೠ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001 (ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ವಿಜಯನಗರ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ

रजिस्ट्री सं. डी.एल. – 33004/99 REGD. No. D.L 33004/99

भारत का राजपत्र
The Gazette of India

सी.जी.-डी.एल.-अ.-06062022-236339
CG-DL-E-06062022-236338

असाधारण
EXTRAORDINARY

भाग II-खण्ड 3-उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 2457] नई दिल्ली, शुक्रवार, जून 3, 2022/ज्येष्ठ 13, 1944
No. 2457] NEW DELHI, FRIDAY, JUNE 3, 2022/JYAISTHA 13, 1944

ಭೂ ಸ್ವಾಧೀನ ಸಕ್ಷಮ ಪ್ರಾಧಿಕಾರ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ
ಇ.ಸಿ-20, ಸಾಯಿನಾಥ ರಸ್ತೆ, ಕೆಂಗಲ್ ದೇವಸ್ಥಾನದ ಹತ್ತಿರ, ಸುಭಾಷ್‌ನಗರ, ಅರಸೀಕೆರೆ - 573 103
ಇ-ಮೇಲ್: slaoarasikere@gmail.com, ದೂರವಾಣಿ: 08174-200121

ಕ್ರ.ಸಂ.: ಭೂಸ್ವಾ.ಸ.ಪ್ರಾ/ಹಾ-ಹು-ಹಿ/ಸಿ.ಆರ್/03/2022-23 ದಿನಾಂಕ: 01.07.2022

ಸಾರ್ವಜನಿಕ ತಿಳುವಳಿಕೆ

ರಾಷ್ಟ್ರೀಯ ಹೆದ್ದಾರಿ ಎಕಾನಾಮಿಕ್ ಕಾರಿಡಾರ್ 20 ತುಮಕೂರು ಜಿಲ್ಲೆಯ ಕಿ.ಮೀ 42.87 ರಿಂದ ಕಿ.ಮೀ 56.13 ರವರೆಗೆ (ಹಾಸನ-ಹುಳಿಯಾರು-ಹಿರಿಯೂರು) ರಸ್ತೆ ನಿರ್ಮಾಣಕ್ಕಾಗಿ, ರಸ್ತೆಗೆ ಅಗತ್ಯವಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಭಾರತ ಸರ್ಕಾರವು, ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ ಕೇಂದ್ರ ಕಾಯಿದೆ ಸಂಖ್ಯೆ 48) ರ ಸೆಕ್ಷನ್ 3ಎ(1) ರಂತೆ ದಿನಾಂಕ 03 ಜೂನ್ 2022 ರಂದು ಅಧಿಸೂಚನೆ ಹೊರಡಿಸಿದ್ದು ಕಲಂ 3ಎ(3) ರ ಪ್ರಕಾರ ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲಾಗಿದೆ.

ಸಹಿ/-
(ಬಿ.ಎ. ಜಗದೀಶ ಕೆ.ಎ.ಎಸ್)
ಭೂ ಸ್ವಾಧೀನ ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಇ.ಸಿ-20, ಅರಸೀಕೆರೆ

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ಅಧಿಸೂಚನೆ

ನವದೆಹಲಿ, 3ನೇ ಜೂನ್ 2022

ಎಸ್.ಒ. 2584(ಇ) - ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956 (1956 ರ ಕೇಂದ್ರ ಕಾಯಿದೆ ಸಂಖ್ಯೆ 48) ಸೆಕ್ಷನ್ 3ಎ ರ ಉಪವಿಭಾಗ(1) ರ ಮೂಲಕ ಕೇಂದ್ರ ಸರ್ಕಾರವು ಒಂದು ಸಾರ್ವಜನಿಕ ಉದ್ದೇಶವಾದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ತುಮಕೂರು ಜಿಲ್ಲೆಯ ಕಿ.ಮೀ 42.87 ರಿಂದ ಕಿ.ಮೀ 56.13 (ಅರಸೀಕೆರೆ) ವರೆಗಿನ ಭೂ ಪ್ರದೇಶದಲ್ಲಿ ನಾಲ್ಕು ಪಥದ ರಸ್ತೆ ನಿರ್ಮಾಣಕ್ಕಾಗಿ ಅತ್ಯಾವಶ್ಯಕವಾಗಿರುತ್ತದೆ ಎಂದು ದಿನಾಂಕ: 03.06.2022 ರಂದು ಅಧಿಸೂಚನೆ ಹೊರಡಿಸಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ಭೂ ಸ್ವಾಧೀನಕ್ಕೆ ಒಳಪಡುವ ಜಮೀನುಗಳ ವಿವರಗಳನ್ನು ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಸೂಚನೆ ನೀಡಿದೆ.

ಸದರಿ ಜಮೀನಿನಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿ, ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು (21) ದಿನಗಳೊಳಗಾಗಿ ಆಕ್ಷೇಪಣೆಗಳಿದ್ದಲ್ಲಿ ಮೇಲ್ಕಂಡ ಕಾಯ್ದೆಯ ಸೆಕ್ಷನ್ 3ಸಿ(1) ರ ಅಡಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತೆ.

ಅಚಿತಹ ಆಕ್ಷೇಪಣೆಯನ್ನು ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಭೂ ಸ್ವಾಧೀನ ಸಕ್ಷಮ ಪ್ರಾಧಿಕಾರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರವು ಆಕ್ಷೇಪದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ಅಭ್ಯಾಸಕಾರರ (ವಕೀಲರ) ಮುಖೇನ ಕೇಳುವ ಅವಕಾಶವನ್ನು ನೀಡುತ್ತದೆ, ಮತ್ತು ಅಂತಹ ಎಲ್ಲಾ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸುವಂತೆ, ಆದೇಶದ ಮೂಲಕ ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ತಿರಸ್ಕರಿಸಬಹುದು.

ಸದರಿ ಅಧಿನಿಯಮದ 3ಸಿ(2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ತಿಳಿಸಿರುವ ಭೂ ಸ್ವಾಧೀನಕ್ಕೊಳಪಡುವ ಜಮೀನುಗಳ / ಕಟ್ಟಡಗಳ ನಕಾಶೆ ಮತ್ತು ಇತರೆ ವಿವರಗಳು ಪರಿಶೀಲನೆಗಾಗಿ ಮೇಲ್ಕಂಡ ಸಕ್ಷಮ ಪ್ರಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಿರುತ್ತದೆ.

ಶೆಡ್ಯೂಲ್

ಭೂ ಸ್ವಾಧೀನಕ್ಕೊಳಪಡುವ ಜಮೀನು ಕಟ್ಟಡ, ಇತ್ಯಾದಿಗಳನ್ನು ಒಳಗೊಂಡಂತ ಹಾಗೂ ಒಳಗೊಳ್ಳದಂತ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಕಿ.ಮೀ 42.87 ರಿಂದ ಕಿ.ಮೀ 56.13 (ಅರಸೀಕೆರೆ) ರವರೆಗಿನ (ಇನ್ನೂ ನಿಗಧಿಪಡಿಸಬೇಕಾದ ಹೆದ್ದಾರಿ ಸಂಖ್ಯೆ) ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ **ಜಿಲ್ಲೆ: ತುಮಕೂರು**

ಕ್ರ. ಸಂ.	ಸರ್ವೇ ನಂ./ ಪ್ಲಾಟ್ ನಂ.	ಭೂಮಿಯ ಪ್ರಕಾರ	ಭೂಮಿಯ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಏಕಾಂಶ)	ವಿಸ್ತೀರ್ಣ (ಹೇಕ್ಟೇರ್‌ಗಳಲ್ಲಿ)
ತಾಲ್ಲೂಕು: ತಿಪಟೂರು					
ಗ್ರಾಮ: ಚಿಕ್ಕಹೊನ್ನವಳ್ಳಿ					
1	110	ಖಾಸಗಿ(ಕೃ)	ಭಾಗಾಯ್ತು	2,431.9400000 (ಚ.ಮೀ)	0.2431940
2	112	ಖಾಸಗಿ(ಕೃ)	ಖುಷ್ಕಿ/ತರಿ	9,728.2300000 (ಚ.ಮೀ)	0.9728230
3	113	ಖಾಸಗಿ(ಕೃ)	ಭಾಗಾಯ್ತು	285.8800000 (ಚ.ಮೀ)	0.0285880
4	46	ಸರ್ಕಾರ(ಸೇಂದಿವನ)	ಖರಾಬ್	4,375.7700000 (ಚ.ಮೀ)	0.4375770
5	56/1	ಖಾಸಗಿ(ಕೃ)	ಭಾಗಾಯ್ತು	89.5800000 (ಚ.ಮೀ)	0.0089580
6	56/12	ಖಾಸಗಿ(ಕೃ)	ಖುಷ್ಕಿ	25.5200000 (ಚ.ಮೀ)	0.0025520
7	56/13	ಖಾಸಗಿ(ಕೃ)	ಭಾಗಾಯ್ತು	404.6800000 (ಚ.ಮೀ)	0.0404680
8	56/4	ಖಾಸಗಿ(ಕೃ)	ಭಾಗಾಯ್ತು	1,799.0900000 (ಚ.ಮೀ)	0.1799090
9	56/5	ಖಾಸಗಿ(ಕೃ)	ಖುಷ್ಕಿ	3,301.0600000 (ಚ.ಮೀ)	0.3301060
10	56/9	ಖಾಸಗಿ(ಕೃ)	ಭಾಗಾಯ್ತು	288.6300000 (ಚ.ಮೀ)	0.0288630
11	57/1	ಖಾಸಗಿ(ಕೃ)	ಭಾಗಾಯ್ತು	3,025.4800000 (ಚ.ಮೀ)	0.3025480
12	58	ಖಾಸಗಿ(ಕೃ)	ಖುಷ್ಕಿ	1,218.5600000 (ಚ.ಮೀ)	0.1218560
13	59	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	696.2900000 (ಚ.ಮೀ)	0.0696290
14	69/2	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	327.0200000 (ಚ.ಮೀ)	0.0327020
15	69/3	ಖಾಸಗಿ(ಕೃ)	ಖುಷ್ಕಿ	7,351.8100000 (ಚ.ಮೀ)	0.7351810
16	70/3ಎ	ಖಾಸಗಿ(ಕೃ)	ಖುಷ್ಕಿ	758.6100000 (ಚ.ಮೀ)	0.0758610
17	70/4	ಖಾಸಗಿ(ಕೃ)	ಖುಷ್ಕಿ	2,630.5400000 (ಚ.ಮೀ)	0.2630540
18	70/5	ಖಾಸಗಿ(ಕೃ)	ಖುಷ್ಕಿ	493.7900000 (ಚ.ಮೀ)	0.0493790
19	70/6	ಖಾಸಗಿ(ಕೃ)	ಖುಷ್ಕಿ	2,016.6400000 (ಚ.ಮೀ)	0.2016640
20	70/7	ಖಾಸಗಿ(ಕೃ)	ಖುಷ್ಕಿ	295.0400000 (ಚ.ಮೀ)	0.0295040
21	70/8	ಖಾಸಗಿ(ಕೃ)	ಖುಷ್ಕಿ	3,439.2600000 (ಚ.ಮೀ)	0.3439260
22	70/9	ಖಾಸಗಿ(ಕೃ)	ಖುಷ್ಕಿ	245.6700000 (ಚ.ಮೀ)	0.0245670
23	87/6	ಖಾಸಗಿ(ಕೃ)	ಖುಷ್ಕಿ	627.0800000 (ಚ.ಮೀ)	0.0627080
24	88/1	ಖಾಸಗಿ(ಕೃ)	ಖುಷ್ಕಿ	2,252.1800000 (ಚ.ಮೀ)	0.2252180
25	88/2	ಖಾಸಗಿ(ಕೃ)	ಖುಷ್ಕಿ	2,428.1600000 (ಚ.ಮೀ)	0.2428160
26	89	ಖಾಸಗಿ(ಕೃ)	ಖುಷ್ಕಿ	1,382.7200000 (ಚ.ಮೀ)	0.1382720
27	90/10	ಖಾಸಗಿ(ಕೃ)	ಖುಷ್ಕಿ	10.9600000 (ಚ.ಮೀ)	0.0010960
28	90/11	ಖಾಸಗಿ(ಕೃ)	ಖುಷ್ಕಿ	98.2400000 (ಚ.ಮೀ)	0.0098240
29	90/12	ಖಾಸಗಿ(ಕೃ)	ಖುಷ್ಕಿ	125.3400000 (ಚ.ಮೀ)	0.0125340
30	90/13	ಖಾಸಗಿ(ಕೃ)	ಖುಷ್ಕಿ	505.8500000 (ಚ.ಮೀ)	0.0505850
31	90/14	ಖಾಸಗಿ(ಕೃ)	ಖುಷ್ಕಿ	632.6100000 (ಚ.ಮೀ)	0.0632610
32	90/15	ಖಾಸಗಿ(ಕೃ)	ಖುಷ್ಕಿ	545.8500000 (ಚ.ಮೀ)	0.0545850
33	90/16	ಖಾಸಗಿ(ಕೃ)	ಖುಷ್ಕಿ	116.1400000 (ಚ.ಮೀ)	0.0116140
34	90/3	ಖಾಸಗಿ(ಕೃ)	ಖುಷ್ಕಿ	479.9400000 (ಚ.ಮೀ)	0.0479940
35	90/5ಎ	ಖಾಸಗಿ(ಕೃ)	ಖುಷ್ಕಿ	1,626.2500000 (ಚ.ಮೀ)	0.1626250
36	90/5ಬಿ	ಖಾಸಗಿ(ಕೃ)	ಖುಷ್ಕಿ	185.4100000 (ಚ.ಮೀ)	0.0185410
37	90/7	ಖಾಸಗಿ(ಕೃ)	ಖುಷ್ಕಿ	2,189.1700000 (ಚ.ಮೀ)	0.2189170
38	90/8	ಖಾಸಗಿ(ಕೃ)	ಖುಷ್ಕಿ	1,152.2200000 (ಚ.ಮೀ)	0.1152220
39	91/1	ಖಾಸಗಿ(ಕೃ)	ಖುಷ್ಕಿ	5,997.8700000 (ಚ.ಮೀ)	0.5997870
40	91/2	ಖಾಸಗಿ(ಕೃ)	ಖುಷ್ಕಿ	679.7700000 (ಚ.ಮೀ)	0.0679770
41	91/3	ಖಾಸಗಿ(ಕೃ)	ಖುಷ್ಕಿ	345.5900000 (ಚ.ಮೀ)	0.0345590
ಗ್ರಾಮ: ಚೌಡೇನಹಳ್ಳಿ					
1	28/3	ಖಾಸಗಿ(ಕೃ)	ತರಿ	991.8100000 (ಚ.ಮೀ)	0.0991810
2	28/4	ಖಾಸಗಿ(ಕೃ)	ತರಿ	4,970.1600000 (ಚ.ಮೀ)	0.4970160
3	29/1ಬಿ	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	1,115.4100000 (ಚ.ಮೀ)	0.1115410
4	29/1ಸಿ	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	4,617.1200000 (ಚ.ಮೀ)	0.4617120
5	29/2	ಖಾಸಗಿ(ಕೃ)	ಖುಷ್ಕಿ	163.7700000 (ಚ.ಮೀ)	0.0163770
6	30	ಖಾಸಗಿ(ಕೃ)	ಖುಷ್ಕಿ	5,569.9900000 (ಚ.ಮೀ)	0.5569990
7	34/2	ಖಾಸಗಿ(ಕೃ)	ಖುಷ್ಕಿ	1,651.4900000 (ಚ.ಮೀ)	0.1651490
8	4/10	ಖಾಸಗಿ(ಕೃ)	ಖುಷ್ಕಿ	486.2500000 (ಚ.ಮೀ)	0.0486250
9	4/11	ಖಾಸಗಿ(ಕೃ)	ಖುಷ್ಕಿ	33.4800000 (ಚ.ಮೀ)	0.0033480
10	4/12	ಖಾಸಗಿ(ಕೃ)	ಖುಷ್ಕಿ	22.6100000 (ಚ.ಮೀ)	0.0022610
11	4/13	ಖಾಸಗಿ(ಕೃ)	ಖುಷ್ಕಿ	2,033.5600000 (ಚ.ಮೀ)	0.2033560
12	4/14	ಖಾಸಗಿ(ಕೃ)	ಭಾಗಾಯ್ತು	3,681.4200000 (ಚ.ಮೀ)	0.3681420
13	4/15ಎ	ಖಾಸಗಿ(ಕೃ)	ತರಿ	152.0600000 (ಚ.ಮೀ)	0.0152060
14	4/15ಬಿ	ಖಾಸಗಿ(ಕೃ)	ಖುಷ್ಕಿ	2,293.7400000 (ಚ.ಮೀ)	0.2293740
15	4/5ಎ	ಖಾಸಗಿ(ಕೃ)	ಖುಷ್ಕಿ	6,412.6800000 (ಚ.ಮೀ)	0.6412680
16	4/5ಬಿ	ಖಾಸಗಿ(ಕೃ)	ಖುಷ್ಕಿ	508.1700000 (ಚ.ಮೀ)	0.0508170
17	4/6	ಖಾಸಗಿ(ಕೃ)	ಖುಷ್ಕಿ	1,983.0100000 (ಚ.ಮೀ)	0.1983010
18	4/7	ಖಾಸಗಿ(ಕೃ)	ಖುಷ್ಕಿ	1,085.8200000 (ಚ.ಮೀ)	0.1085820
19	4/8	ಖಾಸಗಿ(ಕೃ)	ಖುಷ್ಕಿ	30.8600000 (ಚ.ಮೀ)	0.0030860
20	4/9	ಖಾಸಗಿ(ಕೃ)	ಖುಷ್ಕಿ	1,296.9800000 (ಚ.ಮೀ)	0.1296980
21	6	ಸರ್ಕಾರ(ಸಾರ್ವಜನಿಕ ಸ್ಮಶಾನ)	ಸೇಂದಿವನ	3,536.8500000 (ಚ.ಮೀ)	0.3536850
22	64	ಖಾಸಗಿ(ಕೃ)	ಖುಷ್ಕಿ	5,873.3470000 (ಚ.ಮೀ)	0.5873347
23	65	ಖಾಸಗಿ(ಕೃ)	ಖುಷ್ಕಿ	1,698.8600000 (ಚ.ಮೀ)	0.1698860
24	67/1	ಖಾಸಗಿ(ಕೃ)	ಖುಷ್ಕಿ	674.8600000 (ಚ.ಮೀ)	0.0674860
25	67/2	ಖಾಸಗಿ(ಕೃ)	ಖುಷ್ಕಿ	1,611.9900000 (ಚ.ಮೀ)	0.1611990
26	67/3	ಖಾಸಗಿ(ಕೃ)	ಖುಷ್ಕಿ	4,393.2400000 (ಚ.ಮೀ)	0.4393240
27	67/4	ಖಾಸಗಿ(ಕೃ)	ಖುಷ್ಕಿ	1,706.7600000 (ಚ.ಮೀ)	0.1706760
28	68/1	ಖಾಸಗಿ(ಕೃ)	ಖುಷ್ಕಿ	1,479.5100000 (ಚ.ಮೀ)	0.1479510
29	68/2	ಖಾಸಗಿ(ಕೃ)	ಖುಷ್ಕಿ	10.7800000 (ಚ.ಮೀ)	0.0010780
30	69/2	ಖಾಸಗಿ(ಕೃ)	ಖುಷ್ಕಿ	4,315.9100000 (ಚ.ಮೀ)	0.4315910
31	69/3	ಖಾಸಗಿ(ಕೃ)	ಖುಷ್ಕಿ	1,517.1900000 (ಚ.ಮೀ)	0.1517190
32	73/1	ಖಾಸಗಿ(ಕೃ)	ಖುಷ್ಕಿ	19.2700000 (ಚ.ಮೀ)	0.0019270
33	73/2	ಖಾಸಗಿ(ಕೃ)	ಖುಷ್ಕಿ	3,496.1400000 (ಚ.ಮೀ)	0.3496140
34	74/1	ಖಾಸಗಿ(ಕೃ)	ಖುಷ್ಕಿ	6,081.9600000 (ಚ.ಮೀ)	0.6081960
35	84/1	ಖಾಸಗಿ(ಕೃ)	ಖುಷ್ಕಿ	2,356.8200000 (ಚ.ಮೀ)	0.2356820
36	84/2	ಖಾಸಗಿ(ಕೃ)	ಖುಷ್ಕಿ	725.7900000 (ಚ.ಮೀ)	0.0725790
ಗ್ರಾಮ: ಹೊನ್ನವಳ್ಳಿ					
1	686/1	ಖಾಸಗಿ(ಕೃ)	ಖುಷ್ಕಿ	2,855.6900000 (ಚ.ಮೀ)	0.2855690
2	686/16	ಖಾಸಗಿ(ಕೃ)	ಖುಷ್ಕಿ	194.3800000 (ಚ.ಮೀ)	0.0194380
3	686/17	ಖಾಸಗಿ(ಕೃ)	ಖುಷ್ಕಿ	652.2400000 (ಚ.ಮೀ)	0.0652240
4	686/18	ಖಾಸಗಿ(ಕೃ)	ಖುಷ್ಕಿ	747.5500000 (ಚ.ಮೀ)	0.0747550
5	686/4	ಖಾಸಗಿ(ಕೃ)	ಖುಷ್ಕಿ	2,225.4300000 (ಚ.ಮೀ)	0.2225430
6	686/5	ಖಾಸಗಿ(ಕೃ)	ಖುಷ್ಕಿ	5.2100000 (ಚ.ಮೀ)	0.0005210
7	686/7	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	315.3300000 (ಚ.ಮೀ)	0.0315330
8	686/8	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	118.9100000 (ಚ.ಮೀ)	0.0118910
9	686/9	ಖಾಸಗಿ(ಕೃ)	ಖುಷ್ಕಿ	1,437.7500000 (ಚ.ಮೀ)	0.1437750
10	687	ಖಾಸಗಿ(ಕೃ)	ಖುಷ್ಕಿ	1,269.7500000 (ಚ.ಮೀ)	0.1269750
11	695/1	ಖಾಸಗಿ(ಕೃ)	ಖುಷ್ಕಿ	1,159.3900000 (ಚ.ಮೀ)	0.1159390
12	696	ಖಾಸಗಿ(ಕೃ)	ಖುಷ್ಕಿ	12,161.5900000 (ಚ.ಮೀ)	1.2161590
13	697/3	ಖಾಸಗಿ(ಕೃ)	ಖುಷ್ಕಿ	688.6600000 (ಚ.ಮೀ)	0.0688660
14	697/4	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	844.7200000 (ಚ.ಮೀ)	0.0844720
15	702/11	ಖಾಸಗಿ(ಕೃ)	ಖುಷ್ಕಿ	2,321.9300000 (ಚ.ಮೀ)	0.2321930
16	702/5ಬಿ	ಖಾಸಗಿ(ಕೃ)	ಖುಷ್ಕಿ	8.8100000 (ಚ.ಮೀ)	0.0008810
17	702/6	ಖಾಸಗಿ(ಕೃ)	ಖುಷ್ಕಿ	1,284.0900000 (ಚ.ಮೀ)	0.1284090
18	702/7	ಖಾಸಗಿ(ಕೃ)	ಖುಷ್ಕಿ	533.9300000 (ಚ.ಮೀ)	0.0533930
19	702/8ಬಿ	ಖಾಸಗಿ(ಕೃ)	ಖುಷ್ಕಿ	1,805.0900000 (ಚ.ಮೀ)	0.1805090
20	702/9	ಖಾಸಗಿ(ಕೃ)	ಖುಷ್ಕಿ	1,754.8800000 (ಚ.ಮೀ)	0.1754880
21	703/2	ಖಾಸಗಿ(ಕೃ)	ಖುಷ್ಕಿ	35.9600000 (ಚ.ಮೀ)	0.0035960
22	703/3	ಖಾಸಗಿ(ಕೃ)	ಖುಷ್ಕಿ	833.0700000 (ಚ.ಮೀ)	0.0833070
23	703/4	ಖಾಸಗಿ(ಕೃ)	ಖುಷ್ಕಿ	2,262.7600000 (ಚ.ಮೀ)	0.2262760
24	703/5	ಖಾಸಗಿ(ಕೃ)	ಖುಷ್ಕಿ	188.5700000 (ಚ.ಮೀ)	0.0188570
25	703/7	ಖಾಸಗಿ(ಕೃ)	ಖುಷ್ಕಿ	515.0400000 (ಚ.ಮೀ)	0.0515040
26	703/8	ಖಾಸಗಿ(ಕೃ)	ಖುಷ್ಕಿ	809.3600000 (ಚ.ಮೀ)	0.0809360
27	703/9	ಖಾಸಗಿ(ಕೃ)	ಖುಷ್ಕಿ	289.3400000 (ಚ.ಮೀ)	0.0289340
28	712/5	ಖಾಸಗಿ(ಕೃ)	ಭಾಗಾಯ್ತು	265.1800000 (ಚ.ಮೀ)	0.0265180
29	713/1	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	1,786.8200000 (ಚ.ಮೀ)	0.1786820
30	713/2	ಖಾಸಗಿ(ಕೃ)	ಖುಷ್ಕಿ	3,136.2700000 (ಚ.ಮೀ)	0.3136270
31	714/1	ಖಾಸಗಿ(ಕೃ)	ಖುಷ್ಕಿ	3,383.1900000 (ಚ.ಮೀ)	0.3383190
32	714/2	ಖಾಸಗಿ(ಕೃ)	ಖುಷ್ಕಿ	2,143.5600000 (ಚ.ಮೀ)	0.2143560
33	714/3	ಖಾಸಗಿ(ಕೃ)	ಖುಷ್ಕಿ	393.3700000 (ಚ.ಮೀ)	0.0393370
34	714/4	ಖಾಸಗಿ(ಕೃ)	ಖುಷ್ಕಿ	1,610.6600000 (ಚ.ಮೀ)	0.1610660
ಗ್ರಾಮ: ಕೋಡಿಹಳ್ಳಿ					
1	31	ಖಾಸಗಿ(ಕೃ)	ಖುಷ್ಕಿ	31,620.9500000 (ಚ.ಮೀ)	3.1620950
2	36/1	ಖಾಸಗಿ(ಕೃ)	ಖುಷ್ಕಿ	462.2800000 (ಚ.ಮೀ)	0.0462280
3	36/2ಎ	ಖಾಸಗಿ(ಕೃ)	ಖುಷ್ಕಿ	284.1300000 (ಚ.ಮೀ)	0.0284130
4	39	ಖಾಸಗಿ(ಕೃ)	ಖುಷ್ಕಿ	56,610.9500000 (ಚ.ಮೀ)	5.6610950
5	40	ಖಾಸಗಿ(ಕೃ)	ಖುಷ್ಕಿ	29.6700000 (ಚ.ಮೀ)	0.0029670
6	41/1	ಖಾಸಗಿ(ಕೃ)	ಖುಷ್ಕಿ	53.9600000 (ಚ.ಮೀ)	0.0053960
7	41/2	ಖಾಸಗಿ(ಕೃ)	ಖುಷ್ಕಿ	68.7600000 (ಚ.ಮೀ)	0.0068760
8	44	ಖಾಸಗಿ(ಕೃ)	ಖುಷ್ಕಿ	1,698.3600000 (ಚ.ಮೀ)	0.1698360
9	74	ಖಾಸಗಿ(ಕೃ)	ಖುಷ್ಕಿ	3,700.9100000 (ಚ.ಮೀ)	0.3700910
ಗ್ರಾಮ: ಮಲ್ಲಿದೇವಿಹಳ್ಳಿ					
1	38	ಖಾಸಗಿ(ಕೃ)	ಖುಷ್ಕಿ	49,318.4900000 (ಚ.ಮೀ)	4.9318490
2	39	ಖಾಸಗಿ(ಕೃ)	ಖುಷ್ಕಿ	23,788.3300000 (ಚ.ಮೀ)	2.3788330
ಗ್ರಾಮ: ಮುದ್ದೇನಹಳ್ಳಿ					
1	11	ಖಾಸಗಿ(ಕೃ)	ಖುಷ್ಕಿ	27,174.3500000 (ಚ.ಮೀ)	2.7174350
ಗ್ರಾಮ: ರಟ್ಟೇನಹಳ್ಳಿ					
1	100	ಖಾಸಗಿ(ಕೃ)	ಖುಷ್ಕಿ	41,096.9100000 (ಚ.ಮೀ)	4.1096910
2	101/8ಎ1	ಖಾಸಗಿ(ಕೃ)	ಖುಷ್ಕಿ	4,794.3500000 (ಚ.ಮೀ)	0.4794350
3	101/8ಎ2	ಖಾಸಗಿ(ಕೃ)	ಖುಷ್ಕಿ	4,280.5700000 (ಚ.ಮೀ)	0.4280570
4	107	ಖಾಸಗಿ(ಕೃ)	ಖುಷ್ಕಿ	24.8500000 (ಚ.ಮೀ)	0.0024850
5	108	ಖಾಸಗಿ(ಕೃ)	ಖುಷ್ಕಿ	583.5400000 (ಚ.ಮೀ)	0.0583540
6	111/1	ಖಾಸಗಿ(ಕೃ)	ಭಾಗಾಯ್ತು	8,960.5300000 (ಚ.ಮೀ)	0.8960530
7	111/3	ಖಾಸಗಿ(ಕೃ)	ಭಾಗಾಯ್ತು	6,567.1400000 (ಚ.ಮೀ)	0.6567140
8	111/4	ಖಾಸಗಿ(ಕೃ)	ಭಾಗಾಯ್ತು	8.3100000 (ಚ.ಮೀ)	0.0008310
9	111/5	ಖಾಸಗಿ(ಕೃ)	ಭಾಗಾಯ್ತು	1,324.1100000 (ಚ.ಮೀ)	0.1324110
10	112	ಸರ್ಕಾರ(ಖರಾಬ್)	ಖರಾಬ್	378.0100000 (ಚ.ಮೀ)	0.0378010
11	118/11	ಖಾಸಗಿ(ಕೃ)	ಖುಷ್ಕಿ	1,268.9700000 (ಚ.ಮೀ)	0.1268970
12	118/12	ಖಾಸಗಿ(ಕೃ)	ಖುಷ್ಕಿ	388.7300000 (ಚ.ಮೀ)	0.0388730
13	120	ಖಾಸಗಿ(ಕೃ)	ಖುಷ್ಕಿ	5,487.8800000 (ಚ.ಮೀ)	0.5487880
14	123	ಖಾಸಗಿ(ಕೃ)	ಖುಷ್ಕಿ	485.7500000 (ಚ.ಮೀ)	0.0485750
15	141	ಖಾಸಗಿ(ಕೃ)	ಖುಷ್ಕಿ	1,223.7200000 (ಚ.ಮೀ)	0.1223720
16	91/1	ಖಾಸಗಿ(ಕೃ)	ಖುಷ್ಕಿ	6,557.0500000 (ಚ.ಮೀ)	0.6557050
17	91/2	ಖಾಸಗಿ(ಕೃ)	ಖುಷ್ಕಿ	227.6400000 (ಚ.ಮೀ)	0.0227640
18	94/1ಎ	ಖಾಸಗಿ(ಕೃ)	ಖುಷ್ಕಿ	1,384.7400000 (ಚ.ಮೀ)	0.1384740
19	94/1ಬಿ	ಖಾಸಗಿ(ಕೃ)	ಖುಷ್ಕಿ	483.3400000 (ಚ.ಮೀ)	0.0483340
20	94/2	ಖಾಸಗಿ(ಕೃ)	ಖುಷ್ಕಿ	183.6900000 (ಚ.ಮೀ)	0.0183690
21	94/4	ಖಾಸಗಿ(ಕೃ)	ಖುಷ್ಕಿ	15.9100000 (ಚ.ಮೀ)	0.0015910
22	95/1	ಖಾಸಗಿ(ಕೃ)	ಖುಷ್ಕಿ	765.2200000 (ಚ.ಮೀ)	0.0765220
23	95/2	ಖಾಸಗಿ(ಕೃ)	ಖುಷ್ಕಿ	1,089.7300000 (ಚ.ಮೀ)	0.1089730
24	95/3	ಖಾಸಗಿ(ಕೃ)	ಖುಷ್ಕಿ	845.4200000 (ಚ.ಮೀ)	0.0845420
25	95/4	ಖಾಸಗಿ(ಕೃ)	ಖುಷ್ಕಿ	268.6200000 (ಚ.ಮೀ)	0.0268620

ವಿಮಾನ ಇಂಧನ ದರ ಶೇ 2.2 ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಿಮಾನ ಇಂಧನ (ಎಟಿಎಫ್) ದರವನ್ನು ಶನಿವಾರ ಶೇ 2.2ರಷ್ಟು ಇಳಿಕೆ ಮಾಡಿವೆ.

ಈ ಪರಿಷ್ಕರಣೆಯಿಂದಾಗಿ ದೆಹಲಿಯಲ್ಲಿ ವಿಮಾನ ಇಂಧನ ದರ ಪ್ರತಿ ಕಿಲೋ ಲೀಟರಿಗೆ ₹3,084.94ರಷ್ಟು ಕಡಿಮೆ ಆಗಿದ್ದು, ₹ 1.38 ಲಕ್ಷಕ್ಕೆ ಇಳಿಕೆ ಆಗಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್). ಅಂತರರಾಷ್ಟ್ರೀಯ ಮಾರು-ಕಟ್ಟೆಯಲ್ಲಿ ಕಚ್ಚಾ ತೈಲ ದರಕ್ಕೆ ಇಳಿಕೆ ಆಗಿರುವುದರಿಂದ ಕಂಪನಿಗಳು ಎಟಿಎಫ್ ದರವನ್ನು ಕಡಿಮೆ ಮಾಡಿವೆ.

ಈ ವರ್ಷದಲ್ಲಿ ಎರಡನೇ ಬಾರಿಗೆ ದರ ಇಳಿಕೆ ಮಾಡಲಾಗಿದೆ. ಇದೇ ವೇಳೆ, ಒಟ್ಟಾರೆ 11 ಬಾರಿ ದರವನ್ನು ಹೆಚ್ಚಿಸಲಾಗಿದೆ. ಪೆಟ್ರೋಲ್, ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಚಿನ್ನ, ಬೆಳ್ಳಿ

(ಬೆಂಗಳೂರು)

- ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ) ₹51,950
- ಆಭರಣ ಚಿನ್ನ (1 ಗ್ರಾಂ) ₹4,780
- ಬೆಳ್ಳಿ (ಕೆ.ಜಿಗೆ) ₹56,800

ಖಾದ್ಯ ತೈಲ ಮುಂಬೈ

(10 ಕೆಜಿಗೆ)

- ಶೇಂಗಾ (ರಿಫೈನ್ಡ್) ₹1635 (1635)
- ಸೋಯಾ (ರಿಫೈನ್ಡ್) ₹1230 (1230)
- ಸೂರ್ಯಕಾಂತಿ (ರಿಫೈನ್ಡ್) ₹1580 (1580)
- ಪಾಮೋಲಿನ್ ₹1155 (1157)

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
- 100 ಮೊಟ್ಟೆಗೆ ₹440
- 12 ಮೊಟ್ಟೆಗೆ ₹67

ಮೈಸೂರು
- 100 ಮೊಟ್ಟೆಗೆ ₹440

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

- ಆರ್ಎಸ್ಎಸ್-4 ₹172
- ಆರ್ಎಸ್ಎಸ್-5 ₹163
- ಗುಡ್ ಲಾಟ್ ₹157

ರಾಮನಗರ ರೇಷ್ಮೆಗೂಡು ಧಾರಣೆ

- ಮಿಶ್ರತಳಿ (ಸಿ.ಬಿ) ₹253-519
- ದ್ವಿತಳಿ (ಬಿ.ವಿ) ₹250-789

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳ ರಾಜ್ಯ ಮಟ್ಟದ ಸಮ್ಮೇಳನ: ಬೊಮ್ಮಾಯಿ ಹೇಳಿಕೆ

ಹೆಚ್ಚು ಉದ್ಯೋಗ ನೀಡುವವರಿಗೆ ಉತ್ತೇಜನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಹಾವೇರಿ: 'ಹೆಚ್ಚು ಹೆಚ್ಚು ಜನರಿಗೆ ಉದ್ಯೋಗ ನೀಡುವ ಕಂಪನಿಗಳಿಗೆ ವಿವಿಧ ರೀತಿಯ ಉತ್ತೇಜನ ನೀಡುವ ಬಗ್ಗೆ ಚಿಂತನೆ ನಡೆದಿದೆ. ಇದಕ್ಕೆ ಸಂಬಂಧಿಸಿದಂತೆ ಸದ್ಯದಲ್ಲಿಯೇ ಉದ್ಯೋಗ ನೀತಿ ರೂಪಿಸಲಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹುಬ್ಬಳ್ಳಿಯ ಡೆನಿಸನ್ ಹೋಟೆಲ್‌ನಲ್ಲಿ ಬೆಂಗಳೂರಿನ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಹಾಗೂ ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಜಂಟಿಯಾಗಿ ಶನಿವಾರ ಆಯೋಜಿಸಿದ್ದ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘ– ಸಂಸ್ಥೆಗಳ ರಾಜ್ಯ ಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಜನರಿಗೆ ಕೆಲಸ ಸಿಗಬೇಕು. ವಿಶೇಷವಾಗಿ ಮಹಿಳೆಯರಿಗೆ ಇನ್ನಷ್ಟು ಹೆಚ್ಚಿನ ಅವಕಾಶಗಳು ಸಿಗಬೇಕು' ಎಂದು ಹೇಳಿದರು.

'ಕೈಗಾರಿಕೆ ಇಲಾಖೆ' ಹೆಸರು ಬದಲಾವಣೆ: ಸಣ್ಣ– ಮಧ್ಯಮ ಹಾಗೂ ಭಾರಿ ಪ್ರಮಾಣದ ಕೈಗಾರಿಕೆಗಳು ಎನ್ನುವ ಪ್ರತ್ಯೇಕತೆ ತೆಗೆದುಹಾಕಿ ಎಲ್ಲವನ್ನೂ ಕೈಗಾರಿಕೆಗಳು ಎಂದು ಗುರುತಿಸಲಾಗುವುದು. ಇಲಾಖೆಯ ಹೆಸರನ್ನು 'ಕೈಗಾರಿಕೆ ಇಲಾಖೆ' ಎಂದು ಮರುನಾಮಕರಣ ಮಾಡಲಾಗುವುದು ಎಂದರು.

ಕೃಷಿ ಉದ್ಯಮ ನೀತಿ ಜಾರಿಗೆ ಚಿಂತನೆ: ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಖುರ್ಸಾಪುರ ಗ್ರಾಮದಲ್ಲಿ 'ಶಿಗ್ಗಾವಿ ಜವಳಿ ಪಾರ್ಕ್' ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಬೊಮ್ಮಾಯಿ, 'ರೈತರ ಬದುಕನ್ನು ಹಸನುಗೊಳಿಸಲು ಕೃಷಿ ನೀತಿಯಲ್ಲಿ ಬದಲಾವಣೆ ತರುವುದರೊಂದಿಗೆ 'ಕೃಷಿ ಉದ್ಯಮ ನೀತಿ' ಜಾರಿಗೆ ತರಲು ಚಿಂತನೆ ನಡೆಸಲಾಗಿದೆ' ಎಂದರು.

> **ಉದ್ಯಮಿಗಳ ಬೇಡಿಕೆಯಂತೆ ತೆರಿಗೆ ಪದ್ಧತಿಯನ್ನು ಸರಳಗೊಳಿಸಿ, ಸ್ವಯಂ ಮೌಲ್ಯಮಾಪನ ತೆರಿಗೆ ಪದ್ಧತಿ ಜಾರಿಗೆ ತರಲು ಚಿಂತನೆ ನಡೆದಿದೆ**
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

'ರೈತರ ಮಕ್ಕಳು ವಿದ್ಯೆ ಪಡೆದು ಇತರ ವೃತ್ತಿಗಳಿಗೂ ಬರಬೇಕು. ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಿ, ರೈತ ಕುಟುಂಬದ ಆದಾಯ ಹೆಚ್ಚಳವಾಗಬೇಕು. ಈ ನಿಟ್ಟಿನಲ್ಲಿ ಕೃಷಿ ಉದ್ಯಮ ನೀತಿ ಜಾರಿಗೊಳಿಸಲಾಗುವುದು' ಎಂದರು.

ಪ್ರತಿ ತಾಲ್ಲೂಕಿನಲ್ಲೂ ಜವಳಿ ಪಾರ್ಕ್: ಶಿಗ್ಗಾವಿ ಜವಳಿ ಪಾರ್ಕ್ ಪೂರ್ಣಗೊಂಡರೆ ಸುಮಾರು 10 ಸಾವಿರ ಜನರಿಗೆ ಉದ್ಯೋಗ ಸಿಗಲಿದೆ. ಇದೇ ರೀತಿ ಪ್ರತಿ ತಾಲ್ಲೂಕುಗಳಲ್ಲೂ 'ಜವಳಿ ಪಾರ್ಕ್' ಸ್ಥಾಪಿಸುವುದರಿಂದ ರಾಜ್ಯದಲ್ಲಿ ಔದ್ಯೋಗಿಕ ಕ್ರಾಂತಿಯಾಗಲಿದೆ ಎಂದು ಹೇಳಿದರು.

ಚರ್ಚಿಸೋಣ: 'ಆಹಾರ ಧಾನ್ಯಗಳ ಮೇಲೆ ಜಿಎಸ್‌ಟಿ ಹಾಕಿರುವ ಬಗ್ಗೆ ಚರ್ಚಿಸಲು ವರ್ತಕರು ಹಾಗೂ ಉದ್ಯಮಿಗಳ ಸಭೆಯಲ್ಲಿ ಸದ್ಯದಲ್ಲಿಯೇ ಬೆಂಗಳೂರಿನಲ್ಲಿ ಕರೆಯುತ್ತೇನೆ. ಎಲ್ಲರೂ ಒಟ್ಟಿಗೆ ಸೇರಿ ಏನು ಮಾಡಬೇಕು ಎನ್ನುವ ಬಗ್ಗೆ ಚರ್ಚಿಸೋಣ. ಈ ಚರ್ಚೆಯ ವರದಿಯನ್ನು ಜಿಎಸ್‌ಟಿ ಮಂಡಳಿಗೆ ತಲುಪಿಸುವ ಕೆಲಸ ಮಾಡುತ್ತೇನೆ' ಎಂದು ಬೊಮ್ಮಾಯಿ ಹೇಳಿದರು.

'ಆವಾಸ್ ಯೋಜನೆಯಿಂದ 18 ಲಕ್ಷ ಮನೆ'

ಹುಬ್ಬಳ್ಳಿ: 'ಈ ಹಿಂದಿನ ಸರ್ಕಾರ ಮಾಡಿದ್ದ ತಾಂತ್ರಿಕ ತಪ್ಪಿನಿಂದಾಗಿ ರಾಜ್ಯಕ್ಕೆ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ ಮಂಜೂರಾಗಬೇಕಿದ್ದ 18 ಲಕ್ಷ ಮನೆಗಳು ರದ್ದಾಗಿದ್ದವು. ಇದೀಗ ಅದನ್ನು ಸರಿಪಡಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಯೋಜನೆಯಡಿ ಮಂಜೂರಾಗುವ ಮನೆಗಳನ್ನು ಅತಿವೃಷ್ಟಿಯಿಂದ ಹೆಚ್ಚು ಮನೆಗಳು ಹಾನಿಯಾಗಿರುವ ಪ್ರದೇಶದಲ್ಲಿ ನಿರ್ಮಿಸಲಾಗುವುದು. ಪ್ರತಿ ವರ್ಷ ಸಮಸ್ಯೆ ಉಂಟಾಗುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 'ಟಾಸ್ಕ್ ಫೋರ್ಸ್' ರಚಿಸಲು ಸೂಚಿಸಲಾಗಿದೆ' ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಿಇಎಲ್ ವಹಿವಾಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 3,063 ಕೋಟಿ ಮೊತ್ತದ ವಹಿವಾಟು ನಡೆಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 1,564 ಕೋಟಿ ಮೊತ್ತದ ವಹಿವಾಟು ನಡೆದಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 96ರಷ್ಟು ಬೆಳವಣಿಗೆ ಕಂಡಿದೆ ಎಂದು ಕಂಪನಿಯು ಹೇಳಿದೆ.

ತೆರಿಗೆ ಪೂರ್ವ ಲಾಭ ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 578 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹15 ಕೋಟಿ ಇತ್ತು. ತೆರಿಗೆ ನಂತರದ ಲಾಭ ₹ 11 ಕೋಟಿಯಿಂದ ₹ 431 ಕೋಟಿಗೆ ಏರಿಕೆ ಆಗಿದೆ.

ಮಂಡಕ್ಕಿಗೆ ಜಿಎಸ್‌ಟಿ ಬೇಡ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡಕ್ಕಿ ಮತ್ತಿತರ ಆಹಾರ ಉತ್ಪಾದನೆ ಮೇಲೆ ವಿಧಿಸಿರುವ ಶೇ 5ರಷ್ಟು ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿಯನ್ನು) ರದ್ದುಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಕೂಡಲೇ ಪತ್ರ ಬರೆಯಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ಮಂಡಕ್ಕಿ ಭಟ್ಟಿಯಲ್ಲಿ ದುಡಿಯುವ ಕೂಲಿ ಕಾರ್ಮಿಕರಿಗೆ ಎರಡು ಹೊತ್ತಿನ ಊಟಕ್ಕೆ ಆಗುವಷ್ಟೂ ಗಳಿಕೆ ಇರುವುದಿಲ್ಲ ಎನ್ನುವ ಸಾಮಾನ್ಯ ಜ್ಞಾನವೂ ಡಬ್ಬಲ್ ಎಂಜಿನ್ (ಕೇಂದ್ರ– ರಾಜ್ಯ) ಸರ್ಕಾರಗಳಿಗೆ ಇದ್ದಂತಿಲ್ಲ. ಜನರನ್ನು ಶತ್ರುಗಳೆಂದು ಭಾವಿಸಿ ಎರಡೂ ಸರ್ಕಾರಗಳು ಕೆಲಸ ಮಾಡುತ್ತಿವೆ. ಈ ರೀತಿ ತೆರಿಗೆ ವಿಧಿಸುವುದು ಕ್ರೌರ್ಯದ ಪರಮಾವಧಿ' ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಮಂಡಕ್ಕಿ ಉತ್ಪಾದನೆಗೆ ತಗಲುವ ವೆಚ್ಚ, ಮಾರಾಟ ವೆಚ್ಚಕ್ಕಿಂತ ಹೆಚ್ಚಾಗಿದೆ. ಮಂಡಕ್ಕಿ ಉತ್ಪಾದಿಸಿ ಗ್ರಾಹಕರ ಕೈಗೆ ತಲುಪುವವರೆಗೂ ಬೆಲೆಗಳ ಏರಿಳಿತ ಸಾಮಾನ್ಯ. ಮಳೆಗಾಲದಲ್ಲಿ ಅಕ್ಕಿ ನೆನೆದರೆ ಮಂಡಕ್ಕಿ ಭಟ್ಟಿಗಳನ್ನು ವಾರಗಟ್ಟಲೆ ಮುಚ್ಚಬೇಕಾಗುತ್ತದೆ. ಭಟ್ಟಿ ಮುಚ್ಚಿದರೆ ಮಂಡಕ್ಕಿ ಕಾರ್ಮಿಕರಿಗೆ ಬೇರೆ ಕಡೆ ಕೂಲಿ ಕೆಲಸವೂ ಸಿಗುವುದಿಲ್ಲ. ಸರ್ಕಾರಕ್ಕೆ ಕನಿಷ್ಠ ಮಾನವೀಯತೆ ಇದ್ದಿದ್ದರೂ ಮಂಡಕ್ಕಿ ಮತ್ತಿತರ ಸಣ್ಣ-ಪುಟ್ಟ ಬಡವರ ಆಹಾರ ಉತ್ಪಾದನೆ ಮೇಲೆ ಜಿಎಸ್‌ಟಿ ವಿಧಿಸುತ್ತಿರಲಿಲ್ಲ. ದಾವಣಗೆರೆಯೊಂದರಲ್ಲೆ 5 ಸಾವಿರಕ್ಕೂ ಹೆಚ್ಚು ಕುಟುಂಬಗಳು ಮಂಡಕ್ಕಿ ಭಟ್ಟಿಯನ್ನೇ ನೆಚ್ಚಿಕೊಂಡಿವೆ. ಅಲ್ಲಿನ ಮಂಡಕ್ಕಿ ಉತ್ಪಾದಕರ ಕ್ಷೇಮಾಭಿವೃದ್ಧಿ ಸಂಘದವರು ನನ್ನನ್ನು ಭೇಟಿಯಾಗಿ ಜಿಎಸ್‌ಟಿ ವಿಧಿಸಿರುವುದರಿಂದ ಆಗಿರುವ ಸಂಕಷ್ಟ ಹೇಳಿಕೊಂಡಿದ್ದಾರೆ' ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಎಚ್‌ಡಿಎಫ್‌ಸಿ ಬ್ಯಾಂಕ್ ನಿವ್ವಳ ಲಾಭ ಶೇ 21ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 21ರಷ್ಟು ಹೆಚ್ಚಾಗಿದ್ದು, ₹ 9,579 ಕೋಟಿಗೆ ಏರಿಕೆ ಆಗಿದೆ.

ಒಟ್ಟಾರೆ ನಿವ್ವಳ ಲಾಭವು ₹ 7,729 ಕೋಟಿಯಿಂದ ₹ 9,196 ಕೋಟಿಗೆ ಏರಿಕೆ ಆಗಿದೆ. ಆದರೆ, ಪ್ರಸಕ್ತ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಇದ್ದ ₹ 10,055 ಕೋಟಿ ಲಾಭಕ್ಕೆ ಹೋಲಿಸಿದರೆ ಜೂನ್ ತ್ರೈಮಾಸಿಕದಲ್ಲಿ ಲಾಭವು ಇಳಿಕೆ ಆಗಿದೆ.

ನಿವ್ವಳ ಬಡ್ಡಿ ವರಮಾನ ಶೇ 14.5ರಷ್ಟು ಹೆಚ್ಚಾಗಿ ₹ 19,481 ಕೋಟಿಗೆ ಏರಿಕೆ ಆಗಿದೆ. ಮುಂಗಡದಲ್ಲಿ ಶೇ 22.5ರಷ್ಟು ಬೆಳವಣಿಗೆ ಆಗಿದೆ.

ಒಟ್ಟು ವರಮಾನ ₹ 36,771 ಕೋಟಿಯಿಂದ ₹ 41,560 ಕೋಟಿಗೆ ಏರಿಕೆ ಆಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಠೇವಣಿ ಸಂಗ್ರಹ ಶೇ19.2ರಷ್ಟು ವೃದ್ಧಿಯಾಗಿದೆ. ಒಟ್ಟಾರೆ ವೆಚ್ಚ ₹21,634 ಕೋಟಿಯಿಂದ ₹26,192 ಕೋಟಿಗೆ ಏರಿಕೆ ಆಗಿದೆ. ವಸೂಲಿಯಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣ ಶೇ1.47 ರಿಂದ ಶೇ1.28ಕ್ಕೆ ಇಳಿಕೆ ಕಂಡಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 4,830 ಕೋಟಿ ಇದ್ದಿದ್ದು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 3,188 ಕೋಟಿಗೆ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಡಾಲರ್ ಖರೀದಿಸಿದ ಆರ್‌ಬಿಐ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮೇ ತಿಂಗಳಿನಲ್ಲಿಯೂ ₹ 15,980 ಕೋಟಿ ಮೌಲ್ಯದ ಅಮೆರಿಕದ ಡಾಲರ್ ಖರೀದಿ ಮಾಡಿದೆ.

ಆರ್‌ಬಿಐ ಶನಿವಾರ ಬಿಡುಗಡೆ ಮಾಡಿರುವ 2022ರ ಜುಲೈ ತಿಂಗಳ ವರದಿಯಲ್ಲಿ ಈ ಮಾಹಿತಿ ಇದೆ.

2022ರ ಏಪ್ರಿಲ್‌ನಲ್ಲಿ ಆರ್‌ಬಿಐ ₹ 15,660 ಕೋಟಿ ಮೌಲ್ಯದ ಅಮೆರಿಕನ್ ಡಾಲರ್ ಖರೀದಿಸಿತ್ತು.

2022ರ ಹಣಕಾಸು ವರ್ಷದಲ್ಲಿ ಆರ್‌ಬಿಐ ₹ 1.38 ಲಕ್ಷ ಕೋಟಿ ಮೌಲ್ಯದ ಡಾಲರ್ ಖರೀದಿ ಮಾಡಿತ್ತು.

ಮುಂಬೈ ಧಾರಣೆ

ಶೇಂಗಾ

16-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1645 (1645)
ಒಂದು ವಾರದ ಡೆಲಿವರಿ	1640 (1640)
ಸೋಯಾ ಕಚ್ಚಾ	1140 (1135)
ಪಾಮ್ ವಾರದ ಡೆಲಿವರಿ	1153 (1155)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,250 (50,200)
ಬೆಳ್ಳಿ ಕೆ.ಜಿ 55,100 (54,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಐಪಿಒ: ಸೆಬಿಗೆ ದಾಖಲೆಪತ್ರ ಸಲ್ಲಿಸಿದ ಸುಲಾ ವೈನ್‌ಯಾರ್ಡ್ಸ್

ನವದೆಹಲಿ (ಪಿಟಿಐ): ವೈನ್ ತಯಾರಿಸುವ ಪ್ರಮುಖ ಕಂಪನಿ ಸುಲಾ ವೈನ್‌ಯಾರ್ಡ್ಸ್ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆಪತ್ರಗಳನ್ನು ಸಲ್ಲಿಸಿದೆ.

ಈ ಐಪಿಒ ಸಂಪೂರ್ಣವಾಗಿ ಆಫರ್ ಫರ್ ಸೇಲ್ (ಒಎಫ್ಎಸ್) ಆಗಿರಲಿದೆ. ಪ್ರವರ್ತಕರು, ಹೂಡಿಕೆದಾರರು ಮತ್ತು ಇತರೆ ಷೇರುದಾರರಿಗೆ ಸೇರಿದ ಒಟ್ಟಾರೆ 2.55 ಕೋಟಿ ಷೇರುಗಳನ್ನು ಮಾರಾಟ ಮಾಡಲು ಕಂಪನಿ ನಿರ್ಧರಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-55000

ಚಿತ್ರದುರ್ಗ

ಅಪಿ	49619-50029
ಬೆಟ್ಟೆ	39210-39669
ಕೆಂಪುಗೋಟು	29300-29700
ರಾಶಿ	49139-49589

ಪುತ್ತೂರು

ಕೋಕ	11000-26000
ಹೊಸತು	30500-43500

ಶಿರಸಿ

ಬೆಟ್ಟೆ	35018-43299
ಬಿಳಿಗೋಟು	23199-32606
ಚಾಲಿ	36599-38899
ರಾಶಿ	46311-48999

ಮೂಡಿಗೆರೆ ಕಾಫಿ (50.ಕೆಜಿಗೆ)	ಮುದ್ರೆಮನೆ
ಎಪಿ	15650
ಎಸಿ	8680
ಆರ್‌ಪಿ	9400
ಆರ್‌ಸಿ	4700

Regional Institute of English, South India

Jnanabharathi Campus, Bengaluru-56 Phone: 080-35101131 Website: **www.riesi.ac.in**

Date: 15.07.2022

e-TENDER NOTIFICATION

e-Tenders are invited from the Agencies/Firms for the following Services at RIESI, Bengaluru
1) Providing Unskilled Workers and Security Guards services and Multi Tasking Staff (MTS)
2) Providing Catering Service/ Running Canteen.

Short-Term e-Tender reference	RIE/Outsourced Employees/22-23 Dt. 14.07.2022	RIE/Canteen Tender/ 2022-23 Dt. 14.07.2022
Tender Value	Rs. 17.50 Lakhs	Rs. 70.00 Lakhs
Date of uploading the filled proposal e-Tender document	05.08.2022	06.08.2022
Pre-Bid Meeting	20.07.2022	21.07.2022
Tentative Time & Date of opening of Technical Bid	08.08.2022	10.08.2022
Time & Date of opening Financial Bid	12.08.2022	16.08.2022
Address for Communication	Director, RIESI, Bengaluru - 560 056	

You may visit the Institute during working days between **10.00 am to 5.00 pm.** The terms and conditions may be obtained at **(https://eproc.karnataka.gov.in)** e-Procurement Portal, Government of Karnataka.

Sd/- DIRECTOR

INDIAN MARITIME UNIVERSITY

(ಭಾರತ ಸರ್ಕಾರದ ಕೇಂದ್ರಿಯ ವಿಶ್ವವಿದ್ಯಾಲಯ)
2008ರಲ್ಲಿ ಸಂಸತ್ತಿನ ಕಾಯಿದೆಯಿಂದ ಸ್ಥಾಪಿಸಲಾಯಿತು

ಬಿಬಿಎ ಕಾರ್ಯಕ್ರಮಗಳಿಗೆ ಪ್ರವೇಶಾತಿ

ಬಿಬಿಎ – ಲಾಜಿಸ್ಟಿಕ್ಸ್, ರಿಟೈಲಿಂಗ್ & ಇ–ಕಾಮರ್ಸ್ (ಚೆನ್ನೈ/ಕೊಚ್ಚಿ)

ಬಿಬಿಎ – ಅಪ್ರೆಂಟೈಸ್‌ಶಿಪ್ ಎಂಬೆಡ್ಡೆಡ್ ಮ್ಯಾರಿಟೈಮ್ ಲಾಜಿಸ್ಟಿಕ್ಸ್ (ವಿಶಾಖಪಟ್ಟಣಂ)
(ಅಪ್ರೆಂಟೈಸ್‌ಶಿಪ್ ಅವಧಿಯಲ್ಲಿ ಮಾಸಿಕ ಸಂಭಾವನೆ ರೂ. 7500/–)

ಕ್ಯಾಂಪಸ್ ವಿಳಾಸಗಳು

ಚೆನ್ನೈ ಕ್ಯಾಂಪಸ್
ಈಸ್ಟ್ ಕ್ಯಾಂಪಸ್ ರೋಡ್, ಉತ್ತಂಡಿ, ಚೆನ್ನೈ–600119

ಕೊಚ್ಚಿ ಕ್ಯಾಂಪಸ್
ಸೌಥ್ ಎಂಡ್ ರಿಕ್ಲೆಮೇಶನ್ ಏರಿಯಾ (ಎನ್ಎಚ್47–ಎ ದಲ್ಲಿರುವ), ಅಲೆಕ್ಸಾಂಡರ್ ಪರಂಬಿತರ ಸೇತುವೆ ಸಮೀಪ, ಮತ್ಸ್ಯಪುರಿ ಅಂಚೆ, ವಿಲ್ಲಿಂಗ್ಡನ್ ನಡುಗಡ್ಡೆ, ಕೊಚ್ಚಿ–682029

ವಿಶಾಖಪಟ್ಟಣಂ ಕ್ಯಾಂಪಸ್
ಎನ್ಎಸ್ಆರ್‌ಡಿಸಿ, ಗಾಂಧಿಗ್ರಾಮ ಅಂಚೆ, ವಿಶಾಖಪಟ್ಟಣಂ–530005

ಬಿಬಿಎ ಕಾರ್ಯಕ್ರಮಗಳಿಗೆ ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ 22.07.2022

ಪ್ರಮುಖ ವೈಶಿಷ್ಟ್ಯತೆಗಳು
- ಹಾಸ್ಟೇಲ್‌ಗಳು
- ಮೆಸ್ ಸೌಲಭ್ಯ
- ವೈ–ಫೈ ಸೌಲಭ್ಯವುಳ್ಳ ಕ್ಯಾಂಪಸ್‌ಗಳು
- ಗ್ರಂಥಾಲಯ ಮತ್ತು ಜ್ಞಾನ ಕೇಂದ್ರಗಳು ಸ್ಮಾರ್ಟ್ ಮತ್ತು ಡಿಜಿಟಲ್
- ಕ್ಲಾಸ್‌ರೂಮ್‌ಗಳು

ಹೆಲ್ಪ್‌ಲೈನ್ – 044-24539027, 044-24539028

ನಮ್ಮನ್ನು ಅನುಸರಿಸಿ @IMUHeadquarters @IMU_Headquarters @IMU_HQ

ವಿಚಾರಣೆಗಾಗಿ ಇಮೇಲ್ ಮಾಡಿ bba22@imu.ac.in

ಹೆಚ್ಚಿನ ವಿವರಗಳಿಗಾಗಿ ಸಂದರ್ಶಿಸಿ **www.imu.edu.in**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ. 16–ಸಿ, ಮೌಲಾನ ಅಬುಲ್ ಕಲಾಂ ಅಜಾದ್ ಭವನ್,
ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052

ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಎಂ.ಫಿಲ್ ಮತ್ತು ಪಿಎಚ್.ಡಿ ಫೆಲೋಶಿಪ್ (ಜೆ.ಆರ್.ಎಫ್. ಮಾದರಿ) ನೀಡಿಕೆ ಬಗ್ಗೆ ಪ್ರಕಟಣೆ 2022–23

ಆನ್‌ಲೈನ್ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ
16ನೇ ಆಗಸ್ಟ್ 2022

2021–22 ಮತ್ತು 2022–23 ರ ವರ್ಷದ ಅವಧಿಯಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿ ಗೆ ನೋಂದಣಿ ಮಾಡಿಸಿರುವ ವಿದ್ಯಾರ್ಥಿಗಳು ಮಾತ್ರ ಫೆಲೋಶಿಪ್‌ಗೆ ಅರ್ಹರಾಗಿರುವರು.

ಅರ್ಹತೆ
- ವಿದ್ಯಾರ್ಥಿಗಳು ಕರ್ನಾಟಕದವರಾಗಿರಬೇಕು ಮತ್ತು ಈ ಕೆಳಕಂಡ ಸಮುದಾಯಕ್ಕೆ ಸೇರಿದವರಾಗಿರಬೇಕು: **ಜೈನ, ಪಾರ್ಸಿ, ಬೌದ್ಧ, ಸಿಖ್, ಕ್ರಿಶ್ಚಿಯನ್ ಮತ್ತು ಮುಸ್ಲಿಂ.**
- ಅಭ್ಯರ್ಥಿಯು ಪೂರ್ಣಾವಧಿ ಕೋರ್ಸ್‌ಗೆ ಎನ್‌ರೋಲ್ ಮಾಡಿರಬೇಕು.
- ವಿದ್ಯಾರ್ಥಿಯ ಪಾಲಕರ ಅಥವಾ ಪೋಷಕರ ವಾರ್ಷಿಕ ಆದಾಯ **ರೂ. 8 ಲಕ್ಷಗಳಿಗಿಂತ** ಮೀರಿರಬಾರದು.
- ಗರಿಷ್ಠ ವಯೋಮಿತಿ: 35 ವರ್ಷಗಳು.
- ರಾಜ್ಯ ಮತ್ತು ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.

ಸೂಚನೆಗಳು
- ಎಂ.ಫಿಲ್ ಮತ್ತು ಪಿಎಚ್.ಡಿ ವಿಷಯಗಳಿಗೆ ಆನ್‌ಲೈನ್ ಅರ್ಜಿಗಳನ್ನು ಕೆಳಕಂಡ ವೆಬ್‌ಸೈಟ್ ಮೂಲಕ ಸಲ್ಲಿಸುವುದು: **https://sevasindhuservices.karnataka.gov.in**
- ಅರ್ಜಿಯ ಕಾಗದದ ಪ್ರತಿಯನ್ನು ಅಗತ್ಯ ದಾಖಲೆಗಳೊಡನೆ ಅಧಿಕಾರ ವ್ಯಾಪ್ತಿಯ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿಗೆ ಸಲ್ಲಿಸತಕ್ಕದ್ದು.
- ಯೋಜನೆಯ ವಿವರಗಳಿಗಾಗಿ **https://dom.karnataka.gov.in** ನೋಡಿ.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ– ಸಹಾಯವಾಣಿ (24/7) 8277799990

ಸಹಿ/- ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009. ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಹಂಚಿಕೆ/ಲಾಟರಿ/2022–23 ದಿನಾಂಕ: 15–07–2022

ತಿದ್ದುಪಡಿ ಪ್ರಕಟಣೆ

ದಿನಾಂಕ 16.07.2022 ರಂದು ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳಲ್ಲಿ ಪ್ರಕಟವಾದ ಕರ್ನಾಟಕ ಗೃಹ ಮಂಡಳಿಯ ನಿವೇಶನಗಳ ಇ–ಲಾಟರಿ ಹಂಚಿಕೆ ವೇಳಾಪಟ್ಟಿ ಪ್ರಕಟಣೆ ಜಾಹೀರಾತಿನಲ್ಲಿ ಕ್ರಮ ಸಂಖ್ಯೆ 8ರ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲೂಕು, ಚಿಕ್ಕೊಲಿಕೆರೆ ಲಾಟರಿ ನಡೆಯುವ ದಿನಾಂಕ 12.08.2022 ಎಂದು ತಪ್ಪಾಗಿ ಮುದ್ರಿತವಾಗಿದೆ. ಅದನ್ನು 26.08.2022 ಎಂದು ಓದುವುದು. ಉಳಿದ ವಿಷಯಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಸಾರ್ವಜನಿಕ ನೋಟಿಸ

ನನ್ನ ಪಕ್ಷಗಾರರು ಕೊಟ್ಟ ಅಧಿಕಾರ ವ ಮಾಹಿತಿ ಮೇರೆಗೆ ನೀಡುವ ಸಾರ್ವಜನಿಕ ನೋಟಿಸ ಏನೆಂದರೆ–

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಮಾವನೂರ ಗ್ರಾಮ ಹದ್ದಿಯ **ಶೇತ್ಕಿ ಜಮೀನು ಇದರ ಸರ್ವೆ/ ಬ್ಲಾಕ ನಂಬರ 54 ಹಿಸ್ಸಾ1, ಕ್ಷೇತ್ರ: 05 ಎಕರೆ 02 ಗುಂಟೆ (01 ಗುಂಟೆ ಪಿಕೆ) ತರಂ: 08 ರೂ. 44 ಪೈ ಇದು ಪೂರಾ ಸದರ ಆಸ್ತಿಯು 1) ಶ್ರೀಮತಿ ಗಿರಿಜವ್ವ ಕೋಂ. ಆನಂದಪ್ಪ ಭೋವಿ, 2) ಶ್ರೀ ಆನಂದಪ್ಪ ತಂದೆ ದುರ್ಗಪ್ಪ ಭೋವಿ ಇವರಿಬ್ಬರ ಮಾಲ್ಕೀ ವ ಪ್ರತ್ಯಕ್ಷ ಕಬಜಾದಾರರು ಇರುತ್ತಾರೆ. ಸದರಿ ಮಾಲ್ಕಿ ಹಕ್ಕಿನವರ ಕಡೆಯಿಂದ** ನನ್ನ ಪಕ್ಷಗಾರರು ಮೇಲೆ ಹೇಳಿದ ಆಸ್ತಿಯನ್ನು ಖರೀದಿಸಲು ವ್ಯವಹರಿಸಿದ್ದು ಹಾಗೂ ಶೀಘ್ರವೇ ಸಂಚಗಾರ ಪತ್ರ ನಂತರ ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳಲಿದ್ದಾರೆ.

ಈ ಮೇಲೆ ಹೇಳಿದ ಯಾವತ್ತೂ ಆಸ್ತಿಯಲ್ಲಿನ ಹಕ್ಕು ಹಿತ ಸಂಬಂಧ ಉಳ್ಳವರು ಅಥವಾ ವ್ಯವಹಾರಕ್ಕೆ ತಂಟೆ ತಕರಾರು ಇದ್ದವರು ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ತಮ್ಮ ಲಿಖಿತ ತಕರಾರನ್ನು ಈ ನೋಟಿಸ ಪ್ರಕಟಣೆಯಾದ 7 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು, ನಂತರ ಬರುವ ಯಾವುದೇ ತಕರಾರು ನನ್ನ ಪಕ್ಷಗಾರರ ಮೇಲೆ ಬಾಂದಾಯಿಸದು ಅಂತಾ ಕೊಟ್ಟ ನೋಟಿಸ.

ಹುಬ್ಬಳ್ಳಿ **ದಿನಾಂಕ: 15-07-2022**
ಸಹಿ/- **ಉದಯ ವಿ. ಇಟಗಿ,**
ವಕೀಲರು, ಮನೆ ನಂ. 36,
ಚನ್ನವಿಜಯ, ದೇಶಪಾಂಡೆ ಲೇಔಟ
ಹುಬ್ಬಳ್ಳಿ-23

ಕರ್ನಾಟಕ ಸರಕಾರ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಾರ್ಯಾಲಯ, (ಜಿಲ್ಲಾ ಪಂಚಾಯತ್) ರೋಣ–582209, ಜಿಲ್ಲೆ : ಗದಗ

Phone No: 08381-267050 E-mail: adhron2@gmail.com

ಕ್ರ.ಸಂ.ಸತೋನಿ/ಜಿಪಂ/ರೋ/ /2022–23 ದಿನಾಂಕ: 15.07.2022

ವಾಹನ ಬಾಡಿಗೆ ಟೆಂಡರ್ ಪ್ರಕಟಣೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್) ರೋಣ ಕಚೇರಿಗೆ 2022–23 ನೇ ಸಾಲಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಟಾಟಾ ಬೋಲ್ಟ್/ ಟಾಟ ಜೆಸ್ಟ್/ ಸ್ವಿಫ್ಟ ಒಂದು ವಾಹನ ಒದಗಿಸಲು ಮೊಹರಾದ ಲಕೋಟೆಯಲ್ಲಿ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ ಮೊತ್ತ ರೂ. **10,000/–** ಖಾಲಿ ಟೆಂಡರ್ ಫಾರ್ಮ ಬೆಲೆ ಪ್ರತಿ ಒಂದಕ್ಕೆ **500/–** ರೂ. ಇದ್ದು ದಿನಾಂಕ: **18.07.2022** ರಿಂದ ದಿ. **21.07.2022** ರವರೆಗೆ ಕಚೇರಿಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರ್ಮ ಸಲ್ಲಿಸಲು ದಿ. **27.07.2022** ಮಧ್ಯಾಹ್ನ 5 ಗಂಟೆವರೆಗೆ ಅವಕಾಶವಿದೆ. ದಿನಾಂಕ **28.07.2022** ರಂದು ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯನ್ನು (ದೂ.08381–267050 / 9886215054) ಸಂಪರ್ಕಿಸಬಹುದು.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಜಿಲ್ಲಾ ಪಂಚಾಯತ್) ರೋಣ

ವಾಸಾಸಂಇ/ಗದಗ/ಎಂ.ಸಿ.ಎ/180/2022–23

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರ

ತಾ: ಲಕ್ಷ್ಮೇಶ್ವರ ಜಿ: ಗದಗ
e-mail: itstaff_ulb_laxmeshwar@yahoo.co.in Phone:08487-272916,272334
Website:www.laxmeshwartown.gov.in Fax no:08487-272916

ಕಂ/ಪುಸಲ/ತಾಂ.ವಿ/ಪುರಸಭೆ ನಿಧಿ/ಇ–ಟೆಂಡರ್/ವಹಿ/2022–23 ದಿನಾಂಕ: 16–07–2022

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ಸನ್ 2022–23 ನೇ ಸಾಲಿನ ಪುರಸಭೆ ಅನುಧಾನದಲ್ಲಿ 1 ರಿಂದ 23 ವಾರ್ಡಗಳ ಬೀದಿ ದೀಪ ನಿರ್ವಹಣೆಯ ಕಾಮಗಾರಿ ಅಂದಾಜು ಮೊತ್ತ **ರೂ 29.00** ಲಕ್ಷಗಳಿಗೆ ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡಂಟ್‌ಗಳಲ್ಲಿ ಇ ಟೆಂಡರಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ **http://eproc.karnataka.gov.in** ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **30–07–2022** ರ ಸಂಜೆ **4.00** ಗಂಟೆಯವರೆಗೆ ಟೆಂಡರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು E-portal ನಲ್ಲಿ ಪ್ರಕಟಿಸಲಾಗುವುದು.

ಅ.ನಂ	ಕಾಮಗಾರಿಯ ಇಂಡಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ಸನ್ 2022–23 ನೇ ಸಾಲಿನ 1 ರಿಂದ 23 ವಾರ್ಡಗಳ ಬೀದಿ ದೀಪ ನಿರ್ವಹಣೆಯ ಕುರಿತು DMA/2022-23/EL/ WORK_INDENT133172	29.00

ಸಹಿ/– ಶ್ರೀ ಎಸ್.ಎಸ್.ಹುಲ್ಲಮ್ಮನವರ, ಮುಖ್ಯಾಧಿಕಾರಿಗಳು , ಪುರಸಭೆ ಲಕ್ಷ್ಮೇಶ್ವರ
ಸಹಿ/– ಶ್ರೀಮತಿ ಅಶ್ವಿನಿ ಶಿವಯೋಗೆಪ್ಪ ಅಂಕಲಕೋಟಿ, ಅಧ್ಯಕ್ಷರು, ಪುರಸಭೆ ಲಕ್ಷ್ಮೇಶ್ವರ

ವಾಸಾಇ/ಗದಗ/186/2022–23/ದೇಶಪಾಂಡೆಪಬ್ಲಿಸಿಟಿ

26	95/6	ಖಾಸಗಿ(ಕೃ)	ಖುಷ್ಕಿ	1,374.5900000 (ಚ.ಮೀ)	0.1374590
27	96/1	ಖಾಸಗಿ(ಕೃ)	ಖುಷ್ಕಿ	4,881.0700000 (ಚ.ಮೀ)	0.4881070
28	96/2	ಖಾಸಗಿ(ಕೃ)	ಖುಷ್ಕಿ	221.9700000 (ಚ.ಮೀ)	0.0221970
29	96/3	ಖಾಸಗಿ(ಕೃ)	ಖುಷ್ಕಿ	1,547.1200000 (ಚ.ಮೀ)	0.1547120
30	96/4	ಖಾಸಗಿ(ಕೃ)	ಖುಷ್ಕಿ	2,180.6500000 (ಚ.ಮೀ)	0.2180650
31	98	ಸರ್ಕಾರ(ಸೇಂದಿವನ)	ಖರಾಬ್	749.9700000 (ಚ.ಮೀ)	0.0749970
ಗ್ರಾಮ: ರುದ್ರಾಪುರ					
1	113/1ಎ	ಖಾಸಗಿ(ಕೃ)	ಖುಷ್ಕಿ	1,392.0800000 (ಚ.ಮೀ)	0.1392080
2	113/2ಎ2	ಖಾಸಗಿ(ಕೃ)	ಖುಷ್ಕಿ	3,343.4400000 (ಚ.ಮೀ)	0.3343440
3	113/2ಬಿ	ಖಾಸಗಿ(ಕೃ)	ಖುಷ್ಕಿ	315.1300000 (ಚ.ಮೀ)	0.0315130
4	113/3	ಖಾಸಗಿ(ಕೃ)	ಖುಷ್ಕಿ	3,723.7300000 (ಚ.ಮೀ)	0.3723730
5	113/4	ಖಾಸಗಿ(ಕೃ)	ಖುಷ್ಕಿ	2,405.5100000 (ಚ.ಮೀ)	0.2405510
6	115/1	ಖಾಸಗಿ(ಕೃ)	ಖುಷ್ಕಿ	7,499.6900000 (ಚ.ಮೀ)	0.7499690
7	115/2	ಖಾಸಗಿ(ಕೃ)	ಖುಷ್ಕಿ	8,439.4600000 (ಚ.ಮೀ)	0.8439460
8	130	ಖಾಸಗಿ(ಕೃ)	ಖುಷ್ಕಿ	2,250.5600000 (ಚ.ಮೀ)	0.2250560
9	131	ಖಾಸಗಿ(ಕೃ)	ಖುಷ್ಕಿ	8,410.8700000 (ಚ.ಮೀ)	0.8410870
10	132	ಖಾಸಗಿ(ಕೃ)	ಖುಷ್ಕಿ	8,455.2400000 (ಚ.ಮೀ)	0.8455240
11	133	ಖಾಸಗಿ(ಕೃ)	ಖುಷ್ಕಿ	5,262.1600000 (ಚ.ಮೀ)	0.5262160
12	134/1	ಖಾಸಗಿ(ಕೃ)	ಖುಷ್ಕಿ	10.8700000 (ಚ.ಮೀ)	0.0010870
13	35/1	ಖಾಸಗಿ(ಕೃ)	ಖುಷ್ಕಿ	7,966.1200000 (ಚ.ಮೀ)	0.7966120
14	35/2	ಖಾಸಗಿ(ಕೃ)	ಖುಷ್ಕಿ	585.5800000 (ಚ.ಮೀ)	0.0585580
15	36	ಖಾಸಗಿ(ಕೃ)	ಖುಷ್ಕಿ	3,333.9600000 (ಚ.ಮೀ)	0.3333960
16	38/10	ಖಾಸಗಿ(ಕೃ)	ಖುಷ್ಕಿ	551.9900000 (ಚ.ಮೀ)	0.0551990
17	38/11	ಖಾಸಗಿ(ಕೃ)	ಖುಷ್ಕಿ	3,791.9800000 (ಚ.ಮೀ)	0.3791980
18	38/12	ಖಾಸಗಿ(ಕೃ)	ಖುಷ್ಕಿ/ಭಾಗಾಯ್ತು	10.3700000 (ಚ.ಮೀ)	0.0010370
19	38/13	ಖಾಸಗಿ(ಕೃ)	ಖುಷ್ಕಿ	5,999.2600000 (ಚ.ಮೀ)	0.5999260
20	38/1ಎ1	ಖಾಸಗಿ(ಕೃ)	ಖುಷ್ಕಿ	3,537.9900000 (ಚ.ಮೀ)	0.3537990
21	38/1ಎ2	ಖಾಸಗಿ(ಕೃ)	ಖುಷ್ಕಿ	2,170.1100000 (ಚ.ಮೀ)	0.2170110
22	38/1ಎ3	ಖಾಸಗಿ(ಕೃ)	ಖುಷ್ಕಿ	2,360.2100000 (ಚ.ಮೀ)	0.2360210
23	38/8	ಖಾಸಗಿ(ಕೃ)	ಖುಷ್ಕಿ	2,898.0800000 (ಚ.ಮೀ)	0.2898080
24	41/2	ಖಾಸಗಿ(ಕೃ)	ಖುಷ್ಕಿ	77.1100000 (ಚ.ಮೀ)	0.0077110
25	41/5	ಖಾಸಗಿ(ಕೃ)	ಖುಷ್ಕಿ	617.9500000 (ಚ.ಮೀ)	0.0617950
26	42/1	ಖಾಸಗಿ(ಕೃ)	ಖುಷ್ಕಿ	9,831.4600000 (ಚ.ಮೀ)	0.9831460
27	42/2	ಖಾಸಗಿ(ಕೃ)	ಖುಷ್ಕಿ	911.9800000 (ಚ.ಮೀ)	0.0911980
28	42/3	ಖಾಸಗಿ(ಕೃ)	ಖುಷ್ಕಿ	1,120.8500000 (ಚ.ಮೀ)	0.1120850
29	43/10	ಖಾಸಗಿ(ಕೃ)	ಖುಷ್ಕಿ	190.3100000 (ಚ.ಮೀ)	0.0190310
30	43/11	ಖಾಸಗಿ(ಕೃ)	ಖುಷ್ಕಿ	2,430.3300000 (ಚ.ಮೀ)	0.2430330
31	43/1ಎ1	ಖಾಸಗಿ(ಕೃ)	ಖುಷ್ಕಿ	5,331.0400000 (ಚ.ಮೀ)	0.5331040
32	43/5	ಖಾಸಗಿ(ಕೃ)	ಖುಷ್ಕಿ	686.1800000 (ಚ.ಮೀ)	0.0686180
33	43/6	ಖಾಸಗಿ(ಕೃ)	ಖುಷ್ಕಿ	123.3800000 (ಚ.ಮೀ)	0.0123380
34	43/7	ಖಾಸಗಿ(ಕೃ)	ಖುಷ್ಕಿ	832.7200000 (ಚ.ಮೀ)	0.0832720
35	54/1ಬಿ	ಖಾಸಗಿ(ಕೃ)	ಖುಷ್ಕಿ	38.8300000 (ಚ.ಮೀ)	0.0038830
36	55/1	ಖಾಸಗಿ(ಕೃ)	ಖುಷ್ಕಿ	17,637.0100000 (ಚ.ಮೀ)	1.7637010
37	55/2	ಖಾಸಗಿ(ಕೃ)	ಖುಷ್ಕಿ	863.7900000 (ಚ.ಮೀ)	0.0863790
38	56/1	ಖಾಸಗಿ(ಕೃ)	ಖುಷ್ಕಿ	3,401.1200000 (ಚ.ಮೀ)	0.3401120
39	56/2	ಖಾಸಗಿ(ಕೃ)	ಖುಷ್ಕಿ	17,210.4800000 (ಚ.ಮೀ)	1.7210480
40	57	ಖಾಸಗಿ(ಕೃ)	ಖುಷ್ಕಿ	18,770.9800000 (ಚ.ಮೀ)	1.8770980
ಗ್ರಾಮ: ವಡೇರಹಳ್ಳಿ					
1	24	ಖಾಸಗಿ(ಕೃ)	ಖುಷ್ಕಿ	8,736.1800000 (ಚ.ಮೀ)	0.8736180
2	25/1	ಖಾಸಗಿ(ಕೃ)	ಖುಷ್ಕಿ	359.4400000 (ಚ.ಮೀ)	0.0359440
3	25/2	ಖಾಸಗಿ(ಕೃ)	ಖುಷ್ಕಿ	319.7400000 (ಚ.ಮೀ)	0.0319740
4	25/3	ಖಾಸಗಿ(ಕೃ)	ಖುಷ್ಕಿ	230.0900000 (ಚ.ಮೀ)	0.0230090
5	25/4	ಖಾಸಗಿ(ಕೃ)	ಖುಷ್ಕಿ	219.5100000 (ಚ.ಮೀ)	0.0219510
6	25/5	ಖಾಸಗಿ(ಕೃ)	ಖುಷ್ಕಿ	160.5300000 (ಚ.ಮೀ)	0.0160530
7	25/6	ಖಾಸಗಿ(ಕೃ)	ಖುಷ್ಕಿ	56.8100000 (ಚ.ಮೀ)	0.0056810
8	25/7	ಖಾಸಗಿ(ಕೃ)	ಖುಷ್ಕಿ	10.8600000 (ಚ.ಮೀ)	0.0010860
9	25/8	ಖಾಸಗಿ(ಕೃ)	ಖುಷ್ಕಿ	10.8600000 (ಚ.ಮೀ)	0.0010860
10	26	ಖಾಸಗಿ(ಕೃ)	ಖುಷ್ಕಿ	17,705.1700000 (ಚ.ಮೀ)	1.7705170
11	27	ಖಾಸಗಿ(ಕೃ)	ಖುಷ್ಕಿ	19,332.2900000 (ಚ.ಮೀ)	1.9332290
12	29/7	ಖಾಸಗಿ(ಕೃ)	ಖುಷ್ಕಿ	573.5300000 (ಚ.ಮೀ)	0.0573530
13	30/4	ಖಾಸಗಿ(ಕೃ)	ಖುಷ್ಕಿ	1,725.9900000 (ಚ.ಮೀ)	0.1725990
14	30/5	ಖಾಸಗಿ(ಕೃ)	ಖುಷ್ಕಿ	7,961.3400000 (ಚ.ಮೀ)	0.7961340
15	30/6	ಖಾಸಗಿ(ಕೃ)	ಖುಷ್ಕಿ	4,476.7725000 (ಚ.ಮೀ)	0.4476773
16	31	ಖಾಸಗಿ(ಕೃ)	ಖುಷ್ಕಿ	11,942.9600000 (ಚ.ಮೀ)	1.1942960
17	31	ಸರ್ಕಾರ(ಅರಣ್ಯ)	ಅರಣ್ಯ	11,942.9600000 (ಚ.ಮೀ)	1.1942960
18	33	ಖಾಸಗಿ(ಕೃ)	ಖುಷ್ಕಿ	6,943.4400000 (ಚ.ಮೀ)	0.6943440
			ಮೊತ್ತ	747,208.2095	74.7208

[ಎಫ್.ನಂ. NHAI/ಹಾಸನ–ಹಿರಿಯೂರು/2019–20/PIU–ಹಾಸನ/3A34]
ರಾಜೇಶ್ ಗುಪ್ತಾ, ನಿರ್ದೇಶಕ

ಯಶವಂತ ಸಿನ್ಹಾಗೆ ಎಎಪಿ ಬೆಂಬಲ

ನವದೆಹಲಿ (ಪಿಟಿಐ): ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಯಶವಂತ ಸಿನ್ಹಾ ಅವರಿಗೆ ಆಮ್ ಆದ್ಮಿ ಪಕ್ಷ (ಎಎಪಿ) ಬೆಂಬಲ ಸೂಚಿಸಿದೆ ಎಂದು ಸಂಸದ ಸಂಜಯ್ ಸಿಂಗ್ ಅವರು ತಿಳಿಸಿದ್ದಾರೆ.

ರಾಜಕೀಯ ಸಲಹಾ ಸಮಿತಿಯ (ಪಿಎಸಿ) ಸಭೆಯ ಬಳಿಕ ಮಾತನಾಡಿದ ಅವರು, 'ನಾವು ದ್ರೌಪದಿ ಮುರ್ಮು ಅವರನ್ನು ಗೌರವಿಸುತ್ತೇವೆ. ಆದರೆ, ಆಮ್ ಆದ್ಮಿ ಪಕ್ಷವು ವಿರೋಧ ಪಕ್ಷಗಳ ರಾಷ್ಟ್ರಪತಿ ಅಭ್ಯರ್ಥಿ ಯಶವಂತ ಸಿನ್ಹಾ ಅವರನ್ನು ಬೆಂಬಲಿಸುತ್ತದೆ' ಎಂದು ಹೇಳಿದ್ದಾರೆ.

ಪಿಎಸಿ ಸಭೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ಪಂಜಾಬ್ ಸಂಸದ ರಾಘವ್ ಛಡ್ಡಾ, ಶಾಸಕಿ ಆತಿಶಿ ಮತ್ತು ಪಿಎಸಿಯ ಇತರ ಸದಸ್ಯರು ಪಾಲ್ಗೊಂಡಿದ್ದರು.

ಗೋವಾ ಕಾಂಗ್ರೆಸ್‌ನ ಐವರು ಶಾಸಕರು ಚೆನ್ನೈಗೆ ಸ್ಥಳಾಂತರ

ಪಣಜಿ (ಪಿಟಿಐ): ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ಗೋವಾ ಕಾಂಗ್ರೆಸ್, ತನ್ನ 11 ಮಂದಿ ಶಾಸಕರ ಪೈಕಿ ಐವರನ್ನು ಚೆನ್ನೈಗೆ ಸ್ಥಳಾಂತರಿಸಿದೆ.

'ಶಾಸಕರಾದ ಸಂಕಲ್ಪ್ ಅಮೋನ್‌ಕರ್, ಯೂರಿ ಅಲೆಮಾವೊ, ಆಲ್ಟನ್ ಡಿ ಕೋಸ್ಟಾ, ರುಡಾಲ್ಫ್ ಫರ್ನಾಂಡೀಸ್ ಮತ್ತು ಕಾರ್ಲೋಸ್ ಅಲ್ವೆರಸ್ ಫೆರೇರಾ ಅವರನ್ನು ಶುಕ್ರವಾರ ರಾತ್ರಿ ಚೆನ್ನೈಗೆ ಕಳುಹಿಸಲಾಗಿದೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದ್ದಾರೆ.

'ವಿಧಾನಸಭೆ ಅಧಿವೇಶನ ಮುಗಿದ ಕೂಡಲೇ ಶಾಸಕರನ್ನು ವಿಶೇಷ ವಿಮಾನದಲ್ಲಿ ಚೆನ್ನೈಗೆ ಕರೆದೊಯ್ಯಲಾಗಿದೆ. ಜುಲೈ 18ರಂದು ರಾಷ್ಟ್ರಪತಿ ಚುನಾವಣೆ ನಿಗದಿಯಾಗಿದ್ದು, ಅಂದು ಶಾಸಕರೆಲ್ಲಾ ಚೆನ್ನೈಯಿಂದ ಗೋವಾಕ್ಕೆ ಮರಳಲಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಭಿನ್ನ ಬಣದಲ್ಲಿ ಗುರುತಿಸಿಕೊಂಡಿದ್ದ ದಿಗಂಬರ ಕಾಮತ್, ಮೈಕಲ್ ಲೋಬೊ, ಡೆಲಿಲಾ ಲೋಬೊ, ಕೇದಾರ್ ನಾಯ್ಕ, ಅಲೆಕ್ಸೊ ಸೀಕ್ವೆರಾ ಮತ್ತು ರಾಜೇಶ್ ಫಾಲ್‌ದೇಸಾಯಿ ಅವರನ್ನು ಚೆನ್ನೈಗೆ ಕರೆದುಕೊಂಡು ಹೋಗಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮೈಕಲ್ ಲೋಬೊ, 'ಐವರು ಶಾಸಕರನ್ನಷ್ಟೇ ಚೆನ್ನೈಗೆ ಕರೆದುಕೊಂಡು ಹೋಗಿರುವುದು ಏಕೆ ಎಂಬುದು ತಿಳಿದಿಲ್ಲ. ಈ ಕುರಿತು ನಮಗೆ ಯಾವ ಮಾಹಿತಿಯೂ ಇಲ್ಲ. ನಮ್ಮನ್ನು ಯಾರೂ ಸಂಪರ್ಕಿಸಿಲ್ಲ' ಎಂದಿದ್ದಾರೆ.

ಅರವಿಂದ ಕೇಜ್ರಿವಾಲ್ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ನೇರ ವಾಗ್ದಾಳಿ

'ಉಚಿತ ಕೊಡುಗೆ ಸಂಸ್ಕೃತಿ' ಅಪಾಯಕಾರಿ

ಪ್ರಜಾವಾಣಿ ವಾರ್ತೆ

ನರೇಂದ್ರ ಮೋದಿ

ಲಖನೌ: ಚುನಾವಣೆಗಾಗಿ ಘೋಷಿಸುವ 'ರೇವ್ಡಿ ಕಲ್ಚರ್' (ಉಚಿತ ಕೊಡುಗೆಗಳ ಸಂಸ್ಕೃತಿ) ದೇಶಕ್ಕೆ ಅತ್ಯಂತ ಅಪಾಯಕಾರಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಆಮ್ ಆದ್ಮಿ ಪಕ್ಷವನ್ನು (ಎಎಪಿ) ನೇರ ಗುರಿಯಾಗಿಸಿಕೊಂಡು ಟೀಕಾಪ್ರಹಾರ ನಡೆಸಿದರು.

ದೆಹಲಿ ಮತ್ತು ಚಿತ್ರಕೂಟ ಸಂಪರ್ಕಿಸುವ 296 ಕಿ.ಮೀ. ಉದ್ದದ ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್‌ವೇ ಅನ್ನು ಉದ್ಘಾಟಿಸಿದ ಪ್ರಧಾನಿ ಮೋದಿ ಅವರು, ನಂತರ ಉರೈನಲ್ಲಿ ನಡೆದ ಸಮಾರಂಭದಲ್ಲಿ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡಿದರು.

ಗುಜರಾತ್ ಮತ್ತು ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧಿಸುವುದಾಗಿ ಪ್ರಕಟಿಸಿರುವ ಎಎಪಿ, ಈ ಎರಡು ರಾಜ್ಯಗಳಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಜನರಿಗೆ ಉಚಿತ ವಿದ್ಯುತ್ ನೀಡುವುದಾಗಿ ಘೋಷಿಸಿದೆ.

ಮೋದಿ ಅರ್ಧಂಬರ್ಧ ಆಗಿರುವ ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್‌ವೇ ಉದ್ಘಾಟಿಸುವುದು, 'ನಡೆಯುತ್ತೆ ಬಿಡು' ಸಂಸ್ಕೃತಿ ಪ್ರತಿಪಾದಿಸುವುದರಲ್ಲಿ ಸರ್ಕಾರ ಚಾಂಪಿಯನ್ ಆಗಲು ಹೊರಟಂತಿದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ

ಎಎಪಿಯ ವಿರುದ್ಧ ನೇರ ವಾಗ್ದಾಳಿ ನಡೆಸಿದ ಮೋದಿ ಅವರು 'ಮತ ಗಳಿಸಲು ಉಚಿತ ಕೊಡುಗೆ ಭರವಸೆಗಳ ಸಂಸ್ಕೃತಿ ಈ ದಿನಗಳಲ್ಲಿ ಸಾಮಾನ್ಯ. ಜನರು, ಅದರಲ್ಲೂ ಯುವಜನರು ಇದಕ್ಕೆ ಬಲಿಯಾಗಬಾರದು. ಈ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯ. ಇಂತಹ ರೇವ್ಡಿ (ಉತ್ತರಪ್ರದೇಶ ಸೇರಿ ಉತ್ತರಭಾರತದಲ್ಲಿ ಹಬ್ಬಗಳಲ್ಲಿ ನೀಡುವ ಜನಪ್ರಿಯ ಸಿಹಿ ತಿನಿಸಿಗೆ ರೇವ್ಡಿ ಎನ್ನುವ ಹೆಸರಿದೆ) ಉಚಿತ ಕೊಡುಗೆಗಳಿಂದ ಎಂದಿಗೂ ತಡೆರಹಿತ ಹೆದ್ದಾರಿಗಳು, ರಕ್ಷಣಾ ಕಾರಿಡಾರ್‌ಗಳು ಅಥವಾ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾರವು. ಡಬಲ್ ಎಂಜಿನ್ ಸರ್ಕಾರ ಇಂತಹ ರೇವ್ಡಿಗಳನ್ನು ಘೋಷಿಸದೇ ರಾಜ್ಯವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಿದೆ' ಎಂದು ಅವರು ಹೇಳಿದರು.

ಉಚಿತ ಯೋಜನೆಗಳು ಪ್ರಚಾರಕ್ಕಲ್ಲ, ದೇಶ ಕಟ್ಟಲು: ಕೇಜ್ರಿವಾಲ್

ನವದೆಹಲಿ (ಪಿಟಿಐ): 'ಆಮ್ ಆದ್ಮಿ ಪಕ್ಷದ ಸರ್ಕಾರದ ಯೋಜನೆಗಳಾದ ಉಚಿತ ಶಿಕ್ಷಣ, ಉಚಿತ ಆರೋಗ್ಯ ಸೇವೆ, ಉಚಿತ ವಿದ್ಯುತ್ ಯೋಜನೆಗಳು ಪ್ರಚಾರಕ್ಕಾಗಿ ಅಲ್ಲ. ವಿಶ್ವದಲ್ಲಿ ಭಾರತವನ್ನು ಅಗ್ರಸ್ಥಾನಕ್ಕೇರಿಸುವ ಪ್ರಯತ್ನಗಳಿಗೆ ಅಡಿಗಲ್ಲು ಇವು' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಹೇಳಿದ್ದಾರೆ.

ಚುನಾವಣೆಯಲ್ಲಿ ಮತಗಳಿಸಲು ಘೋಷಿಸುವ 'ರೇವ್ಡಿ ಕಲ್ಚರ್' ದೇಶಕ್ಕೆ ಅತ್ಯಂತ ಅಪಾಯಕಾರಿ. ಇದಕ್ಕೆ ಯುವಜನರು ಬಲಿಯಾಗಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ಕೊಟ್ಟ ಬೆನ್ನಲ್ಲೇ, ಕೇಜ್ರಿವಾಲ್, ಯಾರದೇ ಹೆಸರನ್ನು ನೇರವಾಗಿ ಉಲ್ಲೇಖಿಸದೇ 'ಅವರು ಅಧಿಕಾರದಲ್ಲಿದ್ದಾರೆ. ದೇವರ ಸಂಕಲ್ಪದಿಂದ ದೇಶದ ಎಲ್ಲ ಜನರಿಗೆ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಅವರು ಉಚಿತವಾಗಿ ನೀಡಲಿ' ಎಂದು ಹೇಳಿದ್ದಾರೆ.

'ರೇವ್ಡಿ ಕೊಡುಗೆಗಳನ್ನು ಯಾರು ಕೊಡುತ್ತಿದ್ದಾರೆ ಎನ್ನುವುದನ್ನು ಹೇಳುವೆ. ಇವರು ತಮ್ಮ ಸ್ನೇಹಿತರ ಸಾವಿರಾರು ಕೋಟಿ ಸಾಲ ಮನ್ನಾ ಮಾಡಿ, ತಮ್ಮ ಸ್ನೇಹಿತರನ್ನಾಗಿಯೇ ವಿದೇಶಗಳಿಗೆ ಪ್ರವಾಸ ಕೈಗೊಂಡು, ಸಾವಿರಾರು ಕೋಟಿಗಳ ಯೋಜನೆಗಳ ಗುತ್ತಿಗೆಗಳನ್ನು ಉಚಿತ ಕೊಡುಗೆಗಳಾಗಿ ನೀಡಿದ್ದಾರೆ' ಎಂದು ಮೋದಿ ಹೆಸರೆತ್ತದೇ ಕೇಜ್ರಿವಾಲ್ ಟೀಕಿಸಿದರು.

'ಅಪಘಾತಗಳಲ್ಲಿ ಗಾಯಗೊಂಡವರಿಗೆ ಫರಿಷ್ತೆ ಯೋಜನೆಯಡಿ ಸಕಾಲಿಕ ಉಚಿತ ಚಿಕಿತ್ಸೆ ಸಿಗುವಂತೆ ಮಾಡಿ, 13,000 ಜೀವಗಳನ್ನು ಉಳಿಸಿದ್ದೇವೆ. ಕೇಜ್ರಿವಾಲ್ ರೇವ್ಡಿ ಹಂಚುತ್ತಾರೋ ಅಥವಾ ಪುಣ್ಯದ ಕೆಲಸ ಮಾಡುತ್ತಾರೋ ಎನ್ನುವುದನ್ನು ಆ ಕುಟುಂಬಗಳನ್ನು ಕೇಳಿ' ಎಂದು ಸವಾಲು ಹಾಕಿದರು.

'ದೇಶದಲ್ಲಿ ಇಂದು ಎರಡು ಬಗೆಯ ರಾಜಕಾರಣವಿದೆ. ಒಂದು ಭ್ರಷ್ಟಾಚಾರ ಮತ್ತು ಇನ್ನೊಂದು ಪ್ರಾಮಾಣಿಕತೆ. ನಾವು ಪ್ರಾಮಾಣಿಕತೆಯನ್ನು ಪಾಲಿಸುತ್ತಿದ್ದೇವೆ' ಎಂದರು.

ರಾಜಸ್ಥಾನದ ವಿಧಾನಸಭೆಯಲ್ಲಿ ಮುಖ್ಯ ನ್ಯಾಯಮೂರ್ತಿ ಎನ್‌. ವಿ. ರಮಣ ಬೇಸರ

'ಚರ್ಚೆಯೇ ಇಲ್ಲದೆ ಮಸೂದೆ ಅಂಗೀಕಾರ'

ಜೈಪುರ (ಪಿಟಿಐ): 'ದೇಶದಲ್ಲಿ ಪ್ರಬಲ ಮತ್ತು ಕ್ರಿಯಾಶೀಲವಾದ ವಿರೋಧ ಪಕ್ಷವಿದ್ದರೆ ಆಡಳಿತ ಸುಧಾರಣೆಯೂ ಆಗುತ್ತದೆ. ಸರ್ಕಾರದ ಕಾರ್ಯವೈಖರಿಯೂ ಸರಿಯಾಗಿರುತ್ತದೆ. ಆದರೆ, ದುರದೃಷ್ಟವಶಾತ್ ದೇಶದಲ್ಲಿ ವಿರೋಧ ಪಕ್ಷಗಳ ಸ್ಥಾನ ಕುಗ್ಗುತ್ತಿದೆ. ಹಾಗಾಗಿ, ಚರ್ಚೆ ಇಲ್ಲದೇ ಮಸೂದೆಗಳನ್ನು ಅಂಗೀಕರಿಸಲಾಗುತ್ತಿದೆ' ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್. ವಿ. ರಮಣ ಬೇಸರ ವ್ಯಕ್ತಪಡಿಸಿದರು.

ಎನ್‌.ವಿ. ರಮಣ

ಸ್ವಾತಂತ್ರ್ಯ ಅಮೃತ ಮಹೋತ್ಸವದ ನಿಮಿತ್ತ ಜೈಪುರದಲ್ಲಿ ರಾಜಸ್ಥಾನ ವಿಧಾನಸಭೆಯಲ್ಲಿ ಮಾತನಾಡಿದ ಮುಖ್ಯನ್ಯಾಯಮೂರ್ತಿಗಳು 'ವಿಶೇಷವಾಗಿ, ವಿರೋಧ ಪಕ್ಷದ ನಾಯಕರು ಪ್ರಜಾಪ್ರಭುತ್ವದಲ್ಲಿ ನಕ್ಷತ್ರಿಕನ ಪಾತ್ರ ನಿರ್ವಹಿಸುತ್ತಿದ್ದರು. ಆದರೆ, ಇಂದು ವಿರೋಧ ಪಕ್ಷಗಳ ಸ್ಥಾನ ಕುಗ್ಗುತ್ತಿದೆ. ಆದರ್ಶ ಜಗತ್ತಿನಲ್ಲಿ ಸರ್ಕಾರ ಮತ್ತು ಪ್ರತಿಪಕ್ಷಗಳ ಸಹಕಾರದ ಕಾರ್ಯವು ಪ್ರಗತಿಪರ ಪ್ರಜಾಪ್ರಭುತ್ವಕ್ಕೆ ನಾಂದಿ. ಮಾದರಿಯ ಪ್ರಜಾಪ್ರಭುತ್ವಕ್ಕೆ ಎಲ್ಲರ ಜಂಟಿ ಪ್ರಯತ್ನ ಅಗತ್ಯ' ಎಂದರು.

ಕಾನೂನು ರೂಪಿಸುವ ಜನಪ್ರತಿಗಳಿಗೆ ಕಾನೂನಿನ ಅರಿವುದು ಇರಬೇಕು. ಪ್ರತಿ ಶಾಸಕರಿಗೂ ಕಾನೂನು ಪರಿಣತರ ನೆರವು ಒದಗಿಸಬೇಕು ಎಂದು ಸಿಜೆಐ, ಸ್ಪೀಕರ್‌ಗೆ ಸಲಹೆ ನೀಡಿದರು.

'ವಿಚಾರಣೆ ಇಲ್ಲದೇ ಕೈದಿಗಳ ದೀರ್ಘಾವಧಿ ಬಂಧನ ಪ್ರಶ್ನಾರ್ಹ' 'ಯಾವುದೇ ವಿಚಾರಣೆ ಇಲ್ಲದೇ ದೀರ್ಘಾವಧಿಯವರೆಗೆ ಕೈದಿಗಳನ್ನು ಬಂಧನದಲ್ಲಿ ಇಡುವುದು ಪ್ರಶ್ನಾರ್ಹ ಕ್ರಮ. ವಿಚಾರಣಾಧೀನ ಕೈದಿಗಳ ಸಂಖ್ಯೆ ಹೆಚ್ಚಿರುವುದು ಗಂಭೀರ ಸಮಸ್ಯೆ. ಅಪರಾಧ ನ್ಯಾಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಈ ಸಮಸ್ಯೆ ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳಬೇಕು' ಎಂದು ಸಿಜೆಐ ಎನ್.ವಿ. ರಮಣ ಅವರು ಶನಿವಾರ ಸರ್ಕಾರವನ್ನು ಆಗ್ರಹಿಸಿದರು.

ಇಲ್ಲಿ ನಡೆದ ಅಖಿಲ ಭಾರತ ಕಾನೂನು ಸೇವೆಗಳ ಪ್ರಾಧಿಕಾರದ 18ನೇ ಅಧಿವೇಶನ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿರುವ 6.10 ಲಕ್ಷ ಕೈದಿಗಳಲ್ಲಿ ಶೇ 80 ಕೈದಿಗಳು ವಿಚಾರಣಾಧೀನ ಕೈದಿಗಳು. ನಮ್ಮ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ವಿಚಾರಣೆ ಇಲ್ಲದೇ ದೀರ್ಘಾವಧಿ ಬಂಧನದಲ್ಲಿರಿಸುವ ಪ್ರಕ್ರಿಯೆ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ 'ಒಂದು ಶಿಕ್ಷೆ'ಯು ಆಗಿದೆ. ಆತುರದ, ವಿವೇಚನೆಯಿಲ್ಲದ ಬಂಧನಗಳಿಂದ ಹಿಡಿದು, ಜಾಮೀನು ಪಡೆಯುವಲ್ಲಿನ ಕಷ್ಟದವರೆಗೆ, ಈ ಪ್ರಕ್ರಿಯೆಯು ವಿಚಾರಣಾಧೀನ ಕೈದಿಗಳ ದೀರ್ಘಾವಧಿಯ ಸೆರೆವಾಸಕ್ಕೆ ಕಾರಣವಾಗುತ್ತದೆ' ಎಂದು ವಿಷಾದಿಸಿದರು.

ಅಧಿವೇಶನದಲ್ಲಿ ಸಚಿವ ಕಿರಣ್ ರಿಜಿಜು ಅವರು, ದೇಶದಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಏರಿಕೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, 'ನ್ಯಾಯಾಲಯಗಳಲ್ಲಿ ಪ್ರಕರಣಗಳು ಇಷ್ಟೊಂದು ಸಂಖ್ಯೆಯಲ್ಲಿ ಬಾಕಿಯಾಗಲು ನ್ಯಾಯಾಂಗಕ್ಕೆ ಅಗತ್ಯ ನೇಮಕಾತಿ ಮಾಡದಿರುವುದು ಮತ್ತು ಮೂಲಸೌಕರ್ಯ ಸುಧಾರಿಸದಿರುವುದೇ ಪ್ರಮುಖ ಕಾರಣ' ಎಂದು ದೂರಿದರು.

'ನ್ಯಾಯಾಧೀಶರು ವಿದೇಶಗಳಿಗೆ ಭೇಟಿ ಕೊಟ್ಟಾಗ, ಒಂದು ಪ್ರಕರಣ ಇತ್ಯರ್ಥಕ್ಕೆ ಎಷ್ಟು ವರ್ಷಗಳು ಬೇಕು? ಅಷ್ಟೊಂದು ಸಂಖ್ಯೆಯ ಪ್ರಕರಣಗಳ ಬಾಕಿಗೆ ಕಾರಣಗಳು ನಿಮಗೆ ತಿಳಿದಿದೆಯಾ? ಇಂತಹದೇ ಪ್ರಶ್ನೆಗಳನ್ನೂ ಎದುರಿಸುತ್ತೇವೆ. ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಆಡಳಿತದಲ್ಲಿ ದಕ್ಷತೆ ಹೆಚ್ಚಿಸಲು ನಮಗೆ ಸಮಗ್ರ ಯೋಜನೆಯ ಅಗತ್ಯವಿದೆ. ನ್ಯಾಯಾಂಗದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಮಾಡಬೇಕು. ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಬೇಕು' ಎಂದು ಸಿಜೆಐ, ಸರ್ಕಾರವನ್ನು ಒತ್ತಾಯಿಸಿದರು.

'ನ್ಯಾಯಾಲಯಗಳಲ್ಲಿ ಮಾತೃಭಾಷೆ ಬಳಸಿ'

ಜೈಪುರ (ಪಿಟಿಐ): ಸುಪ್ರೀಂಕೋರ್ಟ್‌ನಲ್ಲಿ ವಾದ–ಪ್ರತಿವಾದ ಮತ್ತು ತೀರ್ಪುಗಳು ಇಂಗ್ಲಿಷ್‌ನಲ್ಲಿ ಇರಬಹುದು. ಆದರೆ, ಹೈಕೋರ್ಟ್‌ಗಳು, ಅಧೀನ ನ್ಯಾಯಾಲಯಗಳು ಕಲಾಪಗಳಲ್ಲಿ ಪ್ರಾದೇಶಿಕ ಮತ್ತು ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಬೇಕು ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಶನಿವಾರ ಹೇಳಿದ್ದಾರೆ.

ಇಲ್ಲಿ ಆಯೋಜಿಸಿದ್ದ ಅಖಿಲ ಭಾರತ ಕಾನೂನು ಸೇವೆಗಳ ಪ್ರಾಧಿಕಾರದ 18ನೇ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಸುಪ್ರೀಂಕೋರ್ಟ್‌ನಲ್ಲಿ ವಾದ–ಪ್ರತಿವಾದ ಮತ್ತು ತೀರ್ಪುಗಳು ಇಂಗ್ಲೀಷಿನಲ್ಲೇ ಬರುತ್ತಿವೆ. ಆದರೆ, ನಮ್ಮ ದೃಷ್ಟಿಕೋನ ಹೈಕೋರ್ಟ್‌ಗಳು ಮತ್ತು ಅಧೀನ ನ್ಯಾಯಾಲಯಗಳಲ್ಲಾದರೂ ಪ್ರಾದೇಶಿಕ ಹಾಗೂ ಸ್ಥಳೀಯ ಭಾಷೆಗಳಿಗೆ ಆದ್ಯತೆ ಸಿಗಬೇಕೆನ್ನುವುದಾಗಿದೆ ಎಂದರು.

ದೇಶದಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಏರುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು, 'ಇಂತಹ ಪ್ರಕರಣಗಳ ಸಂಖ್ಯೆ 5 ಕೋಟಿಗೆ ತಲುಪುತ್ತಿದೆ. ಜನರು ಪ್ರಕರಣಗಳ ಇತ್ಯರ್ಥಕ್ಕೆ 25 ವರ್ಷಗಳು ಬೇಕಾ? ಎಂದು ನನ್ನ ಬಳಿ ಕೇಳುತ್ತಾರೆ. ನ್ಯಾಯಾಂಗ ಮತ್ತು ಸರ್ಕಾರದ ಮಧ್ಯೆ ಸಮನ್ವಯತೆ ಇದ್ದಾಗ ಇಂತಹ ಅನಿಶ್ಚಿತತೆ ತಗ್ಗಿಸಬಹುದು. ಆದಷ್ಟು ಬೇಗ ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸಬೇಕು. ಪ್ರಕರಣಗಳ ಸಂಖ್ಯೆಯನ್ನು ಇನ್ನು ಎರಡು ವರ್ಷಗಳಲ್ಲಿ ಎರಡು ಲಕ್ಷಕ್ಕೆ ತಗ್ಗಿಸಲು ಅಧಿಕಾರಿಗಳಿಗೂ ಸೂಚಿಸಿರುವೆ' ಎಂದು ಅವರು ಹೇಳಿದರು.

ಉಪರಾಷ್ಟ್ರಪತಿ ಚುನಾವಣೆ: ಧನಕರ್ ಎನ್‌ಡಿಎ ಅಭ್ಯರ್ಥಿ

ಜಾಟ್ ಮತಗಳ ಮೇಲೆ ಬಿಜೆಪಿ ಕಣ್ಣು?

ಕೋಲ್ಕತ್ತ (ಪಿಟಿಐ): ಉಪರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿರುವ ಜಗದೀಪ್ ಧನಕರ್ ಅವರು ಈಗ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದಾರೆ. 2019ರಲ್ಲಿ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರದೊಂದಿಗಿನ ತಿಕ್ಕಾಟದಿಂದಲೇ ಆಗಾಗ ಸುದ್ದಿಯಾಗುತ್ತಿದ್ದರು.

ಧನಕರ್ ಅವರು ಹುಟ್ಟಿದ್ದು 1951ರಲ್ಲಿ. ಜೈಪುರದ ಮಹಾರಾಜ ಕಾಲೇಜಿನಿಂದ ಭೌತ ವಿಜ್ಞಾನದಲ್ಲಿ ಪದವಿ ಪಡೆದಿದ್ದಾರೆ. ಜೈಪುರ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ. ಅವರ ಪತ್ನಿಯ ಹೆಸರು ಸುದೇಶ್ ಧನಕರ್ ಮತ್ತು ಅವರಿಗೆ ಒಬ್ಬಳು ಮಗಳಿದ್ದಾರೆ.

ವೃತ್ತಿಯಲ್ಲಿ ವಕೀಲರಾಗಿದ್ದ ಧನಕರ್ ಅವರು 1989ರಲ್ಲಿ ರಾಜಕೀಯಕ್ಕೆ ಬಂದರು. ರಾಜಸ್ಥಾನದ ಝುಂಝುನು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. 1990ರಲ್ಲಿ ಕೇಂದ್ರ ಸಚಿವರೂ ಆದರು. ರಾಜಸ್ಥಾನ ಹೈಕೋರ್ಟ್ ವಕೀಲರ ಸಂಘದ ಅಧ್ಯಕ್ಷರಾಗಿಯೂ ಅವರು ಕೆಲಸ ಮಾಡಿದ್ದಾರೆ.



1993ರಿಂದ 1998ರವರೆಗೆ ರಾಜಸ್ಥಾನ ವಿಧಾನಸಭೆಯ ಸದಸ್ಯರೂ ಆಗಿದ್ದರು. ಜನತಾ ದಳದಿಂದ ರಾಜಕೀಯ ಜೀವನ ಆರಂಭಿಸಿದ್ದ ಅವರು, ನಂತರ ಕಾಂಗ್ರೆಸ್ ಸೇರಿದ್ದರು. 2003ರಲ್ಲಿ ಅವರು ಬಿಜೆಪಿ ಸೇರಿದರು.

'ಧನಕರ್ ಅವರು ಬಿಜೆಪಿಯ ಏಜೆಂಟ್' ಎಂದು ಟಿಎಂಸಿ ಹಲವು ಬಾರಿ ಆರೋಪಿಸಿದೆ. ಆದರೆ, ಬಿಜೆಪಿ ಅವರನ್ನು ಸದಾ ಸಮರ್ಥಿಸಿಕೊಂಡಿದೆ. 'ಅವರು ಸಂವಿಧಾನದ ನಿಯಮಗಳನ್ನು ಎತ್ತಿಹಿಡಿದವರು' ಎಂದಿದೆ. ಮಮತಾ ಬ್ಯಾನರ್ಜಿ ಮತ್ತು ಸರ್ಕಾರದ ವಿರುದ್ಧ ಹೇಳಿಕೆಗಳನ್ನು ನೀಡಿದಾಗಲೆಲ್ಲ ತಾವು ಸಂವಿಧಾನಕ್ಕೆ ಅನುಗುಣವಾಗಿಯೇ ನಡೆದುಕೊಂಡಿರುವುದಾಗಿ ಧನಕರ್ ಹೇಳಿದ್ದಾರೆ.ಧನಕರ್ ಮತ್ತು ಮಮತಾ ನಡುವಣ ಸಂಘರ್ಷವು ಹಲವು ಬಾರಿ ಮುಜಗರದ ಸನ್ನಿವೇಶಕ್ಕೂ ಕಾರಣವಾಗಿತ್ತು. ರಾಜ್ಯದಲ್ಲಿನ ಚುನಾವಣೋತ್ತರ ಹಿಂಸಾಚಾರ, ಸದನದಲ್ಲಿ ಅಂಗೀಕಾರವಾದ ಮಸೂದೆಗಳಿಗೆ ಅಂಕಿತ ಹಾಕಲು ರಾಜ್ಯಪಾಲರ ವಿಳಂಬ, ಆಡಳಿತ ಮತ್ತು ವಿಶ್ವವಿದ್ಯಾಲಯಗಳ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮುಂತಾದ ವಿಚಾರಗಳಲ್ಲಿ ಧನಕರ್ ಮತ್ತು ಮಮತಾ ಅವರು ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿಕೊಂಡಿದ್ದಾರೆ.

ಜಾಟ್ ಸಮುದಾಯದ ಧನಕರ್ ಅವರನ್ನು ಉಪರಾಷ್ಟ್ರಪತಿ ಅಭ್ಯರ್ಥಿ ಮಾಡಿರುವುದು ಬಿಜೆಪಿಗೆ ರಾಜಕೀಯವಾಗಿ ಲಾಭ ತರಬಹುದು ಎಂಬ ಲೆಕ್ಕಾಚಾರ ಇದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಜಾಟ್ ಸಮುದಾಯದ ಮತದಾರರು ಬಿಜೆಪಿಗೆ ಗಣನೀಯವಾದ ಬೆಂಬಲ ನೀಡಿದ್ದಾರೆ. ಆದರೆ, ಕೃಷಿಗೆ ಸಂಬಂಧಿಸಿ ಕೇಂದ್ರವು ಜಾರಿಗೆ ತಂದಿದ್ದ ಮೂರು ಕಾಯ್ದೆಗಳ ವಿರುದ್ಧ ರೈತರು ನಡೆಸಿದ ಭಾರಿ ಪ್ರತಿಭಟನೆಯ ಮುಂಚೂಣಿಯಲ್ಲಿ ಜಾಟ್ ಸಮುದಾಯವೇ ಇತ್ತು. ಹಾಗಾಗಿ, ಜಾಟ್ ಸಮುದಾಯದ ಜತೆಗೆ ಬಿಜೆಪಿಯ ಸಂಬಂಧದಲ್ಲಿ ಬಿರುಕು ಉಂಟಾಗಿದೆ. ಈ ಸಮುದಾಯವನ್ನು ಒಲಿಸಿಕೊಳ್ಳುವ ಉದ್ದೇಶವೂ ಈ ಆಯ್ಕೆಯ ಹಿಂದೆ ಇರಬಹುದು ಎನ್ನಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಧನಕರ್ ಅವರನ್ನು 'ರೈತನ ಮಗ' ಎಂದು ಬಣ್ಣಿಸುವುದಕ್ಕೂ ಇದುವೇ ಕಾರಣ. ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಈ ಸಮುದಾಯದ ಜನರ ಸಂಖ್ಯೆ ಹೆಚ್ಚು.

ಉಪರಾಷ್ಟ್ರಪತಿ ಸ್ಥಾನದ ಚುನಾವಣೆಯು ಆಗಸ್ಟ್ 6ರಂದು ನಡೆಯಲಿದೆ. ನಾಮಪತ್ರ ಸಲ್ಲಿಸಲು ಜುಲೈ 19 ಕೊನೆಯ ದಿನ.

'ಮೋದಿ ವಿರುದ್ಧ ಪಟೇಲ್ ಸಂಚು'

ಒಂದನೇ ಪುಟದಿಂದ...

ಜಾಮೀನು ಅರ್ಜಿಯನ್ನು ಎಸ್‌ಐಟಿ ವಿರೋಧಿಸಿದೆ. ಅರ್ಜಿಯ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

'ಚುನಾಯಿತ ಸರ್ಕಾರವೊಂದನ್ನು ಉರುಳಿಸುವುದು ಅಥವಾ ಅಸ್ಥಿರಗೊಳಿಸುವುದು ತೀಸ್ತಾ ಸೆಟಲ್‌ವಾಡ್ ಅವರ ರಾಜಕೀಯ ಉದ್ದೇಶವಾಗಿತ್ತು... ಗುಜರಾತ್‌ನ ನಿರಪರಾಧಿ ವ್ಯಕ್ತಿಗಳನ್ನು ಪ್ರಕರಣಗಳಲ್ಲಿ ಸಿಲುಕಿಸುವ ಅವರ ಪ್ರಯತ್ನಕ್ಕೆ ಪ್ರತಿಫಲವಾಗಿ ಪ್ರತಿಸ್ಪರ್ಧಿ ರಾಜಕೀಯ ಪಕ್ಷವು ಹಣಕಾಸು ಮತ್ತು ಇತರ ನೆರವುಗಳನ್ನು ಅಕ್ರಮವಾಗಿ ನೀಡಿತ್ತು' ಎಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ. 2002ರ ಗೋಧ್ರಾ ಗಲಭೆಯ ಬಳಿಕ ಅಹ್ಮದ್ ಪಟೇಲ್ ಕಡೆಯಿಂದ ತೀಸ್ತಾ ಸೆಟಲ್‌ವಾಡ್ ಅವರು ₹30 ಲಕ್ಷ ಪಡೆದಿದ್ದರು. ದೆಹಲಿಯಲ್ಲಿ ಆಗ ಅಧಿಕಾರದಲ್ಲಿದ್ದ ಪ್ರಮುಖ ರಾಷ್ಟ್ರೀಯ ಪಕ್ಷದ ಮುಖಂಡರನ್ನು ಸೆಟಲ್‌ವಾಡ್ ಭೇಟಿಯಾಗಿದ್ದಾರೆ' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

ಶಬನಾ ಮತ್ತು ಜಾವೇದ್ ಅವರಿಗೆ ಮಾತ್ರ ಏಕೆ ಅವಕಾಶ ಕೊಡಲಾಗುತ್ತಿದೆ, ತಮ್ಮನ್ನೂ ಏಕೆ ರಾಜ್ಯಸಭೆಯ ಸದಸ್ಯೆಯನ್ನಾಗಿ ಮಾಡಿಲ್ಲ ಎಂದು ಕಾಂಗ್ರೆಸ್ ಮುಖಂಡರೊಬ್ಬರನ್ನು ಸೆಟಲ್‌ವಾಡ್ ಅವರು 2006ರಲ್ಲಿ ಪ್ರಶ್ನಿಸಿದ್ದರು ಎಂದು ಸಾಕ್ಷಿಯೊಬ್ಬರನ್ನು ಉಲ್ಲೇಖಿಸಿ ಆರೋಪಿಸಲಾಗಿದೆ.

2002ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರನ್ನು ಗುಜರಾತ್ ಗಲಭೆ ಪ್ರಕರಣಗಳಲ್ಲಿ ಆರೋಪಮುಕ್ತಗೊಳಿಸಿದ್ದನ್ನು ಸುಪ್ರೀಂ ಕೋರ್ಟ್ ಕಳೆದ ತಿಂಗಳು ಎತ್ತಿಹಿಡಿದಿದೆ. ಆ ಬಳಿಕ, ಸೆಟಲ್‌ವಾಡ್ ಅವರನ್ನು ಬಂಧಿಸಲಾಗಿದೆ.

ಪಟೇಲ್ ಹೆಸರನ್ನು ಎಳೆದು ತರುವ ಮೂಲಕ ಗುಜರಾತ್ ಚುನಾವಣಾ ಪ್ರಚಾರ ಆರಂಭವಾಗಿದೆ. ಅವರು ಜೀವಿಸಿದ್ದಾಲೂ ಹೀಗೆಯೇ ಮಾಡಿದ್ದರು, ಮೃತಪಟ್ಟನಂತರವೂ ಅದನ್ನೇ ಮಾಡಿದ್ದಾರೆ

ಮುಮ್ತಾಜ್ ಪಟೇಲ್, ಅಹ್ಮದ್ ಪಟೇಲ್ ಮಗಳು

ಚುನಾವಣೆಗಳು ಹತ್ತಿರ ಬಂದಾಗಲೆಲ್ಲ ಬಿಜೆಪಿ ಮತ್ತು ಮೋದಿ ಅವರ ಬಳಗವು 'ಹೊಸ ವಿಚಾರ'ಗಳನ್ನು ಹೇಳುತ್ತದೆ. ಮುಸ್ಲಿಂ ಮುಖಂಡರ ಹೆಸರುಗಳನ್ನು ಎಳೆದು ತರಲಾಗುತ್ತದೆ

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ಬಿಜೆಪಿ ದ್ವೇಷದಿಂದ ಕೆಲಸ ಮಾಡುವುದಿಲ್ಲ, ತಾಳ್ಮೆಯಿಂದ ಮಾಡುತ್ತದೆ. ಸಾಂವಿಧಾನಿಕ ಪ್ರಕ್ರಿಯೆಯಲ್ಲಿ ನಂಬಿಕೆ ಇರಿಸಿದೆ

ಸಂಬಿತ್ ಪಾತ್ರಾ, ಬಿಜೆಪಿ ವಕ್ತಾರ

ಪಿತೂರಿ ಹಿಂದೆ ಸೋನಿಯಾ: ಬಿಜೆಪಿ

ನವದೆಹಲಿ (ಪಿಟಿಐ): 2002ರ ಗುಜರಾತ್ ಗಲಭೆ ಪ್ರಕರಣಗಳಲ್ಲಿ ಮೋದಿ ಅವರನ್ನು ಸಿಲುಕಿಸುವ ಷಡ್ಯಂತ್ರದ ಪ್ರಮುಖ ಸೂತ್ರಧಾರಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಎಂದು ಬಿಜೆಪಿ ಆರೋಪಿಸಿದೆ.

ಸಂಬಿತ್ ಪಾತ್ರಾ

ಸೋನಿಯಾ ಅವರ ರಾಜಕೀಯ ಸಲಹೆಗಾರರಾಗಿದ್ದ ಅಹ್ಮದ್ ಪಟೇಲ್ ಅವರು ಇಲ್ಲಿ ಒಂದು ನೆಪ ಮಾತ್ರ. ಅವರ ಮೂಲಕ ಗುಜರಾತ್ ಸರ್ಕಾರವನ್ನು ಅಸ್ಥಿರಗೊಳಿಸಿ, ಮೋದಿ ಅವರ ರಾಜಕೀಯ ವೃತ್ತಿಜೀವನಕ್ಕೆ ಹಾನಿ ಮಾಡಲು ಸೋನಿಯಾ ಪ್ರಯತ್ನಿಸಿದ್ದರು ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಆರೋಪಿಸಿದ್ದಾರೆ.

ಸೋನಿಯಾ ಅವರು ಮಾಧ್ಯಮಗೋಷ್ಠಿ ನಡೆಸಿ ಈ ವಿಚಾರದ ಬಗ್ಗೆ ವಿವರಣೆ ಕೊಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ಈಗ ನೀಡಿರುವ ಹೇಳಿಕೆಯು ಕಿಡಿಗೇಡಿತನದ್ದಾಗಿದೆ. ಸೆಟಲ್‌ವಾಡ್ ಅವರನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್ ಕೂಡ ಒತ್ತಡದಲ್ಲಿ ಕೆಲಸ ಮಾಡಿದೆಯೇ ಎಂದು ಪಾತ್ರಾ ಪ್ರಶ್ನಿಸಿದ್ದಾರೆ.

ಪಟೇಲ್ ಅವರು ಒಂದು ನೆಪ ಮಾತ್ರ ಆಗಿದ್ದರು. ಹಾಗಾಗಿ ತಮ್ಮ ಆರೋಪಗಳು ಅವರ ಮೇಲೆ ಅಲ್ಲ. ಗುಜರಾತ್‌ನ ಹೆಸರಿಗೆ ಮಸಿ ಬಳಿಯುವುದಕ್ಕಾಗಿ ಮತ್ತು ಮೋದಿ ಅವರನ್ನು ಮೂಲೆಗುಂಪು ಮಾಡುವುದಕ್ಕಾಗಿ ಸೋನಿಯಾ ಅವರೇ ಪಿತೂರಿ ಮಾಡಿದ್ದರು ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಅಧಿಕಾರದಲ್ಲಿದ್ದಾಗ ಸೆಟಲ್‌ವಾಡ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಲಾಗಿತ್ತು. ರಾಷ್ಟ್ರೀಯ ಸಲಹಾ ಸಮಿತಿಯ ಸದಸ್ಯೆಯನ್ನಾಗಿಯೂ ಅವರನ್ನು ನೇಮಿಸಲಾಗಿತ್ತು. ಒಪ್ಪಿಸಿದ ಕೆಲಸವನ್ನು ಅವರು ಚೆನ್ನಾಗಿ ಮಾಡಿದ್ದರು ಎಂಬ ಮೆಚ್ಚುಗೆ ಸೋನಿಯಾ ಅವರಿಗೆ ಇದ್ದುದೇ ಇದಕ್ಕೆ ಕಾರಣ ಎಂದು ಬಿಜೆಪಿ ಆರೋಪಿಸಿದೆ.

ಸುದ್ದಿ 2 ನಿಮಿಷ

ಜುಬೈರ್‌ಗೆ ಜಾಮೀನು ನಿರಾಕರಣೆ

ಲಖೀಂಪುರ ಖೇರಿ (ಪಿಟಿಐ): ತಮ್ಮ ವಿರುದ್ಧ 2021ರಲ್ಲಿ ದಾಖಲಾಗಿದ್ದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಜಾಮೀನು ನೀಡಬೇಕೆಂದು ಕೋರಿ ಆಲ್ಟ್‌ನ್ಯೂಸ್ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ಈ ಪ್ರಕರಣದಲ್ಲಿ ಜುಬೈರ್ ಅವರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಇದಾದ ಬಳಿಕ, ಜುಲೈ 11ರಂದು ಈ ಜಾಮೀನು ಕೋರಿ ಅರ್ಜಿ ಸಲ್ಲಿಸಲಾಗಿತ್ತು.

ವಿಚಾರಣೆ ಬಳಿಕ ಹೆಚ್ಚುವರಿ ಮುಖ್ಯ ಜುಡಿಶಿಯಲ್ ಮ್ಯಾಜಿಸ್ಟ್ರೇಟ್ ರುಚಿ ಶ್ರೀವಾಸ್ತವ ಅವರು ಜುಬೈರ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದಾರೆ ಎಂದು ಹಿರಿಯ ಪ್ರಾಸಿಕ್ಯೂಷನ್ ಅಧಿಕಾರಿ ತಿಳಿಸಿದ್ದಾರೆ.

ಜುಬೈರ್ ಅವರನ್ನು ಪೊಲೀಸ್ ವಶಕ್ಕೆ ನೀಡುವ ಕುರಿತು ಸಲ್ಲಿಕೆ ಆಗಿರುವ ಅರ್ಜಿಯ ವಿಚಾರಣೆಯನ್ನು ಜುಲೈ 20ಕ್ಕೆ ನಿಗದಿಪಡಿಸಲಾಗಿದೆ.

ತಾವು ಉದ್ಯೋಗದಲ್ಲಿರುವ ಖಾಸಗಿ ವಾಹಿನಿ ಕುರಿತು ತಪ್ಪು ಅಭಿಪ್ರಾಯ ಮೂಡಿಸುವ ಟ್ವೀಟ್ ಮೂಲಕ ಜುಬೈರ್ ಅವರು ಹುಟ್ಟುಹಾಕುತ್ತಿದ್ದಾರೆ ಎಂದು ಕಳೆದ ವರ್ಷದ ನವೆಂಬರ್ 25ರಂದು ಆಶಿಶ್ ಕಟಿಯಾರ್ ಎಂಬುವವರು ದೂರು ದಾಖಲಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೂವರ ಮೇಲೆ ಗುಂಡು ಹಾರಿಸಿ ಆತ್ಮಹತ್ಯೆ ಮಾಡಿಕೊಂಡ ಯೋಧ

ನವದೆಹಲಿ (ಪಿಟಿಐ): ಇಂಡೊ-ಟಿಬೆಟ್ ಗಡಿ ಪೊಲೀಸ್‌ನ (ಐಟಿಬಿಪಿ) ಕಾನ್‌ಸ್ಟೆಬಲ್ ಒಬ್ಬರು ತಮ್ಮ ಮೂವರು ಸಹೋದ್ಯೋಗಿಗಳ ಮೇಲೆ ಗುಂಡು ಹಾರಿಸಿ, ಬಳಿಕ ತಾವೇ ಗುಂಡು ಹಾರಿಸಿಕೊಂಡು ಮೃತಪಟ್ಟ ಘಟನೆ ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯ ಸೇನಾನೆಲೆಯಲ್ಲಿ ಶನಿವಾರ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ದೇವಿಕಾ ಘಾಟ್ ಸಮುದಾಯ ಕೇಂದ್ರದಲ್ಲಿ ಮಧ್ಯಾಹ್ನ 3.30ಕ್ಕೆ ಈ ಘಟನೆ ನಡೆದಿದೆ. ಕಾನ್‌ಸ್ಟೆಬಲ್ ಭೂಪೇಂದ್ರ ಸಿಂಗ್ ಅವರು ಈ ಕೃತ್ಯ ಎಸಗಿದ್ದಾರೆ. ಗುಂಡೇಟು ತಿಂದ ಮುಖ್ಯ ಕಾನ್‌ಸ್ಟೆಬಲ್ ಮತ್ತು ಇತರ ಇಬ್ಬರು ಕಾನ್‌ಸ್ಟೆಬಲ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರೆಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಭೂಪೇಂದ್ರ ಅವರು ತಮ್ಮ ಐಎನ್‌ಎಸ್‌ಎಸ್ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಪ್ರವಾಹದಿಂದಾಗುವ ಹಾನಿ, ಭೂಕುಸಿತ ತಡೆಗೆ ಪರಿಹಾರವೇನು?

ಸಂವಾದ ಬೆಳಿಗ್ಗೆ 11 ರಿಂದ 12

ಭಾಗವಹಿಸುವವರು:
ಅನಂತ ಹೆಗಡೆ ಆಶೀಸರ, ಅಧ್ಯಕ್ಷ, ವೃಕ್ಷಲಕ್ಷ ಆಂದೋಲನ, ಸಾಗರ, ಶಿವಮೊಗ್ಗ
ರೂಪ ಹಾಸನ, ಪರಿಸರ ಕಾರ್ಯಕರ್ತೆ, ಹಾಸನ
ಸಿದಗೌಡ ಮೋದಗಿ, ರಾಜ್ಯ ಅಧ್ಯಕ್ಷ, ಭಾರತೀಯ ಕೃಷಿಕ ಸಮಾಜ(ಸಂಯುಕ್ತ), ಬೆಳಗಾವಿ
ಸಹದೇವ ಶಿವಪುರ, ಪಶ್ಚಿಮ ಘಟ್ಟ ಜಾಗೃತಿ ವೇದಿಕೆ, ಕೊಪ್ಪ, ಚಿಕ್ಕಮಗಳೂರು

ಇಸ್ರೇಲ್ ಹೈಫಾ ಬಂದರು ಗೌತಮ್ ಅದಾನಿ ತೆಕ್ಕೆಗೆ

ಬೆಂಗಳೂರು: ಇಸ್ರೇಲ್ ಹೈಫಾ ಬಂದರು ಖಾಸಗೀಕರಣದ ಟೆಂಡರ್ ತಮಗೆ ದೊರೆತಿರುವುದಾಗಿ ಉದ್ಯಮಿ ಗೌತಮ್ ಅದಾನಿ ಟ್ವೀಟ್ ಮಾಡಿದ್ದಾರೆ.

'ಈ ಬಂದರಿನ ಖಾಸಗಿಕರಣ ಗುತ್ತಿಗೆ ನಮ್ಮ ಪಾಲುದಾರ ಗಡೋಟ್ ಸಮೂಹದೊಂದಿಗೆ ಪಡೆದಿರುವುದು ಸಂತೋಷ ನೀಡಿದೆ. ಎರಡೂ ದೇಶಗಳಿಗೆ ಭದ್ರತೆ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ್ದಾಗಿದೆ' ಎಂದು ಅದಾನಿ ಹೇಳಿದ್ದಾರೆ.

'ನಮ್ಮ ಪಾಲುದಾರರಾದ ಇಸ್ರೇಲ್‌ನ ರಾಸಾಯನಿಕ ಮತ್ತು ಸರಕು ಸಮೂಹದ ಗಡೋಟ್ ಜತೆಗೆ ಹೈಫಾ ಬಂದರನ್ನು ತೆಕ್ಕೆಗೆ ತೆಗೆದುಕೊಂಡಿರುವುದು ಕಂಪನಿಯ ಭಾರತೀಯ ಬಂದರುಗಳೊಂದಿಗೆ ವ್ಯಾಪಾರದ ಮಾರ್ಗಗಳನ್ನು ವಿಸ್ತರಿಸುತ್ತದೆ. ಯುರೋಪ್ ಮತ್ತು ಮಧ್ಯಪ್ರಾಚ್ಯದ ದೇಶಗಳಿಗೂ ಇದು ಉತ್ತಮ ಸಂಪರ್ಕ ಕಲ್ಪಿಸುತ್ತದೆ' ಎಂದು ಅದಾನಿ ಪೋರ್ಟ್ಸ್ ಮತ್ತು ಸ್ಪೆಷಲ್ ಎಕಾನಮಿಕ್ ಜೋನ್ ಹೇಳಿದೆ.

'ಬಂದರು ಅಭಿವೃದ್ಧಿ ಮತ್ತು ಕಾರ್ಯಾಚರಣೆಯಲ್ಲಿ ಭಾರತದಲ್ಲಿ ಅತಿದೊಡ್ಡ ಕಂಪನಿಯಾಗಿರುವ ಪೋರ್ಟ್ಸ್, ಯುರೋಪಿನ ಬಂದರು ವಲಯಕ್ಕೆ ತನ್ನ ಹೆಜ್ಜೆಗುರುತನ್ನು ವಿಸ್ತರಿಸಿದೆ' ಎಂದು ಅದು ಹೇಳಿದೆ.

ಎರಡು ವರ್ಷಗಳಿಂದ ನಡೆಯುತ್ತಿದ್ದ ಈ ಟೆಂಡರ್ ಪ್ರಕ್ರಿಯೆ ₹944 ಕೋಟಿಗೆ ಅದಾನಿ ಪೋರ್ಟ್ಸ್ ಮತ್ತು ಗಡೋಟ್ ಪಾಲಾಗಿದೆ ಎಂದು ಇಸ್ರೇಲ್ ಗುರುವಾರ ಅಧಿಕೃತವಾಗಿ ಘೋಷಣೆ ಮಾಡಿತ್ತು. ಹೈಫಾ ಬಂದರು ಖಾಸಗಿಕರಣ ಗುತ್ತಿಗೆಯಲ್ಲಿ ಅದಾನಿ ಪೋರ್ಟ್ಸ್ ಶೇ 70 ಪಾಲು ಮತ್ತು ಗಡೋಟ್ ಶೇ 30 ಪಾಲು ಹೊಂದಿವೆ.

'ಮೃತರನ್ನೂ ಬಿಡದೆ ದ್ವೇಷಸಾಧನೆ'

ಒಂದನೇ ಪುಟದಿಂದ...

ಮೋದಿ ಅವರ 'ರಾಜಕೀಯ ದ್ವೇಷ ಸಾಧನೆ ವ್ಯವಸ್ಥೆ'ಯು ಮೃತರಾಗಿರುವ ರಾಜಕೀಯ ಪ್ರತಿಸ್ಪರ್ಧಿಗಳನ್ನೂ ಬಿಡುವುದಿಲ್ಲ. ಅಹ್ಮದ್ ಪಟೇಲ್ ಅವರ ವಿರುದ್ಧ ಮಾಡಲಾಗಿರುವ ಕಿಡಿಗೇಡಿ ಆರೋಪವನ್ನು ಪಕ್ಷವು ತಿರಸ್ಕರಿಸುತ್ತದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ರಾಜಕೀಯ ಮಾಲೀಕರ ತಾಳಕ್ಕೆ ತಕ್ಕಂತೆ ಎಸ್‌ಐಟಿ ಕುಣಿಯುತ್ತಿದೆ. ಆಗಿನ ಮುಖ್ಯಮಂತ್ರಿಯನ್ನು ಆರೋಪಮುಕ್ತಗೊಳಿಸಿದ ಎಸ್‌ಐಟಿಯ ಮುಖ್ಯಸ್ಥರಿಗೆ ರಾಜತಾಂತ್ರಿಕ ಹುದ್ದೆಯ ಉಡುಗೊರೆ ನೀಡಿದ್ದು ನಮಗೆ ತಿಳಿದಿದೆ' ಎಂದೂ ಕಾಂಗ್ರೆಸ್ ಹೇಳಿದೆ.

'ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ. ಅದರ ಮಧ್ಯದಲ್ಲೇ, ತನಿಖಾ ಸಂಸ್ಥೆಗಳು ತನಿಖೆಯಲ್ಲಿ ತಿಳಿದು ಬಂದ ಅಂಶಗಳು ಎಂದು ಮಾಧ್ಯಮದ ಮೂಲಕ ಗೊತ್ತುಗುರಿ ಇಲ್ಲದ ಆರೋಪ ಮಾಡುತ್ತವೆ. ಇದು ಕಳೆದ ಕೆಲವು ವರ್ಷಗಳಿಂದ ಮೋದಿ–ಶಾ ಜೋಡಿಯ ಹೆಗ್ಗುರುತೇ ಆಗಿಬಿಟ್ಟಿದೆ. ಈಗಿನ ಆರೋಪ ಕೂಡ ಅಂತಹ ಪ್ರಯತ್ನದ ಭಾಗವಾಗಿದೆ. ಈ ಹಸಿ ಸುಳ್ಳನ್ನು ತಿರಸ್ಕರಿಸಲು ಆ ವ್ಯಕ್ತಿಯೇ ಇಲ್ಲ. ಮೃತ ವ್ಯಕ್ತಿಯ ತೇಜೋವಧೆ ಮಾಡುವುದೇ ಇದರ ಹಿಂದಿನ ಉದ್ದೇಶ' ಎಂದೂ ಕಾಂಗ್ರೆಸ್ ಪಕ್ಷವು ಆಕ್ರೋಶ ವ್ಯಕ್ತಪಡಿಸಿದೆ.

ಹೆಸರಿಲ್ಲದ ಸಾಕ್ಷಿಗಳ ಉಲ್ಲೇಖಿಸಿ ಆರೋಪ

ಸೆಟಲ್‌ವಾಡ್ ಅವರು 2002ರ ಗಲಭೆಯ ಬಳಿಕ ₹30 ಲಕ್ಷ ಪಡೆದಿದ್ದರು ಎಂದು ಇಬ್ಬರು ಸಾಕ್ಷಿಗಳನ್ನು ಉಲ್ಲೇಖಿಸಿ ಎಸ್‌ಐಟಿ ಆರೋಪಿಸಿದೆ. ಆದರೆ ಈ ಸಾಕ್ಷಿಗಳ ಹೆಸರನ್ನು ಪ್ರಕಟಿಸಿಲ್ಲ.

'ಮೊದಲಿಗೆ ಅವರಿಗೆ ₹5 ಲಕ್ಷ ನೀಡಲಾಗಿತ್ತು. ಅಹ್ಮದ್ ಪಟೇಲ್ ಅವರ ಸೂಚನೆಯಂತೆ ಒಬ್ಬ ಸಾಕ್ಷಿಯು ಈ ಹಣವನ್ನು ಅವರಿಗೆ ನೀಡಿದ್ದರು. ಎರಡು ದಿನಗಳ ಬಳಿಕ, ಶಾಹಿಬಾಗ್‌ನಲ್ಲಿರುವ ಸರ್ಕಾರಿ ಸರ್ಕಿಟ್ ಹೌಸ್‌ನಲ್ಲಿ ಅಹ್ಮದ್ ಪಟೇಲ್ ಮತ್ತು ಸೆಟಲ್‌ವಾಡ್ ಅವರ ನಡುವೆ ನಡೆದ ಸಭೆಯಲ್ಲಿ ಇದೇ ಸಾಕ್ಷಿಯು ಸೆಟಲ್‌ವಾಡ್ ಅವರಿಗೆ ₹25 ಲಕ್ಷ ನೀಡಿದ್ದರು' ಎಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
(ರಾಜ್ಯ ವಲಯ) ತುಮಕೂರು, Email: sadhssatmk@gmail.com, ph:0816-2278647
ಸಂ:ಹಿಸತೋನಿ/ರಾವ/ತು/ವಿನಿ1/08/2022–23 ದಿನಾಂಕ: 12.07.2022
ಮರು ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ
ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ದೊಡ್ಡ ಪ್ರಮಾಣದ ಪ್ರಯೋಗ ಶಾಲೆಯಲ್ಲಿ ಗೋನಿಯೋಜಸ್ ಪರೋಪಜೀವಿ ಉತ್ಪಾದನೆ ಮಾಡಲು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಮರು ಇ–ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ದಿನಾಂಕ: 12.07.2022 ರಿಂದ 27.07.2022 ರ ತನಕ ಆನ್‌ಲೈನ್ ಮೂಲಕ ಮರು ಇ–ಟೆಂಡರ್ ಅರ್ಜಿಗಳನ್ನು ಸಲ್ಲಿಸಬಹುದು, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು ಮತ್ತು www.eproc.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳ ಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 0816–2278647 ರ ಮೂಲಕ ಸಹ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.
ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯ ವಲಯ) ತುಮಕೂರು.
DIPR/TUM/299/MCA/22-23

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 04/2022–23 ದಿನಾಂಕ: 11.07.2022.
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ನಂಜನಗೂಡು ಉಪ ವಿಭಾಗದಲ್ಲಿನ ಒಟ್ಟು 05 ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ದಿ:02.08.2022ರ ಸಂಜೆ 4:00ರವರೆಗೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 249.89 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 456.05 ಲಕ್ಷಗಳಾಗಿರುತ್ತದೆ. ಕನಿಷ್ಠ ಇ.ಎಂ.ಡಿ ರೂ.3.75 ಲಕ್ಷಗಳು ಹಾಗು ಗರಿಷ್ಠ ಇ.ಎಂ.ಡಿ ಮೊತ್ತ ರೂ 6.84 ಲಕ್ಷಗಳಾಗಿರುತ್ತದೆ. ಪೂರ್ವಭಾವಿ ಸಭೆಯನ್ನು ದಿ:25.07.2022ರಂದು ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ ಪೂರ್ವಾಹ್ನ 11.30 ಘಂಟೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

ಮಂಗಳೂರು ವಿಶ್ವವಿದ್ಯಾನಿಲಯ
ಸಂಖ್ಯೆ:ಮವಿ/ಅಭಿವೃದ್ಧಿವಿಭಾಗ/ಇ–ಟೆಂಡರ್/ಡಿ9, ದಿನಾಂಕ: 16–07–2022
ಮಂಗಳೂರು ವಿಶ್ವವಿದ್ಯಾನಿಲಯದ ಕಾರ್ಯಕಾರಿ ಅಭಿಯಂತರರ ಕಛೇರಿಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಿಸಿದ್ದು ವಿವರ ಕೆಳಗಿನಂತಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (E-procurement portal) ವೆಬ್‌ಸೈಟ್ www.eproc.karnataka.gov.in ನಿಂದ ಪಡೆಯಬಹುದಾಗಿದೆ.
Name of the tender: (1) Maintenance works to B Block 2 Quartres and Repair Works to Quartres No 5 6 7 8 at Mangalore University Mangalagangaothri- Reserved for Schedule Tribe (ED/2022-23/BD/WORK_INDENT195), Category: Works, Last date and time for submission of tenders: 22/07/2022 17:00:00
(2) Construction of Vehicle Shed to C type Quarters Block 01 (House No: 1 2 3 4 5 and 6) at Mangalore University campus, Mangalagangothri (ED/2022-23/BD/WORK_INDENT196), Category: Works, Last date and time for submission of tenders: 22/07/2022 17:00:00
(3) Construction of Vehicle Shed to A type Quarters No: 6 7 8 10 and 12 at Mangalore University campus Mangalagangothri (ED/2022-23/BD/WORK_INDENT197), Category: Works, Last date and time for submission of tenders: 22/07/2022 17:00:00
(4) Providing suitable generator for Vice Chancellor bungalow, Registrar and Registrar Evaluation Quarters in Mangalore University Campus Mangalagangothri Providing suitable generator for Vice Chancellor bungalow Registrar and Registrar Evaluation Quarters in Mangalore University Campus Mangalagangothri(ED/2022-23/BD/WORK_INDENT198), Category: Works, Last date and time for submission of tenders: 22/07/2022 17:00:00
ಸಹಿ/– ಕುಲಸಚಿವರು
DIPR/ADM/MCA/375/22-23 dt. 16.07.2022

ಚೆಸ್ ಟೂರ್ನಿ ಅರವಿಂದ್‌ಗೆ ಪ್ರಶಸ್ತಿ

ಬೆನಾಸ್ಕ್, ಸ್ಪೇನ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಮ್ ಅವರು ಇಲ್ಲಿ ನಡೆದ ವಿಲ್ಲಾ ಡಿ ಬೆನಾಸ್ಕ್ ಓಪನ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಪ್ರಶಸ್ತಿ ಜಯದ ಹಾದಿಯಲ್ಲಿ ಅರವಿಂದ್, ಅರ್ಮೇನಿಯಾದ ರಾಬರ್ಟ್ ಹೊವನ್ನಿಸಿನ್ ಮತ್ತು ಭಾರತದ ರೌನಕ್ ಸಧ್ವಾನಿ ಅವರನ್ನು ಹಿಂದಿಕ್ಕಿದರು. 10 ಸುತ್ತುಗಳ ಟೂರ್ನಿಯಲ್ಲಿ ಈ ಮೂವರೂ ಆಟಗಾರರು ತಲಾ ಎಂಟು ಪಾಯಿಂಟ್ಸ್ ಗಳಿಸಿದರು. ಆದರೆ ಟೈಬ್ರೇಕ್‌ನಲ್ಲಿ ಗಳಿಸಿದ ಉತ್ತಮ ಸ್ಕೋರ್‌ನಿಂದಾಗಿ ಅರವಿಂದ್‌ಗೆ ಪ್ರಶಸ್ತಿ ಒಲಿಯಿತು.

ರಾಬರ್ಟ್ ಎರಡನೇ ಮತ್ತು ರೌನಕ್ ಮೂರನೇ ಸ್ಥಾನ ಗಳಿಸಿದರು.

ಟೂರ್ನಿಯಲ್ಲಿ ಚಿದಂಬರಮ್ ಆರು ಗೆಲುವು ದಾಖಲಿಸಿದರು.

ಮೂರನೇ ಏಕದಿನ ಇಂದು; ಉಭಯ ತಂಡಗಳಿಗೂ ಬ್ಯಾಟಿಂಗ್ ಚಿಂತೆ

ಸರಣಿ ಜಯದತ್ತ ಭಾರತ ಚಿತ್ತ

ರೋಹಿತ್ ಶರ್ಮಾ ಮತ್ತು ಜಸ್‌ಪ್ರೀತ್ ಬೂಮ್ರಾ –ಪಿಟಿಐ ಚಿತ್ರ

ಮ್ಯಾಂಚೆಸ್ಟರ್ (ಪಿಟಿಐ): ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಮತ್ತು ಎರಡನೇ ಪಂದ್ಯದಲ್ಲಿ ಹೀನಾಯ ಸೋಲುಂಡಿರುವ ಭಾರತ ತಂಡಕ್ಕೆ ಮತ್ತೊಂದು ಕಠಿಣ ಸವಾಲೊಡ್ಡಲು ಆತಿಥೇಯ ಇಂಗ್ಲೆಂಡ್ ಸಿದ್ಧವಾಗಿದೆ.

ಮೂರು ಏಕದಿನ ಪಂದ್ಯಗಳ ಸರಣಿಯ ಕೊನೆಯ ಮತ್ತು ನಿರ್ಣಾಯಕ ಪಂದ್ಯವು ಭಾನುವಾರ ನಡೆಯಲಿದ್ದು ಉಭಯ ತಂಡಗಳ ನಡುವೆ ಜಿದ್ದಾಜಿದ್ದಿ ಪೈಪೋಟಿಯ ನಿರೀಕ್ಷೆ ಗರಿಗೆದರಿದೆ.

ರೋಹಿತ್ ಶರ್ಮಾ ನಾಯಕತ್ವದ ಬಳಗದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ಗೆಲುವು ಸಾಧಿಸಲು ಸಾಧ್ಯವಿದೆ. ಏಕೆಂದರೆ ಸರಣಿಯ ಎರಡೂ ಪಂದ್ಯಗಳಲ್ಲಿ ಬೌಲರ್‌ಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆಡಿದ್ದಾರೆ. ಆದರೆ, ಲಾರ್ಡ್ಸ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ 247 ರನ್‌ಗಳ ಗುರಿಯನ್ನು ತಲುಪಲಾಗದ ಭಾರತ ತಂಡವು 100 ರನ್‌ಗಳ ಸೋಲನುಭವಿಸಿತ್ತು. ಆರಂಭಿಕ ಜೋಡಿ ರೋಹಿತ್, ಶಿಖರ್ ಧವನ್, ಅನುಭವಿ ವಿರಾಟ್ ಕೊಹ್ಲಿ ವೈಫಲ್ಯ ಅನುಭವಿಸಿದ್ದು ದುಬಾರಿಯಾಯಿತು. ಮಧ್ಯಮ ಕ್ರಮಾಂಕದಲ್ಲಿಯೂ ದೊಡ್ಡ ಜೊತೆಯಾಟ ದಾಖಲಾಗಲಿಲ್ಲ.

ವಿರಾಟ್, ತಂಡಕ್ಕೆ ಗೆಲುವಿನ ಕಾಣಿಕೆ ನೀಡುವಂತಹ ಇನಿಂಗ್ಸ್ ಆಡುವಲ್ಲಿಯೂ ವಿಫಲರಾಗುತ್ತಿದ್ದಾರೆ. ಅವರು ಲಯಕ್ಕೆ ಮರಳಿದರೆ ಆತಿಥೇಯ ಬೌಲರ್‌ಗಳಿಗೆ ಒತ್ತಡ ಬೀಳಬಹುದು.

ಇನ್ನೊಂದೆಡೆ ಇಂಗ್ಲೆಂಡ್ ತಂಡದ ಸಮಸ್ಯೆಯೂ ಇದೇ ತೆರನಾಗಿದೆ. ಎರಡೂ ಪಂದ್ಯಗಳಲ್ಲಿ ಬ್ಯಾಟರ್‌ಗಳಿಂದ ನಿರೀಕ್ಷಿತ ಆಟ ಮೂಡಿಬಂದಿಲ್ಲ. ಲಾರ್ಡ್ಸ್‌ನಲ್ಲಿ ವೇಗಿ ರೀಸ್ ಟಾಪ್ಲಿ ಅವರ ಅಮೋಘ ಬೌಲಿಂಗ್‌ನಿಂದಾಗಿ ತಂಡ ಜಯಭೇರಿ ಬಾರಿಸಿತ್ತು. ಭಾರತದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರ ಎದುರು ರನ್ ಗಳಿಸುವ ತಂತ್ರಗಾರಿಕೆಯೊಂದಿಗೆ ಕಣಕ್ಕಿಳಿಯುವ ಸವಾಲು ಜೊಸ್ ಬಟ್ಲರ್ ಬಳಗದ ಮುಂದಿದೆ.

ನೇರಪ್ರಸಾರ: ಸೋನಿ ನೆಟ್‌ವರ್ಕ್

ಪಂದ್ಯ ಆರಂಭ: ಮಧ್ಯಾಹ್ನ 3.30

ವಿಶ್ವಕಪ್ ಶೂಟಿಂಗ್: ಚಿನ್ನದ ‘ಐಶ್ವರ್ಯ’

ಚಾಂಗ್ವಾನ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಶನಿವಾರ ನಡೆದ ಟೂರ್ನಿಯ ಪುರುಷರ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್ ವಿಭಾಗದ ಫೈನಲ್‌ನಲ್ಲಿ ತೋಮರ್ 16-12ರಿಂದ ಯೂತ್ ಒಲಿಂಪಿಕ್ ಚಾಂಪಿಯನ್, ಹಂಗರಿಯ ಜಲಾನ್ ಪೆಕ್ಲರ್ ಅವರನ್ನು ಮಣಿಸಿದರು.

ಹಂಗರಿಯ ಇಸ್ತವಾನ್ ಪೆನ್ ಕಂಚು ತಮ್ಮದಾಗಿಸಿಕೊಂಡರು.

ಈ ಬಾರಿಯ ವಿಶ್ವಕಪ್‌ನಲ್ಲಿ ಭಾರತಕ್ಕೆ ಇದು ನಾಲ್ಕನೇ ಚಿನ್ನದ ಪದಕ. ಸದ್ಯ ಒಂಬತ್ತು ಪದಕ (4 ಚಿನ್ನ, ನಾಲ್ಕು ಬೆಳ್ಳಿ ಮತ್ತು ಒಂದು ಕಂಚು) ಜಯಿಸಿರುವ ಭಾರತ ಪದಕಪಟ್ಟಿಯಲ್ಲಿ ಅಗ್ರಸ್ಥಾನ ಭದ್ರಪಡಿಸಿಕೊಂಡಿದೆ.

50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಫೈನಲ್ ತಲುಪಿದ್ದ ಭಾರತದ ಇನ್ನೊಬ್ಬ ಶೂಟರ್ ಚೈನ್ ಸಿಂಗ್ ಏಳನೇ ಸ್ಥಾನ ಗಳಿಸಿದರು.

ಮನು ಭಾಕರ್‌ಗೆ ಆಘಾತ: ಪದಕ ಗೆಲ್ಲುವ ಫೇವರೀಟ್ ಎನಿಸಿದ್ದ ಮನು ಭಾಕರ್ ನಿರಾಸೆ ಅನುಭವಿಸಿದರು. 2019ರ ವಿಶ್ವಚಾಂಪಿಯನ್ ಶೂಟರ್, ಮಹಿಳೆಯರ 25 ಮೀಟರ್ಸ್ ವಿಭಾಗದ ಫೈನಲ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದರು.

ಅಂಜುಮ್ ಮೌದ್ಗಿಲ್ ಮಹಿಳೆಯರ 50 ಮೀ. ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಫೈನಲ್ ತಲುಪಿದ್ದಾರೆ.

ಮಹಾರಾಜ ಟ್ರೋಫಿ ಟೂರ್ನಿಗೆ ವೇದಿಕೆ ಸಿದ್ಧ

ಆಗಸ್ಟ್ 7ರಿಂದ 26ರವರೆಗೆ ಚುಟುಕು ಕ್ರಿಕೆಟ್

ಪ್ರಜಾವಾಣಿ ವಾರ್ತೆ

ಟ್ರೋಫಿ ಅನಾವರಣಗೊಳಿಸಿದ ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ –ಪ್ರಜಾವಾಣಿ ಚಿತ್ರ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯನ್ನು ಆಗಸ್ಟ್ 7ರಿಂದ 26ರವರೆಗೆ ಆಯೋಜಿಸಲಿದೆ.

ಆದರೆ ಇದು ಕರ್ನಾಟಕ ಪ್ರೀಮಿಯರ್ ಲೀಗ್ ಮಾದರಿಯ ಫ್ರ್ಯಾಂಚೈಸಿ ಲೀಗ್ ಅಲ್ಲ. ಪ್ರಾಯೋಜಕತ್ವ ಆಧಾರಿತ ಟಿ20 ಟೂರ್ನಿಯಾಗಿದೆ. ಆಟಗಾರರ ಆಯ್ಕೆಯೂ ಡ್ರಾಫ್ಟ್ ಮೂಲಕ ನಡೆಯಲಿದೆ. ಟೂರ್ನಿಯ ಆಯೋಜನೆ ಸಂಪೂರ್ಣ ಹೊಣೆಯು ಕೆಎಸ್‌ಸಿಎದ್ದೇ ಆಗಲಿದೆ.

ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ನೂತನ ಟೂರ್ನಿಯ ಟ್ರೋಫಿಯನ್ನು ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ ಅನಾವರಣಗೊಳಿಸಿದರು.

‘ಕ್ರಿಕೆಟ್‌ನ ಹೊಸ ಮಾದರಿಗಳ ಟೂರ್ನಿ ಆಯೋಜಿಸುವಲ್ಲಿ ರಾಜ್ಯ ಸಂಸ್ಥೆ ಸದಾ ಮುಂಚೂಣಿಯಲ್ಲಿದೆ. ಈ ಟೂರ್ನಿಯಿಂದ ಗ್ರಾಮಾಂತರ ಭಾಗದ ಆಟಗಾರರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ’ ಎಂದು ಭಾರತ ತಂಡದ ಮಾಜಿ ಆಟಗಾರರೂ ಆಗಿರುವ ಬಿನ್ನಿ ಹೇಳಿದರು.

ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ರಾಯಚೂರು ಮತ್ತು ಮಂಗಳೂರಿನ ತಂಡಗಳು ಟೂರ್ನಿಯಲ್ಲಿ ಆಡಲಿವೆ.

‘35 ವರ್ಷ ವಯೋಮಿತಿಯೊಳಗಿನ ಹಾಗೂ ಕೆಎಸ್‌ಸಿಎ ನೋಂದಾಯಿತ ಆಟಗಾರರು ಈ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯಲಿದ್ದಾರೆ. ನಾಲ್ಕು ಗುಂಪುಗಳಲ್ಲಿ ಆಟಗಾರರನ್ನು ವಿಂಗಡಿಸಲಾಗುವುದು. ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ ನಿಯಮಗಳು ಈ ಟೂರ್ನಿಗೂ ಅನ್ವಯಿಸಲಿವೆ. ಲೀಗ್, ಕ್ವಾಲಿಫೈಯರ್, ಎಲಿಮಿನೇಟರ್ ಮತ್ತು ಫೈನಲ್ ಪಂದ್ಯಗಳು ನಡೆಯಲಿವೆ. ಉದ್ಘಾಟನೆಯು ಮೈಸೂರಿನಲ್ಲಿ ನಡೆಯಲಿದ್ದು ಒಟ್ಟು 18 ಪಂದ್ಯಗಳು ಅಲ್ಲಿ ನಡೆಯಲಿವೆ. ಫೈನಲ್ ಬೆಂಗಳೂರಿನಲ್ಲಿ ನಡೆಯುವುದು’ ಎಂದು ಈ ಸಂದರ್ಭದಲ್ಲಿ ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದರು.

‘ತಂಡಗಳ ಆಯ್ಕೆ, ಕೋಚ್ ಮತ್ತು ನೆರವು ಸಿಬ್ಬಂದಿ ನಿಯೋಜನೆ ಹೊಣೆಯನ್ನು ಕೆಎಸ್‌ಸಿಎ ನಿಭಾಯಿಸಲಿದೆ. ರೋಜರ್ ಬಿನ್ನಿ ನೇತೃತ್ವದ ಕ್ರಿಕೆಟ್ ಸಮಿತಿಯು ಮುಖ್ಯ ಕೋಚ್‌ಗಳು, ಸಹಾಯಕ ಕೋಚ್ ಮತ್ತು ಆಯ್ಕೆ ಸಮಿತಿಯನ್ನು ನೇಮಕ ಮಾಡಿದೆ. ಬಿಗ್‌ಬ್ಯಾಷ್ ಲೀಗ್ ಮಾದರಿ ಅನುಸರಿಸುತ್ತಿದ್ದೇವೆ’ ಎಂದರು.

ಕ್ರಿಕೆಟ್ ಕಮಿಟಿ: ರೋಜರ್ ಬಿನ್ನಿ, ಸಂತೋಷ್ ಮೆನನ್. ಶಾವೀರ್ ತಾರಾಪುರ್, ತಿಲಕನಾಯ್ಡು, ಅಭಿರಾಮ್., **ಮುಖ್ಯ ಕೋಚ್:** ಸ್ಟುವರ್ಟ್ ಬಿನ್ನಿ, ನಾಸಿರುದ್ದೀನ್, ನಿಖಿಲ್ ಹಳದಿಪುರ, ಮನ್ಸೂರ್ ಅಲಿ ಖಾನ್, ದೀಪಕ್ ಚೌಗುಲೆ, ಪಿ.ವಿ ಶಶಿಕಾಂತ್, **ಸಹಾಯಕ ಕೋಚ್:** ಕೆ.ಬಿ. ಪವನ್, ರಾಜಶೇಖರ್ ಶಾನಭಾಗ್, ರಾಘವೇಂದ್ರ, ಆದಿತ್ಯ ಸಾಗರ್, ಎಸ್. ಎಲ್. ಅಕ್ಷಯ್, **ಆಯ್ಕೆ ಸಮಿತಿ:** ಆನಂದ ಕಟ್ಟಿ, ಮಹೇಶ್, ಸಂತೋಷ್ ಒಡೆಯರ್, ಪ್ರಶಾಂತ್, ರಘೋತ್ತಮ ನವಲಿ

ತೆರಿಗೆ ಹೊರೆ ತಪ್ಪಿಸಲು ಮಾದರಿ ಬದಲು: ವಿನಯ್

ಕೆಎಸ್‌ಸಿಎಯು ಈ ಹಿಂದೆ ಕರ್ನಾಟಕ ಪ್ರೀಮಿಯರ್ ಲೀಗ್ ಟೂರ್ನಿಯನ್ನು ಎಂಟು ಆವೃತ್ತಿಗಳಲ್ಲಿ ಯಶಸ್ವಿಯಾಗಿ ನಡೆಸಿತ್ತು. ಆದರೆ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯ ಶಿಫಾರಸುಗಳ ಅನ್ವಯ ರೂಪಿತವಾಗಿರುವ ಹೊಸ ನಿಯಮಾವಳಿಯನ್ನು 2019ರಿಂದ ನಾವು ಅಳವಡಿಸಿಕೊಂಡಿದ್ದೇವೆ. ಆ ನಿಯಮದ ಪ್ರಕಾರ ಫ್ರ್ಯಾಂಚೈಸಿ ಲೀಗ್ ನಡೆಸುವುದು ಲಾಭದಾಯಕ ವಾಣಿಜ್ಯ ಚಟುವಟಿಕೆ ಆಗಲಿದೆ. ಸಹಕಾರ ಸಂಘದ ನಿಯಮದಲ್ಲಿ ಸಂಸ್ಥೆಯು ನೋಂದಣಿಯಾಗಿರುವುದರಿಂದ ವಾಣಿಜ್ಯ ಚಟುವಟಿಕೆ ನಡೆಸಿದರೆ, ದೊಡ್ಡ ಮೊತ್ತದ ತೆರಿಗೆ ಕಟ್ಟಬೇಕಾಗುತ್ತದೆ. ಆದ್ದರಿಂದ ತೆರಿಗೆಯನ್ನು ಉಳಿಸಿಕೊಳ್ಳಲು ಪರಿಣತರ ಸಲಹೆಯ ಮೇರೆಗೆ ಮಾದರಿಯನ್ನು ಬದಲಾಯಿಸಿದ್ದೇವೆ. ಹೆಸರನ್ನೂ ಕೂಡ ಬದಲಿಸಲಾಗಿದೆ. ಕೆಎಸ್‌ಸಿಎಯು ನಡೆಸುವ ಇನ್ನಿತರ ಟೂರ್ನಿಗಳಂತೆಯೇ ಇದೂ ಒಂದಾಗಲಿದೆ ಎಂದು ಖಜಾಂಚಿ ವಿನಯ್ ಮೃತ್ಯುಂಜಯ ವಿವರಿಸಿದರು.

ಮೋಸದಾಟ ತಡೆಗೆ ಕಟ್ಟುನಿಟ್ಟಿನ ಕ್ರಮ: ಮೆನನ್

‘ಪಂದ್ಯಗಳು ಟಿವಿಯಲ್ಲಿ ನೇರಪ್ರಸಾರವಾಗಲಿವೆ. ಆದ್ದರಿಂದ ಭ್ರಷ್ಟಾಚಾರ ನಿಗ್ರಹ ಪಡೆಯ ತಂಡವನ್ನು ನಿಯೋಜಿಸುವಂತೆ ಬಿಸಿಸಿಐಗೆ ಮನವಿ ಮಾಡಿದ್ದೇವೆ. ಅಲ್ಲದೇ ಸ್ಥಳೀಯ ಪರಿಣತರ ಪಡೆಯನ್ನೂ ನಿಯೋಜಿಸಲಾಗುತ್ತಿದೆ. ಯಾವುದೇ ರೀತಿಯ ಮೋಸದಾಟ, ಫಿಕ್ಸಿಂಗ್ ಪ್ರಕರಣಗಳಿಗೆ ಆಸ್ಪದವಿಲ್ಲ. ನೂತನ ತಂತ್ರಜ್ಞಾನದ ಬಳಕೆಗೂ ಪ್ರಯತ್ನಿಸುತ್ತಿದ್ದೇವೆ. ತಂತ್ರಜ್ಞರೊಂದಿಗೆ ಮಾತುಕತೆ ಜಾರಿಯಲ್ಲಿದೆ’ ಎಂದು ಸಂತೋಷ್ ಮೆನನ್ ಹೇಳಿದರು.

2019ರಲ್ಲಿ ಕೆಪಿಎಲ್ ಆವೃತ್ತಿಯಲ್ಲಿ ಕೆಲವು ಆಟಗಾರರು ಮತ್ತು ಫ್ರ್ಯಾಂಚೈಸಿ ಮಾಲೀಕರು ಮ್ಯಾಚ್ ಫಿಕ್ಸಿಂಗ್ ಆರೋಪ ಎದುರಿಸಿದ್ದರು. ಹಲವು ಕ್ರಿಕೆಟಿಗರು ಮತ್ತು ಅಧಿಕಾರಿಗಳನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದರು. ನಂತರ ಕೋರ್ಟ್‌ನಲ್ಲಿ ವಿಚಾರಣೆ ನಡೆದು ಆಟಗಾರರು ಖುಲಾಸೆಗೊಂಡಿದ್ದರು.

ಆಟಗಾರರ ಡ್ರಾಫ್ಟ್

ಎ ಗುಂಪು: ಭಾರತ ತಂಡ ಮತ್ತು ಐಪಿಎಲ್‌ನಲ್ಲಿ ಆಡಿದವರು (ತಲಾ ₹ 5ಲಕ್ಷ)
ಬಿ ಗುಂಪು: ಬಿಸಿಸಿಐ ಟೂರ್ನಿಗಳಲ್ಲಿ ಕರ್ನಾಟಕ ಸೀನಿಯರ್ ತಂಡ ಪ್ರತಿನಿಧಿಸಿದವರು (ತಲಾ ₹3ಲಕ್ಷ)
ಸಿ ಗುಂಪು: ವಿವಿಧ ವಯೋಮಿತಿಯ ರಾಜ್ಯ ತಂಡದಲ್ಲಿ ಆಡಿದವರು (ತಲಾ ₹ 1ಲಕ್ಷ)
ಡಿ ಗುಂಪು: ಕೆಎಸ್‌ಸಿಎ ನೋಂದಾಯಿತ ಇನ್ನಿತರ ಆಟಗಾರರು (ತಲಾ ₹ 50 ಸಾವಿರ)
ಕ್ಯಾಚ್‌ಮೆಂಟ್ ಏರಿಯಾ ಆಟಗಾರರು: ತಲಾ ₹ 30 ಸಾವಿರ

BANGALORE DEVELOPMENT AUTHORITY
T. Chowdaiah Road, Kumara Park West, Bengaluru - 560 020.
Phone: 080-23368615 / 23442271 / 74 Ext.: 266 Website: www.bdabangalore.org

DEVELOPMENT OF PERIPHERAL RING ROAD TO BENGALURU CITY UNDER PUBLIC PRIVATE PARTNERSHIP

Notice Inviting Tender Call-2

No. BDA/EM/EE/ID/TENDER Call-2/PRR- 57/2022-23 Date: 16-07-2022

The Bangalore Development Authority, Government of Karnataka (hereinafter referred to as the “Authority”), is the nodal agency for the development of the Bengaluru region by providing various civic amenities, quality infrastructure and as part of this endeavour, the Authority has decided to undertake Development of Peripheral Ring Road to Bengaluru City (the “Project”) through Public Private Partnership (the “PPP”) on Design, Build, Finance, Operate and Transfer (the “DBFOT”) basis. In this regard, the Authority is desirous of selecting the Concessionaire through a transparent and competitive bidding process.

Name of the Work	EMD (Rs. in Crores)
Development of 8 lane Peripheral Ring Road with service road to Bengaluru City for approx. length of 74 km and in RoW width of 100m. including cloverleaf junctions, flyovers/underpasses, ROBs, RUBs, vehicular underpass/overpasses, Toll Plazas, transport zones, culverts, minor and major bridges, utility ducts along and across the road, green corridor with operation and maintenance for a lease period of 50 years on revenue sharing basis through PPP mode (Design, Build, Finance, Operate and Transfer – DBFOT) along with funding the land acquisition cost for 2560 Acres (Approx).	150

The Authority invites proposals (the “Bids”) through e-tendering mode from interested parties (“Concessionaires”) in accordance with the Request for Proposal (“RFP”). The RFP document containing instructions to Bidders, criteria for qualification and criteria for evaluation may be downloaded from the Karnataka Public Procurement Portal of Government of Karnataka (“GoK”) viz.**www.eproc.karnataka.gov.in** and the Bids shall be submitted as per the provisions of the RFP.

Important Details:
RFP Issue Date: 18th July 2022 Submission of bid queries: 27th July 2022 at 16:00 Hrs IST
Pre bid meeting Date: 30th July 2022 at 16:00 Hrs IST
Late Date for submission of bids: 27th August 2022 up to 16:00 Hrs IST
Opening of Technical Bids: 30th August 2022 at 11: 00 Hrs IST

Project Proponent : Bangalore Development Authority
Contact Person : Executive Engineer
Address : Bangalore Development Authority, Government of Karnataka, T. Chowdaiah Road, Kumara Park West, Bengaluru-560020
Phone 080-2334 0258
Email bdaeeprr@gmail.com

Transaction Advisor Infrastructure Development Corporation (Karnataka) Limited (iDeCK)
Contact Person: Divakaran. K
Address: 9/7, K.C.N. Bhavan, Yamunabai Road, Madhavnagar Extension, Off Race Course Road, Bengaluru-560 001
Phone +91 80 4344 8000/33
Mobile 9739080400
Email divakaran.k@ideck.in

Bangalore Development Authority reserves the right to cancel this invitation and / or invite fresh Bids with or without amendments to this invitation, without liability or any obligation for such invitation and without assigning any reason

Sd/- Engineer Member, BDA, Bengaluru

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 17 ಜುಲೈ 2022



ಮಹಾತ್ಮ ಗಾಂಧಿ ಅವರ ಹತ್ಯೆ ನಡೆದ ಆ ಕ್ಷಣ

'ಮಹಾ ಹತ್ಯೆ'ಗಳತ್ತ ಹೊರಳು ನೋಟ 15

ನಭೋಮಂಟಪಕ್ಕೆ

ತಾರಾ ತೋರಣ



ಉದ್ದಿನ ಬೇಳೆಯಷ್ಟು ಬ್ರಹ್ಮಾಂಡದಲ್ಲಿ ಲಕ್ಷಗಟ್ಟಲೆ ಗೆಲಾಕ್ಸಿಗಳು, ಒಂದೊಂದರಲ್ಲೂ ಕೋಟಿಗಟ್ಟಲೆ ತಾರೆಗಳು, ಒಂದೊಂದು ತಾರೆಯ ಸುತ್ತ ಗ್ರಹಚಂದ್ರಗಳು... ಜೇಮ್ಸ್ ವೆಬ್ ದೂರದರ್ಶಕ ಸೆರೆ ಹಿಡಿದು ಕಳುಹಿಸಿದ ವಿಶ್ವದ ಬಾಲ್ಯಾವಸ್ಥೆಯ ಮೊದಲ ನೋಟದ ಅಪೂರ್ವ ಚಿತ್ರ.

ನಾಗೇಶ ಹೆಗಡೆ

ಈ ಚಿತ್ರಗಳನ್ನು ಮತ್ತೊಮ್ಮೆ ನೋಡಿ. ಬ್ರಹ್ಮಾಂಡದ ಬಾಲ್ಯದ ದೃಶ್ಯಗಳು ಇವು. ಇಲ್ಲಿ ಪಳಪಳ ನಕ್ಷತ್ರಗಳಿವೆ. ಗೆಲಾಕ್ಸಿಗಳಿವೆ. ನೀಹಾರಿಕೆಗಳಿವೆ. ಪರಸ್ಪರ ಆಲಿಂಗನಕ್ಕೆ ಹೊರಟ ಮಿಡಿತಾರೆಗಳಿವೆ. ಒಂದನ್ನೊಂದು ನುಂಗಲು ಹವಣಿಸುವ ಗೆಲಾಕ್ಸಿಗಳಿವೆ. ಫೂತ್ಕರಿಸುವ ಜ್ವಾಲಾಮೇಘಗಳಿವೆ. ತಾರಾಪಟ್ಟಕ್ಕೆ ಪೈಪೋಟಿಗಿಳಿದ ಪುಡಿನಕ್ಷತ್ರಗಳಿವೆ. ಹೊಸ ನಕ್ಷತ್ರಗಳ ಉದಯಕ್ಕೆ ಬೀಜಾಂಕುರ ಮಾಡುತ್ತಿರುವ ಪ್ರಸೂತಿಮಂಡಲಗಳಿವೆ. ಮುದಿನಕ್ಷತ್ರಗಳನ್ನು ಸ್ವಾಹಾ ಮಾಡುವ ಗುರುತ್ವ ಯಜ್ಞಕುಂಡಗಳಿವೆ.

ಕವಿ ಕೆಎಸ್‌ನರ ಜೋಗುಳ ಹಾಡನ್ನು ನೆನಪಿಸುವ 'ತಾರೆಗಳ ಜರತಾರಿ ಅಂಗಿ'ಗಳ ಅಂಗಡಿಗಳೇ ಇವೆ. ಬ್ರಹ್ಮಾಂಡದ ಬಾಲ್ಯದ ದೃಶ್ಯಜೋಗುಳ ಇದು!

ಕಲಾವಿದನ ಕೈಚಳಕವಲ್ಲ, ನೀಹಾರಿಕೆಯೊಂದರ ಮನಮೋಹಕ ನೋಟ

ಇವೆಲ್ಲ ಇದೇ ಮೊದಲ ಬಾರಿಗೆ ಮೊನ್ನೆ ಜುಲೈ 11ರಂದು ಬಾಹ್ಯಾಕಾಶದಲ್ಲಿರುವ ಜೇಮ್ಸ್ ವೆಬ್ ದೂರದರ್ಶಕದ ಮೂಲಕ ಕಂಡಿದ್ದು.

ಅಂದು 'ನಾಸಾ' ಬಾಹ್ಯಾಕಾಶ ಸಂಸ್ಥೆ ಈ ಚಿತ್ರಗಳ ಅನಾವರಣ ಮಾಡುತ್ತಿದ್ದಂತೆ ಇಡೀ ಜಗತ್ತೇ ನಿಬ್ಬೆರಗಾಯಿತು. ಖಗೋಲವಿಜ್ಞಾನಿಗಳು ಮೂಕವಿಸ್ಮಿತರಾದರು. ಹವ್ಯಾಸಿ ಖಗೋಲವೀಕ್ಷಕರಲ್ಲಿ ಅನೇಕರು ಗದ್ಗದಿತರಾದರು. ಜೇಮ್ಸ್ ವೆಬ್ ದೂರದರ್ಶಕದ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ತೊಡಗಿದ್ದ 20 ಸಾವಿರ ಸಿಬ್ಬಂದಿ ಕೇಕೆ ಹಾಕಿ ಕುಪ್ಪಳಿಸಿದರು. ಇವೆಲ್ಲವನ್ನೂ ಊಹಿಸಿ ಹಿಂದೆಲ್ಲ ಕಂಪ್ಯೂಟರ್ ಗ್ರಾಫಿಕ್ ಚಿತ್ರ ಬರೆಯುತ್ತಿದ್ದ ಕಲಾವಿದರೂ ಅಬ್ಬಾ ಎಂದರು. ಗೂಗಲ್ ಕೂಡ ತನ್ನ ಎಂದಿನ ಡೂಡ್ಲ್ ಬದಲು ಬ್ರಹ್ಮಾಂಡದ ಬಾಗಿಲನ್ನೇ ಬಿಡಿಸಿಟ್ಟು ಶತಕೋಟಿ ಜನರಿಗೆ ಅಚ್ಚರಿಯ ಐಕಾನನ್ನು ತೆರೆದಿಟ್ಟಿತು. ನ್ಯೂಯಾರ್ಕಿನ ಟೈಮ್ಸ್ ಚೌಕದ ಬೃಹತ್ ಪರದೆಯ ಮೇಲೆ ಈ ಚಿತ್ರಗಳು ವಿಜೃಂಭಿಸಿದವು.

ಈಪರಿಯ ಜಾಗತಿಕ ಸಂಭ್ರಮಕ್ಕೆ ಕಾರಣವಿಷ್ಟೆ: ಹಿಂದೆಂದೂ ಕಂಡಿರದ ಅಲೌಕಿಕ ದೃಶ್ಯಗಳನ್ನು ಸೆರೆ ಹಿಡಿಯಲೆಂದೇ ಜೇಮ್ಸ್ ವೆಬ್ ದೂರದರ್ಶಕ ಕಳೆದ ಕ್ರಿಸ್ಮಸ್ ದಿನದಂದು ಬಾಹ್ಯಾಕಾಶಕ್ಕೆ ಏರಿತ್ತು. ಅದರ ನಿರ್ಮಾಣದ ಕಥನವೇ ಅಪ್ರತಿಮವಾದುದು. ಮೂವತ್ತು ವರ್ಷಗಳ ಪರಿಶ್ರಮದಲ್ಲಿ ಅಮೆರಿಕ, ಕೆನಡಾ ಮತ್ತು ಐರೋಪ್ಯ ಸಂಘ ಒಟ್ಟಾಗಿ ಹತ್ತು ಶತಕೋಟಿ ಡಾಲರ್ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದು ಅದು. ಆರು ತಿಂಗಳ ಹಿಂದೆ ಕಕ್ಷೆಗೇರಿ ಭೂಮಿಯ ಆಚೆ 15 ಲಕ್ಷ ಕಿಲೊಮೀಟರ್ ದೂರದಲ್ಲಿ, ಭೂಮಿಯ ಮತ್ತು ಸೂರ್ಯನ ಗುರುತ್ವ ಸೆಳೆತಗಳ ಸಮಬಿಂದುವಿನಲ್ಲಿ ಅದು ಸ್ಥಾಪಿತವಾಗಿದೆ. ಸೂರ್ಯನ ಬಿಸಿಕಿರಣಗಳು ತಾಗದಂತೆ ತನ್ನದೇ ನೆರಳುಕವಚವನ್ನು ನಿರ್ಮಿಸಿಕೊಂಡು ಅದು ನಮಗೆ ಬೇಕೆಂದತ್ತ ತನ್ನ ಮುಖವನ್ನು ತಿರುಗಿಸಿ ನಮಗೆ ಬೇಕೆಂದಷ್ಟು ಅವಧಿಯ ವಿಶ್ವಚರಿತೆಯನ್ನು ತೋರಿಸುತ್ತದೆ.

ಅದು ರವಾನಿಸುವ ಮೊದಲ ಚಿತ್ರಮಾಲಿಕೆಯನ್ನು ನೋಡಲು ಜಗತ್ತೇ ಕಾತರವಾಗಿತ್ತು. ನಾಸಾ ಕೂಡ ಆ ಚಿತ್ರಗಳನ್ನು ಅದ್ದೂರಿಯಾಗಿ ಅಮೆರಿಕದ ಶ್ವೇತಭವನದಲ್ಲೇ ಅಧ್ಯಕ್ಷ ಜೋ ಬೈಡೆನ್ ಕೈಯಿಂದಲೇ ಬಿಡುಗಡೆ ಮಾಡಿಸಿತು.

ಈಗ ಲಭಿಸಿದ ಈ ಚಿತ್ರಗಳು 450 ಕೋಟಿ ವರ್ಷಗಳ ಹಿಂದಿನ ವಿಶ್ವದ ದೃಶ್ಯಗಳು. ಬ್ರಹ್ಮಾಂಡದ ದಕ್ಷಿಣಭಾಗದ ಆಳಆಳಆಳದಲ್ಲಿ ವೋಲಾನ್ಸ್ ನಕ್ಷತ್ರಪುಂಜದ ದಿಕ್ಕಿನಲ್ಲಿ ಸಿಕ್ಕವು. ಅಲ್ಲಿಂದ ಹೊರಟ ಬೆಳಕಿನ ಅವಗೆಂಪು ಕಿರಣಗಳು ಸೆಕೆಂಡ್‌ಗೆ ಮೂರು ಲಕ್ಷ ಕಿ.ಮೀ. ವೇಗದಲ್ಲಿ ಧಾವಿಸುತ್ತ 930 ಕೋಟಿ ವರ್ಷಗಳ ನಂತರ ನಮಗೆ ತಲುಪಿವೆ. ಅಂದರೆ, ನಾವಿಂದು ಜೇಮ್ಸ್ ವೆಬ್ ಟೆಲಿಸ್ಕೋಪ್ ಎಂಬ ಕಾಲಯಂತ್ರದಲ್ಲಿ ಕೂತು ಭೂತಕಾಲಕ್ಕಿಳಿದು ಅಷ್ಟು ಕೋಟಿ ವರ್ಷಗಳ ಹಿಂದಿನ ಚರಿತ್ರೆಯನ್ನು ಕಣ್ಣಾರೆ ನೋಡುತ್ತಿದ್ದೇವೆ. ಐನ್‌ಸ್ಟೀನ್ ಮಹಾಶಯ ನೂರು ವರ್ಷಗಳ ಹಿಂದೆಯೇ ಊಹಿಸಿದ್ದ ಗುರುತ್ವ ಮಸೂರದಿಂದಾಗಿ ತೀರ ಆಳದಲ್ಲಿ ತೀರ ಸೂಕ್ಷ್ಮವಾಗಿ ಕಾಣಬೇಕಿದ್ದ ಗೆಲಾಕ್ಸಿಗಳೂ ಈಗ ಎದೆಯುಬ್ಬಿಸಿ ತಮ್ಮ ಇರವನ್ನು ತೋರಿಸುತ್ತಿವೆ.

ಈಗಿನ ವಿಶ್ವಕ್ಕೆ 1380 ಕೋಟಿ ವರ್ಷ ವಯಸ್ಸಾಗಿದೆ. ಅದು ಕೇವಲ 13.8 ವರ್ಷದ ಮಗು ಎಂದುಕೊಂಡರೆ ಈಗ ನಾವಿಲ್ಲಿ ಕಾಣುತ್ತಿರುವುದು ಆ ಮಗು ತನ್ನ ನಾಲ್ಕೂವರೆ ವರ್ಷದಾಗಿದ್ದಾಗಿನ ಆಲ್ಬಮ್ ಚಿತ್ರ. ಅದೂ ಇಡೀ ಚಿತ್ರವಲ್ಲ. ಒಂದು ಮರಳು ಕಣವನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಕಂಡಷ್ಟೇ ವಿವರ ಈಗಿನದು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಎರಡು ಬೆರಳುಗಳ ಮಧ್ಯೆ ಒಂದು ಮರಳುಕಣವನ್ನು ಹಿಡಿದು, ಕೈಯನ್ನು ನೀಳಮಾಡಿ ಆಕಾಶದತ್ತ ಹಿಡಿದಾಗ, ಆ ಮರಳಿನ ಹಿಂಭಾಗದಲ್ಲಿ ಎಷ್ಟು ಆಕಾಶ ಇರುತ್ತೋ ಅಷ್ಟೇ ಆಕಾಶದ ಆಳ ಚಿತ್ರ ಇದು. ಅನಂತಾನಂತ ವಿಸ್ತಾರದ ವಿಶ್ವದ ಒಂದು ಅನಂತಾಲ್ಪ ತುಣುಕು. ಜೇಮ್ಸ್ ವೆಬ್ ದೂರದರ್ಶಕ ಈ ದೃಶ್ಯಗಳನ್ನು ಐದೂವರೆ ದಿನಗಳಲ್ಲಿ ಸೆರೆ ಹಿಡಿದಿದೆ. ಇನ್ನೂ ಕನಿಷ್ಠ 15-20 ವರ್ಷಗಳ ಕಾಲ ಇದೇ ದೂರದರ್ಶಕ ಅಲ್ಲೇ ನಿಂತು ಬ್ರಹ್ಮಾಂಡದ ಬೇರೆ ಬೇರೆ ಮಗ್ಗುಲಿನ, ಬೇರೆ ಬೇರೆ ಕಾಲಘಟ್ಟದ ಚಿತ್ರಗಳನ್ನು ಕಳಿಸುತ್ತಿರುತ್ತದೆ.

ಅಲ್ಲಿ ಅದೇನೇನು ನಿಗೂಢಗಳ ಸಂತೆ ಇದೆಯೊ! ಅದೆಷ್ಟು ಹೊಸ ಜಗತ್ತುಗಳು ತೆರೆದುಕೊಳ್ಳಲಿವೆಯೊ? ಆರಂಭದಲ್ಲಿ ಬಿಗ್‌ಬ್ಯಾಂಗ್ ಹೇಗಾಯಿತು? ಆ ಕ್ಷಣಕ್ಕೆ ಮುಂಚೆ ಕಾಲವೂ ಇರಲಿಲ್ಲ, ಜಾಗವೂ ಇರಲಿಲ್ಲ ಎನ್ನುತ್ತಾರಲ್ಲ? ಅದು ಸೃಷ್ಟಿಯಾಗಲು ಏನು ಕಾರಣ? ಬಿಗ್‌ಬ್ಯಾಂಗ್ ನಂತರ ಬ್ರಹ್ಮಾಂಡ ಸತತವಾಗಿ ವಿಸ್ತರಿಸುತ್ತಲೇ ಇದೆಯಂತೆ. ಬಲೂನ್ ಮೇಲೆ ಕೂತ ಇರುವೆಗಳು ಬಲೂನ್ ಹಿಗ್ಗುತ್ತ ಹೋದಂತೆಲ್ಲ ನಿಂತಲ್ಲೇ ದೂರ ದೂರ ಸರಿಯುವ ಹಾಗೆ ನಮ್ಮ ಸುತ್ತಲ ನಕ್ಷತ್ರ ಗೆಲಾಕ್ಸಿಗಳೂ ನಮ್ಮಿಂದ ದೂರ ಸಾಗುತ್ತಿವೆ ಎನ್ನುತ್ತಾರೆ. ಯಾವ ಬೃಹತ್ ಶಕ್ತಿ ಅವನ್ನೆಲ್ಲ ಹಾಗೆ ದೂರ ತಳ್ಳುತ್ತಿದೆ? ನಮಗದು ಗೊತ್ತಿಲ್ಲ.

13ನೇ ಪುಟಕ್ಕೆ...

ಹಿಂದೆಂದೂ ಕಂಡಿರದ ಅಲೌಕಿಕ ದೃಶ್ಯಗಳನ್ನು ಸೆರೆ ಹಿಡಿಯಲೆಂದೇ 'ಜೇಮ್ಸ್' ವೆಬ್ ದೂರದರ್ಶಕ ಆರು ತಿಂಗಳ ಹಿಂದೆ ಬಾಹ್ಯಾಕಾಶದ ಕಕ್ಷೆಗೇರಿತ್ತು. ಈಗ ಅದು ಕಳಿಸಿರುವ ಚಿತ್ರಗಳು 450 ಕೋಟಿ ವರ್ಷಗಳ ಹಿಂದಿನ ವಿಶ್ವದ ದೃಶ್ಯಗಳು. ಇನ್ನೂ 15–20 ವರ್ಷ ಅಲ್ಲಿಯೇ ನಿಂತು ಬ್ರಹ್ಮಾಂಡದ ಬೇರೆ ಬೇರೆ ಮಗ್ಗಲಿನ ಚಿತ್ರಗಳನ್ನು ಸೆರೆ ಹಿಡಿದು ಕಳಿಸಲಿದೆ 'ಜೇಮ್ಸ್'. ಅಲ್ಲಿ ಅದೇನೇನು ನಿಗೂಢಗಳ ಸಂತೆ ಇದೆಯೊ, ಅದೆಷ್ಟು ಹೊಸ ಜಗತ್ತುಗಳು ತೆರೆದುಕೊಳ್ಳಲಿವೆಯೊ?!



ಬ್ರಹ್ಮಾಂಡದ ಚಿತ್ರಗಳನ್ನು ಸೆರೆಹಿಡಿಯಲು ಹೋದ 'ಜೇಮ್ಸ್' ಹೀಗಿದ್ದಾನೆ ನೋಡಿ...

1979ರ ಮಾರ್ಚ್ 10ರಂದು ಬೆಂಗಳೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ತೆಲುಗು ಕವಿ ಶ್ರೀ ಶ್ರೀ, ದೇವನೂರ ಮಹಾದೇವ, ನಿರಂಜನ ಹಾಗೂ ಸಿದ್ದಲಿಂಗಯ್ಯ (ಮಾತನಾಡುತ್ತಿರುವವರು)

ಬಂಡಾಯದ ಹೆಜ್ಜೆಗೆ ನಾಲ್ಕು ದಶಕ

ಬರಗೂರು ರಾಮಚಂದ್ರಪ್ಪ

ಯಾವುದೇ ಚಳವಳಿಯು ದೀರ್ಘಕಾಲ ಬಾಳುವುದು ಸಣ್ಣ ಸಂಗತಿಯಲ್ಲ. ಚಳವಳಿಯ ತೀವ್ರತೆ ಸದಾ ಒಂದೇ ಸ್ತರದಲ್ಲಿ ಇಲ್ಲದೆ ಇರಬಹುದು. ಆದರೆ, ಕಾಲಕಾಲಕ್ಕೆ ಪುನಶ್ಚೇತನಗೊಳ್ಳುತ್ತ ತನ್ನ ಜೀವಶಕ್ತಿಯನ್ನು ಉಳಿಸಿಕೊಂಡು ಸದಾ ಸಮಕಾಲೀನವಾಗುವುದರಲ್ಲಿ ಚಳವಳಿಗಳ ಯಶಸ್ಸು ಇರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ನಾಲ್ಕು ದಶಕ ದಾಟಿದ ಬಂಡಾಯ ಸಾಹಿತ್ಯ ಚಳವಳಿಯು ನಮ್ಮ ಸಾಂಸ್ಕೃತಿಕ ಕ್ಷೇತ್ರದ ಒಂದು ಹೆಗ್ಗಳಿಕೆಯಾಗಿ ಉಳಿದಿದೆ.

1979ರ ಮಾರ್ಚ್ 10 ಮತ್ತು 11ರಂದು ಬೆಂಗಳೂರಿನಲ್ಲಿ ನಡೆದ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನವು 'ಸಂಘಟನೆ'ಗೆ ಒತ್ತಾಸೆ ಒದಗಿಸಿತು. 'ಸಂಘಟನೆ'ಯು 'ಚಳವಳಿ'ಯನ್ನು ರೂಪಿಸಿತು; ಮುನ್ನಡೆಸಿತು. ಮುಖ್ಯವಾಗಿ, ಹೊಸ, ಸಾಹಿತ್ಯ ಚಳವಳಿಯೊಂದಕ್ಕೆ ಹದಗೊಂಡ ಕಾಲ ಅದಾಗಿತ್ತು. ಈ 'ಹದಗೊಂಡ ಕಾಲ'ಕ್ಕೆ ಒಂದೇ ಕಾರಣವೆಂದು ನನಗನ್ನಿಸಿಲ್ಲ. ಮೊದಲನೇ ಬಂಡಾಯ ಸಾಹಿತ್ಯ ಸಮ್ಮೇಳನವು ಆಯೋಜನೆಗೊಳ್ಳುವ ಮುಂಚೆ ದಲಿತ ಸಂಘರ್ಷ ಸಮಿತಿ ಹುಟ್ಟಿತ್ತು. ದಲಿತ ಚಳವಳಿ ರೂಪುಗೊಂಡಿತ್ತು. 'ಸಮುದಾಯ' ರಂಗಭೂಮಿ ಸಂಘಟನೆಯು ಕ್ರಿಯಾಶೀಲವಾಗಿತ್ತು. ಇಂದಿರಾಗಾಂಧಿಯವರು ಹೇರಿದ 'ತುರ್ತು ಪರಿಸ್ಥಿತಿ'ಯ ಅನುಭವ ಆಗಿತ್ತು. ಬಿ.ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು 'ಬೂಸ' ಎಂದರೆಂದು ಪರ-ವಿರೋಧದ ವಿವಾದವೆದ್ದು, ಸಾಮಾಜಿಕ ಸಂಘರ್ಷದತ್ತ ವಾಲಿತ್ತು.

ಮೈಸೂರಿನಲ್ಲಿ ಬರಹಗಾರರ-ಕಲಾವಿದರ ಒಕ್ಕೂಟದಿಂದ ಸಮ್ಮೇಳನ ನಡೆದು, ರಾಷ್ಟ್ರಕವಿ ಕುವೆಂಪು ಅವರು ಉದ್ಘಾಟಿಸಿದ್ದರು. ಹೊರಳು ದಾರಿಯ ಒಳಕುದಿತಗಳು ಹೊರಬರತೊಡಗಿದ್ದವು. ಆದರೆ, ಸಾಹಿತ್ಯ ಚಳವಳಿಯ ಹೊಸ ಹುಟ್ಟಿಗೆ ಇದಿಷ್ಟೇ ಸಾಕೆ? ಸಾಹಿತ್ಯಾಭಿವ್ಯಕ್ತಿಯ ಸಾಧ್ಯತೆಗಳಲ್ಲಿ ಈ ಕಾಲ ಕುದಿತದ ಸಾಮಾಜಿಕ ಸಂವೇದನೆಗಳು ಸೇರಬೇಡವೆ? ಇದಕ್ಕೆ ಉತ್ತರವೆಂಬಂತೆ ನಾನು 1975ರ ನವೆಂಬರ್‌ನಲ್ಲೇ - ಜಿ.ಎನ್. ರಂಗನಾಥರಾವ್ ಅವರು ಸಂಪಾದಿಸಿದ 'ಅಕ್ಷರ ಸಂಚಿಕೆ'ಯಲ್ಲಿ- 'ಇತ್ತೀಚಿನ ಸಣ್ಣ ಕತೆ: ಹೊಸ ಆಶಯ' ಎಂಬ ಲೇಖನವನ್ನು ಬರೆದಿದ್ದೆ. ಹೊಸ ಚಳವಳಿಗೆ ಬೇಕಾದ ವಸ್ತು ಸಾಮಗ್ರಿಯನ್ನು ಕನ್ನಡ ಕತೆಗಳು ಒಳಗೊಳ್ಳುತ್ತಿರುವುದನ್ನು ಸ್ಪಷ್ಟಪಡಿಸಿದ್ದೆ. ನನ್ನ ಕೆಲವು ಮಾತುಗಳು ಹೀಗಿದ್ದವು: 'ಸಣ್ಣಕಥಾ ಕ್ಷೇತ್ರದಲ್ಲಿ ಇತ್ತೀಚೆಗೆ ಸಾಮಾಜಿಕ ಕಾಳಜಿ ವಹಿಸುವವರು ಬರುತ್ತಿದ್ದಾರೆನ್ನುವುದು ಸಂತೋಷದ ವಿಷಯ. ಇದು ಈಗ ಮುಖ್ಯವೆಂದು ಕರೆಯಬಹುದಾದ ಒಂದು ತಿರುವು. ಆದರೆ, ಸಾಹಿತ್ಯದ ಎಲ್ಲ ಪ್ರಕಾರಗಳಿಗೆ ಸಂಬಂಧಿಸಿದಂತೆ ಇಂಥ 'ಧೋರಣೆ'ಯುಳ್ಳವರು ಸಂಘಟಿತರಾಗಿ ಕ್ರಿಯಾಮಗ್ನರಾದಾಗ ಒಂದು ಹೊಸ ಚಳವಳಿಯ ಹುಟ್ಟು ಆಗಬಹುದು.'

ನನ್ನ ಈ ಲೇಖನಕ್ಕೆ ಮುಂಚೆಯೇ ಬಂದ ಪೂರ್ಣಚಂದ್ರ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನದ ಆರಂಭದಲ್ಲಿದ್ದ 'ಹೊಸ ದಿಗಂತದ ಕಡೆಗೆ' ಎಂಬ ಲೇಖನವು ಹೊಸ ಹುಡುಕಾಟದ ಅಗತ್ಯಗಳನ್ನು ಹೇಳುತ್ತದೆ. 'ಹಳೆ ಸಾಹಿತ್ಯಕ್ಕೂ ಹೊಸ ಸಾಹಿತ್ಯಕ್ಕೂ ನಡುವಿನ ಘರ್ಷಣೆ, ಹಳೆ ಸಂಪ್ರದಾಯ, ಆಚಾರ, ಪರಂಪರೆ ಮುಂತಾದವುಗಳೆಲ್ಲದರ ವಿರುದ್ಧವಾದ ಆಂದೋಲನವಾಗಲಿಲ್ಲ' ಎಂದು ನವ್ಯ ಸಾಹಿತ್ಯ ಸಂದರ್ಭವನ್ನು ಅವರು ವಿಶ್ಲೇಷಿಸಿದ್ದಾರೆ.

ಅದೇನೇ ಇರಲಿ, ಆಗ ಕನ್ನಡ ಸಾಹಿತ್ಯ ಕ್ಷೇತ್ರವು ವಿವಿಧ ಸಾಮಾಜಿಕ ತಳಮಳಗಳನ್ನು ಒಳಗೊಳ್ಳುವ ಹಸಿವಿನಿಂದ ಕೂಡಿತ್ತು ಎಂಬುದಿಲ್ಲಿ ಮುಖ್ಯ. ಇಲ್ಲದಿದ್ದರೆ ಅದು ಹೊಸ ಸಾಹಿತ್ಯ ಚಳವಳಿಗೆ ಕಾರಣವಾಗುತ್ತಿರಲಿಲ್ಲ. ಬದಲಾಗಿ ಸಾಮಾಜಿಕ ಚಳವಳಿ ಮಾತ್ರ ಆಗುತ್ತಿತ್ತು. ಅಂತೂ ಎಲ್ಲ ಪ್ರೇರಣೆಗಳೊಂದಾದ ಹದಗೊಂಡ ಕಾಲದಲ್ಲಿ, ಸಾಮಾಜಿಕ ತಳಮಳಗಳಿಗೆ ಕಳಕಳಿಯ ಕಣ್ಣಾಗುವ ಬಂಡಾಯ ಸಾಹಿತ್ಯ ಚಳವಳಿ ರೂಪುಗೊಂಡಿತು. ನವ್ಯ ಸಾಹಿತ್ಯ ಸಂದರ್ಭದಲ್ಲಿ ಪ್ರಧಾನವಾಗಿದ್ದ ವೈಯಕ್ತಿಕತೆಯಿಂದ ಸಾಮಾಜಿಕತೆಯತ್ತ ಹೊರಳಿತು. ಈ ಸಂದರ್ಭದಲ್ಲಿ ದಲಿತ, ಬಂಡಾಯ ಮತ್ತು ಸಮುದಾಯ- ಪರಸ್ಪರ ಪೂರಕವಾಗಿ ಬೆಳೆದವು. ಸಾಂಸ್ಕೃತಿಕ ಕ್ಷೇತ್ರಕ್ಕೆ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯನ್ನು ಬೆಸೆದವು. ಇಲ್ಲಿ ರಾಜಕೀಯ ಪ್ರಜ್ಞೆಯೆಂದರೆ ರಾಜಕೀಯ ಪಕ್ಷ ಪರವಾದ ಪ್ರಜ್ಞೆಯಲ್ಲ. ಪ್ರಜಾಸತ್ತಾತ್ಮಕ ಪರವಾದ ಪ್ರಜ್ಞೆ.

ಬಂಡಾಯ ಸಾಹಿತ್ಯ ಚಳವಳಿಯು ಯಾವುದೇ ಪಕ್ಷಪರವಲ್ಲದ, ಸಮಾನತೆಗೆ ಬದ್ಧವಾದ ವಿಶಾಲ ವ್ಯಾಪ್ತಿಯ ಪ್ರಗತಿಪರ, ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಪ್ರತಿಪಾದಿಸಿತು. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ತೊಡಗಿಸಿಕೊಂಡವರು ತಂತಮ್ಮ ವೈಚಾರಿಕ ಪಂಥಗಳನ್ನು ಉಳಿಸಿಕೊಂಡು ಒಟ್ಟಾರೆ ಸಮಾನತಾ ಸಂಸ್ಕೃತಿಗೆ ಬದ್ಧವಾದ ಸಾಮಾನ್ಯ ನೆಲೆಯಲ್ಲಿ ಒಂದಾಗಿ ಚಳವಳಿಯನ್ನು ಬೆಳೆಸಿದ್ದು ಒಂದು ವಿಶೇಷ. ಯಾವುದೇ ಜನಪರವುಳ್ಳ ವಾದ-ಸಿದ್ಧಾಂತದವರು ಬಂಡಾಯ ಸಾಹಿತ್ಯ ಸಂಘಟನೆಯ ಭಾಗವಾಗಬಹುದು. ಹೀಗಾಗಿ ನಮ್ಮ ಸಂಘಟನೆಯಲ್ಲಿ ಗಾಂಧಿವಾದ, ಲೋಹಿಯಾವಾದ, ಮಾರ್ಕ್ಸ್‌ವಾದ, ಅಂಬೇಡ್ಕರ್ ವಾದ, ಮುಂತಾದವುಗಳಿಗೆ ಬದ್ಧವಾದವರು ಮತ್ತು ಯಾವುದೇ ವಾದಕ್ಕೂ ಬದ್ಧವಾಗದೆ, ಒಟ್ಟಾರೆ ಸಾಮಾಜಿಕ-ಆರ್ಥಿಕ ಸಮಾನತೆ ಮತ್ತು ಬದಲಾವಣೆಗೆ ಬದ್ಧವಾದವರು ಕೂಡ ಬಂಡಾಯ ಸಂಘಟನೆಯ ಭಾಗವಾಗಲು ಅವಕಾಶವಿತ್ತು. ಇದು ಒಂದು ಸಾಮಾಜಿಕ-ಸಾಂಸ್ಕೃತಿಕ ಒಕ್ಕೂಟ. ದೇಶದಲ್ಲೇ ಒಂದು ವಿಶಿಷ್ಟ ಪ್ರಯೋಗವಾಗಿ ನಾಲ್ಕು ದಶಕ ದಾಟಿ ಐದನೇ ದಶಕದಲ್ಲಿ ನಡೆಯುತ್ತಿದೆ.

ಬಂಡಾಯ ಸಾಹಿತ್ಯವು ಒಂದು ಚಳವಳಿಯಾಗಿ ರೂಪುಗೊಂಡಾಗ ಕೆಲವು ಚರ್ಚೆಗಳನ್ನು ಹುಟ್ಟುಹಾಕಿತು. ಮೊದಲನೆಯದಾಗಿ, ಸಾಹಿತಿಗಳಿಗೆ ಸಾಮಾಜಿಕ ಜವಾಬ್ದಾರಿಯಿರಲೇಬೇಕು ಎಂಬ ನಮ್ಮ ಪ್ರತಿಪಾದನೆಯು, ಸೃಜನಶೀಲ ಸ್ವಾತಂತ್ರ್ಯಕ್ಕೆ ವಿರುದ್ಧ ಎಂದು ವಿರೋಧಿಸಲಾಯಿತು. ಸಾಹಿತಿಯು ಬದುಕಿಗೆ ಮಾತ್ರ ಬದ್ಧ ಎಂದು ಸಮರ್ಥನೆ ಕೊಡಲಾಯಿತು. ಹಾಗಾದರೆ ಈ 'ಬದುಕು' ಎನ್ನುವುದು ಎಲ್ಲಿದೆ? ಸಮಾಜದಲ್ಲಿ ತಾನೆ? ಜನರಲ್ಲಿ ತಾನೆ? ಸಾಹಿತಿಗಳೂ ಜನರಲ್ಲವೆ? ಸಮಾಜದಲ್ಲೇ ಬದುಕುತ್ತಿಲ್ಲವೆ? ಆದ್ದರಿಂದ ಸಾಹಿತ್ಯವು ವೈಯಕ್ತಿಕ ಲೋಲುಪತೆಯಾಗದೆ ಸಾಮಾಜಿಕ ಜವಾಬ್ದಾರಿಯಿಂದ ಕೂಡಿರಬೇಕು. ಸಾಹಿತಿಗಳು ಜನರಿಗೆ ಜವಾಬ್ದಾರರಾಗಬೇಕು. ಆಗ ಸಾಮಾಜಿಕ ಬದುಕು ಮತ್ತು ಸಾಹಿತ್ಯದ ಸಂಬಂಧ ಗಾಢವಾಗುತ್ತದೆ. ಪ್ಲಖನೋವ್ ಎಂಬ ಚಿಂತಕ ಹೇಳಿದ ಮಾತೊಂದು ಇಲ್ಲಿ ಉಲ್ಲೇಖನೀಯ: 'ನಾವು ಕಲಾಕಾರರು (ಸಾಹಿತಿಗಳು) ಜನರಿಂದ ಮನ್ನಣೆ ಪಡೆಯುತ್ತೇವೆ. ಜನರು ನಮ್ಮಿಂದ ಜವಾಬ್ದಾರಿಯನ್ನು ಬಯಸುತ್ತಾರೆ'. ಮಾರ್ಕ್ಸ್ ಅಡೆರೆತ್ ಎಂಬ ವಿಮರ್ಶಕ ವಿಶ್ಲೇಷಿಸಿದ್ದು ಹೀಗೆ: 'ಸಾಮಾಜಿಕ ಜವಾಬ್ದಾರಿಯೆನ್ನುವುದು ಸೃಜನಶೀಲ ಸ್ವಾತಂತ್ರ್ಯದಿಂದ ಹೊರಗಿನದಲ್ಲ. ಅದು ಸೃಜನಶೀಲ ಸ್ವಾತಂತ್ರ್ಯದಿಂದ ಬೇರ್ಪಡಿಸಲಾಗದ ಒಂದು ಆಯಾಮ.'

14ನೇ ಪುಟಕ್ಕೆ...

ಎಲ್ಲ ಪ್ರೇರಣೆಗಳೊಂದಾದ ಹದಗೊಂಡ ಕಾಲದಲ್ಲಿ, ಸಾಮಾಜಿಕ ತಳಮಳಗಳಿಗೆ ಕಳಕಳಿಯ ಕಣ್ಣಾಗುವ ಬಂಡಾಯ ಸಾಹಿತ್ಯ ಚಳವಳಿ ರೂಪುಗೊಂಡು ಇದೀಗ ನಾಲ್ಕು ದಶಕ. ಆ ಸಂಭ್ರಮದಲ್ಲಿ ದಾವಣಗೆರೆಯಲ್ಲಿ ಇದೇ 23 ಮತ್ತು 24ರಂದು ಸಮ್ಮೇಳನವೂ ನಡೆಯುತ್ತಿದೆ. ಈ ಸೈದ್ಧಾಂತಿಕ ಚಕ್ರ ಚಲಿಸಿದ ಹಾದಿಯ ಮೇಲೊಂದು ಹಿನ್ನೋಟ



ರಂಗಮಂಚದಲ್ಲಿ 'ವಿಜ್ಞಾನ'

ಕೆ.ನರಸಿಂಹಮೂರ್ತಿ

ದಸರಾ, ಬಹುರೂಪಿ ಉತ್ಸವದಂತೆ ಈಗ ವಿಜ್ಞಾನ ನಾಟಕೋತ್ಸವದ ಮೂಲಕವೂ ಪಾರಂಪರಿಕ ನಗರ ಮೈಸೂರು ಗಮನ ಸೆಳೆಯುತ್ತಿದೆ. ಕಲೆ, ಸಾಹಿತ್ಯ, ಸಂಶೋಧನೆ, ಸಂಸ್ಕೃತಿಯ ಕ್ಷೇತ್ರದಲ್ಲಿ ಅಭಿರುಚಿ ನಿರ್ಮಾಣದ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಿರುವ ಅರಮನೆಗಳ ನಗರವು ವಿಜ್ಞಾನ ನಾಟಕಗಳ ರಚನೆ, ಪ್ರದರ್ಶನ ಮತ್ತು ವೀಕ್ಷಣೆಯ ವಿಚಾರದಲ್ಲೂ ಅಭಿರುಚಿ ನಿರ್ಮಿಸುವ ಮಹತ್ವದ ಮತ್ತು ಅಪರೂಪದ ಕಾಯಕದಲ್ಲಿ ತೊಡಗಿದೆ.

ಇದು ಕಲೆಯಲ್ಲಿ ವಿಜ್ಞಾನವನ್ನು ಬೆಸೆಯುವ, ವಿಜ್ಞಾನವನ್ನು ಕಲೆಯ ಮೂಲಕ ಗ್ರಹಿಸಿ, ಮಂಡಿಸುವ ವೈಜ್ಞಾನಿಕ ಸಂವಹನ ಮಾದರಿ. ಈ ಮಾದರಿ ಸದ್ಯಕ್ಕೆ ಇತರೆ ಭಾರತೀಯ ಭಾಷೆಗಳಲ್ಲಿ ಇಲ್ಲ. ಹೀಗಾಗಿ ಇದು ಕನ್ನಡದ ಹೆಮ್ಮೆಯೂ ಹೌದು.

ಉತ್ಸವ ಈಗಷ್ಟೇ ನಡೆಯುತ್ತಿರುವುದಲ್ಲ. ನಾಲ್ಕು ವರ್ಷಗಳಿಂದಲೂ ಉತ್ಸವಕ್ಕೆ ವಿಜ್ಞಾನ ನಾಟಕಗಳು ಮೆರುಗು ನೀಡಿವೆ. ಅನುವಾದಿತ ನಾಟಕಗಳಂತೆಯೇ ಕನ್ನಡದ್ದೇ ನಾಟಕಗಳೂ ಉತ್ಸವದ ಭಾಗವಾಗಿರುವುದು ವಿಶೇಷ. ಇನ್ನು ಕೆಲವು ದಿನ ಕಾಯಿರಿ. ಪಕ್ಷಿತಜ್ಞ ಸಲೀಂ ಅಲಿ, ಸಿ.ವಿ.ರಾಮನ್, ಕ್ಲೋನಿಂಗ್ ಮತ್ತು ಕೋಪರ್ನಿಕಸ್ ಕುರಿತ ನಾಟಕಗಳೂ ಕನ್ನಡದಲ್ಲಿ ಬರಲಿವೆ!

> ಇದು ಕಲೆಯಲ್ಲಿ ವಿಜ್ಞಾನವನ್ನು ಬೆಸೆಯುವ, ವಿಜ್ಞಾನವನ್ನು ಕಲೆಯ ಮೂಲಕ ಗ್ರಹಿಸಿ, ಮಂಡಿಸುವ ವೈಜ್ಞಾನಿಕ ಸಂವಹನ ಮಾದರಿ. ಇನ್ನು ಕೆಲವು ದಿನ ಕಾಯಿರಿ. ಪಕ್ಷಿತಜ್ಞ ಸಲೀಂ ಅಲಿ, ಸಿ.ವಿ.ರಾಮನ್, ಕ್ಲೋನಿಂಗ್ ಮತ್ತು ಕೋಪರ್ನಿಕಸ್ ಕುರಿತ ನಾಟಕಗಳೂ ಕನ್ನಡದಲ್ಲಿ ಬರಲಿವೆ!

ಲೀಲಾವತಿ ನಾಟಕದಲ್ಲಿ ಕನಸಿನಲ್ಲಿ ಬಂದ ಭಾಸ್ಕರಾಚಾರ್ಯ ಮತ್ತು ಕಾರ್ಲ್ ಬ್ರೂಕ್ ಜೊತೆ ಚಿನ್ಮಯಿ ಮಾತಿಗಿಳಿದಿದ್ದು ಹೀಗೆ... ಚಿತ್ರಗಳು: ಅನೂಪ್ ರಾಘ್ ಟಿ.

ಚಿನ್ಮಯಿಯ ಕನಸಿನಲ್ಲಿ ಫೈಝಿಯೂ ಬಂದಿದ್ದರು...

ಪರಿವರ್ತನ ರಂಗ ಸಮಾಜ, ಕಲಾ ಸುರುಚಿ ಸಾಂಸ್ಕೃತಿಕ ಬಳಗ, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಜಂಟಿಯಾಗಿ ಆಯೋಜಿಸುತ್ತಿರುವ ಉತ್ಸವದ ಭಾಗವಾಗಿಯೇ, ವಿಜ್ಞಾನ ನಾಟಕಗಳ ರಚನೆಯ ಕುರಿತ ಸದ್ದಿಲ್ಲದ ಕಾರ್ಯಾಗಾರವೂ ನಡೆದಿದೆ.

ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಭಾರತೀಯ ಭಾಷೆಗಳಲ್ಲಿ ಸಂವಹನ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆ 'ವಿಜ್ಞಾನ ಪ್ರಸಾರ್'ನ 'ಸ್ಕೋಪ್' ಯೋಜನೆ ಅಡಿ ಕರ್ನಾಟಕದಲ್ಲಿ ವಿಜ್ಞಾನ-ತಂತ್ರಜ್ಞಾನದ ಸಂವಹನ, ಜನಪ್ರಿಯ ವಿಜ್ಞಾನ ಹಾಗೂ ವಿಸ್ತರಣೆಯ ಕಾರ್ಯಕ್ರಮ 'ಕುತೂಹಲಿ', ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಜೊತೆಗೂಡಿ ನಡೆದಿರುವ ಉತ್ಸವ ಇದು.

ಕಲೆಯ ಮೂಲಕ ವಿಜ್ಞಾನ ಸಂವಹನವನ್ನು ಸಾಧಿಸುವ ಮೊದಲ ಪ್ರಯತ್ನಕ್ಕೆ (2018) ವೇದಿಕೆ ಒದಗಿಸಿದ್ದು ಮೈಸೂರಿನ ಕಲಾಮಂದಿರ. ಡೇವಿಡ್ ಆಬರ್ನ್ ಅವರ 'ಪ್ರೂಫ್', ಮೈಕೆಲ್ ಫ್ರೇನ್ ಅವರ 'ಕೋಪನ್ ಹೇಗನ್' ಜೊತೆಗೆ ಕನ್ನಡದ, ಎಸ್.ಆರ್. ರಮೇಶ್ ಅವರ ನಾಟಕ 'ಬ್ರೋಕನ್ ಬ್ಲಾಸಂ' ಆಗ ಪ್ರದರ್ಶನಗೊಂಡಿದ್ದವು. ವಿಜ್ಞಾನ, ಕಲೆ ಸಾಹಿತ್ಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವೂ ಅಂದಿನ ಉತ್ಸವದ ಭಾಗವಾಗಿತ್ತು.

ನಂತರದ ವರ್ಷದ ಉತ್ಸವದಲ್ಲಿ ಬರ್ಟೋಲ್ಟ್ ಬ್ರೆಕ್ಟ್ ಅವರ 'ಗೆಲಿಲಿಯೋ', ರಾಬರ್ಟ್ ಮಾರ್ಕ್ ಫ್ರೀಡ್ಮನ್ ಅವರ 'ಮುಸ್ಸಂಜೆಯ ಸ್ವಗತಗಳು', ನೀಲಾಂಜನ್ ಚೌಧರಿಯವರ 'ಕವಿತೆಯ ವರ್ಗಮೂಲ' ನಾಟಕ ಉತ್ಸವನ್ನು ಕಳೆಗಟ್ಟಿಸಿದವು. ವಿಶೇಷವೆಂದರೆ, ಆ ವರ್ಷ ವಿಜ್ಞಾನ ನಾಟಕ ರಚನಾ ಶಿಬಿರವೂ ಆಯೋಜನೆಗೊಂಡಿತ್ತು. ಅದು ವಿಜ್ಞಾನ ನಾಟಕಗಳ ರಚನೆಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿತು.

ಆ ವರ್ಷ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಿಜ್ಞಾನ ನಾಟಕ ಕಟ್ಟುವಲ್ಲಿನ ಸವಾಲುಗಳು, ವಿಜ್ಞಾನ ಮತ್ತು ಸಾಂಸ್ಕೃತಿಕ ಕಲೆಯ ವಿಷಯಗಳ ಬಗ್ಗೆ ಡಾ.ಸುದರ್ಶನ ಪಾಟೀಲ ಕುಲಕರ್ಣಿ ಮತ್ತು ನೀಲಾಂಜನ ಚೌಧರಿ ಮಾತನಾಡಿದ್ದರು. ಅದರ ಪರಿಣಾಮವಾಗಿಯೇ, ಎರಡು ವರ್ಷದ ನಂತರ ನಾಲ್ಕು ನಾಟಕಗಳ ರಚನೆ ಕಾರ್ಯ ಭರದಿಂದ ಸಾಗಿದೆ!

ರಂಗಭೂಮಿ

ಉತ್ಸವದ ಮೂರನೇ ವರ್ಷ ತೇಜಸ್ವಿನಿ ಜೋಯಿಸರ ಅರಿವಿನ 'ಅಂಗಳದಲ್ಲಿ', ಕಾರ್ಲ್ ಜೆರಾಸಿ ಅವರ 'ಕ್ಯಾಲ್ಕ್ಯುಲಸ್', ಭದ್ರಪ್ಪ ಶಿ ಹೆನ್ಲಿ ಅವರ 'ನಿಲುಕದ ನಕ್ಷತ್ರ' ನಾಟಕಗಳು ಪ್ರದರ್ಶನಗೊಂಡಿದ್ದವು. ಕೋವಿಡ್ ಹಾವಳಿಯ ನಡುವೆಯೂ ಉತ್ಸವ ನಿಲ್ಲಲಿಲ್ಲ ಎಂಬುದು ವಿಶೇಷ. ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯೂ ಉತ್ಸವಕ್ಕೆ ವೇದಿಕೆ ಕಲ್ಪಿಸಿದ್ದು ಇನ್ನೊಂದು ವಿಶೇಷ. ಆ ವರ್ಷ ನಾಟಕಗಳು ಎರಡು ಬಾರಿ ಪ್ರದರ್ಶನಗೊಂಡವು.

'ವಿಜ್ಞಾನ ನಾಟಕೋತ್ಸವವನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಸಂವಹನದಲ್ಲಿ ಬಳಸಿಕೊಳ್ಳುವ ಚಳವಳಿಯನ್ನಾಗಿ ರೂಪಿಸುವ ಯೋಜನೆ ಮೊಳೆತದ್ದರ ಫಲವಾಗಿಯೇ ಮೈಸೂರು ನಾಟಕೋತ್ಸವ ಟ್ರಸ್ಟ್ ಸ್ಥಾಪನೆಯಾಯಿತು' ಎಂದು ಸ್ಮರಿಸುತ್ತಾರೆ ಅರಿವು ಟ್ರಸ್ಟ್‌ನ ಡಾ.ಮನೋಹರ್ ಮತ್ತು ಜನಾರ್ದನ್.

2021ರಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ನೆರವಿನಿಂದ ಅರಿವು ಟ್ರಸ್ಟ್ ನಿರ್ಮಿಸಿದ 'ಕ್ಯುಇಡಿ' ನಾಟಕವನ್ನು ವಿಜ್ಞಾನ ದಿನಾಚರಣೆಯಂದು ಪ್ರದರ್ಶಿಸಲಾಗಿತ್ತು. ವಿಜ್ಞಾನ ಪ್ರಸಾರ್ ನೆರವಿನಿಂದ ಈ ನಾಟಕವನ್ನು ಏಳು ಜಿಲ್ಲೆಗಳಲ್ಲಿ, ಹದಿನೇಳು ಶಾಲೆ-ಕಾಲೇಜು, ಸಂಶೋಧನಾ ಸಂಸ್ಥೆಗಳಲ್ಲಿ ಪ್ರದರ್ಶಿಸಿರುವುದು ಹೆಗ್ಗಳಿಕೆ. ನಿರ್ದೇಶಕ ಯತೀಶ್ ಕೊಳ್ಳೇಗಾಲ ಅವರು ರಿಚರ್ಡ್ ಫೇಯ್‌ಮನ್ ಅವರ ಕ್ಯುಇಡಿ ಉಪನ್ಯಾಸಗಳನ್ನು ಆಧರಿಸಿ ರಚಿಸಿದ ಈ ನಾಟಕವನ್ನು ಇದುವರೆಗೂ ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಜನ ವೀಕ್ಷಿಸಿದ್ದಾರೆ. ಕನ್ನಡದ ವಿಜ್ಞಾನ ನಾಟಕಗಳ ಇತಿಹಾಸದಲ್ಲೇ ಇದೊಂದು ವಿಶೇಷ ಸಾಧನೆ ಎಂಬುದು ತಂಡದ ಪ್ರತಿಪಾದನೆ.

ಈ ಪ್ರಯತ್ನಗಳ ನಂತರದ್ದೇ ಮೈಸೂರು ವಿಜ್ಞಾನ ನಾಟಕೋತ್ಸವದ ಐದನೇ ಸಂಚಿಕೆ. ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್‌ನ ಸಹಯೋಗದೊಂದಿಗೆ, ವಿಜ್ಞಾನ ನಾಟಕಗಳನ್ನು ರಚಿಸಲು ಲೇಖಕರಿಗೆ ವಿಶೇಷ ಕಮ್ಮಟವನ್ನೂ ನಡೆಸಲಾಗಿದೆ.

ಈ ಸಂಚಿಕೆಯಲ್ಲಿ ಜುಲೈ 15ರಿಂದ ಶುರುವಾಗಿರುವ ಉತ್ಸವದ ಮೊದಲ ನಾಟಕ 'ಲೀಲಾವತಿ', ಭಾರತೀಯ ಗಣಿತಜ್ಞ 2ನೇ ಭಾಸ್ಕರಾಚಾರ್ಯ ರಚಿಸಿದ ನಾಟಕ. ಎರಡನೇ ನಾಟಕ, 20ನೇ ಶತಮಾನದ ಪ್ರತಿಭಾವಂತ ವಿಜ್ಞಾನಿ 'ಐನ್‌ಸ್ಟೀನ್' ಜೀವನ ಆಧರಿಸಿದ ನಾಟಕ. ನೊಬೆಲ್ ಪ್ರಶಸ್ತಿ ವಿಜೇತ ಭೌತ ವಿಜ್ಞಾನಿ ಅಬ್ದುಸ್ ಸಲಾಮ್ ಬದುಕು-ಸಾಧನೆ ಆಧರಿಸಿದ ನಾಟಕದ ಮೂಲಕ ಉತ್ಸವ ಭಾನುವಾರ(ಜುಲೈ 17) ಕೊನೆಗೊಳ್ಳಲಿದೆ.

ವಿಜ್ಞಾನ ನಾಟಕಗಳು ವಿಜ್ಞಾನವನ್ನು ಸಾಮಾನ್ಯ ಜನರ ನಡುವೆ ಹರಡುವ ಚಳವಳಿಯಾಗಬೇಕು ಎಂಬ ಆಶಯದ ಜೊತೆಗೆ, ಈ ನಾಟಕಗಳ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸುವ ಸವಾಲು ಕೂಡ ನಾಟಕಕಾರರು ಮತ್ತು ಕಲಾವಿದರ ಮುಂದೆ ಇದೆ. ಈ ಸವಾಲವನ್ನು ಒಟ್ಟು ತಂಡ ಸಮರ್ಥವಾಗಿ ಎದುರಿಸುತ್ತಿದೆ ಎಂಬುದಕ್ಕೆ ಸಾಕ್ಷಿ ಎಂಬಂತೆ ಈ ಬಾರಿಯ ಉತ್ಸವದ ಪ್ರೇಕ್ಷಕರ ಗ್ಯಾಲರಿ ಬಹುತೇಕ ತುಂಬಿತ್ತು.

ತಾರಾ ತೋರಣ

12ನೇ ಪುಟದಿಂದ...

ಇಡೀ ವಿಶ್ವವನ್ನು ಆವರಿಸಿರುವ ನಿಗೂಢ ಕಪ್ಪುವಸ್ತು (ಡಾರ್ಕ್ ಮ್ಯಾಟರ್) ಏನು? ಅದರಲ್ಲಿ ಅಷ್ಟೊಂದು ಶಕ್ತಿ ಹೇಗೆ ಸಂಚಯವಾಗಿದೆ? ಅದು ಗೊತ್ತಿಲ್ಲ. ಇದೇ ವಿಶ್ವದಂಥದ್ದೇ ಇನ್ನೂ ಅಸಂಖ್ಯ ವಿಶ್ವಗಳಿವೆಯೆ? ಈ ವಿಶ್ವದಲ್ಲಿ ದ್ರವ್ಯಗಳಿರುವ ಹಾಗೆ ಇದಕ್ಕೆ ತದ್ವಿರುದ್ಧವಾದ ಪ್ರತಿದ್ರವ್ಯಗಳ ಬೇರೊಂದು ವಿಶ್ವ ಇದ್ದೀತೆ? ಗೊತ್ತಿಲ್ಲ. ಆ ವಿಶ್ವದಲ್ಲಿ ನಮ್ಮದೇ ಪ್ರತಿಪೃಥ್ವಿ, ಪ್ರತಿಭಾರತ, ಪ್ರತಿಜೋಗ, ಪ್ರತಿಪ್ರಜಾವಾಣಿ ಇದ್ದೀತೆ? ಏನೊ ಎಂತೊ? ನಾವು ಈ ವಿಶ್ವದಿಂದ ಆ ವಿಶ್ವಕ್ಕೆ ಕ್ವಾಂಟಮ್ ಬಿಂಬದ ಮೂಲಕ ಅಥವಾ ಅಗೋಚರ ಎಳೆಗಳ ಮೂಲಕ ಕ್ಷಣಾರ್ಧದಲ್ಲಿ ಹೋಗಲು ಸಾಧ್ಯವೆ? ಎಲ್ಲಾ ನಿಗೂಢ.

ಅದು ಹಾಗಿರಲಿ, ಜೇಮ್ಸ್ ವೆಬ್ ದೂರದರ್ಶಕ ಇನ್ನೇನು, ಆಚಿನ ಲೋಕದಲ್ಲಿ ಪೃಥ್ವಿಯನ್ನೇ ಹೋಲುವ ಇನ್ನಷ್ಟು ಲೋಕಗಳನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸಲಿದೆಯಂತೆ. ಇನ್ನಷ್ಟು ಜೀವಲೋಕಗಳು ಇರಬಹುದೆ? ನಮ್ಮಷ್ಟೇ ತಾಂತ್ರಿಕ ನಾಗರಿಕತೆ ಇರುವ, ಅಥವಾ ನಮ್ಮನ್ನೇ ಮೊದ್ದು ಕ್ರಿಮಿಗಳೆಂದು ಪರಿಗಣಿಸುವಷ್ಟು ಅಗಾಧ ಪಾಂಡಿತ್ಯವುಳ್ಳ ಜೀವಿಗಳ ಲೋಕ ಇದೆಯೆ? ಅಂಥ ಲೋಕಗಳಿದ್ದರೆ ಅದಕ್ಕಿಂತ ಸಂಭ್ರಮದ ಸಂಗತಿ ಬೇರೊಂದಿಲ್ಲ. ಅಥವಾ ಅಂಥ ಯಾವ ಜೀವಲೋಕವೂ ಇಲ್ಲವೆಂದಾದರೆ (ನಾವೇ ಏಕೈಕವೆಂದಾದರೆ) ಅದಕ್ಕಿಂತ ಹೆಮ್ಮೆಯ ಸಂಗತಿಯೂ ಬೇರೊಂದಿಲ್ಲ. ಹಾಗಿರಲು ಸಾಧ್ಯವೆ?

ಈಗ ನಮ್ಮದೇ ಕೊಂಚ ಅಂತರಾಳಕ್ಕಿಳಿಯೋಣ

ಈ ದೃಶ್ಯಗಳು ಸಹಜವಾಗಿಯೇ ಅಷ್ಟೊಂದು ಜನರಿಗೆ ರೋಚಕವೆನಿಸಲು ಕಾರಣ ಏನು ಗೊತ್ತೆ? ನಾವೆಲ್ಲರೂ ಈ ಬ್ರಹ್ಮಾಂಡದ ಸಹಭಾಗಿಗಳೇ ಆಗಿದ್ದೇವೆ. ನಮ್ಮ ಕಣಕಣಗಳಲ್ಲೂ ತಾರೆಗಳಲ್ಲಿರುವ ಮೂಲವಸ್ತುಗಳೇ -ಅಂದರೆ ಹೈಡ್ರೋಜನ್, ಕಾರ್ಬನ್, ಆಕ್ಸಿಜನ್, ನೈಟ್ರೋಜನ್ ಎಲ್ಲ ಇವೆ. ಅವು ನೀರು, ಗಾಳಿ, ಮಣ್ಣು, ಆಹಾರಕಣಗಳ ರೂಪದಲ್ಲಿ ನಮ್ಮೊಳಗೆ ಬಂದು ಕಣರೂಪದಲ್ಲಿ ಕ್ಷಣಕಾಲ ಇದ್ದು, ಕಾಸ್ಮಿಕ್ ಕುಣಿತ ನಡೆಸಿ, ನಮ್ಮನ್ನೆಲ್ಲ ಕುಣಿಸಿ ಮತ್ತೆ ಬ್ರಹ್ಮಾಂಡದಲ್ಲಿ ಲೀನವಾಗುತ್ತವೆ. ಆ ವಿಶಾಲ ವಿಶ್ವದ ವಿದ್ಯುತ್ ಕಾಂತೀಯ ತರಂಗಗಳೇ ನಮ್ಮ ಮಿದುಳಿನಲ್ಲೂ ಅನುರಣನಗೊಂಡು ನಮ್ಮಲ್ಲಿ ಪುಳಕಗಳನ್ನೆಬ್ಬಿಸುತ್ತವೆ.

ಎಂಥ ಅಚ್ಚರಿ ನೋಡಿ... ಆದರೆ ಆ ಬೆಳಕು ನಮ್ಮನಿಮ್ಮೊಳಗೆ ಇಳಿದೀತೆ? ಈ ಅನಂತ ತಾರಾಮಂಡಲದಲ್ಲಿ ತೀರ ಸಾಧಾರಣ ನಕ್ಷತ್ರವೊಂದರ ಸುತ್ತ ಏಕಾಂಗಿಯಾಗಿ ಸುತ್ತುತ್ತಿರುವ ಈ ಸಾಧಾರಣ ಗ್ರಹ ಇಡೀ ವಿಶ್ವದಲ್ಲೇ ಅಪ್ರತಿಮ. ಏಕೆಂದರೆ ಇದರಲ್ಲಿ ಜೀವ ಇದೆ. ಇಲ್ಲಿ ಜೀವಿಗಳು ವಿಕಾಸವಾಗಿ ಅದರ ಮಿದುಳಿನ ಮೂಲಕ ಬ್ರಹ್ಮಾಂಡ ತನ್ನನ್ನೇ ನೋಡುತ್ತಿದೆ. ಆದರೂ ಇಲ್ಲಿ ಪ್ರಜ್ಞಾವಂತ ಮಿದುಳುಗಳ ಸಂಖ್ಯೆಯೂ ಅನಂತಾಲ್ಪವೇ ತಾನೆ? ಈಜೀವಂತಗ್ರಹದಅದೆಷ್ಟೊಕೋಟಿಕೋಟಿಕೋಟಿ ಜೀವಿಗಳಲ್ಲಿ ಮನುಷ್ಯ ಪ್ರಭೇದದ 740 ಕೋಟಿ ಜನರಲ್ಲಿ ಕೇವಲ ಕೆಲವೇ ಸಾವಿರ ಜನರ ಮಿದುಳಿನ ನರಕೋಶಗಳನ್ನು ಮಿನುಗಿಸಿ ಬ್ರಹ್ಮಾಂಡ ತನ್ನನ್ನು ತಾನು ನೋಡಿಕೊಳ್ಳುತ್ತಿದೆ. ಇನ್ನುಳಿದ ನಾವೆಲ್ಲ ನಮ್ಮದೇ ಷಡ್ವೈರಿಗಳ ಸಿಂಬೆ ಸುತ್ತಿಕೊಂಡು ಇದೇ ಲೋಕಲ್ ಜಗಳ, ರಂಜನೆ, ವಂಚನೆ, ಮಾಲಿನ್ಯ, ಆಟಂಬಾಂಬು, ರಾಜಕೀಯ ಮೇಲಾಟದ ಬ್ರೇಕಿಂಗ್ ನ್ಯೂಸ್‌ಗಳ ಮಧ್ಯೆ ಮುಳುಗೇಳುತ್ತಿದ್ದೇವೆ. ಅನಂತ ಪ್ರತಿಭೆಗಳ ಗಣಿಯಾಗಬಹುದಾಗಿದ್ದ ಅನಂತಾಲ್ಪರು ನಾವು.

ನೋಡಬೇಕು, ನಭೋರಂಗದ ಈ ಬಹಿರ್ಮುಖೀ ನೃತ್ಯನೋಟಗಳು ನಮ್ಮ ಕುಣಿತವನ್ನು ಕ್ಷಣಕಾಲವಾದರೂ ನಿಲ್ಲಿಸಿ ನಮ್ಮನ್ನು ಅಂತರ್ಮುಖಿ ಮಾಡುತ್ತವೊ ಎಂದು.

ಕರೀನಾ ನೀಹಾರಿಕೆಯಲ್ಲಿ ಹೊಸನಕ್ಷತ್ರದ ಉದಯಕ್ಕೆ ಬೀಜಾಂಕುರ ಮಾಡಿದ ಪ್ರಸೂತಿಮಂಡಲದ ನಯನ ಮನೋಹರ ನೋಟ. ಹಿಮಾಲಯದಲ್ಲಿ ಕಾಣುವ ಸೂರ್ಯೋದಯದ ಸೊಬಗಿನಂತೆಯೇ ಇಲ್ಲಿ ಮಿನುಗುವ ನಕ್ಷತ್ರಗಳು ಕೂಡ ನೋಡುಗರ ಮೇಲೆ ಮೋಡಿ ಮಾಡುತ್ತಿವೆ –ಎಎಫ್‌ಪಿ ಚಿತ್ರ



ಜೇಮ್ಸ್ ವೆಬ್ ದೂರದರ್ಶಕದ ಚಿನ್ನ ಲೇಪಿತ ಪ್ರತಿಫಲಕಗಳು

ತೆರೆದ ಬಾಹ್ಯಾಕಾಶದ ಜ್ಞಾನ ಕವಾಟ

ಮನುಷ್ಯನ ಮಿದುಳಿಗೆ ಇದು ವಿಶ್ವದ ಹೊಸ ದರ್ಶನ ಅಲ್ಲವೇ ಅಲ್ಲ. ಸಹಸ್ರಾರು ವರ್ಷಗಳಿಂದ ಆ ಆಚಿನ ಬ್ರಹ್ಮಾಂಡ ನಮ್ಮನ್ನು ತನ್ನೆಡೆ ಸೆಳೆಯುತ್ತಲೇ ಇತ್ತು. ವೇದಕಾಲದ ಚಿಂತಕರಿಂದ ಹಿಡಿದು ಆರ್ಯಭಟನವರೆಗೆ, ಗೆಲಿಲಿಯೊನಿಂದ ಹಿಡಿದು ನ್ಯೂಟನ್- ಐನ್‌ಸ್ಟೀನ್‌ವರೆಗೆ, ಸುಬ್ರಹ್ಮಣ್ಯ ಚಂದ್ರಶೇಖರರಿಂದ ಹಿಡಿದು ಸ್ಟೀಫನ್ ಹಾಕಿಂಗ್‌ವರೆಗೆ ನಮ್ಮ ಕೆಲವರ ವಿಶೇಷ ಮಿದುಳುಗಳಲ್ಲಿ ನಕ್ಷತ್ರಲೋಕ ತನ್ನ ರಹಸ್ಯಗಳ ಪರದೆಯನ್ನು ಮೆಲ್ಲಮೆಲ್ಲಗೆ ಸರಿಸಿ ತೋರಿಸುತ್ತಲೇ ಇತ್ತು. ಅವರ ಮಿದುಳುಗಳಲ್ಲಿ ರೂಪುಗೊಳ್ಳುತ್ತಿದ್ದ ವಿಚಾರ ತರಂಗಗಳೇ ಗಣಿತ ಲೆಕ್ಕಾಚಾರಗಳಾಗಿ, ಎಂಜಿನಿಯರಿಂಗ್ ಸಲಕರಣೆಗಳಾಗಿ, ರಾಕೆಟ್‌ಗಳಾಗಿ, ಕಕ್ಷೆಯಲ್ಲಿ ತೇಲಬಲ್ಲ ದೂರದರ್ಶಕಗಳಾಗಿ ನಮಗಿಂದು ಬಾಹ್ಯಾಕಾಶದ ಕವಾಟವನ್ನು ತೆರೆದಿವೆ.

ಮನುಷ್ಯನ ಒಳಮಿದುಳಿಗೆ ಗೋಚರಿಸಿದ ಬೆಳಕೇ ನಮಗಿಂದು ನಕ್ಷತ್ರಗಳನ್ನು, ನೀಹಾರಿಕೆಗಳನ್ನು ಪ್ರತ್ಯಕ್ಷ ತೋರಿಸುತ್ತಿದೆ. ಸರ್ನ್ ಸುರಂಗದಲ್ಲಿ ಪರಮಾಣುವಿನ ಆಳಕ್ಕೂ ಇಳಿದು, ಮೂಲಕಣಗಳನ್ನೂ ಸಿಡಿಸಿ, ಕ್ವಾಂಟಮ್ ಲೋಕವನ್ನು ತೋರಿಸಿದ ಹಾಗೆ. ಈಗ ಕಂಡಿದ್ದು ಕೇವಲ ಒಂದು ಮರಳು ಕಣದಷ್ಟು ಅಷ್ಟೆ. ಅದೂ ಅದೆಷ್ಟು ರಮ್ಯ, ಅದೆಷ್ಟು ಅಗಮ್ಯ!

ಮುನ್ನೋಟ 17-07-2022 ರಿಂದ 23-07-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ರೈತಾಪಿ ವರ್ಗದವರು ನೀರಿನಲ್ಲಿ ಕೆಲಸ ಮಾಡುವಾಗ ಎಚ್ಚರವಹಿಸುವುದು ಒಳ್ಳೆಯದು. ಹೊಸ ಆದಾಯದ ಮೂಲಗಳನ್ನು ಹುಡುಕುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಪ್ರಗತಿ ಇರುತ್ತದೆ. ವಿದ್ಯಾರ್ಥಿಗಳಿಗೆ ಅಭಿವೃದ್ಧಿಯ ಕಾಲ. ಹೆಚ್ಚು ಸಾಲ ಮಾಡುವುದು ಬೇಡ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಹೋದ್ಯೋಗಿಗಳೊಂದಿಗೆ ಸಾಮರಸ್ಯದಿಂದ ಕೆಲಸ ನಿರ್ವಹಣೆ ಮಾಡುವುದರಿಂದ ನಾಯಕತ್ವ ಪ್ರಾಪ್ತಿಯಾಗುತ್ತದೆ. ದ್ವಂದ್ವ ನಿರ್ಧಾರದೊಂದಿಗೆ ಯಾವ ಕೆಲಸವನ್ನು ಆರಂಭಿಸಬೇಡಿರಿ. ಹಣದ ಒಳಹರಿವು ಅಪೇಕ್ಷೆಗೆ ತಕ್ಕಂತೆ ಇರುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಇರುವ ಕೆಲವರಿಗೆ ಹುದ್ದೆಗಳು ತಪ್ಪಬಹುದು ಕೆಲವರಿಗೆ ಹೊಸ ಹುದ್ದೆಗಳು ಸಿಗಬಹುದು. ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಮುದ್ರ ದಡದಲ್ಲಿ ಕೆಲಸ ಮಾಡುವವರು ಸಾಕಷ್ಟು ಎಚ್ಚರಿಕೆ ವಹಿಸುವುದು ಅತಿ ಅಗತ್ಯ. ಕುಟುಂಬದಲ್ಲಿ ನೆಮ್ಮದಿಯನ್ನು ಕಾಣಬಹುದು. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಮಹಿಳೆಯರು ತಮ್ಮ ಅಮೂಲ್ಯ ವಸ್ತುಗಳ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಬೇಕಾದ ಪರಿಸ್ಥಿತಿ ಇದೆ. ಕೆಲವರಿಗೆ ರಾಜಕೀಯ ವ್ಯಕ್ತಿಗಳ ವಶೀಲಿಯಿಂದ ಕಚೇರಿ ಕೆಲಸಗಳು ಸುಗಮವಾಗಿ ಆಗುವವು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ವೈಯಕ್ತಿಕ ವಿಚಾರಗಳನ್ನು ಆತ್ಮೀಯರೊಡನೆ ಹಂಚಿಕೊಳ್ಳುವುದರಿಂದ ಮನಸ್ಸಿಗೆಸ್ವಲ್ಪ ಪರಿಹಾರವೆನಿಸುತ್ತದೆ. ಮಹಿಳೆಯರು ಸ್ವಲ್ಪ ದಿನ ರಾಜಕೀಯದಿಂದ ದೂರ ಇರುವುದು ಒಳ್ಳೆಯದು. ವಿಶೇಷ ವ್ಯಕ್ತಿಗಳಿಂದ ಪ್ರಭಾವಿತರಾಗಿ ಅವರನ್ನು ಅನುಕರಿಸಲು ಯತ್ನಿಸುವಿರಿ. ಕೆಲಸವನ್ನು ಆಯ್ಕೆ ಮಾಡಿಕೊಳ್ಳುವಾಗ ಸಾಮರ್ಥ್ಯವನ್ನು ಅರಿತು ಆಯ್ಕೆ ಮಾಡಿಕೊಳ್ಳುವುದು ಉತ್ತಮ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮನೆಯ ನವೀಕರಣ ಕಾರ್ಯಗಳು ಸರಾಗವಾಗಿ ಆಗುವುದು. ಮನೆಗೆ ಅಲಂಕಾರ ವಸ್ತುಗಳನ್ನು ಖರೀದಿ ಮಾಡುವಿರಿ. ಮೀನು ಮುಂತಾದ ಸಮುದ್ರಖಾದ್ಯವನ್ನು ಮಾರಾಟ ಮಾಡುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿ ಇರುತ್ತದೆ. ಹಣಕಾಸಿನ ಸ್ಥಿತಿಯು ಸರಿ ಹೋಗುವಷ್ಟು ಇರುತ್ತದೆ. ತಂದೆ ಮಕ್ಕಳ ನಡುವೆ ಸಾಕಷ್ಟು ವಾಗ್ವಾದ ಆಗುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಗೃಹ ನಿರ್ಮಾಣದ ಬಗ್ಗೆ ಸಾಕಷ್ಟು ಚಿಂತನೆಯನ್ನು ಮಾಡುವಿರಿ. ನೆರೆಹೊರೆಯವರ ಸಂಬಂಧದಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯನ್ನು ಕಾಣಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಡವಳಿಕೆಯಲ್ಲಿ ಸ್ವಲ್ಪಮಟ್ಟಿನ ಆಲಸ್ಯವನ್ನು ಕಾಣಬಹುದು. ಕೃಷಿಕರಿಗೆ ಅಭಿವೃದ್ಧಿ ಇರುತ್ತದೆ. ಅವರ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತದೆ ಮತ್ತು ಒಳ್ಳೆಯ ಬೆಲೆಯನ್ನು ನಿರೀಕ್ಷೆ ಮಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಅನವಶ್ಯಕ ಮಾತುಗಳಲ್ಲಿ ತೊಡಗಿಕೊಳ್ಳದಿರುವುದು ನಿಮಗೆ ಉತ್ತಮ. ಹಣಕಾಸಿನ ವ್ಯವಹಾರಗಳು ಅಷ್ಟು ಲಾಭವನ್ನು ತರಲಾರವು. ಮಕ್ಕಳಿಗೋಸ್ಕರ ವಿದೇಶ ಪ್ರಯಾಣ ಮಾಡಬೇಕಾದ ಸಂದರ್ಭವಿದೆ. ವಿದ್ಯಾರ್ಥಿಗಳು ಅಭ್ಯಾಸದಕಡೆಗೆ ಹೆಚ್ಚುಗಮನ ಹರಿಸಬೇಕಾದ ಅಗತ್ಯವಿದೆ. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ ಮುಂದುವರಿಯುವ ಸಂದರ್ಭವಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಮಾನಸಿಕ ದ್ವಂದ್ವ ನಿಲುವುಗಳಿಂದಾಗಿ ಸ್ವಲ್ಪ ನಷ್ಟ ಅನುಭವಿಸುವಿರಿ. ಶತ್ರುಗಳನ್ನು ಮಣಿಸಲು ಹೊಸ ತಂತ್ರಗಳನ್ನು ಹುಡುಕುವಿರಿ. ಆಸ್ತಿ ವಿಚಾರದಲ್ಲಿ ಸಂತೋಷಕರ ಸುದ್ದಿಗಳು ಕೇಳಿ ಬರುತ್ತವೆ. ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯ ದೊರೆತು ಅಧ್ಯಯನ ಮುಂದುವರೆಯುತ್ತದೆ. ಮಕ್ಕಳಿಂದ ಸಾಕಷ್ಟು ಗೌರವ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಅತ್ಯಂತ ಚುರುಕಾಗಿ ಕೆಲಸ ಮಾಡಿ ಎಲ್ಲರ ಗಮನ ಸೆಳೆಯುವಿರಿ. ವಿದ್ಯಾರ್ಥಿಗಳಿಗೆ ಸ್ವಲ್ಪ ಸಂಕಷ್ಟದ ಕಾಲ. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಸರ್ಕಾರಿ ಕೆಲಸಗಳಲ್ಲಿ ಮಂದಗತಿಯನ್ನು ಕಾಣಬಹುದು. ನಿಮ್ಮ ಸಂಗಾತಿಯ ಆದಾಯದಲ್ಲಿ ಸ್ವಲ್ಪ ಮಟ್ಟಿನ ಹೆಚ್ಚಳವನ್ನು ನಿರೀಕ್ಷೆ ಮಾಡಬಹುದು. ತಂದೆಯಿಂದ ನಿಮಗೆ ಹೆಚ್ಚಿನ ನೆರವು ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕಷ್ಟಪಟ್ಟು ವಹಿಸಿಕೊಂಡ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಿರಿ. ಹಣದ ಒಳಹರಿವು ತೃಪ್ತಿಕರವಾಗಿರುತ್ತದೆ. ಹಿರಿಯರಿಂದ ನಿಮಗೆ ಸಾಕಷ್ಟು ಸಹಾಯ ದೊರೆಯುತ್ತದೆ. ಉದ್ಯೋಗಿಗಳ ಶುಭ ಸಮಾರಂಭಕ್ಕೆ ಹೋಗಿಬರುವ ಸಾಧ್ಯತೆ ಇದೆ. ಸ್ಥಿರಾಸ್ತಿ ಮಾಡುವ ವಿಚಾರದಲ್ಲಿ ಈಗ ಆತುರ ಬೇಡ. ಸಂಗಾತಿಯು ನಡೆಸುವ ವ್ಯವಹಾರಗಳಲ್ಲಿ ಸಾಕಷ್ಟು ಅಭಿವೃದ್ಧಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಒಂದು ರೀತಿಯ ಸಂತೋಷ ನಿಮಗೆ ದೊರೆಯಬಹುದು. ಹಣದ ಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಒಡಹುಟ್ಟಿದವರಿಂದ ಸಮಸ್ಯೆಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ. ಉಸಿರಾಟದ ತೊಂದರೆ, ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಹಣದ ಒಳಹರಿವು ಉತ್ತಮವಾಗಿದ್ದರೂ ಸಾಕಷ್ಟು ಖರ್ಚು ಇರುತ್ತದೆ. ದುಡುಕಿನ ಮಾತಿನಿಂದ ಬಂಧುಗಳು ದೂರ ಆಗುವರು. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಯೋಗವಿದೆ. ಕಣ್ಣಿನ ತೊಂದರೆ ಹಾಗೂ ರಕ್ತದ ತೊಂದರೆ ಇರುವವರು ಶೀಘ್ರ ಚಿಕಿತ್ಸೆಗೆ ಹೋಗುವುದು ಬಹಳ ಉತ್ತಮ. ಸಂಗಾತಿಯ ಆದಾಯದ ಬಗ್ಗೆ ನಿಮಗೆ ತೃಪ್ತಿ ಇರುತ್ತದೆ. ವಾಹನ ಚಾಲನೆ ವೇಳೆ ಎಚ್ಚರಿಕೆ ಇರಲಿ.

ಪದಬಂಧ 2747



ಮೇಲಿನಿಂದ ಕೆಳಕ್ಕೆ

1. ಧರ್ಮ ಅಥವಾ ಉದ್ಯಮದ ಆದ್ಯ ವ್ಯಕ್ತಿ 4
2. ಲಕ್ಷ್ಮಿ ತಲೆಬಾಗಿ ಹೊಳಪಿನ ರತ್ನವಾದಳು 4
3. ವದನದ ಅಂದ ಚಂದ ಕಮಲದಂತೆ 4
4. ಅಪೂರ್ವ ಹರಳಿನ ಹಾರ ಧರಿಸಿರುವವಳು 4
6. ಕಿವಿಗೆ ಹಿತವಾದ ಹಾಡು ಹೃದಯಕ್ಕೆ ಹತ್ತಿರ 4
8. ದ್ರವಗಳು ಒಂದಕ್ಕೊಂದು ಸೇರಿ ಬೆರೆಯುವಿಕೆ 5
9. ಕೆನ್ನೆಗೆ ಏಟು ಬಿದ್ದಾಗ ಸಿಗುವ ಸ್ವರ್ಗ 5
10. ಉರಗವನ್ನು ಹಾಸಿಗೆಯಾಗಿಸಿ ಮಲಗಿದವ 5
11. ಸಾರ್ವಜನಿಕರ ಪ್ರಯೋಜನಕ್ಕೆ ಬರುವ ಇಲಾಖೆ 5
16. ಚಿತ್ರಕಾರನ ಕೌಶಲ್ಯ ಮತ್ತು ಅದಕ್ಕೆ ಮೆರೆಗು ಕೊಡುವ ಸಾಧನ 4
17. ಬೆವರು ಸುರಿಸಿ ಬದುಕುವವ 4
18. ಜ್ವಾಲಾಮುಖಿಯಿಂದ ಉಕ್ಕಿಹರಿದ ದ್ರವ 4
20. ಮದುವೆಗೆ ಮದುಮಗನ ಬರುವಿಕೆ 4
21. ಉತ್ತರಭಾರತದವರ ಮಾತಲ್ಲಿ ಆಟೋಚಾಲಕ 4

ಎಡದಿಂದ ಬಲಕ್ಕೆ

1. ಗೋತ್ರವನ್ನೊಳಗೊಂಡ ವ್ಯಕ್ತಿಯ ದೀರ್ಘ ಪರಿಚಯ 3
3. ಮಧುರವಾದ ತುಟಿ 3
5. ಅಂತರಂಗದಲ್ಲಿ ಹುಟ್ಟಿದ ಸುಂದರ ಕೊಳ ಕೈಲಾಸಕ್ಕೆ ಹತ್ತಿರ 7
7. ಗಾರೆ ಕೆಲಸದ ಉಪಕರಣ ಹಿಡಿದ ಶಾನುಭೋಗ 4
10. ಸದಾ ಸಂಗೀತದ ಮಾಧುರ್ಯದಲ್ಲಿ ತೇಲಿ ಹೋಗುವವ 4
12. ಪಾಪವನ್ನು ಕಳೆದು ಪುನೀತವಾಗಿಸುವ ಪುಣ್ಯನದಿ 5
13. ಸಾಮಾನ್ಯ ಪ್ರಾಣಿ ಪಕ್ಷಿಗಳ ಗುಂಪು 3
14. ಶತಪಥದಲ್ಲಿ ಕಾಣಿಸುವ ಪ್ರತಿಜ್ಞೆ ಕಲೆತುಹೋಗಿದೆ 3
17. ತಾವರೆಯ ಬೀಜದಂತಹ ಕಣ್ಣುಳ್ಳವ 4
19. ಹೊಸದಾಗಿ ಕಾಣಿಸಿಕೊಂಡ ಬೆಟ್ಟ 4
22. ಬೆಳ್ಳಿ ಬೆಟ್ಟದ ಕೋಡು 7
23. ಆಯಾಸವಿಲ್ಲದ ರೂಪ ರಚನೆ 3
24. ದೋಸೆಯ ರುಚಿ ಹೆಚ್ಚಿಸುವ ಸಾಂಬಾರು ಮಿಶ್ರಣ 3

ಪದಬಂಧ ಉತ್ತರ -2746

ಮೇಲಿಂದ ಕೆಳಕ್ಕೆ

1. ಪಲುಕು 2.ನವಿರು 3.ಪರಿಮಾಣ 4.ತಿರುಳು 7.ಕನಕ 9.ಗಗನಚುಂಬಿ 10.ಹಟ್ಟಿಲಕ್ಕಮ್ಮ 12.ದೂರಸಂಚಾರ 17.ಅಂಗಳ 18.ಮುದಕಾಂತೆ 19.ಸ್ಥಿರಾಯು 20. ಕಾತರ 21.ಸ್ತಿಮಿತ

ಎಡದಿಂದ ಬಲಕ್ಕೆ

1. ಪವಮಾನ 3.ಪಶುಪತಿ 5.ವಿಶ್ವಸುಂದರಿ 6.ಕಟುಕರು 8.ಮಾಸಂಗಳು 10.ಹರಣ 11.ಬಂದೂಕ 13.ಗಟ್ಟಿ 14.ಸವಿ 15.ತಸಂ 16.ಕ್ಕಅ 17.ಅಂಬಿಗ 18.ಮುತ್ತಮ್ಮ 19. ಸ್ಥಿರವಾದ 20.ಕಾಳಹಸ್ತಿ 22.ಕಾಂಚಾಣಗೀತ 23.ಯುವಗೀತೆ 24.ರಕ್ತಪಾತ

ಶಾಸನಗಳಲ್ಲಿ ಖಗೋಳಶಾಸ್ತ್ರ

ಎಸ್. ಸೂರ್ಯಪ್ರಕಾಶ ಪಂಡಿತ್

ಶಾಸನಗಳು ನಮ್ಮ ಇತಿಹಾಸದ ಹಲವು ವಿವರಗಳನ್ನು ಒದಗಿಸುವ ಸಂಸ್ಕೃತಿಕೋಶಗಳೇ ಹೌದು. ನಮ್ಮ ದೇಶದಲ್ಲಿ ಶಾಸನಗಳಿಗೇನೂ ಕೊರತೆಯಿಲ್ಲ; ಸಾವಿರಾರು ಸಿಕ್ಕಿವೆ; ಈಗಲೂ ಸಿಕ್ಕುತ್ತಿವೆಯೆನ್ನಿ! ಕೇವಲ ಕಲ್ಲುಗಳ ಮೇಲೆ ಕೆತ್ತಿರುವಂಥವಷ್ಟೆ ಶಾಸನಗಳಲ್ಲ; ಬಹುಕಾಲ ಉಳಿಯುವಂಥ ವಸ್ತುಗಳ ಮೇಲೆ ಕೆತ್ತಿರುವ ಬರಹಗಳನ್ನು 'ಶಾಸನ' ಎಂದು ಕರೆಯುವುದು ವಾಡಿಕೆ.

'ಶಾಸನ' ಎಂಬುದು ಸರಳವಾಗಿ 'ಆಜ್ಞೆ' ಎಂದು ಹೇಳಬಹುದು. ಅಧಿಕಾರವನ್ನು ನಡೆಸುವವರು – ಸಾಮಾನ್ಯವಾಗಿ ರಾಜರು – ಆಜ್ಞೆಗಳನ್ನು ಹೊರಡಿಸುತ್ತಿದ್ದರು. ಹೀಗಾಗಿ ಶಾಸನಗಳನ್ನು ಆಯಾ ಕಾಲದ ಪ್ರಭುತ್ವದ ಅಧಿಕೃತ ದಾಖಲೆಗಳು ಎಂದೇ ಪರಿಗಣಿಸಲಾಗುತ್ತದೆ. ಪುರಾತತ್ವಶಾಸ್ತ್ರಜ್ಞರು, ಇತಿಹಾಸಕಾರರು ಮುಂತಾದ ಸಂಶೋಧಕರು ಈ ಶಾಸನಗಳ ಬರಹಗಳನ್ನು 'ಓದಿ', ಆ ಕಾಲದ ಸಮಾಜದ ಗೊತ್ತು-ಗುರಿಗಳನ್ನು ವಿಶ್ಲೇಷಿಸುತ್ತಿರುತ್ತಾರೆ. ಇದರಿಂದ ನಮ್ಮ ಇತಿಹಾಸದ ಪರಿಚಯ ನಮಗೆ ಸ್ಪಷ್ಟವಾಗಿ ಒದಗುವಂತಾಗುತ್ತದೆ. ಕನ್ನಡದ ಸಂದರ್ಭದದಲ್ಲಿ ಹೇಳುವುದಾದರೆ, ಎಂ. ಚಿದಾನಂದಮೂರ್ತಿ ಅವರ ಕೃತಿ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಉಲ್ಲೇಖಾರ್ಹವಾದುದು. ಶಾಸನಗಳು ಅವುಗಳ ಒಡಲಲ್ಲಿ ಎಷ್ಟೆಲ್ಲ ಮಾಹಿತಿಗಳನ್ನು ಅಡಗಿಸಿಕೊಂಡಿರುತ್ತವೆ; ಈ ಮಾಹಿತಿಗಳು ನಮ್ಮ ಗತಕಾಲವನ್ನು ಅರ್ಥೈಸಿಕೊಳ್ಳುವುದಕ್ಕೆ ಎಷ್ಟೆಲ್ಲ ನೆರವಾಗುತ್ತವೆ ಎಂಬುದಕ್ಕೆ ಈ ಗ್ರಂಥ ಒಂದು ಸಾಕ್ಷ್ಯವಾಗಿದೆಯೆನ್ನಿ.

ಶಾಸನಗಳಲ್ಲಿ ಅಧ್ಯಯನಕ್ಷೇತ್ರಕ್ಕೆ ನೂರಾರು ವಿದ್ವಾಂಸರು ಕೊಟ್ಟಿರುವ ಕೊಡುಗೆಯಿಂದಲೇ ನಾವು ನಮ್ಮ ಪೂರ್ವಜರ ರೀತಿ-ನೀತಿಗಳ ಬಗ್ಗೆ 'ಅಧಿಕೃತ'ವಾಗಿ ತಿಳಿಯುವಂತಾಗಿದೆ.



ಹಿಸ್ಟರಿ ಆಫ್ ದಿ ಸ್ಕೈ ಆನ್ ದಿ ಸ್ಟೋನ್ಸ್
ಲೇಖಕಿಯರು: ಬಿ. ಎಸ್. ಶೈಲಜಾ ಹಾಗೂ ಗೀತಾ ಕೈದಾಳ ಗಣೇಶ
ಪ್ರ: ಇನ್ಫೋಸಿಸ್ ಫೌಂಡೇಷನ್, ಬೆಂಗಳೂರು
ಪು: 156 ₹200

ಒಳನೋಟ

ಹೀಗಿದ್ದರೂ ಎಲ್ಲ ಶಾಸನಗಳೂ ಅವುಗಳ ಗುಟ್ಟನ್ನು ಬಿಟ್ಟುಕೊಟ್ಟಿವೆ ಎನ್ನುವಂತಿಲ್ಲ; ಹಲವು ಶಾಸನಗಳನ್ನು ನಾವಿನ್ನೂ ಪೂರ್ಣವಾಗಿ ಓದಲಾಗಿಲ್ಲ; ಓದಲಾಗಿರುವಂಥ ಎಲ್ಲವೂ ನಮಗೆ ಅರ್ಥವಾಗಿದೆ ಎನ್ನುವಂತೆಯೂ ಇಲ್ಲ. ಮಾತ್ರವಲ್ಲ, ಇನ್ನೂ ಹಲವು ಆಯಾಮಗಳಿಂದಲೂ ಇವುಗಳ ಅಧ್ಯಯನ ನಡೆಯಬೇಕಾಗಿದೆ. ಬಿ. ಎಸ್. ಶೈಲಜಾ ಮತ್ತು ಗೀತಾ ಕೈದಾಳ ಗಣೇಶ ಅವರು ರಚಿಸಿರುವ ಕೃತಿ 'ಹಿಸ್ಟರಿ ಆಫ್ ದಿ ಸ್ಕೈ ಆನ್ ದಿ ಸ್ಟೋನ್ಸ್' ಈ ಹಿನ್ನೆಲೆಯಲ್ಲಿ ಒಂದು ವಿಶಿಷ್ಟ ಕೃತಿಯಾಗಿದೆ. ಶಾಸನಗಳು ಪ್ರಕಟಮಾಡುತ್ತಿರುವ ಖಗೋಳಶಾಸ್ತ್ರೀಯ ಅಂಶಗಳ ಬಗ್ಗೆ ಈ ಕೃತಿ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ.

ಶಾಸನಗಳು ಹೇಗಿರಬೇಕು – ಎಂಬುದರ ಸಾಮಾನ್ಯ ನಿಯಮವನ್ನು ನಮ್ಮ ಪೂರ್ವಸೂರಿಗಳು ಮಾಡಿಕೊಂಡಿದ್ದಂತೆ ತೋರುತ್ತದೆ. ಶಾಸನಪತ್ರದಲ್ಲಿ ರಾಜನ ರುಜುವಿನ ಜೊತೆಯಲ್ಲಿ, ರಾಜಾಜ್ಞೆ ಹೊರಟ ದಿನಾಂಕವೂ ಇರಬೇಕೆಂಬ ವಿಧಿಯನ್ನು 'ಶುಕ್ರನೀತಿಸಾರ' ಗ್ರಂಥ ಹೇಳುತ್ತದೆ. ಬಹುಪಾಲು ಶಾಸನಗಳು ಇಂಥ ಕೆಲವೊಂದು ಸಾಮಾನ್ಯನಿಯಮಗಳನ್ನು ಪಾಲಿಸಿರುವುದನ್ನೂ ಕಾಣುತ್ತೇವೆ. ಕನ್ನಡಭಾಷೆಯ ಸುಮಾರು ಮೂವತ್ತೆಂಟು ಸಾವಿರ ಶಾಸನಗಳಲ್ಲಿ ಒಂದು ಸಾವಿರದ್ನೆನೂರು ಶಾಸನಗಳಲ್ಲಿ ಖಗೋಳಶಾಸ್ತ್ರದ ವಿವರಗಳಿರುವುದನ್ನು ಗುರುತಿಸಿ, ಅವನ್ನು ವೈಜ್ಞಾನಿಕವಾಗಿ ಅಧ್ಯಯನವನ್ನು ನಡೆಸಿರುವ ಶೈಲಜಾ ಮತ್ತು ಗೀತಾ ಅವರು ನಮ್ಮ ದೇಶದ ಪ್ರಾಚೀನ ಖಗೋಳಶಾಸ್ತ್ರದ ಬಗ್ಗೆ ನಮ್ಮ ತಿಳಿವಳಿಕೆಯನ್ನು ವಿಸ್ತರಿಸಿದ್ದಾರೆ. ಇದರ ಜೊತೆಗೆ ಇತಿಹಾಸದ ಹಲವು ಸಂದರ್ಭಗಳ ಕಾಲನಿರ್ಣಯಕ್ಕೂ ನಿಖರತೆಯನ್ನು ತಂದುಕೊಟ್ಟಿದ್ದಾರೆ. ಇನ್ನು ಬೇರೆ ಭಾಷೆಗಳ ಶಾಸನಗಳನ್ನೂ ಈ ನೆಲೆಯಲ್ಲಿ ಅಧ್ಯಯನ ನಡೆಸಿದರೆ ನಮ್ಮ ದೇಶದ ಇತಿಹಾಸಕಾಲಚಕ್ರದ ದಿಕ್ಕು-ದೆಸೆಗಳು ಬೆಳಗುವುದರಲ್ಲಿ ಅನುಮಾನವಿಲ್ಲ.

ಶಾಸನಗಳಲ್ಲಿ ರಾಜನ ವಿಜಯ ಯಾತ್ರೆಯ ಘೋಷಣೆಯಿರಬಹುದು, ದಾನದ ವಿವರಗಳಿರಬಹುದು, ವೀರರ ಮರಣದ ಸ್ಮರಣೆ ಇರಬಹುದು, ಸಮಾಜದ ಕೆಲವೊಂದು ಆಚಾರ-ವಿಚಾರಗಳನ್ನು ತಿಳಿಸಿಕೊಡುವಂಥವು ಇರಬಹುದು – ಈ ಎಲ್ಲದರಲ್ಲೂ ಶಾಸನವನ್ನು ಹೊರಡಿಸಿದ ದಿನಾಂಕ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅಂತರ್ಗತವಾಗಿರುತ್ತದೆ. ಈ ದಿನಾಂಕವನ್ನು ನಾವು ಕಂಡುಹಿಡಿದರೆ ಆ ಶಾಸನದ ಕಾಲ ಯಾವುದೆಂದು ನಿರ್ಧಾರವಾಗುತ್ತದೆ. ಆದರೆ ಇದು ಮೇಲ್ನೋಟಕ್ಕೆ ಕಾಣುವಷ್ಟು ಸುಲಭವಲ್ಲ. ಏಕೆಂದರೆ ಈ ದಿನಾಂಕಗಳು ನಮ್ಮ ಇಂದಿನ ದಿನಾಂಕಗಳಂತೆ 'ಏಕ ಕ್ಯಾಲೆಂಡರ್' ಪದ್ಧತಿಯನ್ನು ಅನುಸರಿಸಿರುವಂಥವಲ್ಲ; ಶಾಸನಗಳಲ್ಲಿ ಕೆಲವೊಮ್ಮೆ ಸಂವತ್ಸರದ ಹೆಸರು ಉಲ್ಲೇಖವಾಗಿದ್ದರೆ, ಕೆಲವೊಮ್ಮೆ ಕಲಿಯುಗದಿಂದ ಅಂದಿಗೆ ಎಷ್ಟು ಕಾಲ ಸರಿದಿವೆ – ಎಂಬ ಉಲ್ಲೇಖ ಇರುತ್ತದೆ. ಇನ್ನು ಕೆಲವು ಶಕೆಗಳ ಹೆಸರನ್ನು ಹೇಳುತ್ತಿದ್ದರೆ, ಮತ್ತೆ ಕೆಲವು ರಾಜನ ಪಟ್ಟಾಭಿಷೇಕದ ದಿನವನ್ನೇ ಆರಂಭದ ದಿನವನ್ನಾಗಿ ಹೇಳುತ್ತಿರುತ್ತವೆ.

ಇಷ್ಟೆಲ್ಲ ಗೊಂದಲಗಳ ನಡುವೆ ನಮ್ಮ ಕೈ ಹಿಡಿದು ಮುನ್ನಡೆಸುವಂಥವು ಶಾಸನಗಳಲ್ಲಿರುವ ಗ್ರಹಣಗಳ ಕುರಿತಾದ ವಿವರಗಳು ಎನ್ನುತ್ತಾರೆ, ಈ ಕೃತಿಯ ಲೇಖಕಿಯರು. ಸೂರ್ಯಗ್ರಹಣ, ಚಂದ್ರಗ್ರಹಣಗಳ ಉಲ್ಲೇಖಗಳಲ್ಲದೆ, ಕೆಲವೊಂದು ಶಾಸನಗಳಲ್ಲಿ ಬೇರೆ ಬೇರೆ ಗ್ರಹಗಳ ಸಂಯೋಗ ಮುಂತಾದ ಖಗೋಳೀಯ ವಿವರಗಳೂ ಇರುತ್ತವೆ. ಗ್ರಹಣಗಳು ಎಂದೆಲ್ಲ ನಡೆದಿವೆ ಎಂಬುದನ್ನು ಇಂದು ನಾವು ನಿಖರವಾಗಿ ಲೆಕ್ಕಾಚಾರ ಮಾಡಿ ತಿಳಿದುಕೊಳ್ಳಬಹುದು. ಈ ದಾರಿಯಲ್ಲಿ ಸಂಶೋಧಕರು ಮುಂದುವರೆದು ಆ ನಿರ್ದಿಷ್ಟ ಶಾಸನದ ಕಾಲವನ್ನು ಪತ್ತೆ ಮಾಡಬಹುದಾಗಿದೆ. ಹೀಗೆ ಮಾಡುವುದರಿಂದ ನಮ್ಮ ಇತಿಹಾಸದ ಹಲವು ವಿವರಗಳ ಸರಿಯಾದ ಕಾಲನಿರ್ಣಯ ಸಾಧ್ಯವಾಗುತ್ತದೆ. ಉದಾಹರಣೆಗೆ, ಈ ಕೃತಿಯಲ್ಲಿ ನಾವು ಟಿಪ್ಪುವಿನ ಕಾಲದ ಶಾಸನದ ಕಾಲನಿರ್ಣಯದ ವಿಶ್ಲೇಷಣೆಯನ್ನೂ, ರಾಮಾನುಜಾಚಾರ್ಯರ ಜೀವಿತಾವಧಿಯನ್ನು ಕುರಿತ ಚರ್ಚೆಯನ್ನೂ ಗಮನಿಸಬಹುದು.

ಒಟ್ಟಿನಲ್ಲಿ 'ಹಿಸ್ಟರಿ ಆಫ್ ದಿ ಸ್ಕೈ ಆನ್ ದಿ ಸ್ಟೋನ್ಸ್' ಕೃತಿಯ ಮೂಲಕ ಶೈಲಜಾ ಮತ್ತು ಗೀತಾ ಅವರು ಪ್ರಾಚೀನ ಭಾರತೀಯ ಖಗೋಳಶಾಸ್ತ್ರದ ಆಳ-ಅಗಲಗಳ ಬಗ್ಗೆ ಗಮನಸೆಳೆಯುವುದರ ಜೊತೆಗೆ, ನಮ್ಮ ಇತಿಹಾಸದ ಅಧ್ಯಯನಕ್ಕೆ ದಕ್ಕಬೇಕಾದ ವೈಜ್ಞಾನಿಕ ಸ್ಪರ್ಶದ ಬಗ್ಗೆಯೂ ಅರಿವನ್ನು ಮೂಡಿಸುತ್ತಾರೆ. ದಿಟ, ಈ ಕೃತಿಯನ್ನು ಅರ್ಥ ಮಾಡಿಕೊಳ್ಳಲು ತಕ್ಕಮಟ್ಟಿಗೆ ವಿಜ್ಞಾನ-ಗಣಿತದ ತಿಳಿವಳಿಕೆಯೂ ಅನಿವಾರ್ಯ. ಇತ್ತೀಚೆಗೆ ಶೈಲಜಾ ಮತ್ತು ಸೀತರಾಮ ಜಾವಗಲ್ ಅವರು ಪ್ರಕಟಿಸಿರುವ ಶಂಕರನಾರಾಯಣ ಜೋಯಿಸರ 'ಗಣಿತಗನ್ನಡಿ' ಕೃತಿಯನ್ನೂ ಓದಿಕೊಂಡರೆ ನಮಗೆ ಅನುಕೂಲವಾಗುತ್ತದೆ.

ಕಥೆ
ಶಂಕರ ಬೈಚಬಾಳ ಅವರ ವಂದೇ ಮಾತರಂ-ಸಲೀಂ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಬಿದಲೋಟಿ ರಂಗನಾಥ್ ಅವರ ನೆತ್ತರು ಬಿದ್ದ ನೆಲದ ನೆರಿಗೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಯಕ್ಷಗಾನ ವಿರಾಟ್ ರೂಪದ ದರ್ಶನ

ಗ.ನಾ.ಭಟ್ಟ

ಹೆಸರಾಂತ ಭಾಗವತರೂ ಸಂಸ್ಕೃತ ವಿದ್ವಾಂಸರೂ ಆದ ಗಣಪತಿ ಭಟ್ಟರು ಯಕ್ಷಗಾನ ಸಂಬಂಧಿ ತಮ್ಮ ಚೊಚ್ಚಲ ಕೃತಿಗೆ 'ಯಕ್ಷಗಾನ ಗಾನಸಂಹಿತೆ' ಎಂದು ನಾಮಕರಣ ಮಾಡಿದ್ದಾರೆ. 'ಯಕ್ಷಗಾನ' ಎಂಬ ಪದದಲ್ಲೇ ಗಾನ ಶಬ್ದವೂ ನಿಹಿತಾಗಿದ್ದರಿಂದ ಪ್ರತ್ಯೇಕವಾಗಿ 'ಗಾನ' ಎಂಬ ಶಬ್ದದ ಪ್ರಸಕ್ತಿ ಇರಲಿಲ್ಲವೇನೋ! ಪ್ರಾಯಃ ಯಕ್ಷಗಾನ ಭಾಗವತಿಕೆ, ಹಾಡು, ಗಾನವನ್ನು ಕುರಿತೇ ಹೇಳಬೇಕಾದ ಕಾರಣಕ್ಕಾಗಿಯೋ, ಅದು ಒಂದು ಪ್ರತ್ಯೇಕ ಘಟಕ ಎಂದು ಅವರು ಭಾವಿಸಿದ್ದಕ್ಕಾಗಿಯೋ 'ಯಕ್ಷಗಾನ ಗಾನಸಂಹಿತೆ' ಎಂದು ನಾಮಕರಣ ಮಾಡಿರಬೇಕು! ಈ ಗಾನಸಂಹಿತೆಯಿಂದ ಓದುಗರಿಗೆ, ಜಿಜ್ಞಾಸುಗಳಿಗೆ ಒಂದು ಮಹೋಪಕಾರವೇ ಆಗಿದೆ.

ಭಟ್ಟರು ಯಕ್ಷಗಾನ ಒಂದು ಆರಾಧನಾ ಕಲೆಯೆಂದು ಹೇಳುತ್ತಲೇ ಮತ್ತು ಸೋದಾಹರಣವಾಗಿ ಅದನ್ನು ಸಮರ್ಥಿಸುತ್ತಲೇ ಯಕ್ಷಗಾನ ಪದ್ಯಗಳಲ್ಲಿ ಬಳಸಬಹುದಾದ ರಾಗ, ತಾಳ, ಭಾವ, ಲಯ, ರಸ, ಮಟ್ಟು, ಶೈಲಿ, ನಾದ ಮೊದಲಾದವುಗಳ ಕುರಿತು ವಿಸ್ತಾರವಾಗಿಯೇ ಹೇಳಿದ್ದಾರೆ. ನಾದದ ವಿವಿಧ ಉಗಮಗಳನ್ನು ಸಾಧಾರಿತವಾಗಿ ನಿರೂಪಿಸಿದ್ದಾರೆ. ಗಾನಪ್ರಭೇದಗಳಲ್ಲಿ ಮಾರ್ಗ ಮತ್ತು ದೇಶೀ ಹೇಗಾಯಿತು ಅನ್ನುವುದನ್ನು ವಿವರಿಸುತ್ತಾ ಯಕ್ಷಗಾನದ ಹಾಡು ದೇಶೀ ಮೂಲದ್ದೆಂದು ದೃಢೀಕರಿಸಿದ್ದಾರೆ. ಜನರಿಂದಾಗಿ, ಜನರಿಗೋಸ್ಕರ ಆಯಾಯ ಪ್ರದೇಶದಲ್ಲಿ ಬೆಳೆದು ಬಂದ ಕಲೆಯೇ ದೇಶೀ ಕಲೆ. ಈ ದೇಶೀ ಕಲೆಯ ಪ್ರಭೇದವೇ ಯಕ್ಷಗಾನ ಎಂದು ಹೇಳುವ ಅವರು ದೇಶೀಸೂಚಕಗಳಾದ ಮಾರವ, ಮಾಳವ, ಸೌರಾಷ್ಟ್ರ, ತಿಲಂಗ್, ಭೂಪಾಳಿ ಮೊದಲಾದ ರಾಗಗಳಿಂದ ಅದನ್ನು ಮತ್ತಷ್ಟು ಸಮರ್ಥಿಸಿದ್ದಾರೆ.



ಯಕ್ಷಗಾನ ಗಾನಸಂಹಿತೆ
ಲೇ: ವಿದ್ವಾನ್ ಗಣಪತಿ ಭಟ್ ಯಲ್ಲಾಪುರ
ಪ್ರ: ಶ್ರೀದುರ್ಗ ಪ್ರಕಾಶನ
ಸಂ: 9481447156
ಪು: 220 ₹150

ಅವಲೋಕನ

'ಕರ್ನಾಟಕ ಸಂಗೀತ ಪದ್ಧತಿ ಹುಟ್ಟುವ ಕಾಲದಲ್ಲಿಯೇ ಯಕ್ಷಗಾನವು ಸುಸಂಬದ್ಧವಾದ, ಪ್ರಭಾವಶಾಲಿಯಾದ, ವಿಕಸಿತವಾದ ಒಂದು ಸಂಗೀತ ಪದ್ಧತಿಯಾಗಿ ಬೆಳೆದಿತ್ತು. ಇದು ಪ್ರತ್ಯೇಕವಾದ ಒಂದು ಗೀತಶೈಲಿಯೇ ಆಗಿದೆ. ಇದು ತನ್ನತನವನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳುವುದಕ್ಕಾಗಿ 'ಯಕ್ಷ' ಎಂಬ ವಿಶೇಷಣವನ್ನು ಹೊಂದಿತ್ತು' ಎಂದು ಯಕ್ಷಗಾನದ ಹುಟ್ಟು, ಬೆಳವಣಿಗೆಯ ಕುರಿತು ಹೇಳಿರುವ ಮಾತು ತುಂಬಾ ಗಮನಾರ್ಹವಾದುದು.

ಯಕ್ಷಗಾನ ಗೀತಶೈಲಿಯನ್ನು ರಾಗಗಳ ಆಧಾರದ ಮೇಲೆ ಗುರುತಿಸಿ ಅದಕ್ಕೊಂದು ವೈಶಿಷ್ಟ್ಯವನ್ನು ತಂದುಕೊಟ್ಟಿದ್ದಾರೆ ಲೇಖಕರು. ನಾಟಿ, ಕಲ್ಯಾಣಿ, ಕಾಂಭೋಜಿ, ತೋಡಿ, ಕೇದಾರಗೌಳ ಮುಂತಾದ ಐವತ್ತಕ್ಕೂ ಹೆಚ್ಚು ರಾಗಗಳನ್ನು ಉಲ್ಲೇಖಿಸಿ ಯಕ್ಷಗಾನದ ಅನನ್ಯತೆಯನ್ನು ಎತ್ತಿ ಹಿಡಿದಿದ್ದಾರೆ.

ಯಕ್ಷಗಾನದ ಬಯಲಾಟವೇ ಇರಲಿ, ತಾಳಮದ್ದಳೆಯೇ ಇರಲಿ ಅದಕ್ಕೆ ಮೂಲ ಆಧಾರ 'ಪ್ರಸಂಗ'ಗಳು. ಪ್ರಸಂಗ ಅಂದರೆ ಸಂದರ್ಭ, ಘಟನೆ ಎಂಬ ಅರ್ಥಗಳಿದ್ದರೂ ಯಕ್ಷಗಾನ ಪರಿಭಾಷೆಯಲ್ಲಿ ಅದಕ್ಕೆ 'ಕಥಾನಕ' ಎಂಬ ಅರ್ಥವಿದೆ. ಭಟ್ಟರು ಇದನ್ನು ಗೇಯನಾಟಕವೆಂದೂ, ಗೇಯಕಾವ್ಯವೆಂದೂ, ಗೇಯಪ್ರಬಂಧವೆಂದೂ ಕರೆದು ಇದರಲ್ಲಿ ದೈತ್ಯ-ರಾಕ್ಷಸ-ಕ್ಷತ್ರಿಯರ ಕಥೆಗಳಿವೆ, ಅವರ ಇತಿಹಾಸವಿದೆ, ಅವರ ಸೋಲು-ಗೆಲುವುಗಳಿವೆ, ಭೂತ-ಪ್ರೇತ-ಪಿಶಾಚಾದಿಗಳ ಕೈವಾಡಗಳಿವೆ, ಅವರ ನರ್ತನಗಳಿವೆ, ಲೋಕ-ಲೋಕಾಂತರಗಳ ಪರಿಚಯವಿದೆ, ಪ್ರಕೃತಿಯ ವರ್ಣನೆಗಳಿವೆ, ಕಲಾಕೃತಿಗೆ ಬೇಕಾಗುವ ಎಲ್ಲಾ ರಸ- ಭಾವಗಳೂ, ರಾಗಗಳೂ ಇವೆ ಎಂದು ಯಕ್ಷಗಾನದ ಮಹತ್ವವನ್ನೂ, ಹಿರಿಮೆಯನ್ನೂ ಪ್ರಚುರಪಡಿಸಿದ್ದಾರೆ.

'ಮಟ್ಟು' ಎಂಬ ಪದ ಯಕ್ಷಗಾನದಲ್ಲಿ ಹೆಚ್ಚು ಪ್ರಚಲಿತವಾದ ಪದ. ಎಲ್ಲರೂ ಹೇಳುವಂತೆಯೇ ಭಟ್ಟರೂ ಕೂಡಾ ಇದನ್ನು 'ಹಾಡುವ ಧಾಟಿ' ಎಂದೇ ಕರೆದಿದ್ದಾರೆ. ಯಕ್ಷಗಾನದಲ್ಲಿ ಇಂದಿಗೂ ಮಟ್ಟುಗಳೇ ವಿಜೃಂಭಿಸುತ್ತವೆ ಎಂಬುದನ್ನು ಎತ್ತಿ ತೋರಿದ್ದಾರೆ. ಯಕ್ಷಗಾನದಲ್ಲಿ 'ಭಾಗವತ' ಎಂದರೆ ಹಾಡುಗಾರ ಅಂತ ಅಷ್ಟೇ ಅರ್ಥ. 'ಭಾಗವತರ ತಲೆಯ ಮೇಲೆ ಕಿರೀಟವಿರದು. ಆದರೆ ಕಿರೀಟ ಹೊತ್ತ ವೇಷಧಾರಿಗಿಂತಲೂ ಭಾಗವತರ ಹೊಣೆಗಾರಿಕೆ ಎಷ್ಟೋ ಪಾಲು ದೊಡ್ಡದು' ಎಂಬ ಮಾತು ಭಾಗವತರ ಹೊಣೆಗಾರಿಕೆಯನ್ನು ಮತ್ತಷ್ಟು ಹೆಚ್ಚಿಸುವಂತಿದೆ.

ಮೃದಂಗ, ಮೃದಂಗ ವಾದಕರು, ಚಂಡೆ, ಚಂಡೆ ವಾದಕರು, ಯಕ್ಷಗಾನ ಪಾತ್ರಗಳು, ಸಭಾಲಕ್ಷಣ, ರಸ, ಭಾವ, ರಾಗ, ಯಕ್ಷಗಾನ ಹಾಡು, ಭಾಗವತ, ಶಾಸ್ತ್ರೀಯ ಸಂಗೀತದ ಪಾತ್ರ, ಮಟ್ಟುಗಳ ಪಾತ್ರ, ಜಾನಪದದ ಪಾತ್ರ ಮೊದಲಾದವುಗಳ ಬಗ್ಗೆ ಖಚಿತವಾಗಿ ತಿಳಿಸಿಕೊಡುವ ಒಂದು ಉದ್ಗ್ರಂಥವಾಗಿ ಭಟ್ಟರ 'ಯಕ್ಷಗಾನ ಗಾನಸಂಹಿತೆ' ಹೊರಹೊಮ್ಮಿದೆ.

ದಲಿತ ದೃಷ್ಟಿಕೋನದ ಭಿನ್ನ ಲೇಖನಗಳ ಗುಚ್ಛ

ರಾಜಶ್ರೀ ಟಿ. ರೈ ಪೆರ್ಲ

ಕಾಸರಗೋಡು ಪರಿಸರದಲ್ಲಿ ಕನ್ನಡವೇ ಕಾಣೆಯಾಗುತ್ತಿರುವಾಗ ಕೆಲವು ಲೇಖಕರು ಅಲ್ಲಿ ವೇಗವಾಗಿ ಕಳೆದು ಹೋಗುತ್ತಿರುವ ತುಳು-ಕನ್ನಡ ಸಂಸ್ಕೃತಿಗಳ ಬಗ್ಗೆ ಬರೆಯುತ್ತಿರುವುದು ಸ್ತುತ್ಯಾರ್ಹ ಕೆಲಸ. ಸುಂದರ ಬಾರಡ್ಕ ಅವರ 'ನೆಲದನಿ' ಕೃತಿಯು ದಲಿತನೊಬ್ಬ ಈ ಪರಿಸರದ ಇತಿಹಾಸ ಮತ್ತು ವರ್ತಮಾನವನ್ನು ನೋಡುವ ಕ್ರಮವನ್ನು ಸೊಗಸಾಗಿ ದಾಖಲಿಸಿದೆ. 16 ಲೇಖನಗಳ ಈ ಪುಸ್ತಕದಲ್ಲಿ ಲೇಖಕರು 'ದಲಿತರ ಕೈಯಲ್ಲಿ ಶಿಕ್ಷಣವಿಲ್ಲದ ಕಾರಣ ಇಲ್ಲಿನ ಯಾವ ಚರಿತ್ರೆಯೂ ದಾಖಲೆಯಾಗಿ ಉಳಿದಿಲ್ಲ. ಅದು ಅಧಿಕಾರ, ಅಂತಸ್ತು, ಉಳ್ಳವರಿಗೆ ಬೇಕಾದಂತೆ ದಾಖಲಾಯಿತು. ಇಲ್ಲಿನ ಅವೆಷ್ಟೋ ವಿಚಾರಗಳು, ಚರಿತ್ರೆಗಳು ಮಣ್ಣುಪಾಲಾಗಿ ಹೋಗಿವೆ' ಎಂಬ ಮಾತನ್ನು ಹೇಳಿದ್ದಾರೆ ಮತ್ತು ಈ ಚೌಕಟ್ಟಿನಲ್ಲಿ ಮಣ್ಣುಪಾಲಾದ ವಿಷಯಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ.

ಈ ಕೃತಿಯಲ್ಲಿ 'ನೆಲದನಿ' ಎನ್ನುವುದು ಈ ನೆಲದ ದನಿಯಾಗಿದೆ. ಇಲ್ಲಿನ ಪ್ರತಿಯೊಂದು ದಾಖಲಾತಿಯ ಹಿಂದಿರುವುದು ಜಾನಪದ ಹರಿವಿನ ಪಳೆಯುಳಿಕೆಗಳಿಂದ ಆಯ್ದ ಪುರಾವೆಗಳು. ಜಾನಪದದ ಗಟ್ಟಿತನವಿರುವುದೇ ಮುಗ್ಧತನದಲ್ಲಿ ಮತ್ತು ಧಾಂಬಿಕತೆಯ ಅನುಪಸ್ಥಿತಿಯಲ್ಲಿ. ಆದಕಾರಣ ಇವು ಸುಳ್ಳಾಗುವ ಸಾಧ್ಯತೆಗಳು ಕಡಿಮೆ. ಪೂರ್ವ ಮಾದರಿಗಳನ್ನು ಒಡೆಯುವ ಬಾರಡ್ಕರಿಗೆ ಆ ಮೂಲಕವೇ ಕೆಲವು ಒಳನೋಟಗಳನ್ನು ನೀಡಲು ಸಾಧ್ಯವಾಗಿದೆ.

ಹೆಚ್ಚು ಚರ್ಚೆಗೆ ಒಳಪಡದ ಬಲಿ, ನಂದರಾಜ, ಹುಭಾಷಿಕ, ಅಂಗಾರ, ಮಾಯಿಲ, ಬಡಜರು ಮೊದಲಾದವರ ಬಗ್ಗೆ ಪುಸ್ತಕದಲ್ಲಿ ಕುತೂಹಲಕರ ಮಾಹಿತಿಗಳಿವೆ. ಅವರೆಲ್ಲರ ಬಗೆಗೆ ಇಂದೂ ಕೂಡ ಜೀವಂತವಿರುವ ಮೌಖಿಕ ಕಥನಗಳು, ಸ್ಥಳನಾಮಗಳು, ಹಾಡುಗಬ್ಬಗಳು ಮತ್ತು ಕೆಲವು ಐತಿಹ್ಯಗಳನ್ನು ಇಲ್ಲಿ ಶ್ರಮವಹಿಸಿ ಕಲೆ ಹಾಕಲಾಗಿದೆ.

ನೆಲದನಿ
ಲೇ: ಸುಂದರ ಬಾರಡ್ಕ
ಪ್ರ: ಅಂಬೇಡ್ಕರ್ ವಿಚಾರ ವೇದಿಕೆ, ಬದಿಯಡ್ಕ
ಸಂ: 9995279442
ಪು: 128 ₹200

ಒಳನೋಟ

ದೇವರು, ನಂಬಿಕೆಗಳು ಮತ್ತು ಆರಾಧನ ವಿಧಾನಗಳಲ್ಲಿನ ವ್ಯತ್ಯಾಸಗಳು ಉಚ್ಚನೀಚ ಎಂಬ ಪರಿಗಣನೆಯ ಮೂಲಕ ಸಮಾಜವನ್ನು ಹೇಗೆ ಒಡೆದಿದೆ ಎಂಬ ಕುರಿತೂ ಇಲ್ಲಿ ಮಾಹಿತಿಗಳಿವೆ.

ಭಾಷೆಯ ಹೆಸರಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಪಲಾಯನದ ಕರಾಳತೆಯತ್ತಲೂ ಬಾರಡ್ಕರು ಬೆಳಕು ಚೆಲ್ಲಿದ್ದಾರೆ. ಪಂಜಿ ಮೇಸ್ತ್ರಿಯ ಬದಿಯಡ್ಕ ಹೋಟೆಲ್, ಮೋಗೇರರ ಸಾಂಸ್ಕೃತಿಕ ಅನನ್ಯತೆ, ದಲಿತೋದ್ಧಾರಕ ಸ್ವಾಮಿ ಆನಂದ ತೀರ್ಥ, ಕಾಂತಗ ಎಂಬ ಸಂಗೀತ ವಾದ್ಯ, ಮೊದಲಾದ ಬರಹಗಳು ನಮಗೆ ಇದುವರೆಗೆ ಸಿಗದ ಮಾಹಿತಿಗಳಾಗಿವೆ. ತುಳು ಅಧ್ಯಯನಗಳು ಮಂಗಳೂರು ಕೇಂದ್ರಿತವಾಗಿ ನಡೆಯುತ್ತಿರುವಾಗ, ಅದರಿಂದ ಸಿಡಿದು ನಿಂತು ಕಾಸರಗೋಡು ಕೇಂದ್ರಿತವಾಗಿ ಮಾಡುತ್ತಿರುವ ಸುಂದರ ಅವರ ಪ್ರಯತ್ನ ಅಭಿನಂದನೀಯ.

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2022
ಕಥೆ-ಕವನ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ
ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ ಆಗಸ್ಟ್ 13, 2022
ವಿವರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬಂಡಾಯದ ಹೆಜ್ಜೆಗೆ...

12ನೇ ಪುಟದಿಂದ...

ಬದ್ಧತೆಯ ವಿಷಯದಲ್ಲೂ ತಕರಾರು ಎತ್ತಿದವರು, ಎತ್ತುತ್ತಿರುವವರು ಇದ್ದಾರೆ. ಬದ್ಧತೆಯ ಪರಿಕಲ್ಪನೆಯೂ ಸೃಜನಶೀಲ ಸ್ವಾತಂತ್ರ್ಯದ ವಿರೋಧಿ ಎನ್ನುತ್ತಾರೆ. ನನ್ನ ದೃಷ್ಟಿಯಲ್ಲಿ 'ಬದ್ಧತೆ' ಎನ್ನುವುದು ನಿರ್ದಿಷ್ಟ ಜೀವನ ದೃಷ್ಟಿಕೋನ ಅಥವಾ ಜೀವನ ಸಿದ್ಧಾಂತ. ಇದು ಇಲ್ಲದ ಯಾವ ಮುಖ್ಯ ಲೇಖಕರನ್ನೂ ನಾನು ಕಂಡಿಲ್ಲ. ಪಂಪ, ಬಸವಣ್ಣ, ಅಲ್ಲಮ, ಕುಮಾರವ್ಯಾಸ, ಕನಕದಾಸ, ಕುವೆಂಪು, ಬೇಂದ್ರೆ, ಅಡಿಗ-ಹೀಗೆ ಯಾರನ್ನೇ ತೆಗೆದುಕೊಳ್ಳಿ, ಅವರವರ ಸೈದ್ಧಾಂತಿಕ ನೆಲೆ-ನಿಲುವುಗಳು ಇರಲಿಲ್ಲವೆ? ಇದ್ದವು. ಇಂತಹ ಪರಂಪರೆಯ ಪ್ರಜ್ಞೆಯನ್ನು ಗೌರವಿಸುತ್ತಲೇ ಬಂಡಾಯ ಸಾಹಿತ್ಯ ಚಳವಳಿಯು ವಿಶಾಲವ್ಯಾಪ್ತಿಯ ಸಾಮಾಜಿಕ ಸೈದ್ಧಾಂತಿಕ ಪರಿಕಲ್ಪನೆಯನ್ನು ಪ್ರತಿಪಾದಿಸಿದೆ. ಹಾಗೆಂದು ಸಾಹಿತಿಯೊಬ್ಬ ಸಿದ್ಧಾಂತದ ಬಂಧಿಯಾಗಬೇಕಿಲ್ಲ. ತಾನು ನಂಬಿದ ಸಿದ್ಧಾಂತವು ಸ್ಫೂರ್ತಿ ಮಾತ್ರವಾಗಿರಬೇಕು. ವಿಶಿಷ್ಟ ನೋಟಗಳಿಗೆ ಪ್ರೇರಕವಾಗಬೇಕು. ತಾವು ನಂಬಿದ ಸಿದ್ಧಾಂತದ ಜೊತೆಯೂ ಮಾನಸಿಕ ದೂರದ ದೃಷ್ಟಿ ಸಾಧ್ಯವಾಗಬೇಕು. ಸಿದ್ಧಾಂತ ಕೂಡ ಸೃಜನಶೀಲವಾಗಿರಬೇಕು; ಜಡವಾಗಬಾರದು. ಸೈದ್ಧಾಂತಿಕ ಜಡತೆಯ ಬದಲು ಸೈದ್ಧಾಂತಿಕ ಸೃಜನಶೀಲತೆ ಮುಖ್ಯವಾಗಬೇಕು. ಸೈದ್ಧಾಂತಿಕತೆಯು ದರ್ಶನಾತ್ಮಕತೆಗೆ ಹಾದಿ ತೋರಬೇಕು. ಈ ನೆಲೆಯಲ್ಲಿ ನಾವು ಬದ್ಧತೆಯ ವಿಷಯವನ್ನು ಅರ್ಥಮಾಡಿಕೊಳ್ಳಬೇಕು.

ಬಂಡಾಯ ಸಾಹಿತ್ಯ ಚಳವಳಿಯು ಉಂಟುಮಾಡಿದ ದೊಡ್ಡ ಪರಿಣಾಮಗಳಲ್ಲಿ ಒಂದು-ಹೊಸ ಬರಹಗಾರರಲ್ಲಿ ಮೂಡಿಸಿದ ಆತ್ಮವಿಶ್ವಾಸ. ವಿವಿಧ ಸಾಮಾಜಿಕ ವಲಯಗಳಿಂದ ಬಂದು ಮೊತ್ತಮೊದಲ ಬಾರಿಗೆ ಅಕ್ಷರಾಭಿವ್ಯಕ್ತಿಗೆ ತೊಡಗಿದವರು ಅಳುಕನ್ನು ಮೀರಿ ತಮಗೊಂದು ತಾಣವಿದೆಯೆಂದು ಭಾವಿಸುವಂತೆ ಮಾಡಿದ್ದು ಸಾಮಾನ್ಯ ಸಂಗತಿಯಲ್ಲ. ಯಾಕೆಂದರೆ ಅನೇಕ ಸಾಮಾಜಿಕ ಸಮುದಾಯಗಳಿಗೆ ಬರೆಯುವುದೇ ಬಂಡಾಯವಾಗಿತ್ತು. ದಲಿತ-ಬಂಡಾಯ ಚಳವಳಿಗಳು ಇಲ್ಲದಿದ್ದರೆ, ಶ್ರೇಷ್ಠತೆಯ ಸೊಕ್ಕು, ಅನೇಕರ ಆತ್ಮವಿಶ್ವಾಸವನ್ನು ಕುಗ್ಗಿಸಿ ಪ್ರತಿಭಾ ಭ್ರೂಣ ಹತ್ಯೆ ಮಾಡುತ್ತಿತ್ತು. ಅನೇಕ ಪ್ರತಿಭಾವಂತರನ್ನು ಪ್ರತಿಭಾ ಭ್ರೂಣಹತ್ಯೆಯಿಂದ ಪಾರುಮಾಡಿದ್ದು ದಲಿತ-ಬಂಡಾಯ ಸಾಹಿತ್ಯ ಚಳವಳಿಗಳು ಎಂಬುದೀಗ ಚಾರಿತ್ರಿಕ ವಾಸ್ತವ. ಇನ್ನೊಂದು ಮಾತನ್ನು ಇಲ್ಲಿಯೇ ಹೇಳಬೇಕು. ಬಂಡಾಯವೆಂದರೆ 'ಹೊಡಿಬಡಿ'ಯ ಮಾತಲ್ಲ; ಹಿಂಸೆಯ ಜಾಡಲ್ಲ. ನೈಜವಾದ ಪ್ರಜಾಸತ್ತಾತ್ಮಕ ಹಾದಿಯಲ್ಲಿ ಬಯಸುವ ಬದಲಾವಣೆಯೇ ನಮ್ಮ ಬಂಡಾಯದ ಅರ್ಥ.

ಹೊಸ ಬರಹಗಾರರ ಆತ್ಮವಿಶ್ವಾಸ ಒಂದು ಕಡೆಗಾದರೆ, ತಾತ್ವಿಕ ಸ್ಥಿತ್ಯಂತರಗಳಿಗೆ ಕಾರಣವಾದ ಸಾರ್ಥಕತೆ ಇನ್ನೊಂದು ಕಡೆಗಿದೆ. ಬಂಡಾಯ ಸಾಹಿತ್ಯದ ತಾತ್ವಿಕತೆಯಿಂದ ಸಮಾಜ, ಸಂಸ್ಕೃತಿ, ಸಾಹಿತ್ಯ, ಮುಂತಾದ ವಲಯಗಳನ್ನು ವ್ಯಕ್ತಿಕೇಂದ್ರಿತ ಚಿಂತನೆಯಿಂದ ಸಮುದಾಯ ಕೇಂದ್ರಿತ ಚಿಂತನೆಗೆ ಸ್ಥಿತ್ಯಂತರಗೊಳಿಸುವ ಪ್ರಕ್ರಿಯೆ ಪ್ರಬಲವಾಯಿತು. ವ್ಯಕ್ತಿಪ್ರಜ್ಞೆ ಮತ್ತು ಸಮೂಹ ಪ್ರಜ್ಞೆಗಳ ಸಂಬಂಧ ಗಾಢವಾಯಿತು. ಲೋಕಾಂತದ ಮೂಲಕ ಏಕಾಂತ ಮತ್ತು ಏಕಾಂತದ ಮೂಲಕ ಲೋಕಾಂತವನ್ನು ಕಾಣುವ ಅಭಿವ್ಯಕ್ತಿ ವಿಧಾನ ರೂಪುಗೊಂಡಿತು. ವಿಮರ್ಶೆಯ ಸಿದ್ಧ ಮಾದರಿಗಳನ್ನು ಮೀರಿ ಹೊಸ ನೆಲೆ-ನಿಲುವುಗಳಿಂದ ಸಾಹಿತ್ಯವನ್ನು ವಿಶ್ಲೇಷಿಸುವ ಪ್ರಕ್ರಿಯೆ ಪ್ರಾರಂಭವಾಯಿತು.

ಪರಂಪರೆಯ ಪ್ರಜ್ಞೆ ಮತ್ತು ಪ್ರಗತಿ ಪ್ರಜ್ಞೆಗಳು ಪರಸ್ಪರ ಪ್ರತಿರೋಧಿಗಳಾಗದೆ, ಪೂರಕವಾಗಿ ಬೆಳೆಯಬೇಕೆಂಬ ಪ್ರತಿಪಾದನೆ ಪ್ರಬಲಗೊಂಡಿತು. ಹೀಗಾಗಿಯೇ ಬಂಡಾಯ ಸಾಹಿತ್ಯ ಚಳವಳಿಯು ತನಗಿಂತ ಹಿಂದಿನ ಎಲ್ಲ ಸಾಹಿತ್ಯ ಧಾರೆಗಳಿಂದಲೂ ಪ್ರಗತಿಪರ ಚಿಂತನೆಗಳನ್ನು ಪಡೆದುಕೊಂಡು ಬೆಳೆಯತೊಡಗಿತು; ಅಂತಹ ಚಿಂತನೆಗಳನ್ನು ಗೌರವಿಸುತ್ತಲೇ ಸಮಕಾಲೀನ ಸಂದರ್ಭಕ್ಕೆ ಅಗತ್ಯವಾದ ಹೊಸ ತಾತ್ವಿಕತೆಯನ್ನು ಕಟ್ಟಿಕೊಂಡಿತು. ವಿಶೇಷವೆಂದರೆ ನೇರವಾಗಿ ಬಂಡಾಯ ಸಾಹಿತ್ಯ ಚಳವಳಿಯ ಸಂಬಂಧವಿಲ್ಲದ ಸಾಹಿತಿಗಳ ಮೇಲೂ ಪರೋಕ್ಷ ಪರಿಣಾಮ ಬೀರಿತು. ಬಹುಪಾಲು ಬರಹಗಾರರು ನಮ್ಮಲ್ಲಿರುವ ಜಾತಿಪದ್ಧತಿ, ಅಸ್ಪೃಶ್ಯತೆ, ಅಸಮಾನತೆಗಳನ್ನು ಒಪ್ಪದೆ, ತಂತಮ್ಮ ರೀತಿಯಲ್ಲಿ ಪ್ರತಿಕ್ರಿಯಿಸುವಷ್ಟರಮಟ್ಟಿಗೆ ಬದಲಾವಣೆ ಕಾಣಿಸಿತು. ಈ ಬದಲಾವಣೆಗೆ ಬಂಡಾಯ ಸಾಹಿತ್ಯ ಚಳವಳಿ ಒಂದು ಪ್ರೇರಣೆಯಾಗಿತ್ತು. ಜೊತೆಗೆ ನಮ್ಮ ನಾಡಿನ ದಲಿತ ಚಳವಳಿ, ರೈತ ಚಳವಳಿ, ಮಹಿಳಾ ಚಳವಳಿಗಳ ಪ್ರಭಾವವೂ ಇತ್ತು. ಒಟ್ಟಾರೆ ಇದೊಂದು ಸಕಾರಾತ್ಮಕ ಬೆಳವಣಿಗೆಯಾಗಿತ್ತು.

ಈಗ ನಕಾರಾತ್ಮಕ ಬೆಳವಣಿಗೆಗಳು ಬಲವಾಗುತ್ತಿವೆ. ದೇಶ, ಧರ್ಮ, ಸಂಸ್ಕೃತಿ ಮುಂತಾದ ಪರಿಕಲ್ಪನೆಗಳನ್ನು ಅಪವ್ಯಾಖ್ಯಾನಿಸಿ ಜನರ ಸಂಬಂಧ ಹಾಗೂ ಸೌಹಾರ್ದವನ್ನು ಒಡೆಯಲಾಗುತ್ತಿದೆ. ಹಿಂಸಾತ್ಮಕ ಭಾಷೆ ಮತ್ತು ಕ್ರಿಯೆಗಳೂ ಮುನ್ನೆಲೆಗೆ ಬರುತ್ತಿವೆ. ಇಂಥ ಕೆಟ್ಟ ಸನ್ನಿವೇಶದ ಹೊಣೆಯನ್ನು ಎಲ್ಲ ಧರ್ಮಗಳ ಮೂಲಭೂತವಾದಿಗಳೂ ಹೊರಬೇಕಾಗಿದೆ. ಎಂದಿಗಿಂತ ಇಂದು ಸಮಾನತೆ ಮತ್ತು ಸಹಿಷ್ಣುತೆಗಳ ಮಾನವೀಯ ಮೌಲ್ಯ ಮುಖ್ಯವಾಗಬೇಕಾಗಿದೆ. ಸಮತೆ ಮತ್ತು ಮಮತೆಗಳ 'ಬಹುತ್ವ ಭಾರತೀಯತೆ'ಯ ಭಾವ ಹೃದಯಸ್ಥವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯು ಕಾರ್ಯಪ್ರವೃತ್ತವಾಗಿದೆ. ಬೆಂಗಳೂರು, ತುಮಕೂರು, ಚಿತ್ರದುರ್ಗ, ಬೆಳಗಾವಿ ಮತ್ತು ಬಳ್ಳಾರಿಯಲ್ಲಿ ದೊಡ್ಡಮಟ್ಟದ ಕಾರ್ಯಾಗಾರಗಳನ್ನು ನಡೆಸಿದೆ. ಕೇವಲ ಈ ನಾಲ್ಕು ವರ್ಷಗಳಲ್ಲೇ ರಾಜ್ಯದಾದ್ಯಂತ ನಲವತ್ತಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಸಂಘಟಿಸಿದೆ. ಈಗ, ಎಲ್ಲ ಮಾನವೀಯ ಚಳವಳಿಗಳ ಜೊತೆಗೂಡಿ ಕ್ರಿಯಾಶೀಲವಾಗುವ ಆಶಯದಿಂದ ದಾವಣಗೆರೆಯಲ್ಲಿ ಇದೇ ತಿಂಗಳು 23 ಮತ್ತು 24ರಂದು ರಾಜ್ಯ ಸಮ್ಮೇಳನವನ್ನು ಆಯೋಜಿಸುತ್ತಿದೆ. ಸೈದ್ಧಾಂತಿಕ ಚಲನಶೀಲತೆಯ ಚಕ್ರ ಮುನ್ನಡೆಯಲಿದೆ.

ಮೊದಲ ಓದು

ಹಾಲಕ್ಕಿ ಬದುಕಿನ ಹಾಡು

ಇಡೀ ಕಥಾ ಸಂಕಲನದಲ್ಲಿ 'ಹಾಲಕ್ಕಿ ರಾಕು' ಕಥೆಯೂ ಹೌದು, ಹಾಲಕ್ಕಿ ಸಮುದಾಯದ ಕುಲಮೂಲದ ನಿರೂಪಣೆಯೂ ಹೌದು. ಹಾಲಕ್ಕಿಗಳೆಂದರೆ ಕಾಡಿನ ವಾಸಿಗಳು, ಆದಿವಾಸಿಗಳು ಎಂಬ ವಿವರಗಳನ್ನಷ್ಟೇ ಗಮನಿಸಿದವರಿಗೆ ಇದು ಆಳದ ನೋಟ ತೆರೆದಿಡುತ್ತದೆ. ಪಾರ್ವತಿ ಚೆಲ್ಲಿದ ಹಾಲು ಅನ್ನದಿಂದ ಮನುಷ್ಯನ ಗೊಂಬೆ ತಯಾರಿಸಿದ ಶಿವ ಅದಕ್ಕೆ ಜೀವ ಕೊಟ್ಟದ್ದು, ಹಾಲು-ಅಕ್ಕಿಯ ದಂತಕಥೆ ಇಲ್ಲಿ ತೆರೆದುಕೊಂಡಿದೆ. ಕೂಲಿಯಾಗಿ ಹಾಲು-ಅಕ್ಕಿಯನ್ನೇ ಪಡೆಯುತ್ತಿದ್ದವರು ಹಾಲಕ್ಕಿಗಳು ಎಂದು ಕರೆಸಿಕೊಂಡ ಅಪರೂಪದ ಮಾಹಿತಿಯೂ ಇಲ್ಲಿದೆ.

ಹಾಲಕ್ಕಿಗಳ ಪರಂಪರೆಯ ಹಿರಿಮೆಯನ್ನು ಕಟ್ಟಿಕೊಡಲು ಶ್ರೀಧರ ಗೌಡರು ಕಥನ ಮಾರ್ಗವನ್ನು ಕಂಡುಕೊಂಡಿದ್ದಾರೆ. ಹಾಲಕ್ಕಿ ಒಕ್ಕಲಿಗರ ದಿನಚರಿ, ಬದುಕಿನ ವಿಧಾನವನ್ನು ಕಥೆಗಳ ಮೂಲಕ ತೆರೆದಿಡುವ ಯತ್ನವನ್ನು ಅವರು ಮಾಡಿದ್ದಾರೆ. ಮೊದಲ ಕಥೆ 'ಅಂತರ' ಆ ಸಮುದಾಯದಲ್ಲಾದ ಸಂಬಂಧಗಳ ಪಲ್ಲಟ, ನಗರ ಸಂಸ್ಕೃತಿಯ ಪ್ರಭಾವ, ಬದಲಾದ ಕಾಲಘಟ್ಟದ ದಟ್ಟ ವಿವರಗಳಿವೆ. ವಿಷಾದದ ಛಾಯೆಯೂ ಅಲ್ಲಲ್ಲಿ ಇದೆ.

ನಾಗಪ್ಪ, ಮಂಜ, ಮಾಸ್ತಿ ಗೌಡರಂಥ ಪಾತ್ರಗಳು ನಿಜ ಜೀವನದ ಪ್ರತಿನಿಧಿಗಳೂ ಹೌದು. ಇಲ್ಲಿ ಬಳಸಿರುವ ಹಾಲಕ್ಕಿ ಒಕ್ಕಲಿಗರ ಮೂಲಭಾಷೆಯೇ ಒಮ್ಮೆ ಉತ್ತರ ಕನ್ನಡದ ಕಾಡು, ಕಡಲುಗಳತ್ತ ಸುತ್ತಾಡಿಸಿ ಬರುತ್ತದೆ. 'ಕೋಟಿ ಸೂರ್ಯದ ದುಡ್ಡು', ಬೊಮ್ಮನ ಕಾಲಕ್ಕೂ ಅವನ ಮೊಮ್ಮಗನ ಕಾಲಕ್ಕೂ ಈಗಿನವರ ಮನಸ್ಥಿತಿಗೂ ಇರುವ ಅಂತರವನ್ನು ಕಾಣಿಸುವ ಕಥೆ. ಗೋಕರ್ಣ ಹಾಗೂ ಕೋಟಿ ತೀರ್ಥವನ್ನು ಬಲ್ಲವರಿಗೆ ಹೆಚ್ಚು ಆಪ್ತವಾಗುತ್ತದೆ. ಕೆಲವು ಕಥೆಗಳು ವಸ್ತುವಿನ ದೃಷ್ಟಿಯಿಂದ ಗಟ್ಟಿಯಾಗಿವೆ. ಆದರೆ, ನಿರೂಪಣೆಯನ್ನು ಸ್ವಲ್ಪ ಕಿರಿದಾಗಿಸಬಹುದಿತ್ತು. ಶ್ರಮ ಸಂಸ್ಕೃತಿಯ ಸಮುದಾಯದ ಬದುಕು-ಬಣ್ಣ-ಬವಣೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ ಈ ಕಥಾ ಸಂಕಲನಕ್ಕೆ ಅದೇ ಶಕ್ತಿಯೂ ಹೌದು, ಮಿತಿಯೂ ಹೌದು.

ಹಾಲಕ್ಕಿ ರಾಕು
ಲೇ: ಡಾ.ಶ್ರೀಧರ ಗೌಡ ಉಪ್ಪಿನಗಣಪತಿ
ಪ್ರ: ಕೆ.ಕೆ. ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್ ಬೆಂಗಳೂರು
ಸಂ: 9902703144
ಪು: 132 ₹100

ರಿಕ್ಕು ರಿಕ್ಷಣ್ಣನ 'ವನ'ವಾಸದ ಕಥೆ



ರಿಕ್ಕು ರಿಕ್ಷಣ್ಣಾ
ಕಥೆ: ಅನುಪಮಾ ಕೆ. ಬೆಣಚಿನಮರಡಿ
ಚಿತ್ರಕಲೆ: ಸಂತೋಷ್ ಸಸಿಹಿತ್ಲು
ಪ್ರ: ಹರಿವು ಬುಕ್ಸ್
ಸಂ: 8088822171
ಪು: 20 ₹90

ರಿಕ್ಕು ರಿಕ್ಷಣ್ಣಾ ಪುಟಾಣಿ ಮಕ್ಕಳನ್ನು ತನ್ನ ಚಿತ್ರಗಳಿಂದಲೇ ಸೆಳೆಯುವ ಕೃತಿ. ಇಲ್ಲಿನ ಕಥೆ ಬಹಳ ಸರಳ. ಮೇಲ್ನೋಟಕ್ಕೆ ಚಿತ್ರಗಳೇ ಕಥೆ ಹೇಳುತ್ತವೆ. ಪುಟಾಣಿ ಮಕ್ಕಳಿಗೆ ಚಿತ್ರಗಳನ್ನು ತೋರಿಸುತ್ತಾ ಕಥೆ ಓದಿ ಹೇಳಿದರೆ, ಅವರೂ ರಿಕ್ಕುವಿನ ಲೋಕಕ್ಕೊಂದು ಸುತ್ತು ಹೊಡೆದುಬಂದಾರು.

ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ಅನುಪಮಾ ಕೆ. ಬೆಣಚಿನಮರಡಿ, ಹಲವು ಪತ್ರಿಕೆಗಳಿಗೆ ಮಕ್ಕಳ ಕಥೆಗಳನ್ನು ಬರೆದಿದ್ದಾರೆ. ಪರಿಸರದಲ್ಲಿನ ಜೀವಪ್ರಪಂಚ ಇವರನ್ನು ಹೆಚ್ಚಾಗಿ ಆಕರ್ಷಿಸುವ ವಿಷಯ. ಈ ಕೃತಿಯಲ್ಲಿ ಅವರು ಆಯ್ದುಕೊಂಡಿರುವ ಕಥೆಯೂ ಅಷ್ಟೇ ಸರಳವಾಗಿದೆ. ರಿಕ್ಕು ಎಂಬ ರಿಕ್ಷಾ ಮತ್ತು ಆನೆಯೊಂದರ ನಡುವೆ ನಡೆಯುವ ಸಂಭಾಷಣೆ ಕಥೆಯಾಗುತ್ತಾ ಸಾಗುತ್ತದೆ. ವನ್ಯಜೀವಿ-ಮಾನವರ ನಡುವಿನ ಸಂಘರ್ಷದ ಪರಿಣಾಮವನ್ನೂ ತೆಳುವಾಗಿ ಕಥೆ ಬಿಚ್ಚಿಟ್ಟಿದೆ. ಈ ಅಕ್ಷರಗಳಿಗೆ ಜೀವ ತುಂಬಿದವರು ಉಡುಪಿ ಜಿಲ್ಲೆಯ ಸಂತೋಷ್ ಸಸಿಹಿತ್ಲು. ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಕಾರರಾಗಿ ಕೆಲಸ ಮಾಡಿದ ಅನುಭವವುಳ್ಳ ಇವರು ರಿಕ್ಕುವಿಗೆ ಬಣ್ಣದ ಪ್ರಾಣವಾಯು ನೀಡಿದ್ದಾರೆ. ಆನೆಯೊಂದು ರಿಕ್ಷಾದೊಳಗೆ ಕುಳಿತರೆ ರಿಕ್ಷಾವೇ ಆನೆಯಾಗುವಂತಹ ಇವರ ಕೈಚಳಕ ಮಕ್ಕಳ ಕಣ್ಮನಗಳನ್ನು ಸೆಳೆಯುತ್ತದೆ.

ಕಂಡೂ ಕಾಣದವರ ಜಾಡು ಹಿಡಿದು

ಕನ್ನಡ ಪತ್ರಿಕೋದ್ಯಮದ ಇತಿಹಾಸದ ಬಗ್ಗೆ ಅಲ್ಲಿಲ್ಲಿ ಒಂದಿಷ್ಟು ಓದಿದ ನೆನಪಿರಬಹುದು. ಒಂದಿಬ್ಬರು ಮಹನೀಯರ ಹೆಸರುಗಳೂ ನೆನಪಿರಬಹುದು. ಆದರೆ, ಸುಮಾರು ಒಂದೂಕಾಲು ಶತಮಾನದ ಹಿಂದೆ ಪತ್ರಿಕೋದ್ಯಮದ ಇತಿಹಾಸದಲ್ಲಿ ಗುರುತರವಾದ ಪ್ರಯೋಗ, ದಾಖಲೆಗಳನ್ನು ಮಾಡಿ, ಹೋರಾಟಗಳನ್ನು ನಡೆಸಿಯೂ ಕಂಡೂ ಕಾಣದಂತಾದ ಮಹನೀಯರೊಬ್ಬರ ಜಾಡು ಹಿಡಿದು ಆಳಕ್ಕಿಳಿದಿದ್ದಾರೆ ಲೇಖಕರು. ಕೆರೋಡಿ ಸುಬ್ಬರಾಯರನ್ನು ಹುಡುಕುವ ಭರದಲ್ಲಿ ಕನ್ನಡ ಪತ್ರಿಕೋದ್ಯಮದ ಆರಂಭದಿಂದ ಒಂದು ಶತಮಾನದ ವಿವಿಧ ಪತ್ರಿಕೆಗಳ ಸಣ್ಣ ಸಣ್ಣ ವಿವರಗಳನ್ನೂ ತೆರೆದಿಟ್ಟಿದ್ದಾರೆ.

ಬಹುತೇಕ ಇತ್ತೀಚಿನ ಸಂಶೋಧನಾ ಗ್ರಂಥಗಳಲ್ಲಿ ಬರಿಯ ಪತ್ರಿಕೆಗಳು ಮತ್ತು ಸಂಪಾದಕರ ಹೆಸರಗಳಷ್ಟೇ ಬಂದು ಮರೆಯಾದದ್ದು ಹೆಚ್ಚು. ಪತ್ರಿಕೆಯ ಹೂರಣ ಹೇಗಿರುತ್ತಿತ್ತು ಎಂಬ ಕುತೂಹಲ ಉಳ್ಳವರು ಈ ಕೃತಿಯನ್ನು ಓದಬೇಕು.

ಮಂಗಳೂರು ಸಮಾಚಾರದಲ್ಲಿ ಬಳಸುತ್ತಿದ್ದ ಭಾಷಾ ಶೈಲಿಯ ಕುರಿತು ರಸವತ್ತಾದ ವಿವರಗಳು ಇಲ್ಲಿವೆ. ಅದು ಬಳ್ಳಾರಿಗೆ ಸ್ಥಳಾಂತರವಾಗಿ 'ಕಂನಡ ಸಮಾಚಾರ' ಎಂದು ಬದಲಾದಾಗ ಅದರ ಉದ್ದೇಶ, ಆ ಬಳಿಕ ಮಂಗಳೂರಿನಲ್ಲಿ ಸ್ಥಳೀಯರು ಆರಂಭಿಸಿದ ಪತ್ರಿಕೋದ್ಯಮ, ಸಹಕಾರ ಕ್ಷೇತ್ರವೂ ಪತ್ರಿಕೆ ಹಾಗೂ ಮುದ್ರಣ ಕ್ಷೇತ್ರಕ್ಕಿಳಿದ ವಿದ್ಯಮಾನ... ಎಲ್ಲವುಗಳ ವಿವರ ಸಮಗ್ರವಾಗಿವೆ. ಅಂದಿನ ಮತ್ತು ಇಂದಿನ ಪತ್ರಿಕಾ ವ್ಯವಹಾರ, ಸನ್ನಿವೇಶಕ್ಕೆ ಇರುವ ಸಾಮ್ಯತೆಯನ್ನೂ ಎತ್ತಿ ತೋರಲಾಗಿದೆ.

ಕನ್ನಡ ಸಾಹಿತ್ಯದ ಬೆಳವಣಿಗೆಗೆ (ಸಾಹಿತ್ಯದ ದಾಖಲೆ, ಭಾಷಾಂತರ, ಪತ್ರಿಕೋದ್ಯಮ, ತಾಂತ್ರಿಕ ಸುಧಾರಣೆ, ಧರ್ಮ ಪ್ರಚಾರ ಇತ್ಯಾದಿ) ಕ್ರೈಸ್ತ ಧರ್ಮದ ಕೊಡುಗೆ ಬಗೆಗೆ ಪ್ರಶಂಸಿಸಿದ್ದಾರೆ. ಮುದ್ದಣ ಸಾಹಿತ್ಯದಿಂದ ಹಿಡಿದು ಕ್ರೈಸ್ತ ಗೀತೆಗಳವರೆಗೂ ವಿವರಗಳಿವೆ. ಸಂಶೋಧಕ ಡಾ.ಶ್ರೀನಿವಾಸ ಹಾವನೂರು ಸಹಿತ ಅನೇಕ ವಿದ್ವಾಂಸರ ಅಧ್ಯಯನಗಳು, ಉಲ್ಲೇಖಗಳು, ಶ್ರೀಸಾಮಾನ್ಯನ ಸಂಗ್ರಹ ಭಂಡಾರದ ದಾಖಲೆಗಳ ತುಣುಕುಗಳು ಉಲ್ಲೇಖಿಸಿರುವುದು ಕೃತಿಗೊಂದು ಮೌಲಿಕವಾದ ವಿಶ್ವಾಸಾರ್ಹತೆಯನ್ನು ದಕ್ಕಿಸಿಕೊಟ್ಟಿವೆ.



ಕನ್ನಡ ಅರುಣೋದಯದ ಒಬ್ಬ ಆದ್ಯರು
ಲೇ: ಡಾ.ಹಾ.ತಿ.ಕೃಷ್ಣೇಗೌಡ
ಪ್ರ: ಯುಕ್ತ ಪ್ರಕಾಶನ, ಮೈಸೂರು
ಸಂ: 8277423989
ಪು: 220 ₹240

ರಕ್ತಸಿಕ್ತ 'ಮಹಾ ಹತ್ಯೆ'ಗಳತ್ತ ಹೊರಳು ನೋಟ...


ಮಹಾತ್ಮ ಗಾಂಧಿ


ಇಂದಿರಾ ಗಾಂಧಿ

ಕೆಲವು ದಿನಗಳ ಹಿಂದೆಯಷ್ಟೇ ಜಪಾನ್‌ನ ಮಾಜಿ ಪ್ರಧಾನಿ ಶಿಂಜೋ ಅಬೆ ಅವರ ಹತ್ಯೆ ನಡೆಯಿತು. ಇದೇನು ಜಗತ್ತಿನ ರಾಜಕೀಯ ನಾಯಕನ ಮೊದಲ ಹತ್ಯೆಯೇನೂ ಅಲ್ಲ. ಅದಕ್ಕೊಂದು ದೊಡ್ಡ ಕರಾಳ ಚರಿತ್ರೆಯೇ ಇದೆ. ಆ ಪುಟಗಳನ್ನು ತಿರುವಿದಾಗ...

ಕೆ.ಓಂಕಾರ ಮೂರ್ತಿ

'ಯು ಟೂ ಬ್ರೂಟಸ್'!!!

ನಂಬಿಕಸ್ತನಿಂದಲೇ ಇರಿತಕ್ಕೆ ಒಳಗಾಗಿ ಕೊನೆಯುಸಿರು ಬಿಡುವ ಮುನ್ನ ಜೂಲಿಯಸ್ ಸೀಸರ್ ಈ ರೀತಿ ಹೇಳಿದ್ದರು. ವಿಲಿಯಂ ಷೇಕ್ಸ್‌ಪಿಯರ್ ಬರೆದಿರುವ 'ಜೂಲಿಯಸ್ ಸೀಸರ್' ನಾಟಕದಲ್ಲಿ ಈ ಪ್ರಸ್ತಾಪವಿದೆ.

ಕ್ರಿಸ್ತಪೂರ್ವ 44ರಲ್ಲಿ ರೋಮ್‌ನ ಸರ್ವಾಧಿಕಾರಿ, ಮಿಲಿಟರಿ ಜನರಲ್ ಸೀಸರ್‌ನನ್ನು ಆತನ ನಂಬಿಕಸ್ತ ಮಾರ್ಕಸ್ ಬ್ರೂಟಸ್ ಸೇರಿದಂತೆ ಸೆನೆಟರ್‌ಗಳೇ ಇರಿದು ಕೊಂದು ಹಾಕಿದ್ದರು. ಅಧಿಕಾರದ ಲಾಲಸೆಯೇ ಕೊಲೆಯ ಪಿತೂರಿಗೆ ಕಾರಣವಾಗಿತ್ತು.

ಇಂಥ 'ಮಹಾ ಹತ್ಯೆ'ಗಳ ಇತಿಹಾಸವೇ ದೊಡ್ಡದು. ಅವೆಲ್ಲಾ ದುರಂತ ಅಂತ್ಯಗಳು, ದುರಂತ ಕಥೆಗಳು. ಮೊನ್ನೆ ಮೊನ್ನೆ ಯಾಮಾಗಾಮಿ ಟೆಟ್ಸುಯಾ ಎಂಬಾತ ಹಾರಿಸಿದ ಎರಡು ಗುಂಡುಗಳು ಜಪಾನ್ ದೇಶದ ಮಾಜಿ ಪ್ರಧಾನಿ ಶಿಂಜೋ ಅಬೆ ಅವರ ದೇಹ ಹೊಕ್ಕಿ ಕೊಂದು ಹಾಕಿದವು. ಹಂತಕ ಮನೆಯಲ್ಲೇ ಪಿಸ್ತೂಲ್ ತಯಾರಿಸಿದ್ದ ಎಂಬ ಮಾಹಿತಿ ಹೊರಬಿತ್ತು. ಧಾರ್ಮಿಕ ನಾಯಕನ್ನು ಕೊಲ್ಲಲು ಬಂದಿದ್ದ, ತಪ್ಪಿ ಅಬೆಯತ್ತ ಗುಂಡು ಹಾರಿತು ಎನ್ನಲಾಗಿದೆ. ಅದೇನೇ ಇರಲಿ; ಜಗತ್ತು ಮತ್ತೆ ಬೆಚ್ಚಿಬಿದ್ದಿದೆ.


ರಾಜೀವ್ ಗಾಂಧಿ

ಇತಿಹಾಸದಲ್ಲಿ ರಾಜ, ಮಹಾರಾಜರು, ಚಕ್ರವರ್ತಿಗಳು ಸಾಮ್ರಾಜ್ಯಗಳನ್ನು ಕೈವಶ ಮಾಡಿಕೊಳ್ಳಲು ಯುದ್ಧಭೂಮಿಯಲ್ಲಿ ಪರಸ್ಪರ ಬಡಿದಾಡಿಕೊಂಡು ವೀರ ಮರಣ ಅಪ್ಪಿದ್ದನ್ನೂ ಮೋಸದಿಂದ ಬೆನ್ನಿಗೆ ಚೂರಿಹಾಕಿದ್ದನ್ನೂ ಕೇಳಿದ್ದೇವೆ. ಆದರೆ, ಆಧುನಿಕ ಜಗತ್ತಿನ ಆಡಳಿತದ ಚುಕ್ಕಾಣಿ ಹಿಡಿದವರು, ಹಿಡಿಯುವ ಹಾದಿಯಲ್ಲಿರುವವರು, ಹೋರಾಟಗಾರರನ್ನು ಅಧಿಕಾರದ ಲಾಲಸೆಯಿಂದಲೋ, ಸೈದ್ಧಾಂತಿಕ ವಿರೋಧ, ಇನ್ಯಾವುದೋ ದ್ವೇಷ, ಯಾರೋ ಕ್ರಾಂತಿಕಾರಿಯ ಆಕ್ರೋಶಕ್ಕೋ, ಭಯೋತ್ಪಾದಕರ ಗುಂಡಿಗೋ, ಬಾಂಬ್ ದಾಳಿಗೋ ಬಲಿ ತೆಗೆದುಕೊಳ್ಳಲಾಗಿದೆ. ಆಗಾಗ್ಗೆ ರಕ್ತಸಿಕ್ತ ಅಧ್ಯಯನಗಳ ಪುಟಗಳು ತೆರೆದುಕೊಳ್ಳುತ್ತಲೇ ಇರುತ್ತವೆ.

ಜಪಾನ್ ದೇಶದ ಮಟ್ಟಿಗೆ ಪ್ರಧಾನಿ ಆಗಿದ್ದವರ ಹತ್ಯೆ ಹೊಸದೇನಲ್ಲ. ಏಕೆಂದರೆ ಶಿಂಜೋ ಅಬೆ ಅವರ ದುರಂತ ಅಂತ್ಯಕ್ಕೂ ಮುನ್ನ ನಾಲ್ವರು ಮಾಜಿ ಪ್ರಧಾನಿಗಳ ಹತ್ಯೆ ನಡೆದಿತ್ತು. ಅಬೆ 2006-07, 2012-2020ರ ಅವಧಿಯಲ್ಲಿ ಅಬೆ ಪ್ರಧಾನಿಯಾಗಿದ್ದರು. ಹಂತಕನ ಗುಂಡಿಗೆ ಬಲಿಯಾದಾಗಲೂ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರು. ಭಾರತದೊಂದಿಗೆ ತುಂಬಾ ಆತ್ಮೀಯವಾಗಿದ್ದರು. ಮೂವರು ವ್ಯಕ್ತಿಗಳನ್ನು ಮಾತ್ರ ಅಬೆ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಫಾಲೋ ಮಾಡುತ್ತಿದ್ದರು. ಅವರಲ್ಲಿ ಒಬ್ಬರು ಪ್ರಧಾನಿ ನರೇಂದ್ರ ಮೋದಿ. ಭಾರತದಲ್ಲೂ ಶೋಕಾಚರಣೆ ನಡೆಯಿತು.


ರಾಜೀವ್ ಹತ್ಯೆಯ ಬಳಿಕ ಸಂಗ್ರಹಿಸಿದ ಅವರ ಬಟ್ಟೆ, ಬೂಟು, ಸಾಕ್ಸ್‌ನ ಅವಶೇಷಗಳು

ಹೊರ ದೇಶಗಳ ಮಹಾನ್ ನಾಯಕರ ಹತ್ಯೆಯ ಬೆನ್ನತ್ತುವ ಮುನ್ನ ನಮ್ಮ ದೇಶದ ಮೂವರು ಮಹಾನ್ ನಾಯಕರ ಹತ್ಯೆಯತ್ತ (ಅಸಾಸಿನೇಷನ್) ಒಮ್ಮೆ ಕಣ್ಣು ಬೀರೋಣ.

ಶಾಂತಿಯ ದೂತನಿಗೆ ಗುಂಡಿಟ್ಟಿದ್ದ ಗೋಡ್ಸೆ: ಭಾರತ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಜೀವನವನ್ನೇ ಮುಡುಪಾಗಿಟ್ಟು, ಆ ಗುರಿ ಸಾಧಿಸಿ ಶಾಂತಿ ದೂತ ಎಂದೇ ಕರೆಸಿಕೊಂಡಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರಂಥವರೂ ದುಷ್ಟ ಶಕ್ತಿಗಳಿಂದ ಪಾರಾಗಲು ಸಾಧ್ಯವಾಗಲಿಲ್ಲ. 1948ರ ಜನವರಿ 30ರಂದು ದೆಹಲಿಯಲ್ಲಿ ಗಾಂಧಿ ತಾತನನ್ನು ನಾಥೂರಾಮ್ ಗೋಡ್ಸೆ ಸನಿಹದಿಂದಲೇ ಗುಂಡು ಹಾರಿಸಿ ಕೊಂದು ಬಿಟ್ಟ. 'ಹೇ ರಾಮ್' ಎನ್ನುತ್ತಲೇ ಗಾಂಧಿ ಕೊನೆಯುಸಿರೆಳೆದಿದ್ದರು. ಗೋಡ್ಸೆಯನ್ನು ಬಂಧಿಸಿ ಗಲ್ಲಿಗೇರಿಸಲಾಯಿತು.

ಅದು ಸ್ವಾತಂತ್ರ್ಯ ಭಾರತದ ಮೊದಲ 'ಮಹಾನ್ ನಾಯಕ'ರೊಬ್ಬರ ಹತ್ಯೆ. 'ಅಖಂಡ ಭಾರತ ವಿಭಜನೆಯಾಗಿ ಭಾರತ–ಪಾಕಿಸ್ತಾನ ಇಬ್ಭಾಗವಾಗಲು ಗಾಂಧಿ ಕಾರಣ, ವಿಪರೀತವಾಗಿ ಮುಸ್ಲಿಮರ ಓಲೈಕೆ ಮಾಡುತ್ತಿದ್ದಾರೆ' ಎಂಬ ಗೋಡ್ಸೆಯ ಆಲೋಚನೆ ಆತನನ್ನು ಈ ಕೃತ್ಯದಲ್ಲಿ ತೊಡಗಿಸಿತ್ತು.

ಅಂಗರಕ್ಷಕರೇ ಗುಂಡು ಹಾರಿಸಿದರು: ಪ್ರಧಾನಿಯಾಗಿ 'ಐರನ್ ಲೇಡಿ' ಎಂದೇ ಕರೆಸಿಕೊಳ್ಳುತ್ತಿದ್ದ ಇಂದಿರಾ ಗಾಂಧಿ ಅವರನ್ನು ದೆಹಲಿಯ ಸಫ್ದರ್‌ಜಂಗ್ ರಸ್ತೆಯ ನಿವಾಸದ ಮುಂದೆಯೇ ಅಂಗರಕ್ಷಕರೇ ಹತ್ಯೆ ಮಾಡಿದ್ದರು. ಬೆಳ್ಳಂಬೆಳಿಗ್ಗೆ ಇಡೀ ದೇಶ ಆಘಾತಕ್ಕೆ ಒಳಗಾಗಿತ್ತು. ದೇಶದ ಮೊದಲ ಮಹಿಳಾ ಪ್ರಧಾನಿಯ ದಾರುಣ ಅಂತ್ಯವಾಯಿತು. ಅಮೃತಸರದಲ್ಲಿನ ಸಿಖ್ಖರ ಪವಿತ್ರ ಸ್ವರ್ಣ ಮಂದಿರದ ಮೇಲೆ 'ಆಪರೇಷನ್ ಬ್ಲೂಸ್ಟಾರ್' ಕಾರ್ಯಾಚರಣೆ ಘೋಷಿಸಿ ಖಲಿಸ್ತಾನಿ ಉಗ್ರರ ಸದೆಬಡಿದ ಗಟ್ಟಿಗಿತ್ತಿ ಇಂದಿರಾ ಅವರನ್ನು 1984ರ ಅಕ್ಟೋಬರ್ 31ರಂದು ಬೆಳಿಗ್ಗೆ ಹತ್ಯೆ ಮಾಡಲಾಗಿತ್ತು. ಬರೋಬ್ಬರಿ 33 ಗುಂಡುಗಳು ಅವರ ದೇಹ ಹೊಕ್ಕಿದ್ದವು. ಘಟನೆಯ ನಂತರ ಹಂತಕರು ಶರಣಾದರು.

ಮಾನವ ಬಾಂಬ್: ಇಂದಿರಾ ಹತ್ಯೆ ನಂತರ ಪ್ರಧಾನಿ ಹುದ್ದೆಗೇರಿದವರು ಅವರ ಪುತ್ರ ರಾಜೀವ್ ಗಾಂಧಿ. 1991ರ ಮೇ 21ರಂದು ತಮಿಳುನಾಡಿನ ಶ್ರೀಪೆರಂಬದೂರಿನಲ್ಲಿ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಅವರನ್ನು ಎಲ್‌ಟಿಟಿಇ ಉಗ್ರರು ಮಾನವ ಬಾಂಬ್ ಸ್ಫೋಟಿಸಿ ಹತ್ಯೆ ಮಾಡಿದ್ದರು. ರಾಜೀವ್ ದೇಹ ಛಿದ್ರವಾಗಿತ್ತು.

ದೇಶದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಅವರು, ಜನಾಂಗೀಯ ಕಲಹಕ್ಕೆ ಸಿಲುಕಿದ್ದ ಶ್ರೀಲಂಕಾಕ್ಕೆ 1987ರಲ್ಲಿ ಭಾರತೀಯ ಶಾಂತಿಪಾಲನಾ ಪಡೆ (ಐಪಿಕೆಎಫ್) ಕಳುಹಿಸಿದ್ದೇ ಹತ್ಯೆಗೆ ಕಾರಣ ಎಂಬುದು ನಂತರದ ದಿನಗಳಲ್ಲಿ ಗೊತ್ತಾಯಿತು.

ಜಾನ್ ಕೆನಡಿ... ಹತ್ಯೆಗೆ ಕೆಲವೇ ಕ್ಷಣಗಳ ಮೊದಲು

'ವಿಶ್ವದ ದೊಡ್ಡಣ್ಣ' ಅಮೆರಿಕ ಅಧ್ಯಕ್ಷರೂ ಹತ್ಯೆಯಿಂದ ಪಾರಾಗಲು ಸಾಧ್ಯವಾಗಿಲ್ಲ. ಅಬ್ರಹಾಂ ಲಿಂಕನ್, ಜಾನ್ ಎಫ್. ಕೆನಡಿ ಅವರಂಥ ಮಹಾನಾಯಕರು ದುರಂತ ಅಂತ್ಯ ಕಂಡರು. 40ನೇ ಅಧ್ಯಕ್ಷ ರೊನಾಲ್ಡ್ ರೇಗನ್ ಹತ್ಯೆಗೂ ಯತ್ನ ನಡೆದಿತ್ತು. ಸ್ವಲ್ಪದಲ್ಲಿ ಬಚಾವ್ ಆಗಿದ್ದರು.

16ನೇ ಅಧ್ಯಕ್ಷರಾಗಿದ್ದ ಲಿಂಕನ್ ಅವರನ್ನು 1865ರ ಏಪ್ರಿಲ್ 14ರಂದು ಬರ್ಬರವಾಗಿ ಹತ್ಯೆ ಮಾಡಲಾಯಿತು. ಅದು ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿದ ಮಹಾನ್ ಹತ್ಯೆ. ವಾಷಿಂಗ್ಟನ್‌ನ ಫೋರ್ಡ್ಸ್ ರಂಗಮಂದಿರಕ್ಕೆ ನಾಟಕ ನೋಡಲು ಬಂದಿದ್ದ ಅವರನ್ನು ನಟ ಜಾನ್ ವಿಲ್ಕ್ಸ್ ಬೂಥ್ ಎಂಬಾತ ಗುಂಡಿಟ್ಟು ಹತ್ಯೆ ಮಾಡಿದ್ದ. ಲಿಂಕನ್ ಅಮೆರಿಕದಲ್ಲಿ ಗುಲಾಮಗಿರಿ ನಿಷೇಧಿಸುವ ಕಾನೂನು ತಂದು ಜಮೀನ್ದಾರರ ವಿರೋಧ ಕಟ್ಟಿಕೊಂಡಿದ್ದರು. ಕಪ್ಪು ವರ್ಣೀಯರಿಗೆ ಮತದಾನ ಹಕ್ಕು ಕೊಟ್ಟಿದ್ದರು. ಅದೇ ಲಿಂಕನ್ ಅವರಿಗೆ ತಿರುಗೇಟಾಯಿತು ಎಂಬುದು ನಂತರದ ವಿಶ್ಲೇಷಣೆ.

ಬೆನಜಿರ್ ಭುಟ್ಟೊ

1881ರ ಜುಲೈ 2ರಂದು ಅಮೆರಿಕದ 20ನೇ ಅಧ್ಯಕ್ಷ ಜೇಮ್ಸ್ ಗಾರ್‌ಫೀಲ್ಡ್ ಅವರ ಮೇಲೆ ಗುಂಡಿನ ದಾಳಿ ನಡೆದಿತ್ತು. 79 ದಿನಗಳ ನಂತರ ಪ್ರಾಣ ಬಿಟ್ಟರು. ತನಗೆ ಯಾವುದೇ ಸ್ಥಾನಮಾನ ನೀಡಲಿಲ್ಲ ಎಂಬ ಕಾರಣಕ್ಕೆ ಚಾರ್ಲ್ಸ್ ಎಂಬಾತ ಈ ಹತ್ಯೆಮಾಡಿದ್ದ. ಅಮೆರಿಕದ 25ನೇ ಅಧ್ಯಕ್ಷರಾಗಿದ್ದ ವಿಲಿಯಂ ಮೆಕನ್ಲಿ ಅವರನ್ನು 1901ರ ಸೆಪ್ಟೆಂಬರ್‌ನಲ್ಲಿ ನ್ಯೂಯಾರ್ಕ್‌ನಲ್ಲಿ ಗುಂಡಿಟ್ಟು ಸಾಯಿಸಲಾಯಿತು. ಆರ್ಥಿಕ ಹಿಂಜರಿತದಲ್ಲಿ ಕೆಲಸ ಕಳೆದುಕೊಂಡಿದ್ದ ಲಿಯೋನ್ ಜೋಲ್ಗಾಸ್ ಸಿಟ್ಟಿಗೆದ್ದು ಈ ಹತ್ಯೆ ಮಾಡಿದ್ದ.

35ನೇ ಅಧ್ಯಕ್ಷರಾಗಿದ್ದ ಕೆನಡಿ ಅವರನ್ನು 1963ರ ನವೆಂಬರ್ 22ರಂದು ಟೆಕ್ಸಾಸ್ ರಾಜಧಾನಿ ಡಲ್ಲಾಸ್‌ನ ರಸ್ತೆಯಲ್ಲಿ ಹತ್ಯೆ ಮಾಡಿದ್ದರು. ಆಡಳಿತದಲ್ಲಿದ್ದಾಗಲೇ ಹತ್ಯೆಯಾದ ಅಮೆರಿಕದ ನಾಲ್ಕನೇ ಅಧ್ಯಕ್ಷ. ಚುನಾವಣಾ ರ‍್ಯಾಲಿಯಲ್ಲಿ ಭಾರಿ ಜನಸ್ತೋಮದ ನಡುವೆ ತೆರೆದ ಕಾರಿನಲ್ಲಿ ತೆರಳುತ್ತಿದ್ದಾಗ ಈ ದುರಂತ ನಡೆದಿತ್ತು. ಒಂದು ಗುಂಡು ತಲೆಗೆ, ಮತ್ತೊಂದು ಗುಂಡು ಕೊರಳಿಗೆ ನುಸುಳಿತ್ತು. ಸಾವಿಗೆ ಕಾರಣ ಗೊತ್ತಾಗಲೇ ಇಲ್ಲ. ಪೊಲೀಸರ ವಶದಲ್ಲಿದ್ದ ಹಂತಕ ಲೀ ಹಾರ್ವೆ ಓಸ್ವಾಲ್ಡ್‌ನನ್ನು ಜಾಕ್ ರುಬಿ ಎಂಬಾತ ಗುಂಡಿಟ್ಟು ಹತ್ಯೆ ಮಾಡಿದ್ದ!

ಅಮೆರಿಕದ ಮಾನವ ಹಕ್ಕುಗಳ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರನ್ನು 1968ರ ಏಪ್ರಿಲ್ 4ರಂದು ಹೋಟೆಲ್‌ನ ಬಾಲ್ಕನಿಯಲ್ಲಿ ಗುಂಡಿಟ್ಟು ಹತ್ಯೆ ಮಾಡಲಾಯಿತು. ಅವರು ವರ್ಣಭೇದ ನೀತಿ ವಿರುದ್ಧ, ಬಿಳಿಯರ ವಿರುದ್ಧ ದೊಡ್ಡ ಹೋರಾಟ ರೂಪಿಸಿದ್ದರು. ಕಪ್ಪು ವರ್ಣೀಯರನ್ನು ಒಂದುಗೂಡಿಸಲು ಪ್ರಯತ್ನ ನಡೆಸಿದ್ದರು.

ಅಷ್ಟೇ ಏಕೆ; ಪಕ್ಕದ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ನಾಯಕರನ್ನೂ ಹತ್ಯೆ ಮಾಡಲಾಗಿದೆ. ಬಾಂಗ್ಲಾದೇಶದ ಪಿತಾಮಹ ಶೇಖ್ ಮುಜಿಬರ್ ರೆಹಮಾನ್ ಅವರನ್ನು 1975ರ ಆಗಸ್ಟ್ 15ರಂದು ಢಾಕಾದಲ್ಲಿ ಗುಂಡಿಟ್ಟು ಸಾಯಿಸಲಾಯಿತು. ಮೊದಲ ಅಧ್ಯಕ್ಷ, ಮೊದಲ ಪ್ರಧಾನಿಯಾಗಿ ಅವರು ಕಾರ್ಯನಿರ್ವಹಿಸಿದ್ದರು. ಆ ದೇಶದ ಅಧ್ಯಕ್ಷರಾಗಿದ್ದ ಜಯೂರ್ ರೆಹಮಾನ್ ಅವರನ್ನು 1981ರಲ್ಲಿ ಹತ್ಯೆ ಮಾಡಲಾಯಿತು.

ಪಾಕಿಸ್ತಾನದ ಮೊದಲ ಪ್ರಧಾನಿ ಲಿಯಾಖತ್ ಅಲಿ ಖಾನ್ ಅವರನ್ನು 1951ರ ಅಕ್ಟೋಬರ್ 16ರಂದು ರಾವಲ್ಪಿಂಡಿಯಲ್ಲಿ ಪ್ರಚಾರದಲ್ಲಿ ತೊಡಗಿದ್ದಾಗ ದುಷ್ಕರ್ಮಿಗಳು ಗುಂಡಿಟ್ಟು ಹತ್ಯೆ ಮಾಡಿದ್ದರು. 2007ರ ಡಿಸೆಂಬರ್ 27ರಂದು ರಾವಲ್ಪಿಂಡಿಯಲ್ಲಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಪಾಕ್ ಮಾಜಿ ಪ್ರಧಾನಿ ಬೆನಜಿರ್ ಭುಟ್ಟೊ ಅವರು ಆತ್ಮಾಹುತಿ ದಾಳಿಗೆ ಬಲಿಯಾದರು. ಒಂಬತ್ತು ವರ್ಷಗಳ ಬಳಿಕ ಪಾಕ್‌ಗೆ ಬಂದು ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗಿದ್ದರು. ಇಸ್ಲಾಮಿಕ್ ಉಗ್ರರು ಬಾಂಬ್ ದಾಳಿ ನಡೆಸಿದ್ದರು.

ನೇಪಾಳದ ರಾಜ ಬೀರೇಂದ್ರ, ಶ್ರೀಲಂಕಾದ ರಣಸಿಂಘೆ ಪ್ರೇಮದಾಸ ಸೇರಿದಂತೆ ಹಲವು ದೇಶಗಳ ನಾಯಕರ ಹತ್ಯೆ ನಡೆದಿದೆ. ರಾಜಕೀಯ, ದ್ವೇಷ, ಅಧಿಕಾರ ಲಾಲಸೆ ಹತ್ಯೆಗೆ ಕಾರಣ. ಈ ರಕ್ತಸಿಕ್ತ ಚರಿತ್ರೆಗೆ ಅಂತ್ಯವಿದೆಯೇ?!

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮೋಡಿ ಮಾಯಾ ಚೌಕ

ಮಕ್ಕಳೇ ನೀವು ಮೋಡಿ ಎಂಬ ಆಟವನ್ನು ನೋಡಿರಬೇಕಲ್ಲಾ. ಆದರೆ, ಅದೊಂದು ರಂಗ ಹೊಯ್ದು ಆಡುವ ಮಾಯಾ ಆಟ. ಅದೇ ಮಾದರಿಯಲ್ಲಿ ಇಲ್ಲಿ ಪ್ರತಿ ಚೌಕದಲ್ಲಿ ಒಂದೊಂದು ಅಕ್ಷರ ಕೊಟ್ಟಿದೆ. ಆ ಅಕ್ಷರಕ್ಕೆ ಒಂದೊಂದು ಕಳೆಯುವ ಲೆಕ್ಕವನ್ನು ಕೊಟ್ಟಿದೆ (ಸುಳಿವು ಗಮನಿಸಿ). ಪ್ರತಿ ಲೆಕ್ಕವನ್ನು ಮಾಡಿ ಉತ್ತರವನ್ನು ಆ ಅಕ್ಷರಕ್ಕೆ ತುಂಬಿದರೆ ಅದೊಂದು ತಂತಾನೇ ಮಾಯಾಚೌಕವಾಗುವುದು. ಎಡದಿಂದ ಬಲಕ್ಕೆ ಮೇಲಿನಿಂದ ಕೆಳಗೆ ಮೂಲೆಯಿಂದ ಮೂಲೆಗೆ ಹೇಗೆ ಕೂಡಿದರೂ ಉತ್ತರ 34 ಬರುತ್ತದೆ. ಲೆಕ್ಕ ಮಾಡಿ ಉತ್ತರ ತುಂಬಿ. ಮಾಯಾ ಚೌಕ ರಚಿಸಿ.

A	B	C	D	= 34
E	F	G	H	= 34
I	J	K	L	= 34
M	N	O	P	= 34
34 ↙ 34	34	34	34	↘ 34

ಸುಳಿವು

A	795 - 793	I	864 - 795
B	299 - 286	J	300 - 294
C	513 - 508	K	45 - 30
D	685 - 674	L	10 - 6
E	784 - 768	M	28 - 21
F	70 - 67	N	24 - 12
G	200 - 190	O	100 - 99
H	225 - 220	P	1,038 - 1,024

ಅದಲು ಬದಲು ಕಂಚಿ ಕದಲು

1. ಪಾದ ಕೊಡಪ = ________
2. ನಾ ಕವಿಯ ಬಾಲಕ = ________
3. ಹತ್ತು ಕರ = ________
4. ಭಾವಿ ಸಂತ = ________

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಸರಿಯಾದ ಪದ ರಚಿಸಿ

	ಸ	ವ	ಸುಳಿವು
1			ಅಗ್ಗ
2			ಉಪಕಾರ
3			ಒಂದು ಸಿರಿಧಾನ್ಯ
4			ಮರಣ
5			ರುಚಿ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಅನುಕರಣಾ ಪದಗಳನ್ನು ಹೊಂದಿಸಿ

1	ಏನಾದರೊಂದು ಮಾತನಾಡುತ್ತಿರು	A	ಕುಂಯ್ ಕುಂಯ್
2	ಒದ್ದಾಡುವುದು	B	ಗಿರಗಿರ
3	ಕೆಸರು ತುಳಿಯುವುದು	C	ಕಿಲಕಿಲ
4	ಕಣ್ಣು ಮಿಟುಕಿಸುವುದು	D	ವಟರ್ ವಟರ್
5	ಕುಣಿಯುವುದು	E	ಘಮಘಮ
6	ಕಪ್ಪೆಯ ಸದ್ದು	F	ಪಚಪಚ
7	ಓಡುವುದು	G	ಜುಣು ಜುಣು
8	ದಿಟ್ಟಿಸಿ ನೋಡುವುದು	H	ಥಕತ್ಯೆ ಥಕತ್ಯೆ
9	ಬೇರೆಯವರಿಗಾಗಿ ಮರುಗುವುದು	I	ಥರಥರ
10	ತುತ್ತು ನುಂಗುವುದು	J	ಕಿರ್ ಕಿರ್
11	ಬಾಗಿಲ ಸದ್ದು	K	ವಟವಟ
12	ಬಹಳ ಚಿಂತಿಸು	L	ಡುಬುಡುಬು
13	ನೀರು ಹರಿಯುವುದು	M	ದುಡುದುಡು
14	ನೀರಿನಲ್ಲಿ ಬಿಂದಿಗೆ ಮುಳುಗುವುದು	N	ವಿಲಿವಿಲಿ
15	ಹೆದರಿ ನಡುಗುವುದು	O	ಮಿಜಿಮಿಜಿ
16	ಹೂವಿನ ಪರಿಮಳ	P	ದುರುದುರು
17	ಫ್ಯಾನ್ ಸುತ್ತುವುದು	Q	ಪಿಳಿಪಿಳಿ
18	ನಗುವುದು	R	ಗುಳುಂ ಗುಳುಂ
19	ತಣ್ಣನೆಯ ಅನುಭವ	S	ಮರಮರ
20	ನಾಯಿ ಸದ್ದು ಮಾಡುವುದು	T	ಕಲಕಲ

ಕರಡಿ ಹೇಳಿದ ಗುಟ್ಟು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಕಮಲಾಪುರವೆಂಬ ಊರಿನಲ್ಲಿ ನಾಗಣ್ಣ ಮತ್ತು ಶಿವಣ್ಣ ಎಂಬ ಇಬ್ಬರು ಗೆಳೆಯರು ಇದ್ದರು. ಒಟ್ಟಿಗೇ ದುಡಿಯಲು ಹೋಗುತ್ತಿದ್ದರು


ಒಮ್ಮೆ ಅವರಿಬ್ಬರೂ ಕಟ್ಟಿಗೆ ತರಲು ದಟ್ಟ ಕಾಡಿಗೆ ಹೋದರು. ಆ ಕಾಡಿನಲ್ಲಿ ಸಾಕಷ್ಟು ಕಾಡುಪ್ರಾಣಿಗಳೂ ಇದ್ದವು

ಆ ದಟ್ಟ ಕಾಡಿನಲ್ಲಿ ಇದ್ದಕ್ಕಿದ್ದಂತೆಯೇ ಕರಡಿಯೊಂದು ಕಾಣಿಸಿತು. ಅದು ಈ ಗೆಳೆಯರಿದ್ದ ಕಡೆಗೆ ಧಾವಿಸುತ್ತಿತ್ತು. ನಾಗಣ್ಣ, ಶಿವಣ್ಣ ಭಯಗೊಂಡರು

ಹಾಗೆ ಧಾವಿಸಿ ಬಂದ ಕರಡಿಯು ಇವರ ಮೇಲೆ ಎರಗಲು ಮುಂದಾಯಿತು. ತಕ್ಷಣವೇ ನಾಗಣ್ಣನು ತಪ್ಪಿಸಿಕೊಂಡು ಪಕ್ಕದ ಮರ ಏರಿ ಕುಳಿತನು. ಆದರೆ, ಶಿವಣ್ಣನಿಗೆ ಮರ ಏರಲು ಆಗಲಿಲ್ಲ

ಅಸಹಾಯಕನಾದ ಶಿವಣ್ಣ ಸ್ವಲ್ಪ ದೂರ ಹೋಗಿ ಸತ್ತಂತೆ ನಟಿಸುತ್ತಾ ಮಲಗಿಬಿಟ್ಟ. ಕರಡಿ ಶಿವಣ್ಣನ ಬಳಿ ಬಂದು ಮುಖ, ಕಿವಿ ಮೂಸಿ ನೋಡಿತು. ಹಾಗೇ ಹೋಯಿತು

ಮರದಿಂದ ಇಳಿದ ನಾಗಣ್ಣ, ಶಿವಣ್ಣನಿಗೆ ಕರಡಿಯು ಕಿವಿಯಲ್ಲಿ ಏನು ಹೇಳಿತು ಎಂದು ಕೇಳಿದ. ಸಮಯಕ್ಕೆ ಸಹಾಯ ಮಾಡದ ಗೆಳೆಯ ಮಿತ್ರದ್ರೋಹಿ ಎಂದಿತು ಎಂದ ನಾಗಣ್ಣ. ಶಿವಣ್ಣ ಪೆಚ್ಚಾದ

ಪದ ಶೋಧ

ಇಲ್ಲಿ ಕೊಟ್ಟಿರುವ ಅಕ್ಷರ ಬಳ್ಳಿಯ ಸಾಲಿನಲ್ಲಿ ನಿಮಗೆ ಬೇಕಾದ ಒಂದು ಬಳ್ಳಿಯ ಎರಡು ಅಕ್ಷರ ಆಯ್ಕೆ ಮಾಡಿಕೊಂಡು ಮುಂದೆ ಕೊಟ್ಟ ಅರ್ಥಕ್ಕೆ ಸಮನಾದ ಪದ ಹುಡುಕಿ

ಉದಾ:

1	ಕಾ ಕಿ	('ಕ'ಕಾರ ಬಳ್ಳಿಯಲ್ಲಿ ಒಂದು ಹಣ್ಣಿನ ಹೆಸರು)
2		('ಖ' ಕಾರ ಬಳ್ಳಿಯಲ್ಲಿ ಒಂದು ಆಟದ ಹೆಸರು)
3		('ಗ'ಕಾರ ಬಳ್ಳಿಯಲ್ಲಿ ಒಂದು ಪಕ್ಷಿ)
4		('ಜ'ಕಾರ ಬಳ್ಳಿಯಲ್ಲಿ ಒಂದು ಹೂವು)
5		('ತ'ಕಾರ ಬಳ್ಳಿಯಲ್ಲಿ ಅಜ್ಜ)
6		('ಪ'ಕಾರ ಬಳ್ಳಿಯಲ್ಲಿ ಪುಣ್ಯದ ವಿರುದ್ಧ ಪದ)
7		('ಲ'ಕಾರ ಬಳ್ಳಿಯಲ್ಲಿ ಜೋಗುಳ)
8		('ಸ'ಕಾರ ಬಳ್ಳಿಯಲ್ಲಿ ಪಸರಿಸು)
9		('ಸ'ಕಾರ ಬಳ್ಳಿಯಲ್ಲಿ ಅಕ್ಕಿ ಕಾಳು)
10		('ಸ'ಕಾರ ಬಳ್ಳಿಯಲ್ಲಿ ಮಗನ ಹೆಂಡತಿ)
11		('ಲ'ಕಾರ ಬಳ್ಳಿಯಲ್ಲಿ ಪವಾಡ)
12		('ಗ'ಕಾರ ಬಳ್ಳಿಯಲ್ಲಿ ಶಿವನ ಸತಿ)
13		('ತ'ಕಾರ ಬಳ್ಳಿಯಲ್ಲಿ ಲೋಹದ ದಾರದಂತಹ ಎಳೆ)
14		('ತ'ಕಾರ ಬಳ್ಳಿಯಲ್ಲಿ ರಂಧ್ರ)
15		('ಪ'ಕಾರ ಬಳ್ಳಿಯಲ್ಲಿ ಒಬ್ಬ ಪ್ರಸಿದ್ಧ ಕವಿ)

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ –20 ಮ್ಯಾಚ್
1-I 2-E 3-B 4-M 5-H 6-C 7- K 8-F 9-N 10-P 11-J 12-R 13-O 14-Q 15-S 16-T 17-M 18-D 19-G 20-A

ಜಾಣಪದ ಆಟ: 1. ಹವೆ 2. ಹಾವ 3. ಹಾವು 4. ಹವಿ 5. ಹೂವು

ಅದಲುಬದಲು ಕಂಚಿ ಕದಲು
1. ಮಾಮಾರಕುರಿ 2. ಜಗದಗಲ 3. ವಿನಾಯಿತಿ 4. ಸಾಗರದಡಿ

ಅಕ್ಷರ ಆಟ 1. ಮಗಳು 2. ಕಂಗಳು 3. ಅಗಳು 4. ತೆಗಳು 5. ಹೊಗಳು 6. ಬೊಗಳು 7. ಬೈಗಳು

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಶ್ರೀನಿಧಿ ದಾಸರ್, ಚಳಗೇರಿ (ರಾಣೆಬೆನ್ನೂರು)

ಪ್ರಣತಿ ಆರ್., ಬೆಂಗಳೂರು

ನಂದಿತಾ ಎಸ್.ಎಂ., ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಲಾಂಗ್‌ಜಂಪ್, ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಸಾಧನೆ

ಫೈನಲ್‌ಗೆ ಮುರಳಿ, ಅವಿನಾಶ್

ಯೂಜೀನ್, ಅಮೆರಿಕ (ಪಿಟಿಐ): ಭಾರತದ ಭರವಸೆಯ ಅಥ್ಲೀಟ್ ಮುರಳಿ ಶ್ರೀಶಂಕರ್, ಇಲ್ಲಿ ಆರಂಭವಾದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಲಾಂಗ್‌ಜಂಪ್‌ನಲ್ಲಿ ಫೈನಲ್ ಪ್ರವೇಶಿಸಿದರು. ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎಂಬ ಗೌರವ ಅವರಿಗೆ ಒಲಿಯಿತು.

ಶುಕ್ರವಾರ ನಡೆದ ಅರ್ಹತಾ ಸ್ಪರ್ಧೆಯಲ್ಲಿ ಅವರು 8 ಮೀ. ದೂರ ಜಿಗಿದರು. ತಮ್ಮ ಎರಡನೇ ಪ್ರಯತ್ನದಲ್ಲಿ ಈ ಸಾಧನೆ ಮೂಡಿಬಂತು. 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಹಾಗೂ ಒಟ್ಟಾರೆಯಾಗಿ ಏಳನೇ ಸ್ಥಾನ ಪಡೆದು ಫೈನಲ್‌ಗೆ ಲಗ್ಗೆಯಿಟ್ಟರು. ಭಾರತೀಯ ಕಾಲಮಾನ ಭಾನುವಾರ ಬೆಳಿಗ್ಗೆ 6.50ಕ್ಕೆ ಫೈನಲ್ ನಡೆಯಲಿದೆ.

ಅಂಜು ಬಾಬಿ ಜಾರ್ಜ್ ಅವರು 2003 ರಲ್ಲಿ ಪ್ಯಾರಿಸ್‌ನಲ್ಲಿ ನಡೆದಿದ್ದ ಕೂಟದಲ್ಲಿ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಫೈನಲ್ ಪ್ರವೇಶಿ ಸಿದ್ದರಲ್ಲದೆ, ಕಂಚಿನ ಪದಕ ಜಯಿಸಿದ್ದರು. ಪುರುಷರ ವಿಭಾಗದಲ್ಲಿ ಯಾರೂ ಇದುವರೆಗೆ ಫೈನಲ್ ಪ್ರವೇಶಿಸಿರಲಿಲ್ಲ.

ಲಾಂಗ್‌ಜಂಪ್ ಕಣದಲ್ಲಿದ್ದ ಭಾರತದ ಇತರ ಇಬ್ಬರು ಸ್ಪರ್ಧಿಗಳಾದ ಜೆಸ್ವಿನ್ ಆಲ್ಡ್ರಿನ್ ಮತ್ತು ಮಹಮ್ಮದ್ ಅನೀಸ್ ಯಹ್ಯಾ ಫೈನಲ್ ಪ್ರವೇಶಿಸಲು ವಿಫಲರಾದರು. 'ಎ' ಗುಂಪಿನಲ್ಲಿದ್ದ ಇವರಿಬ್ಬರು ಕ್ರಮವಾಗಿ 7.79 ಹಾಗೂ 7.73 ಮೀ. ಸಾಧನೆ ಮಾಡಿದರು.

ಲಾಂಗ್‌ಜಂಪ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಪಾಲ್ಗೊಂಡ ಮುರಳಿ ಶ್ರೀಶಂಕರ್ –ಪಿಟಿಐ ಚಿತ್ರ

8.15 ಮೀ. ಸಾಧನೆ ಮಾಡಿದವರು ಅಥವಾ ಮೊದಲ 12 ಸ್ಥಾನಗಳನ್ನು ಪಡೆದ ಅಥ್ಲೀಟ್‌ಗಳು ಮಾತ್ರ ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡರು.

ಅರ್ಹತಾ ಸುತ್ತಿನಲ್ಲಿ ಜಪಾನ್‌ನ ಯೂಕಿ ಹಶಿಯೊಕ (8.18 ಮೀ.) ಮತ್ತು ಅಮೆರಿಕದ ಮಾರ್ಕಿ ಡೆಂಡಿ (8.16 ಮೀ.) ಮಾತ್ರ 8.15 ಮೀ. ಗಿಂತ ಹೆಚ್ಚಿನ ಸಾಧನೆ ಮಾಡಿದರು. ಗ್ರೀಸ್‌ನ ಒಲಿಂಪಿಕ್ ಚಾಂಪಿಯನ್ ಮಿಲ್ಟಿಯಾಡಿಸ್ ಟೆಂಟೊಗ್ಲೊ 8.03 ಮೀ. ಜಿಗಿದರು.

ಶ್ರೀಶಂಕರ್ ಅವರು ಈ ಋತುವಿನಲ್ಲಿ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದು, ಏಪ್ರಿಲ್‌ನಲ್ಲಿ ನಡೆದಿದ್ದ ಫೆಡರೇಷನ್ ಕಪ್‌ನಲ್ಲಿ 8.36 ಮೀ. ಸಾಧನೆ ಮಾಡಿದ್ದರು. ಆ ಬಳಿಕ ನಡೆದ ಎರಡು ಕೂಟಗಳಲ್ಲಿ 8.31 ಹಾಗೂ 8.23 ಮೀ. ದೂರ ದಾಖಲಿಸಿದ್ದರು.

ಫೈನಲ್‌ಗೆ ಅವಿನಾಶ್ ಸಬ್ಳೆ: ಭಾರತದ ಅವಿನಾಶ್ ಸಬ್ಳೆ ಅವರು 3,000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯ ಫೈನಲ್ ಪ್ರವೇಶಿಸಿದರು. ಮೂರನೇ ಹೀಟ್ಸ್‌ನಲ್ಲಿ ಪಾಲ್ಗೊಂಡ ಅವರು 8 ನಿ. 18.34 ಸೆ.ಗಳೊಂದಿಗೆ ಮೂರನೇ ಸ್ಥಾನ ಪಡೆದರು.

ಕಳೆದ ತಿಂಗಳು ನಡೆದ ಡೈಮಂಡ್ ಲೀಗ್‌ನಲ್ಲಿ ಅವಿನಾಶ್ 8 ನಿ. 12.48 ಸೆ. ಸಾಧನೆಯೊಂದಿಗೆ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡಿದ್ದರು.

ಎಡವಿದ ನಡಿಗೆ ಸ್ಪರ್ಧಿಗಳು

ಭಾರತದ ಪುರುಷ ಮತ್ತು ಮಹಿಳಾ ನಡಿಗೆ ಸ್ಪರ್ಧಿಗಳಿಗೆ ನಿರಾಸೆ ಎದುರಾಯಿತು. ಈ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿದ ಭಾರತದ ಮೊದಲ ಸ್ಪರ್ಧಿ ಪ್ರಿಯಾಂಕ ಗೋಸ್ವಾಮಿ ಅವರು ಮಹಿಳೆಯರ ವಿಭಾಗದ 20 ಕಿ.ಮೀ. ಸ್ಪರ್ಧೆಯಲ್ಲಿ 34ನೇ ಸ್ಥಾನ ಪಡೆದರು. ಕಣದಲ್ಲಿ ಒಟ್ಟು 36 ಸ್ಪರ್ಧಿಗಳಿದ್ದರು. ಅವರು 1 ಗಂಟೆ 38.10 ನಿ.ಗಳನ್ನು ತೆಗೆದುಕೊಂಡರು.

ಪುರುಷರ ವಿಭಾಗದಲ್ಲಿ ಸಂದೀಪ್ ಕುಮಾರ್ 1 ಗಂಟೆ 31.58 ನಿಮಿಷಗಳಲ್ಲಿ ಸ್ಪರ್ಧೆ ಪೂರೈಸಿ, 43 ಅಥ್ಲೀಟ್‌ಗಳಲ್ಲಿ 40ನೇ ಸ್ಥಾನ ಪಡೆದುಕೊಂಡರು. ಅವರು ವೈಯಕ್ತಿಕ ಶ್ರೇಷ್ಠ ಸಮಯಕ್ಕಿಂತ (1ಗಂ. 20.16 ನಿ.) ತುಂಬಾ ಹಿಂದೆ ಬಿದ್ದರು.

ಷಾಟ್‌ಪಟ್ ಸ್ಪರ್ಧಿ ತಜಿಂದರ್‌ಪಾಲ್ ಸಿಂಗ್ ತೂರ್, ತೊಡೆಯ ಸ್ನಾಯು ಸೆಳೆತದ ಕಾರಣ ಸ್ಪರ್ಧೆಯಿಂದ ಹಿಂದೆ ಸರಿದರು. ನಾಲ್ಕು ದಿನಗಳ ಹಿಂದೆ ಅವರು ಗಾಯಗೊಂಡಿದ್ದರು. ಸ್ಪರ್ಧೆಗೆ ಮುನ್ನ ಒಂದಷ್ಟು ಥ್ರೋಗಳನ್ನು ನಡೆಸಿದರೂ, ಅಂತಿಮವಾಗಿ ಹಿಂದೆ ಸರಿಯಲು ನಿರ್ಧರಿಸಿದರು.

ಮುಖ್ಯಾಂಶಗಳು

- ಲಾಂಗ್‌ಜಂಪ್: ಫೈನಲ್ ಪ್ರವೇಶಿಸಿದ ಭಾರತದ ಮೊದಲ ಅಥ್ಲೀಟ್
- ಅರ್ಹತಾ ಸುತ್ತಿನಲ್ಲಿ 8 ಮೀ. ಸಾಧನೆ
- ಜೆಸ್ವಿನ್ ಆಲ್ಡ್ರಿನ್, ಅನೀಸ್ ಯಹ್ಯಾಗೆ ನಿರಾಸೆ

ಪ್ರಶಸ್ತಿ ಸುತ್ತಿಗೆ ಸಿಂಧು ಲಗ್ಗೆ

ಸಿಂಗಪುರ ಓಪನ್: ಫೈನಲ್‌ನಲ್ಲಿ ವಾಂಗ್ ಜಿ ಎದುರಾಳಿ

ಸಿಂಗಪುರ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ಪಿ.ವಿ. ಸಿಂಧು ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಶನಿವಾರ ಇಲ್ಲಿ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸಿಂಧು 21-15, 21-7ರಿಂದ ಜಪಾನ್‌ನ ಸಿನಾ ಕವಾಕಮಿ ಅವರನ್ನು ಮಣಿಸಿದರು. 32 ನಿಮಿಷಗಳ ಈ ಪಂದ್ಯದಲ್ಲಿ ಭಾರತದ ಆಟಗಾರ್ತಿ ಸಂಪೂರ್ಣ ಪಾರಮ್ಯ ಮೆರೆದರು.

ಈ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿರುವ ಸಿಂಧು, ಈ ಋತುವಿನಲ್ಲಿ ಮೊದಲ ಸೂಪರ್ 500 ಟೂರ್ನಿಯ ಟ್ರೋಫಿ ಗೆಲುವಿಗೆ ಇನ್ನೊಂದೇ ಹೆಜ್ಜೆ ದೂರದಲ್ಲಿದ್ದಾರೆ.

ಸಿಂಧು ಅವರು ಫೈನಲ್‌ನಲ್ಲಿ ಚೀನಾದ ವಾಂಗ್ ಜಿ ಯಿ ಅವರನ್ನು ಎದುರಿಸುವರು. ವಾಂಗ್ ಅವರು ಏಷ್ಯನ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತೆ. ಈ ಟೂರ್ನಿಯ ಸೆಮಿಫೈನಲ್‌ನಲ್ಲಿ ಅವರು 21-14, 21-14ರಿಂದ ಒಹೊರಿ ಆಯಾ ಅವರನ್ನು ಮಣಿಸಿದರು. ಸಿಂಧು ಈ ವರ್ಷದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ವಾಂಗ್ ಎದುರು ಗೆದ್ದಿದ್ದರು.

ಫೈನಲ್ ಪಂದ್ಯ ಆರಂಭ: ಬೆಳಿಗ್ಗೆ 10.30 (ಭಾರತೀಯ ಕಾಲಮಾನ)

ನೇರಪ್ರಸಾರ: ಸ್ಪೋರ್ಟ್ಸ್ 18

ಭಾರತದ ಪಿ.ವಿ.ಸಿಂಧು ಆಟದ ಪರಿ– ಎಎಫ್‌ಪಿ ಚಿತ್ರ

ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ ರೇಸ್ ಇಂದು: ಗರಿಗೆದರಿದ ಕುತೂಹಲ

ಮೊಜಿಟೊ–ಫಿಲಾಸಫಿ ಪೈಪೋಟಿ

• ರವಿಕುಮಾರ್

ಬೆಂಗಳೂರು: ರೇಸ್ ಪ್ರಿಯರ ಕುತೂಹಲಕ್ಕೆ ಕಾರಣವಾಗಿರುವ ಬೆಂಗಳೂರು ಬೇಸಿಗೆ ಡರ್ಬಿ ಭಾನುವಾರ ನಡೆಯಲಿದೆ.

'ಬೆಟ್ ವೇ' ಇದೇ ಮೊದಲ ಬಾರಿಗೆ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರಾಯೋಜಕತ್ವ ವಹಿಸಿಕೊಂಡಿದೆ. ವಿದೇಶಿ ಸಂಸ್ಥೆಯೊಂದು ಭಾರತದಲ್ಲಿ ರೇಸ್‌ಗೆ ಪ್ರಾಯೋಜಕತ್ವ ವಹಿಸಿಕೊಂಡಿರುವುದು ಇದೇ ಮೊದಲು. ಪ್ರತಿಷ್ಠಿತ ಡರ್ಬಿ ರೇಸ್‌ಗೆ 'ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ' ಎಂದು ನಾಮಕರಣ ಮಾಡಲಾಗಿದೆ.

ಡರ್ಬಿ ರೇಸ್ ಕಣದಲ್ಲಿ 10 ಗಂಡು ಮತ್ತು 3 ಹೆಣ್ಣು ಕುದುರೆಗಳು ಸ್ಪರ್ಧೆಯಲ್ಲಿವೆ. ಅವುಗಳಲ್ಲಿ ಕ್ರಮವಾಗಿ 1,600 ಮೀಟರ್ಸ್ ದೂರದ ಕೋಲ್ಟ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಮತ್ತು ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್‌ಗಳನ್ನು ಗೆದ್ದಿರುವ ಮೊಜಿಟೊ ಹಾಗೂ ಫಿಲಾಸಫಿ ನಡುವೆ ತುರುಸಿನ ಸ್ಪರ್ಧೆ ನಿರೀಕ್ಷಿಸಲಾಗಿದೆ.

ಇವೆರಡೂ ಕುದುರೆಗಳು ದೂರದ ರೇಸ್‌ನಲ್ಲಿ ಒಂದೇ ರೀತಿಯ 'ಸ್ಟೇಯಿಂಗ್ ಸಾಮರ್ಥ್ಯ' ವನ್ನು ಪ್ರದರ್ಶಿಸಿವೆ. ಆದರೂ ಎಂ.ಕೆ.ಜಾಧವ್ ತರಬೇತಿಯಲ್ಲಿರುವ ಮೊಜಿಟೊ ತುಸು ಮೇಲುಗೈ ಹೊಂದಿದೆ.

ಮೊಜಿಟೊ ಗೆದ್ದ 'ಕೋಲ್ಟ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ರೇಸ್' ನ ಕೊನೆ ಗಳಿಗೆಯಲ್ಲಿ ವೇಗವಾಗಿ ಓಡಿ ಬಂದು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದಿರುವ ಆರ್ಥರ್ ಮತ್ತು ಲಿಯೊನಾರ್ಡೊ ಕುದುರೆಗಳನ್ನು ಕೂಡಾ 2,000 ಮೀಟರ್ಸ್ ದೂರದ ಡರ್ಬಿ ರೇಸ್‌ನಲ್ಲಿ ತಳ್ಳಿಹಾಕುವಂತಿಲ್ಲ.

ಸಕ್ಸಸ್ ಕುದುರೆ ಈಗಾಗಲೇ 2000 ಮೀಟರ್ಸ್ ದೂರದ ರೇಸ್‌ನಲ್ಲಿ ನಿರಾಯಾಸ ಗೆಲುವು ಸಾಧಿಸಿದ್ದು, ಈ ಡರ್ಬಿಯಲ್ಲೂ ಪ್ರಮುಖ ಸ್ಪರ್ಧಿ ಎನಿಸಿಕೊಂಡಿದೆ. ಮುಕ್ತವಾಗಿ ಕಂಡು ಬರುತ್ತಿರುವ ಈ ಬಾರಿಯ ಡರ್ಬಿಯಲ್ಲಿ ಮೊಜಿಟೊ ತುಸು ಮೇಲುಗೈ ಹೊಂದಿದೆಯಾದರೂ, ರೋಚಕ ಫಲಿತಾಂಶವನ್ನು ನಿರೀಕ್ಷಿಸಬಹುದು.

ದಿನದ 6ನೇ ರೇಸ್ ಡರ್ಬಿ ಆಗಿದ್ದು, ಸಂಜೆ 4.15ಕ್ಕೆ ಪ್ರಾರಂಭವಾಗಲಿದೆ.

ಆರ್ಥರ್, ಬಿಯಾಂಡ್ ಮೆಷರ್, ಸಿರೇನಿಯಸ್, ಲಾಸ್ಟ್ ವಿಶ್, ಲಿಯೊನಾರ್ಡೊ, ಮೊಜಿಟೊ, ಒನ್ಸ್ ಯು ಗೋ ಬ್ಲ್ಯಾಕ್, ಪ್ರಾಗ್, ಸೂಪರ್‌ನ್ಯಾಚುರಲ್, ಟ್ರಿಯಾಂಫಂಟ್, ಕಿಂಗ್ಸ್ ರಾನ್ಸಮ್, ಫಿಲಾಸಫಿ, ಸಕ್ಸಸ್

₹ 2 ಕೋಟಿ ಬಹುಮಾನ ಮೊತ್ತ

ಈ ಬಾರಿಯ ಡರ್ಬಿ ರೇಸ್ ಸುಮಾರು ₹ 2 ಕೋಟಿ ಬಹುಮಾನ ಮೊತ್ತ ಒಳಗೊಂಡಿದೆ. ಗೆಲ್ಲುವ ಕುದುರೆಗೆ ₹ 3 ಲಕ್ಷ ಮೌಲ್ಯದ ಟ್ರೋಫಿ ಹಾಗೂ ಮೊದಲ ಬಹುಮಾನ ₹ 1.18 ಕೋಟಿ ದೊರೆಯಲಿದೆ.

ಡರ್ಬಿ ಕುದುರೆಗಳ ವಿವರ

ಸಂಖ್ಯೆ	ಕುದುರೆ ಹೆಸರು	ಟ್ರೇನರ್	ಜಾಕಿ	ಕುದುರೆ ಹೊರುವ ತೂಕ	ಡ್ರಾ ಸಂಖ್ಯೆ
1	ಆರ್ಥರ್	ಶ್ರೀನಿವಾಸ್‌ರೆಡ್ಡಿ	ವೈ.ಎಸ್.ಶ್ರೀನಾಥ್	56 ಕೆ.ಜಿ	12
2	ಬಿಯಾಂಡ್‌ಮೆಷರ್	ಎಂ.ನರೇಡು	ಯಶ್‌ನರೇಡು	56 ಕೆ.ಜಿ	8
3	ಸಿರೇನಿಯಸ್	ಪದ್ಮನಾಭನ್	ಪಿ.ಪಿ.ದೆಬೆ	56 ಕೆ.ಜಿ	2
4	ಲಾಸ್ಟ್‌ವಿಶ್	ನೀಲ್‌ದೇವಾನಿ	ಇಮ್ರಾನ್‌ಖಾನ್	56 ಕೆ.ಜಿ	3
5	ಲಿಯೊನಾರ್ಡೊ	ವಿಜಯ್‌ಸಿಂಗ್	ಅಕ್ಷಯ್‌ಕುಮಾರ್	56 ಕೆ.ಜಿ	10
6	ಮೊಜಿಟೊ	ಎಂ.ಕೆ.ಜಾಧವ್	ಎನ್.ಎಸ್.ಪರ್ಮಾರ್	56 ಕೆ.ಜಿ	9
7	ಒನ್ಸ್‌ಯು ಗೋ ಬ್ಲ್ಯಾಕ್	ಮೆಕೆವನ್	ಸೂರಜ್‌ನರೇಡು	56 ಕೆ.ಜಿ	4
8	ಪ್ರಾಗ್	ಎಸ್.ಎಸ್.ಅತಾವೊಲ್ಲ	ಆಶಾದ್‌ಅಸ್ಬರ್	56 ಕೆ.ಜಿ	1
9	ಸೂಪರ್‌ನ್ಯಾಚುರಲ್	ಪೆಸಿ ಶ್ರಾಫ್	ಟ್ರೆವರ್‌ಪಟೇಲ್	56 ಕೆ.ಜಿ	6
10	ಟ್ರಿಯಾಂಫಂಟ್	ಎಸ್.ಎಸ್.ಅತಾವೊಲ್ಲ	ಪಿ.ಎಸ್.ಕವಿರಾಜ್	56 ಕೆ.ಜಿ	5
11	ಕಿಂಗ್ಸ್‌ರಾನ್ಸಮ್	ಪೆಸಿ ಶ್ರಾಫ್	ಪಿ.ಎಸ್.ಚೌಹಾಣ್	54.5 ಕೆ.ಜಿ	13
12	ಫಿಲಾಸಫಿ	ಪದ್ಮನಾಭನ್	ಎ.ಸಂದೇಶ್	54.5 ಕೆ.ಜಿ	11
13	ಸಕ್ಸಸ್	ವಿಜಯ್‌ಸಿಂಗ್	ಸಿ.ಎಸ್.ಜೋಧ	54.5 ಕೆ.ಜಿ	7

110 ವರ್ಷಗಳ ಬಳಿಕ ಪದಕ ವಾಪಸ್!

ಲಾಸನ್ (ಎಎಫ್‌ಪಿ): ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು (ಐಒಸಿ) ಅಮೆರಿಕದ ಅಥ್ಲೀಟ್ ಜಿಮ್ ಥೋರ್ಪ್ ಅವರ ಎರಡು ಒಲಿಂಪಿಕ್ ಚಿನ್ನದ ಪದಕಗಳನ್ನು 110 ವರ್ಷಗಳ ಬಳಿಕ ಮರಳಿಸಿದೆ!

ಥೋರ್ಪ್ ಅವರು 1912ರ ಸ್ಟಾಕ್‌ಹೋಂ ಒಲಿಂಪಿಕ್ಸ್‌ನಲ್ಲಿ ಡೆಕಥ್ಲಾನ್ ಮತ್ತು ಪೆಂಟಥ್ಲಾನ್ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದಿದ್ದರು. ಆದರೆ ಅಮೆರಿಕದ ದಿನಪತ್ರಿಕೆಯೊಂದು, 'ಥೋರ್ಪ್ ವೃತ್ತಿಪರ ಆಟಗಾರನಾಗಿ ಅಮೆರಿಕನ್ ಫುಟ್‌ಬಾಲ್ ಮತ್ತು ಬೇಸ್‌ಬಾಲ್ ಆಡಿದ್ದಾರೆ' ಎಂದು ವರದಿ ಮಾಡಿತ್ತು.

ಅಂದು ಇದ್ದ ನಿಯಮದಂತೆ ಹವ್ಯಾಸಿ ಅಥ್ಲೀಟ್‌ಗಳು ಮಾತ್ರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಬಹುದಿತ್ತು. ವೃತ್ತಿಪರ ಆಟಗಾರ ಆಗಿದ್ದ ಥೋರ್ಪ್ ನಿಯಮ ಉಲ್ಲಂಘಿಸಿದ್ದಾರೆ ಎಂದು ಒಲಿಂಪಿಕ್ಸ್ ಸಂಘಟಕರು ಅವರ ಪದಕ ವಾಪಸ್ ಪಡೆದಿದ್ದರು.

ಜಿಮ್ ಥೋರ್ಪ್ 1953 ರಲ್ಲಿ ನಿಧನರಾಗಿದ್ದರು.

ಈಜು: ಹಷಿಕಾ, ರಿಧಿಮಾ ದಾಖಲೆ

ಬೆಂಗಳೂರು: ಕರ್ನಾಟಕದ ಹಷಿಕಾ ರಾಮಚಂದ್ರ ಮತ್ತು ರಿಧಿಮಾ ವೀರೇಂದ್ರ ಕುಮಾರ್ ಅವರು ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ ಕೂಟದ 12ರಿಂದ 14 ವರ್ಷದೊಳಗಿನ ಬಾಲಕಿಯರ 200 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಹಷಿಕಾ 2 ನಿಮಿಷ 5.65 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಈ ಹಿಂದಿನ ದಾಖಲೆ ಭವ್ಯಾ ಸಚದೇವ್(ಕಾಲ: 2 ನಿ. 10.81ಸೆ.) ಅವರ ಹೆಸರಿನಲ್ಲಿತ್ತು.

15ರಿಂದ 17 ವರ್ಷದೊಳಗಿನವರ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ರಿಧಿಮಾ 1 ನಿ. 4.96 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನಕ್ಕೆ ಮುತ್ತಿಟ್ಟರು. ಈ ಹಿಂದಿನ ದಾಖಲೆ ಗುಜರಾತ್‌ನ ಮಾನಾ ಪಟೇಲ್ (ಕಾಲ: 1 ನಿ. 5ಸೆ.) ಅವರ ಹೆಸರಿನಲ್ಲಿತ್ತು.

ಫಲಿತಾಂಶಗಳು: ಬಾಲಕಿಯರು: 12-14 ವರ್ಷ: 200 ಮೀಟರ್ಸ್ ಫ್ರೀಸ್ಟೈಲ್: ಹಷಿಕಾ ರಾಮಚಂದ್ರ–1, ಕಾಲ: 2 ನಿ. 5.65 ಸೆ. (ಕೂಟ ದಾಖಲೆ), ಧೀನಿಧಿ ದೇಸಿಂಗು–2 (ಇಬ್ಬರೂ ಕರ್ನಾಟಕ), ದೀಪ್ತಿ ತಿಲಕ್ (ಮಹಾರಾಷ್ಟ್ರ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ(ಕರ್ನಾಟಕ)–1, ಕಾಲ: 1 ನಿ. 16.82 ಸೆ. ವೇನಿಕಾ ಪಾರೀಖ್ (ಗುಜರಾತ್)–2, ವಿಹಿತಾ ನಯನಾ–3 (ಕರ್ನಾಟಕ). 15ರಿಂದ 17 ವರ್ಷ: 100 ಮೀ. ಬ್ರೆಸ್ಟ್‌ಸ್ಟ್ರೋಕ್: ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–1, ಕಾಲ: 1 ನಿ.12.83 ಸೆ. ಸಾನ್ವಿ ರಾವ್–2, ಎಸ್. ಲಾಕ್ಷ್ಯಾ–3 (ಇಬ್ಬರೂ ಕರ್ನಾಟಕ), 100 ಮೀ. ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ, ಕೂಟ ದಾಖಲೆ)–1, ಕಾಲ: 1 ನಿ. 4.96 ಸೆ. ಸಂಜನಾ ಪ್ರಭುಗಾಂವಕರ್(ಗೋವಾ)–2, ನೀನಾ ವೆಂಕಟೇಶ್ (ಕರ್ನಾಟಕ)–3.

ಬಾಲಕರು: 12ರಿಂದ 14 ವರ್ಷ: 100 ಮೀ. ಬ್ರೆಸ್ಟ್‌ಸ್ಟ್ರೋಕ್: ಆರ್. ನವನೀತ್ ಗೌಡ (ಕರ್ನಾಟಕ)–1, ಕಾಲ: 1 ನಿ.12.14 ಸೆ. ನಿತೀಶ್ ಎಂ.ಎಸ್. (ತಮಿಳುನಾಡು)–2, ಧ್ರುವ ಸೆಜ್ವಾಲ್ (ದೆಹಲಿ)–3. 100 ಮೀ. ಬ್ಯಾಕ್‌ಸ್ಟ್ರೋಕ್: ಸುಹಾಸ್ ಪ್ರೀತಂ (ತೆಲಂಗಾಣ, ನೂತನ ದಾಖಲೆ)–1, ಕಾಲ: 1 ನಿ. 1.29 ಸೆ. ಇಶಾನ್ ಮೆಹ್ರಾ (ಕರ್ನಾಟಕ)–2, ಕ್ರಿಶ್ ಜೈನ್ (ಹರಿಯಾಣ)–3. 15ರಿಂದ 17 ವರ್ಷ: 100 ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ್ ಪಾಟೀಲ್ (ಕರ್ನಾಟಕ)–1, ಕಾಲ: 57.78 ಸೆ. ಸಾಹಿಲ್ ಲಾಸ್ಕರ್ (ಬಂಗಾಳ)–2, ವಿಶೇಷ್ (ತಮಿಳುನಾಡು)–3

ತಂಡ ವಿಭಾಗ: ಬಾಲಕರ 4X100 ಮೀ. ಫ್ರೀಸ್ಟೈಲ್: 15ರಿಂದ 17 ವರ್ಷದೊಳಗಿನ ವಿಭಾಗ: ಮಹಾರಾಷ್ಟ್ರ–1, ಕಾಲ: 3 ನಿ. 37.64 ಸೆ., ಕರ್ನಾಟಕ–2, ತಮಿಳುನಾಡು–3. 12ರಿಂದ 14ರಿಂದ ವರ್ಷದೊಳಗಿನವರ ವಿಭಾಗ: ಕರ್ನಾಟಕ–1, ಕೂಟ ದಾಖಲೆ, ಕಾಲ: 3 ನಿ. 48.38 ಸೆ. ಅಸ್ಸಾಂ–2, ತೆಲಂಗಾಣ–3

ಬಾಲಕಿಯರು: 4X100 ಮೀ. ಫ್ರೀಸ್ಟೈಲ್: 15ರಿಂದ 17 ವರ್ಷ: ಮಹಾರಾಷ್ಟ್ರ–1, ಕೂಟ ದಾಖಲೆ, ಕಾಲ: 4 ನಿ. 1.76 ಸೆ. ಕರ್ನಾಟಕ–2, ಬಂಗಾಳ–3. 12ರಿಂದ 14 ವರ್ಷ: ಕರ್ನಾಟಕ–1, ಕೂಟ ದಾಖಲೆ, ಕಾಲ: 4 ನಿ.5.13 ಸೆ. ಮಹಾರಾಷ್ಟ್ರ–2, ತಮಿಳುನಾಡು–3.

ಬೆಂಗಳೂರು ರೇಸ್

ಡರ್ಬಿ ದಿನದ ಆಯ್ಕೆಗಳು

ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಮುಂಬೈ ಸಲ್ವಾರ್; 1200 ಮೀ.
   ದಿ ಸಾವರಿನ್ ಆರ್ಬ್ 4, ಸ್ಮ್ಯಾಶಿಂಗ್ ಬ್ಲೂ 1
2. ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ ಟ್ರೋಫಿ; 1200 ಮೀ.
   ಥೌಸಂಡ್ ವರ್ಡ್ಸ್ 3, ಡೆಲ್ ಮಾರ್ 10, ಅನ್ ಈಲ್ಡಿಂಗ್ 11
3. ಮುಕುಲ್ ಎ ಸೋನಾವಾಲ ಮಿಲಿಯನ್ 1600 ಮೀ.
   ಶಾಮ್‌ರಾಕ್ 7, ರೌಡಿ 6, ಆಲ್ಫಾ ಡೊಮಿನೊ 1
4. ಹೈದರಾಬಾದ್ ಕಪ್; 1800 ಮೀ.
   ಸ್ಕ್ರಿಬ್ಲಿಂಗ್ ಹಾಪರ್ 5, ಸದರ್ನ್ ಡೈನಾಸ್ಟಿ 6, ರೂಲಿಂಗ್ ಗಾಡೆಸ್ 3
5. ಬಿ.ಟಿ.ಸಿ. ಆನಿವರ್ಸರಿ ಕಪ್; 1400 ಮೀ.
   ಮಿರಾಕಲ್ 2, ಆಲ್ ಅಟ್ರ್ಯಾಕ್ಟಿವ್ 5, ನಾಟಿ ಡ್ಯಾನ್ಸರ್ 4
6. ಬೆಟ್‌ವೇ ಬೆಂಗಳೂರು ಸಮ್ಮರ್ ಡರ್ಬಿ; 2000 ಮೀ.
   ಮೊಜಿಟೊ 6, ಫಿಲಾಸಫಿ 12, ಲಿಯೊನಾರ್ಡೊ 5
7. ಚಿವಾಸ್ ಟ್ರೋಫಿ; 1400 ಮೀ.
   ಮಾಂಟೆವರ್ಡಿ 2, ಕ್ವೀನ್ ಎನ್ವೀಡ್ 10, ಸ್ಕಾಲೆಂಟೊ 3
8. ಇಂಡಿಯನ್ ಪ್ಯಾಟ್ರನ್ಸ್ ಟ್ರೋಫಿ; 1400 ಮೀ.
   ಓನ್ ಲೆಗಸಿ 1, ನಾಟಿ ಸಿಟಿ 3, ಚಿಂಕಿ ಪಿಂಕಿ 5

ಉತ್ತಮ ಬೆಟ್: ದಿ ಸಾವರಿನ್ ಆರ್ಬ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,9,7,8	3,4,5	6,7,8

ಚೆಸ್: ಪ್ರಜ್ಞಾನಂದಗೆ ಪ್ರಶಸ್ತಿ

ಪ್ಯಾರಾಸಿನ್, ಸರ್ಬಿಯಾ (ಪಿಟಿಐ): ಭಾರತದ ಆರ್. ಪ್ರಜ್ಞಾನಂದ ಅವರು ಇಲ್ಲಿ ನಡೆದ ಪ್ಯಾರಾಸಿನ್ ಓಪನ್ 'ಎ' ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಶನಿವಾರ ಕೊನೆಗೊಂಡ ಟೂರ್ನಿಯ 9 ಸುತ್ತುಗಳಲ್ಲಿ ಅವರು ಒಟ್ಟು ಎಂಟು ಪಾಯಿಂಟ್ಸ್ ಕಲೆಹಾಕಿದರು. ರಷ್ಯಾದ ಅಲೆಕ್ಸಾಂಡರ್ ಪೆಡ್ಕೆ (7.5 ಪಾಯಿಂಟ್ಸ್) ಎರಡನೇ ಸ್ಥಾನ ಪಡೆದರು.